ಸಂವಾದ

ಜನೆವರಿ ೨೦೦೮ ರೂ.೨೦

ರೈತರ ಆತ್ಮಹತ್ಯೆ ನಿರಂತರ!

ಮಠ ವಿವಾದ;
ಸ್ವಾರ್ಥಕ್ಕಾಗಿ

ನಾಗರಿಕರೆಲ್ಲ
ಭಯೋತ್ಪಾದಕರೆ!

ಸಂವಾದ

ಮಾಸ ಪತ್ರಿಕೆ

ಸಂಪುಟ ೬ ಸಂಚಿಕೆ ೩

ಜನವರಿ ೨೦೦೮

ಸಂಪಾದಕ :

ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :

ಡಾ॥ ನಟರಾಜ್ ಹುಳಿಯಾರ್

ಪ್ರೊ॥ ರಹಮತ್ ತರೀಕೆರೆ

ಡಾ॥ ಕೆ. ಪುಟ್ಟಸ್ವಾಮಿ

ಡಾ॥ ಡಿ. ಡೊಮಿನಿಕ್

ಬಿ.ಯು.ಸುಮಾ

ಡಾ॥ ಜಿ. ಪಾಂಡುನಾಯಕ್

ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ

ಅಂಜನಾನಗರ, ಮಾಗಡಿ ರಸ್ತೆ.

ವಿಶ್ವನೀಡಂ ಅಂಚೆ

ಬೆಂಗಳೂರು-೫೬೦ ೦೯೧

✆ ೨೩೨೮೭೯೪೩/೯೪೪೮೦ ೪೮೩೦೬

ಇ-ಮೇಲ್ : samvaada@hotmail.com

honnapura@yahoo.co.in

PRINTED AND PUBLISHED BY

S.R. GOVINDU

ON BEHALF OF SPOORTHIDHAMA

ANJANA NAGAR, MAGADI ROAD

VISHWANEEDAM POST

BANGALORE - 560 091

✆ 080-23287943, 94480 48306

e- mail : samvaada@hotmail.com

honnapura@yahoo.co.in

EDITOR :

INDUDHARA HONNAPURA

ಒಳಪುಟಗಳಲ್ಲಿ

- ❑ ಪತ್ರಗಳು ೦೩
- ❑ ಹೊಸ ಪುಸ್ತಕ ೦೪
- ❑ ಅಂತರಂಗ ೦೫
- ❑ ಶಿಕ್ಷಣ, ಅಭಿವೃದ್ಧಿ, ನಾಗರಿಕ ಸಮಾಜ... ಇತ್ಯಾದಿ ೦೬
  - ○ ಡಾ॥ ಟಿ.ಆರ್. ಚಂದ್ರಶೇಖರ್
- ❑ ಅಸ್ಸಾಂ ಆದಿವಾಸಿಗಳ ಸಂಘರ್ಷ ೦೯
  - ○ ನಾ. ದಿವಾಕರ
- ❑ ರೈತರ ಆತ್ಮಹತ್ಯೆ ನಿರಂತರ! ೧೨
  - ○ ಪಿ. ಸಾಯಿನಾಥ್





- ❑ ಅಷ್ಟಮಠ; ಎಲ್ಲಾ ಸ್ವಾರ್ಥಕ್ಕಾಗಿ! ೧೮
  - ○ ನಾಡಿ ಬಂಗಾರಪೇಟೆ
- ❑ ಕನ್ನಡಕ್ಕೆ ಕಾಲಿರಿಸಿದ 'ಮೂಲಮಾಧ್ಯಮಕಕಾರಿಕ ೨೦
  - ○ ಡಾ॥ ಬಿ.ಪಿ. ನಾಗೇಂದ್ರಕುಮಾರ್
- ❑ ಸಖೀಗೀತ (ಕಥೆ) ೨೨
  - ○ ಡಾ॥ ನಾಗವೇಣಿ
- ❑ ಭಯೋತ್ಪಾದನೆ ಚರ್ಚೆ ೨೬
  - ○ ಕೃಷ್ಣಮೂರ್ತಿ ಬಿಳಿಗೆರೆ
  - ○ ಡಾ॥ ವಸು
  - ○ ಡಾ॥ ಡೊಮಿನಿಕ್ ಡಿ

- ❑ 'ದೇಶಬಿಟ್ಟು ಹೋಗು': ಹಾಗೆಂದರೇನು? ೩೨
  - ○ ರಹಮತ್ ತರೀಕೆರೆ
- ❑ 'ಎರಡು-ರಾಷ್ಟ್ರ ಸಿದ್ಧಾಂತದಲ್ಲಿ ಅಂಬೇಡ್ಕರ್ ಅವರಿಗೆ ನಂಬಿಕೆ ಇತ್ತು' ೩೬
  - ○ ಡಾ॥ ಆನಂದ್ ತೇಲ್‌ತುಂಬ್ಡೆ
- ❑ ಜಾನಪದ ಅಂತರಂಗ ತಾಣ... ೪೦
  - ○ ಡಾ॥ ಸಿ.ಬಿ. ಹೊನ್ನಯ್ಯ
- ❑ ಮುಕ್ಕಾಲು ಶತಮಾನ ಮುಗಿಸಿದೆ ೪೨
  - ○ ಚಂದ್ರಶೇಖರ್
- ❑ ದಲಿತ್ ಡೈರಿ ೪೬
  - ○ ಚಂದ್ರಭಾನ್ ಪ್ರಸಾದ್/ ಡೊಮಿನಿಕ್
- ❑ ಬುದ್ಧಾಯಣ ೫೦
  - ○ ಪಿ.ಎಚ್ ರಾಜಶೇಖರ್

ಕವನಗಳು : ❑ ಆನಂದವೋ ನಿತ್ಯಾನಂದವೋ ಪರಮಾನಂದವೋ ೧೬
❑ ನನ್ನೊಳಗಿನ ಕಾವ್ಯಕನ್ನಿಕೆ ೩೧ ❑ ನನ್ನ ಕಲೆಯ ಹೂ ೪೫

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ದಯವಿಟ್ಟು ಡೊಂಬರನ್ನು ಅಣಕಿಸದಿರಿ

ಮಾನ್ಯರೆ,

ಇತ್ತೀಚಿನ ದೃಶ್ಯ ಮತ್ತು ಮುದ್ರಣ ಮಾಧ್ಯಮ ಹಾಗೂ ಮತ್ತಿತರ ಬರವಣಿಗೆಗಳಲ್ಲಿ 'ಡೊಂಬರಾಟ' ಎಂಬ ಪದವನ್ನು ಅತಿ ರಂಜಿತವಾಗಿ ಮತ್ತು ನಕಾರಾತ್ಮಕ ಅರ್ಥದಲ್ಲಿ ಬಳಸಲಾಗುತ್ತಿದೆ. ಅದರಲ್ಲೂ ಇತ್ತೀಚಿನ ರಾಜಕೀಯ ಪಕ್ಷಗಳ ಕ್ಷುದ್ರತೆಯನು, ಸಂಕೇತಿಸಲು ಮತ್ತು ಅವುಗಳ ಅವಕಾಶವಾದಿ ಭ್ರಷ್ಟ ರಾಜಕೀಯ ನಡೆಗಳನ್ನು ವಿಡಂಬಿಸಲು 'ಡೊಂಬರಾಟ' ಎಂಬ ಪದವನ್ನು ಬಳಸಲಾಗುತ್ತಿದೆ. ಡೊಂಬರಾಟ' ಎಂಬ ಪದ ಕೇವಲ ಒಂದು ಭಾಷಿಕ ಪದವಲ್ಲ, ಅದು ಒಂದು ಸಮುದಾಯದ ವೃತ್ತಿಯನ್ನು ಸೂಚಿಸಲುವ ಪದ. ಶತಮಾನಗಳಿಂದ ಒಂದು ಕೆಳಜಾತಿ ಸಮುದಾಯವು ನಿಕೃಷ್ಟ ಅವಮಾನಗಳ ಜೊತೆಗೇ ಹೊಟ್ಟೆಪಾಡಿನ ಅನಿವಾರ್ಯತೆಯ ಕಾರಣಕ್ಕಾಗಿ ಅವಲಂಬಿಸಿಕೊಂಡು ಬಂದ ಕಸಬು 'ಡೊಂಬರಾಟ'.

ನಿಶ್ಚಿತ ಆರ್ಥಿಕ ಮೂಲಗಳಿಲ್ಲದೆ, ಬೀದಿ ಬದಿಯಲ್ಲಿ ಒಂದು ಹೊತ್ತಿನ ಊಟಕ್ಕಾಗಿ ಡೊಂಬರು ಈ ವೃತ್ತಿಯನ್ನು ಈವತ್ತಿಗೂ ಅವಲಂಬಿಸಿ ಬದುಕುತ್ತಿದ್ದಾರೆ. ಡೊಂಬರಾಟ ಮಾಡುವ ಸಂದರ್ಭದಲ್ಲಿ ಪ್ರದರ್ಶನ ನೀಡುವ ಡೊಂಬರಾಟದವರು ದೈಹಿಕವಾಗಿ ಸದೃಢರಾಗಿರಬೇಕಾಗುತ್ತದೆ. ಏಕಾಗ್ರತೆ ಮತ್ತು ಮಾನಸಿಕ ಸಮತೋಲನವನ್ನು ಕಾಪಾಡಿಕೊಂಡು ತಮ್ಮ ದೇಹವನ್ನು ನೋರಕ್ಕೆ ನೂರು ಈ ಪ್ರದರ್ಶನದ ಸಂದರ್ಭದಲ್ಲಿ ತೊಡಗಿಸಬೇಕಾಗುತ್ತದೆ. ಈ ತೊಡಗಿಸಿಕೊಳ್ಳುವಿಕೆಯಲ್ಲಿ ಸ್ವಲ್ಪ ಏರುಪೇರಾದರೂ ಪ್ರದರ್ಶನ ನೀಡುವವನ ಜೀವಕ್ಕೆ ಸಂಚಕಾರ ಬರುತ್ತದೆ. ಪ್ರದರ್ಶನದ ಮಟ್ಟಿಗೆ ಮಾತ್ರವಲ್ಲದೆ ನಿತ್ಯದ ಜೀವನದಲ್ಲೂ ಡೊಂಬರವನು ತನ್ನ ದೇಹ ಮತ್ತು ಮನಸ್ಸುಗಳ ಮಧ್ಯೆ ಸಮತೋಲನ ಸಾಧಿಸುವ ನಿರಂತರ ಪ್ರಯತ್ನದಲ್ಲಿರುತ್ತಾನೆ. ಡೊಂಬರವನಿಗೆ ಈ ಪ್ರಾಮಾಣಿಕ ತದ್ಯಾತ್ಮ

ಪತ್ರಾಗಾರ

ಅನಿವಾರ್ಯ. ಈ ತದ್ಯಾತ್ಮವೇ ಅವನ ದೇಹವನ್ನು ಅದ್ಭುತ ಕಸರತ್ತುಗಳಿಗೆ ಹುರಿಗೊಳಿಸುತ್ತದೆ. ಜನರನ್ನು ರಂಜಿಸಲು ಮತ್ತು ಒಂದು ಹೊತ್ತಿನ ಊಟಕ್ಕೆ ದಾರಿ ಮಾಡಿಕೊಳ್ಳಲು ಡೊಂಬರವನು ಪ್ರಾಮಾಣಿಕವಾಗಿ ಬೆವರು ಹರಿಸಲೇಬೇಕು. ಇಂತಹ ಪ್ರಾಮಾಣಿಕ ಶ್ರಮರೂಪವಾದ ಡೊಂಬರಾಟವನ್ನು, ರಾಜಕಾರಣಿಗಳ ನಡೆಗಳನ್ನು ಸಂಕೇತಿಸಲು ಬಳಸುವುದು ನ್ಯಾಯವೇ?

ಇಂದಿನ ರಾಜಕಾರಣಿಗಳು ಮತ್ತು ರಾಜಕೀಯ ಪಕ್ಷಗಳು ಏನೇನು ಮಾಡುತ್ತಿವೆ ಎಂದು ವಿವರಿಸುವ ಅಗತ್ಯವಿಲ್ಲ. ಜನರನ್ನು ಶೋಷೆ ಮಾಡುವ ಹಳೆಯ ಮೋಸದ ವಿಧಾನಗಳಿಗೆ ದಿನವೂ ಈ ಜನ ಹೊಸ ರೂಪು ಕೊಡುತ್ತಿದ್ದಾರೆ. ಜನ ಸಂಪತ್ತನ್ನು ಹಗಲೇ ದರೋಡೆ ಮಾಡುವ ಭಂಡತನವನ್ನು ರೂಢಿಸಿಕೊಂಡೂ ಭಾರೀ ಪ್ರಾಮಾಣಿಕತೆಯನ್ನು ಪ್ರದರ್ಶಿಸಲು ಹೆಣಗಾಡುತ್ತಾರೆ. ದುಡಿವ ಜನರ ಬೆವರಿನಿಂದ ಬಂದ ಸಂಪತ್ತನ್ನು ನಿರ್ಲಜ್ಜವಾಗಿ ಲೂಟಿ ಹೊಡೆಯುತ್ತಿದ್ದಾರೆ. ಇಂತಹ ಹಗಲು ದರೋಡೆಕೋರರ ಕೃತ್ಯಗಳನ್ನು 'ಡೊಂಬರಾಟ' ಎಂಬ ಪದದಲ್ಲಿ ಬಣ್ಣಿಸುವುದು ಸಮಂಜಸವೇ? ಶೋಷಿತ ಸಮುದಾಯದ ಹೊಟ್ಟೆಪಾಡಿನ ವೃತ್ತಿಗೆ ಮತ್ತು ಅದರ ಪ್ರಾಮಾಣಿಕ ಶ್ರಮಕ್ಕೆ ಕಿಂಚಿತ್ತೂ ಬೆಲೆಕೊಡದ ಹೊಣೆಗೇಡಿ ಪದಪ್ರಯೋಗವಿದು. ಡೊಂಬರಾಟದಲ್ಲಿ ವಂಚನೆಗಳಿರುವುದಿಲ್ಲ ಮತ್ತು ತೆರೆಮರೆಯ ಕುತಂತ್ರಗಳಿರುವುದಿಲ್ಲ. ಆದರೆ ವಿವಿಧ ಮಾಧ್ಯಮಗಳಲ್ಲಿ ಹೀನ ರಾಜಕಾರಣದ ನಡೆಗಳನ್ನು ವಿಡಂಬಿಸಲು, ರಾಜಕಾರಣಿಗಳ ನಯವಂಚಕ್ಕೆ ಶತಮಾನಗಳಿಂದ ಅವಮಾನಕ್ಕೀಡಾಗುತ್ತಿದ್ದಾರೆ.

ಆದರೂ ತಮ್ಮ ಪ್ರಾಮಾಣಿಕ ಶ್ರಮದಿಂದ ದುಡಿದು ಬದುಕುತ್ತಿದ್ದಾರೆ. ಇಂತಹ ಜನರ ವೃತ್ತಿಯನ್ನು ಗೇಲಿ ಮಾಡುವುದು ಜಾತ್ಯಾತೀತ ಸಮಾಜದಲ್ಲಿ ಬದುಕುವ, ಅದರಲ್ಲೂ ಜನರ ಅಭಿಪ್ರಾಯ ಮೂಡಿಸುವ ಮತ್ತು ಜನರ ಅಭಿರುಚಿಗಳನ್ನು ತಿದ್ದುವ ಸಾರಸ್ವತ ಜಗತ್ತಿನ ಪಂಡಿತರಿಗೆ ಶೋಭೆ ತರದು.

ಈ ಬಗೆಯ ಪದ ಪ್ರಯೋಗದಿಂದ ಒಂದು ಸಮುದಾಯ ಕುಗ್ಗಿಹೋಗುತ್ತದೆ. ಜೊತೆಗೆ ಇಂತಹ ಭಾಷಿಕ ಪ್ರಯೋಗವು ಜನಾಂಗೀಯ ನಿಂದನೆಯಾಗುತ್ತದೆ. ಡೊಂಬರ ಸಮುದಾಯ ಈಗಷ್ಟೆ ಎಚ್ಚೆತ್ತುಕೊಂಡು ಮುಖ್ಯ ವಾಹಿನಿಯಲ್ಲಿ ಸ್ವಾಭಿಮಾನದಿಂದ ಬದುಕಲು ಯತ್ನಿಸುತ್ತಿದೆ.ದಯವಿಟ್ಟು 'ಡೊಂಬರಾಟ' ಎಂಬ ಪದವನ್ನು ಹೀನ ಅರ್ಥದ ಪ್ರಯೋಗಗಳಿಗೆ ಬಳಸಬಾರದೆಂಬು ಕನ್ನಡದ ಸಾರಸ್ವತ ಲೋಕವನ್ನು ಮತ್ತು ಮಾಧ್ಯಮಗಳನ್ನು ಡೊಂಬರ ಸಮಾಜವು ಅತ್ಯಂತ ವಿನಯದಿಂದ ಕೇಳಿಕೊಳ್ಳುತ್ತದೆ. ಇಂತಹ ಪದ ಪ್ರಯೋಗ ದೃಶ್ಯ ಮಾಧ್ಯಮ ಇಲ್ಲವೆ ಮುದ್ರಣ ಮಾಧ್ಯಮಗಳಲ್ಲಿ ಬಳಕೆಗೊಂಡಲ್ಲಿ ಡೊಂಬರ ಸಮುದಾಯದ ಪ್ರತಿಭಟನೆಯನ್ನು ಮತ್ತು ಜಾತಿ ನಿಂದನೆಯ ಗುರುತರ ಆಪಾದನೆಯನ್ನು ಎದುರಿಸಬೇಕಾಗುತ್ತದೆ.

ಬಿ.ಎಂ ಕೌಜಲಗಿ, ಅಧ್ಯಕ್ಷರು
ವಿ. ರಾ ಡೊಂಬರ, ಕಾರ್ಯದರ್ಶಿ
ಅಖಿಲ ಕರ್ನಾಟಕ ಡೊಂಬರ ಹಿತವರ್ಧಕ ಸಂಘ, ಧಾರವಾಡ

ಪತ್ರಿಕಾಧರ್ಮಕ್ಕೆ ಜಯವಾಗಲಿ!

ಮಾನ್ಯರೆ,

೨೦೦೭ರ ದಶಂಬರದ ಸಂವಾದ ಸಂಪಾದಕೀಯವು ಪ್ರಸ್ತುತ ರಾಜಕೀಯ ವಿದ್ಯಮಾನ ಕಥಾನಕಕ್ಕೆ ಮುನ್ನುಡಿಯಾಗಿದೆ. ಅಂತರಂಗದಲ್ಲಡಕವಾಗಿರುವ–ಜಾಗತೀಕರಣದ ಕರಿನೆರಳಲ್ಲಿ ಭಾರತದ ಕೃಷಿ, ಮ್ಯಾನ್ಮಾರ್‌ನಲ್ಲಿ ಸಂತರ ಕ್ರಾಂತಿ, ಮೀಸಲಾತಿ ಸವಲತ್ತು, ಅಗೋಚರ ಭಾರತ ಸೆನ್ಸೆಕ್ಸ್ ೧೯೦೦೦, ಎರಡು ಪ್ರೇಮ ಪ್ರಕರಣಗಳ ನಡುವಿನ ವ್ಯತ್ಯಾಸ, ಭಯೋತ್ಪಾದನೆ.... ವಾರ್ತಾಭಾರತಿ–ಪ್ರತಿಗಾಮಿ ವಿಕೇಂದ್ರಿಕರಣ ಇತ್ಯಾದಿ ಕೊನೆಯ ಪುಟದವರೆಗೂ ಆಸಕ್ತನನ್ನು ಸೆರೆಗೊಳ್ಳುತ್ತದೆ.

೧೯೪೭ರ ನಂತರ ನಮ್ಮ ರಾಜಕೀಯ ಪಕ್ಷಗಳಿಗೆಲ್ಲ ಪ್ರಜಾಪ್ರಭುತ್ವವೆಂದರೇನೆಂದು ಮನವರಿಕೆಯಾಗಬೇಕಿತ್ತು. ಹಾಗಾಗಲಿಲ್ಲ ಮತದಾರರು ಮಾತ್ರ ಮರೆತಿಲ್ಲ.ಯಾವುದೇ ಒಂದು ರಾಜಕೀಯ ಪಕ್ಷವೂ ಏಕೈಕವಾಗಿ ಆಡಳಿತವನ್ನು ತನ್ನ ದಾಗಿಸಿಕೊಳ್ಳಲಾಗದಿರುವುದು ಅದಕ್ಕೆ ಸಾಕ್ಷಿ.

ಭಾರತದ ಸಂವಿಧಾನವೇನೆಂದು ತಿಳಿದಿರುವವರು ಬೆರಳಿಕೆಯೊಳಗಿರಬಹುದು. ಆದರೆ ತಮ್ಮ ಬದುಕು ಸಹ ನೀಯವಾಗಿರಬೇಕೆಂದು ಬಯಸಿದಿರುವವರು ಯಾರು ಇರಲಾರರು, ಇಲ್ಲ.

ಜಾತಿ, ಮತ, ಧರ್ಮಗಳು–ಅಧಿಕಾರಲಾಲಸಿಗಳ ಬಂಡವಾಳಶಾಹಿಗಳ ಅಸ್ತ್ರವಾಗಿರುವ ಪರಿಣಾಮವನ್ನು ಜನಪರ ಚಿಂತನೆಯುಳ್ಳ ಕೆಲವೇ ಕೆಲವು ಪತ್ರಿಕೆಗಳು ಸಂವಾದದಂತೆ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಅಸಹಾಯಕರ ಗಮನಕ್ಕೆ ತರುತ್ತವೆ. (ಬಂಡವಾಳ ಶಾಹಿಗಳ, ಅಧಿಕಾರದಾಹಿಗಳ ಡಿಂಡಿಮಗಳು ಅಸಂಖ್ಯವಿವೆ!)

ಪತ್ರಿಕಾಧರ್ಮಕ್ಕೆ ಜಯವಾಗಲಿ!

ಪಿ. ಗೋಕುಲ್‌ದಾಸ್, ಮಂಗಳೂರು

ಮಿಗಿಲಾಗಿದೆ

ಸಂಪಾದಕರು
'ಸಂವಾದ' ಅವರಿಗೆ,

'ಸಂವಾದ' ಪತ್ರಿಕೆ ಪ್ರತಿ ತಿಂಗಳೂ ಹೊಸ ವಿಚಾರ ಹೊತ್ತು ತರುತ್ತಿದೆ. ಸಮಯಕ್ಕೆ ಸರಿಯಾಗಿ ಬರುತ್ತಿದೆ. ಮೊದಲು ನೀವು ತರುತ್ತಿದ್ದ ವಾರಪತ್ರಿಕೆಗಿಂತ 'ಸಂವಾದ' ಮಿಗಿಲಾಗಿದೆ ಇದನ್ನು ಜನಪ್ರಿಯಗೊಳಿಸುವತ್ತ ನಾವೆಲ್ಲಾ ಪ್ರಯತ್ನಿಸಬೇಕಾಗಿದೆ.

ಅಲ್ಲಮ ಪ್ರಭು ಬೆಟ್ಟದೂರು, ಕೊಪ್ಪಳ

ಚಂದಾ ವಿವರ

ಬಿಡಿ ಪ್ರತಿ ರೂ.೨೦/-

	೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ	ರೂ.೨೦೦/-	ರೂ.೫೦೦/-	ರೂ.೮೦೦/-
ಸಂಘ–ಸಂಸ್ಥೆಗಳು/ಉದ್ಯಮಿಗಳಿಗೆ	ರೂ.೨೫೦/-	ರೂ.೬೦೦/-	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ	ರೂ.೫೦೦/-	ರೂ.೧೫೦೦/-	ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ಅವ್ವ (ಪ್ರಾತಿನಿಧಿಕ ಕಥಾಸಂಕಲನ)
ಸಂ: ಚಂದ್ರಶೇಖರ ವಸ್ತ್ರದ
ಬೆಲೆ: ರೂ. ೧೨೫/-

ಕಳೆದ ವರ್ಷ 'ಅವ್ವ' ಪ್ರಾತಿನಿಧಿಕ ಕವನ ಸಂಗ್ರಹವನ್ನು ಪ್ರಕಟಿಸುವ ಮೂಲಕ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅಪೂರ್ವ ಕೊಡುಗೆ ನೀಡಿದ್ದ ಶ್ರೀಮತಿ ಗಂಗಮ್ಮ ಸೋಮಪ್ಪ ಬೊಮ್ಮಾಯಿ ಪ್ರತಿಷ್ಠಾನ ಈ ವರ್ಷ 'ಅವ್ವ' ಪ್ರಾತಿನಿಧಿಕ ಕಥಾ ಸಂಕಲನ ಪ್ರಕಟಿಸುವ ಮೂಲಕ ಸಾಧನೆ ಮಾಡಿದೆ. ತಾಯಿಯನ್ನು ಕುರಿತಂತೆ ಜಗತ್ತಿನೆಲ್ಲೆಡೆ ಪ್ರಕಟವಾಗಿರುವ ಅತ್ಯುತ್ತಮ ಕಥೆಗಳನ್ನು ಆಯ್ಕೆ ಮಾಡಿ ಅವುಗಳನ್ನೆಲ್ಲ ಕನ್ನಡಿಸಿ ಇಲ್ಲಿ ಪ್ರಕಟಿಸಲಾಗಿದೆ. ಮೂಲ ಕನ್ನಡ ಕಥೆಗಳೂ ಇಲ್ಲಿವೆ. ಕನ್ನಡ ಸಾಹಿತ್ಯಾಭಿಲಾಸಿಗಳಿ. ಇದೊಂದು ಉತ್ತಮ ಕೊಡುಗೆ.

ಪ್ರಕಾಶಕರು: ಶ್ರೀಮತಿ ಗಂಗಮ್ಮ ಸೋಮಪ್ಪ ಬೊಮ್ಮಾಯಿ ಪತ್ರಿಷ್ಠಾನ, ಹುಬ್ಬಳ್ಳಿ



ದಲಿತ ದರ್ಪಣ
ಲೇ: ಎಂ.ಬಿ. ಜಯಶಂಕರ್
ಬೆಲೆ: ರೂ. ೧೦೦/-

ನಿವೃತ್ತ ಮುಖ್ಯ ಇಂಜಿನಿಯರ್ ಆದ ಜಯಶಂಕರ್ ಅವರ ವೈಚಾರಿಕ ವಚನಗಳ ಸಂಗ್ರಹ ಇದು. ಹಲವಾರು ಸಂಶೋಧನಾ ಗ್ರಂಥಗಳಿಗೆ ಆಕರ ಗ್ರಂಥಗಳನ್ನು ಹೆಸರಿಸುತ್ತಾರೆ. ಆದರೆ ಇಲ್ಲಿ ಜಯಶಂಕರ್ ಅವರು ಸುಮಾರು ೩೧ ಆಧಾರ ಗ್ರಂಥಗಳನ್ನು ಅಧ್ಯಯನ ಮಾಡಿ ಅವುಗಳ ಆಧಾರದ ಮೇಲೆ ೨೨೬ ವೈವಿಧ್ಯಮಯ ವೈಚಾರಿಕ ವಚನಗಳನ್ನು ರಚಿಸಿದ್ದಾರೆ. ವಚನಗಳಲ್ಲಿ ಹೊಸತನವಿದೆ. ನೊಂದವರಲ್ಲಿ ಸ್ವಾಭಿಮಾನದ ಕಿಚ್ಚೆಬ್ಬಿಸುವ ವೈಚಾರಿಕ ಸಂಘರ್ಷವಿದೆ. ವಿಚಾರಗಳನ್ನು ವಚನಗಳ ಮೂಲಕ ಓದುಗರಿಗೆ ನೀಡುವಲ್ಲಿ ಯಶಸ್ವಿಯಾಗಿದ್ದಾರೆ.

ಪ್ರಕಾಶಕರು: ಅರಿವು ಪ್ರಕಾಶನ, ಗೋಕುಲಂ, ಮೈಸೂರು



ಕೇಶ ನರ್ತನ
ಲೇ: ಪಕ್ಕಣ್ಣ ಅರಗೋಳ
ಬೆಲೆ: ರೂ. ೩೫೦/-

ಹೆಸರೇ ಹೇಳುವಂತೆ ಇದು ಹೆಣ್ಣಿನ ಕೇಶರಾಶಿ ಕುರಿತಾದ ಹನಿಗವನಗಳ ಸಂಕಲನ. ನೂರಕ್ಕೂ ಹೆಚ್ಚು ಹನಿಗವನಗಳನ್ನೊಳಗೊಂಡ ಈ ಕೃತಿ ತನ್ನ ವಿಶಿಷ್ಟ ಮುದ್ರಣದಿಂದಾಗಿ ಆಕರ್ಷಕವಾಗಿದೆ. ಅಪಾರ ಹಣವೆಚ್ಚ ಮಾಡಿ ಇದನ್ನು ಮುದ್ರಿಸಲಾಗಿದೆ. ಕೆಲವು ಹನಿಗವನಗಳು ಚುರುಕು ಮುಟ್ಟಿಸುವಂತಿದ್ದು ವಿಚಾರ ಪ್ರೇರಕವೂ ಆಗಿವೆ. ಮತ್ತೆ ಕೆಲವು ಕೇವಲ ಪದಗಳ ಜಗ್ಗಾಟದಂತೆ ಪೇಲವ ಎನಿಸಿವೆ. ಪ್ರತಿ ಹನಿಗವನಕ್ಕೂ ಚಿತ್ರಗಳಿವೆ. ಚಿತ್ರಗಳಿಗೆ ತಕ್ಕಂತೆ ಸುಂದರ ಪುಟ ವಿನ್ಯಾಸ ಇದ್ದಿದ್ದರೆ ಕೃತಿ ಮತ್ತಷ್ಟು ಆಕರ್ಷಕ ಎನ್ನಿಸುತ್ತಿತ್ತು. ಕನ್ನಡ ಪ್ರಕಾಶನ ಕ್ಷೇತ್ರ ಬಡವಲ್ಲ ಎಂದು ಈ ಪುಸ್ತಕ ಸಾಬೀತು ಪಡಿಸುತ್ತದೆ.

ಪ್ರಕಾಶಕರು: ಮಹೇಶ್ ಪ್ರಕಾಶನ, ಮಂತ್ರೋಡಿ, ಸವಣೂರು-೫೮೧೧೧೮

ಕನ್ನಡ ಜಗತ್ತು ಅರ್ಧಶತಮಾನ
ಲೇ: ಕೆ.ವಿ. ನಾರಾಯಣ
ಬೆಲೆ: ರೂ. ೧೨೦/-

ಕಳೆದ ಐವತ್ತು ವರ್ಷಗಳಲ್ಲಿ ಕನ್ನಡ ಭಾಷೆ ಹಾಗೂ ಬದುಕಿನ ಭಾಗವಾಗಿ ರೂಪಿತವಾದ ಮತ್ತು ರೂಪಿತವಾಗದ ವಿದ್ಯಮಾನಗಳನ್ನು ಅಪೂರ್ವ ಆಕರಗಳ ಮೂಲಕ ಅಧ್ಯಯನ ಮಾಡಿರುವ ಮಹತ್ವದ ಕೃತಿ ಇದು. ಆಧುನಿಕರಣದ ಪ್ರಕ್ರಿಯೆ ಹಾಗೂ ಕನ್ನಡ ಮತ್ತು ತಂತ್ರಜ್ಞಾನದ ಸಂಬಂಧ ಕುರಿತ ಚರ್ಚೆಗಳು ಕನ್ನಡ ಭಾಷಾಭಿವೃದ್ಧಿಯ ದೃಷ್ಟಿಯಿಂದ ಮಹತ್ವಪೂರ್ಣವಾಗಿವೆ. ಸರ್ಕಾರ ಮತ್ತು ಕನ್ನಡಪರ ಸಂಘ ಸಂಸ್ಥೆಗಳು ಈ ಕೃತಿ ಪ್ರತಿಪಾದಿಸಿರುವ ಭಾಷಾಭಿವೃದ್ಧಿ ದೋರಣೆಯನ್ನು ಪ್ರಾಮಾಣಿಕವಾಗಿ ಜಾರಿಗೆ ತರಬೇಕು.

ಪ್ರಕಾಶಕರು: ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ

ಚರ್ಮರೋಗಗಳು
ಲೇ: ಡಾ॥ ಹೆಚ್ ಹನುಮಂತಪ್ಪ
ಬೆಲೆ: ರೂ. ೧೦೦/-

ಖ್ಯಾತ ಚರ್ಮರೋಗ ತಜ್ಞ ಡಾ॥ ಹನುಮಂತಪ್ಪನವರ ಮೂರನೇ ವೈದ್ಯಕೀಯ ಸಾಹಿತ್ಯ ಕೃತಿ ಇದು. ಮನುಷ್ಯರ ಅಂದ ಚಂದಗಳಿಗೆ ಮಾರಕವಾಗಿರುವ ಚರ್ಮರೋಗಗಳನ್ನು ಕುರಿತಂತೆ ವೈವಿಧ್ಯಮಯ ಮಾಹಿತಿ ಹಾಗೂ ಚಿಕಿತ್ಸಾ ಕ್ರಮಗಳನ್ನು ಇಲ್ಲಿ ವಿವರಿಸಲಾಗಿದೆ. ಕೇವಲ ಕಾಯಿಲೆಗಳಿಗೆ ಚಿಕಿತ್ಸೆ ಮಾತ್ರವಲ್ಲದೆ ಮುಂಜಾಗ್ರತಾ ಕ್ರಮಗಳ ಬಗ್ಗೆ ಮತ್ತು ರೋಗಗಳು ಉಂಟಾಗುವ ಕಾರಣಗಳ ಬಗ್ಗೆ ಹಾಗೂ ಔಷಧಗಳಿಂದ ಉಂಟಾಗುವ ಅಡ್ಡ ಪರಿಣಾಮಗಳ ಬಗೆಗೂ ಉಪಯುಕ್ತ ಮಾಹಿತಿಗಳು ಕೃತಿಯಲ್ಲಿವೆ.

ಪ್ರಕಾಶಕರು: ವೈದ್ಯವಾರ್ತಾ ಪಕಾಶನ ವಿದ್ಯಾರಣ್ಯಪುರಂ ಮೈಸೂರು

ಹೊಸ ಪುಸ್ತಕ





ಜಡತೆ ಮತ್ತು ಚಲನೆ
ಲೇ: ಡಾ॥ ಸಣ್ಣರಾಮ
ಬೆಲೆ: ರೂ. ೬೦/-

ಕನ್ನಡದ ಸೂಕ್ಷ್ಮ ಮನಸ್ಸಿನ ಕಥೆಗಾರರಲ್ಲೊಬ್ಬರಾದ ಡಾ॥ ಸಣ್ಣರಾಮ ಅವರು ಬೇರೆ ಬೇರೆ ಸಂದರ್ಭಗಳಲ್ಲಿ ವಿವಿಧ ಪತ್ರಿಕೆಗಳಿಗೆ ಬರೆದ ಲೇಖನಗಳ ಸಂಗ್ರಹ ಇದು. ಚಳವಳಿಯ ಹಿನ್ನೆಲೆಯಿಂದ ಬಂದಿರುವ ಲೇಖಕರು, ಸಮಾಜ ಎದುರಿಸುತ್ತಿರುವ ಹಲವು ಸಮಸ್ಯೆಗಳನ್ನು ಇಲ್ಲಿನ ಲೇಖನಗಳಲ್ಲಿ ಚರ್ಚಿಸಿದ್ದಾರೆ. ಜಾಗತಿಕರಣದಿಂದ ಭಾಷಾ ಸಮಸ್ಯೆವರೆಗೆ ಇಲ್ಲಿನ ಬರಹಗಳಲ್ಲಿ ವೈವಿಧ್ಯವಿದೆ. ತಳ ಸಮುದಾಯಗಳ ಸಾಂಸ್ಕೃತಿಕ ಬದುಕನ್ನು ವೈಚಾರಿಕ ನೆಲೆಗಟ್ಟಿನೊಂದಿಗೆ ವಿಶ್ಲೇಷಿಸುವ ಲೇಖಕರ ಪ್ರಯತ್ನ ಸಫಲವಾಗಿದೆ.

ಪ್ರಕಾಶಕರು: ಶ್ರೀಮತಿ ಹೆಚ್.ಎಸ್. ನಾಗರತ್ನ ಶಿವಮೊಗ್ಗ

ಸಂಪಾದಕೀಯ



ಅಂತರಂಗ

ಸಾಹಿತ್ಯ ಪರಿಷತ್ತಿನ ನಿರ್ಲಜ್ಜ ಪ್ರಹಸನ

ಕನ್ನಡ ಸಾಹಿತ್ಯ ಪರಿಷತ್ತು ಎಂಬ ಸರ್ಕಾರಿ ಕೃಪಾ ಪೋಷಿತ ನಾಟಕ ಮಂಡಲಿಯ ವಾರ್ಷಿಕ ಮಹಾ ಪ್ರಹಸನ ಮೊನ್ನೆಯಷ್ಟೇ ಮುಗಿದಿದೆ. ಬಹುಷಃ ಈ ವರ್ಷದ ಪ್ರಹಸನದಷ್ಟು ಕಳಪೆ ಮತ್ತು ನಿರ್ಲಜ್ಜ ಪ್ರಹಸನ ಹಿಂದೆಂದೂ ನಡೆದಿರಲಿಲ್ಲ. ಪ್ರಹಸನದ ಮುಖ್ಯ ಪಾತ್ರಧಾರಿ ಸಮ್ಮೇಳನಾಧ್ಯಕ್ಷ ಶೇಷಗಿರಿರಾವ್ ಅವರಂತೂ ಕನ್ನಡಿಗರ ಮನಸ್ಸಿನಲ್ಲಿ ನಿಶ್ಶೇಷವಾಗಿ ಹೋದದ್ದು ಮಾತ್ರ ಈ ಪ್ರಹಸದ ಬಹುದೊಡ್ಡ ಸಾಧನೆ!

ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ನಾಡು-ನುಡಿ-ಬದುಕಿನ ಬಗ್ಗೆ ತೋರುವ ಹುಸಿಕಾಳಜಿ ನಿನ್ನೆ ಮೊನ್ನೆಯದೇನೂ ಅಲ್ಲ. ಅದು ಹುಟ್ಟಿನಿಂದಲೇ ಬಂದದ್ದು. ವ್ಯವಸ್ಥೆಯ ಪರವಾದ ಸಾಂಸ್ಕೃತಿಕ ಕಾವಲುಗಾರನ ಕೆಲಸ ಮಾಡುವುದು ಬಿಟ್ಟು ಅದು ಬೇರೇನನ್ನೂ ಇದುವರೆಗೆ ಮಾಡಿಲ್ಲ. ಪರಿಷತ್ತಿನ ಅಧ್ಯಕ್ಷರಾಗುವುದೆಂದರೆ ಕನ್ನಡದ ಕೆಲಸ ಮಾಡುವುದೆಂದಲ್ಲ. ಬದಲಾಗಿ ಮೂರುವರ್ಷ ಅಧಿಕಾರ ಚಲಾಯಿಸುವುದು. ಅದಕ್ಕಾಗಿ ಅಧ್ಯಕ್ಷಗಿರಿಯ ಚುನಾವಣೆ ಯಾವುದೇ ಸಾರ್ವಜನಿಕ ಚುನಾವಣೆಯಷ್ಟೇ ಅನೈತಿಕವಾಗಿರುತ್ತದೆ.

ಸಾಹಿತ್ಯ ಪರಿಷತ್ತಿನ ಇಂಥ ಜನ ವಿರೋಧಿ ಧೋರಣೆಗಳ ವಿರುದ್ಧ ಒಳಗೆ ಮತ್ತು ಹೊರಗೆ ನಿರಂತರ ಹೋರಾಟ ನಡೆಯುತ್ತಿದ್ದರೂ, ಅದು ಸಾಂಘಿಕ ರೂಪದಲ್ಲಿ ಸ್ಫೋಟಗೊಂಡದ್ದು ೧೯೭೯ರಲ್ಲಿ. ಅಂದಿನ ಕಸಾಪ ಅಧ್ಯಕ್ಷ ಹಂಪ. ನಾಗರಾಜಯ್ಯ ದಲಿತ ಸಾಹಿತ್ಯ ಕುರಿತಂತೆ ಆಡಿದ ಬೇಜವಾಬ್ದಾರಿ ಮಾತು ಎಲ್ಲ ಪ್ರಗತಿಪರ ಸಾಹಿತಿಗಳನ್ನು ಒಂದು ಮಾಡಿತ್ತು. 'ಬಂಡಾಯ ಸಾಹಿತ್ಯ ಸಮ್ಮೇಳನ' ಸಂಘಟಿಸುವ ಮೂಲಕ ಪರಿಷತ್ತಿನ ಜನ ವಿರೋಧಿ ಧೋರಣೆಗಳನ್ನು ಬಯಲು ಮಾಡಲಾಗಿತ್ತು.

'ಬಂಡಾಯ' ಆರಂಭದ ಕೆಲವು ವರ್ಷಗಳ ಕಾಲ ತುಂಬ ಪರಿಣಾಮಕಾರಿಯಾಗಿಯೇ ಕೆಲಸ ಮಾಡಿತು. ಆದರೆ ಬಹಳ ಕಾಲ ವ್ಯವಸ್ಥೆ ಒಡ್ಡುವ ಆಮಿಷಗಳೆದುರು ಅದು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಸಾಧ್ಯವಾಗಿಲ್ಲ. ಯಾವ ತಾತ್ವಿಕ ಕಾರಣಗಳನ್ನು ಒಡ್ಡಿ ವ್ಯವಸ್ಥೆ ಪರವಾದ ಎಲ್ಲ ಸಾಹಿತ್ಯ ಸಾಂಸ್ಕೃತಿಕ ಸಂಸ್ಥೆಗಳನ್ನು ಬಂಡಾಯದ ನಾಯಕರು ತಿರಸ್ಕರಿಸಿದ್ದರೋ ಅದೇ ಸಂಸ್ಥೆಗಳ ಸದಸ್ಯರು-ಅಧ್ಯಕ್ಷರುಗಳಾಗುವ ಮೂಲಕ ಬಂಡಾಯದ ಆಶಯಗಳನ್ನೆಲ್ಲ ಮಣ್ಣು ಪಾಲು ಮಾಡಿದರು. ಸಾಹಿತ್ಯ ಮತ್ತು ಸಾಂಸ್ಕೃತಿಕ ಪರ್ಯಾಯಗಳನ್ನು ಸೃಷ್ಟಿ ಮಾಡುವುದಾಗಿ ಮಾಡಿದ ಎಲ್ಲ ಪ್ರತಿಜ್ಞೆಗಳೂ ನೀರು ಪಾಲಾದವು! 'ಬಂಡಾಯ' ಕೇವಲ ಕೆಲವು 'ಸಾಹಿತ್ಯ ದಲ್ಲಾಳಿ'ಗಳ ವೇದಿಕೆಯ ಮಟ್ಟಕ್ಕೆ ಇಳಿದು ನಿಂತಿತು.

೭೦ರ ದಶಕದ ಜನಪರ ಧ್ವನಿಯಾಗಿದ್ದ ಸಾಹಿತಿ ಕಲಾವಿದರೆಲ್ಲ ಈಗ ಎಲ್ಲಿದ್ದಾರೆ ಎಂದು ಹುಡುಕಿದರೆ ಎಂಥವರಿಗೂ ಆಘಾತವಾಗುತ್ತದೆ. ಹೋರಾಟ-ಚಳವಳಿಗಳೇ ಬದುಕಾಗಿದ್ದ ಬಹುತೇಕ ಸಾಹಿತಿ-ಕಲಾವಿದರು ಇಂದು ಸರ್ಕಾರದ ಏಜೆಂಟರಾಗಿ ಕೆಲಸ ಮಾಡುತ್ತಿದ್ದಾರೆ. ಏಜೆಂಟರಾಗುವ ಚಾಕಚಕ್ಯತೆ ಇಲ್ಲದವರು, ಅವರು ನೀಡುವ ಸಣ್ಣ ಪುಟ್ಟ ಪ್ರಾಯೋಜಿತ ಕಾರ್ಯಕ್ರಮಗಳಿಗಾಗಿ ಹಲ್ಲುಗಿಂಜಿ ನಿಂತಿದ್ದಾರೆ. ಇನ್ನೂ ಫಲಾನುಭವಿಗಳಾಗದ ಕೆಲವರಂತೂ ನೂರಾರು ನೆಪಗಳನ್ನು ಹುಡುಕಿ-ಕೆದಕಿ ಹೆಕ್ಕಿ ತೆಗೆದು ಆಳುವವರ ಕೃಪೆಗಾಗಿ ಕಾಯುತ್ತಿದ್ದಾರೆ. ತಮ್ಮ ಈ ಆತ್ಮ ವಂಚನೆಗಾಗಿ ತತ್ವ-ಸಿದ್ಧಾಂತಗಳನ್ನೇ ತಿರುಚಿ ತಮಗೆ ಅನುಕೂಲವಾಗುವಂತೆ ವಾದಿಸುತ್ತಿದ್ದಾರೆ.

ಮೊನ್ನೆ ನಡೆದ ಉಡುಪಿ ಸಾಹಿತ್ಯ ಪ್ರಹಸನದಲ್ಲಿ ಇವರೆಲ್ಲ ಭಾಗವಹಿಸಿದ್ದರು. ಇವರೆಲ್ಲ ಇದ್ದೂ ಒಂದೇ ಒಂದು ಜನಪರ ವಿಚಾರ ಅಲ್ಲಿ ಚರ್ಚೆಯಾಗಲಿಲ್ಲ. ಜನ ಪರ ನಿರ್ಣಯ ಅಂಗೀಕಾರವಾಗಲಿಲ್ಲ. ಪ್ರತೀ ವರ್ಷದ ಸಂಪ್ರದಾಯದಂತೆ ಅದೇ ಚರ್ಚೆ! ಅದೇ ನಿರ್ಣಯ! ಸರ್ಕಾರ ಇವರ ಚರ್ಚೆ-ನಿರ್ಣಯಗಳಿಗೆ ಚಿಕ್ಕಾಸಿನ ಬೆಲೆಯನ್ನು ಕೊಡುತ್ತಿಲ್ಲ. ಆದರೂ ಅದೇ ಚರ್ಚೆ! ಅದೇ ನಿರ್ಣಯ! ನಾನು ಕಂಡಂತೆ ಕಳೆದ ಇಪ್ಪತ್ತೈದು ವರ್ಷಗಳಿಂದಲೂ ಈ ಪ್ರಹಸನ ನಡೆಯುತ್ತಲೇ ಇದೆ.

ಇಡೀ ಸಮ್ಮೇಳನದಲ್ಲಿ ಕಂಡು ಹಿಡಿದ ಒಂದೇ ಒಂದು ಅಂಶ ಎಂದರೆ ಕನ್ನಡಿಗರು 'ಎರಡನೇ ದರ್ಜೆ ಪ್ರಜೆಗಳು' ಎಂಬುದು. ಸನ್ಮಾನ್ಯ ನಿಶ್ಶೇಷಗಿರಿರಾಯರ ಈ ಸಂಶೋಧನೆಗೆ ಇಂದಲ್ಲ ನಾಳೆ ಜ್ಞಾನಪೀಠವೋ ಪದ್ಮಭೂಷಣವೋ ಲಭಿಸಿದರೆ ಯಾರೂ ಆಶ್ಚರ್ಯಪಡಬೇಕಾಗಿಲ್ಲ! ಎಂಥ ನಾಚಿಕೆಯ ವಿಷಯ ಅಂದರೆ ಈ ನಿಶ್ಶೇಷಗಿರಿರಾಯರಿಗೆ ಹೊಸದಾಗಿ ಒಂದು ಭಾಷಣವನ್ನು ಕೂಡ ಬರೆಯುವ ಯೋಗ್ಯತೆ ಇಲ್ಲದಿರುವುದು. ಅವರ ಇಡೀ ಭಾಷಣದಲ್ಲಿ ಒಂದೇ ಒಂದು ಸಾಲು ಕೂಡ ಹೊಸದಿಲ್ಲ. ಹಿಂದಿನ ಅಧ್ಯಕ್ಷರ ಭಾಷಣಗಳನ್ನೇ 'ಕಾಪಿ-ಪೇಸ್ಟ್' ಮಾಡಿ ಸಿದ್ಧಪಡಿಸಿದಂತಿತ್ತು. ಕನ್ನಡಿಗರಿಗೆ 'ಎರಡನೇ ದರ್ಜೆ ಪ್ರಜೆಗಳಾಗಬೇಡಿ' ಎಂದು ಕರೆ ನೀಡುವ ನಿಶ್ಶೇಷಗಿರಿರಾಯರಿಗೆ ಇಡೀ ದೇಶದ ರೈತರು, ಕಾರ್ಮಿಕರು, ದಲಿತರು, ಮಹಿಳೆಯರೆಲ್ಲ ಎಷ್ಟನೇ ದರ್ಜೆ ಪ್ರಜೆಗಳಾಗಿದ್ದಾರೆಂಬ ಕನಿಷ್ಠ ಅರಿವಾದರೂ ಇರಬೇಕಲ್ಲವೆ? ಇಂಥ ಪಂಚೇಂದ್ರಿಗಳಿಲ್ಲದವರೆಲ್ಲ ಕನ್ನಡದ ಸಾಂಸ್ಕೃತಿಕ ರಾಯಭಾರಿಗಳಾದರೆ ಕನ್ನಡಿಗರ ಗತಿ ಏನು?

ನಿಜ ಹೇಳಬೇಕೆಂದರೆ ಇಡೀ ಸಮ್ಮೇಳನ ಸಂಘಪರಿವಾರದ ಗುಪ್ತ ಅಜೆಂಡಾವನ್ನು ಜಾರಿಗೊಳಿಸಲು ನಡೆಸಿದ ಪ್ರಯತ್ನದಂತೆ ಕಾಣಿಸುತ್ತಿತ್ತು. ದೇಶವನ್ನು ಕಿತ್ತುತಿನ್ನುವ ಹಸಿವು, ಬಡತನ, ಜಾತೀಯತೆ, ಕೋಮುವಾದಗಳ ವಸ್ತುನಿಷ್ಠ ಚರ್ಚೆ ಅಲ್ಲಿ ನಡೆಯಲಿಲ್ಲ. ಅತ್ಯಂತ ಜಾಣ್ಮೆಯ ಪದಪುಂಜಗಳು, ವಾಕ್ಯರಚನೆಗಳು, ಚರ್ಚೆಗಳು ಅಲ್ಲಿನ ಎಲ್ಲ ವೇದಿಕೆಗಳಲ್ಲಿ ಕಂಡು ಬಂದವು. ಪ್ರಹಸನದ ವಿಶೇಷವೆಂದರೆ ಸಂಘಪರಿವಾರದ ನೇತಾರ ಮಾಜಿಮಂತ್ರಿ ವಿ.ಎಸ್. ಆಚಾರ್ಯ ಸಮ್ಮೇಳನ ಮುಗಿಯುವವರೆಗೂ ವೇದಿಕೆಯಲ್ಲಿ ಪ್ರತಿಷ್ಠಾಪಿತವಾಗಿದ್ದುದು!

ಇಷ್ಟೆಲ್ಲ ಹತಾಶೆ-ವ್ಯಂಗ್ಯದ ಹಿಂದೆ ಇರುವ ನೋವು ನಿಮಗೆಲ್ಲ ಅರ್ಥವಾಗುತ್ತದೆ ಎಂದುಕೊಂಡಿರುವೆ. ಸಾಹಿತ್ಯ ಎಂದೂ ಉಳ್ಳವರ ಸೊತ್ತಾಗಬಾರದು. ವ್ಯವಸ್ಥೆಯ ಹಿತಕಾಯುವ ಮಾಧ್ಯಮವಾಗಬಾರದು. ನೊಂದವರ ಪ್ರಾಣಮಿತ್ರನಾಗಬೇಕು. ಆದರೆ ಬೇಲಿಯೇ ಎದ್ದು ಹೊಲ ಮೇದರೆ ಏನು ಮಾಡುವುದು? ಸಮಾಜದ ಸ್ವಾಭಿಮಾನ-ಘನತೆಯನ್ನು ಎತ್ತಿ ಹಿಡಿಯಬೇಕಾದ ಸಾಂಸ್ಕೃತಿಕ ರಾಯಭಾರಿಗಳೆಲ್ಲ ಸರ್ಕಾರದೆದುರು ಮಂಡಿಯೂರಿ ಕುಳಿತರೆ ಏನು ಮಾಡಬೇಕು? ಜನ ಸಮುದಾಯವನ್ನು ಕಿತ್ತು ತಿನ್ನುತ್ತಿರುವ ಸಮಸ್ಯೆಗಳನ್ನು ಆಳುವವರ ಮುಖಕ್ಕೆ ರಾಚಿ ಹೇಳಬೇಕಾದ 'ಅಕ್ಷರ ದಾಸೋಹಿ'ಗಳೆಲ್ಲ 'ಅಕ್ಷರ ದಲ್ಲಾಳಿ'ಗಳಾದರೆ ಏನು ಮಾಡಬೇಕು?

ಇಂಥ ಹತಾಶೆಯ ನಡುವೆ ಕೂಡ ಒಂದು ಪ್ರತಿಭಟನೆಯ ಬೆಳಕು ಕಂಡಿದೆ. ಅದು ಉಡುಪಿಯಲ್ಲೇ ನಡೆದ 'ಸೌಹಾರ್ದ ಸಾಹಿತ್ಯ ಸಮ್ಮೇಳನ'. ಸಾಹಿತ್ಯ ಪರಿಷತ್ತಿನ ಜನ ವಿರೋಧಿ ಪ್ರಹಸನಗಳಿಗೆ ಇದು ಅತ್ಯಂತ ಅರ್ಥಪೂರ್ಣ ಪ್ರತಿಕ್ರಿಯೆಯಾಗಿತ್ತು. ಅದು ಕೇವಲ ಪ್ರತಿಕ್ರಿಯೆಯಾಗಿ ಮಾತ್ರ ಉಳಿಯಬಾರದು. ಕನ್ನಡಿಗರ ಸಾಂಸ್ಕೃತಿಕ ಬದುಕನ್ನು ಕಟ್ಟಿಕೊಡುವ ಪರ್ಯಾಯವಾಗಬೇಕು.

○ ಇಂದೂಧರ ಹೊನ್ನಾಪುರ

ಶಿಕ್ಷಣ, ಅಭಿವೃದ್ಧಿ, ನಾಗರಿಕ ಸಮಾಜ... ಇತ್ಯಾದಿ

ನಮ್ಮ ಹಿಂದಿನ ರಾಷ್ಟ್ರಪತಿಗಳಾಗಿದ್ದ ಎ.ಪಿ.ಜೆ ಅಬ್ದುಲ್ ಕಲಾಂ ಅವರು ದೇಶಾದ್ಯಂತ ಶಾಲಾ-ಕಾಲೇಜುಗಳನ್ನು ಭೇಟಿ ಮಾಡಿ ಮಕ್ಕಳೊಂದಿಗೆ ಬೆರೆತು ಅವರೊಡನೆ ಚರ್ಚೆ ಮಾಡುತ್ತಿದ್ದರು. ಅಲ್ಲಿ ಅವರು ಯಾವ ವಿಷಯಗಳ ಬಗ್ಗೆ ಚರ್ಚೆ ಮಾಡುತ್ತಿದ್ದರು? ಮಕ್ಕಳ ಬುದ್ಧಿಶಕ್ತಿಯನ್ನು ಕುರಿತಂತೆ ಚರ್ಚೆ ನಡೆಯುತ್ತಿತ್ತು. ಸಮಾಜವನ್ನು ಕಾಡುತ್ತಿರುವ ಕೋಮು ಭಾವನೆ, ಅಸ್ಪೃಶ್ಯತೆ, ಲಿಂಗ ತಾರತಮ್ಯ, ಅಸಮಾನತೆ, ಆಹಾರ ಅಭದ್ರತೆ, ಹಸಿವು, ದುಸ್ಥಿತಿಗಳ ಕುರಿತಂತೆ ಮಕ್ಕಳ ಅಭಿಪ್ರಾಯದ ಬಗ್ಗೆ ಪ್ರಶ್ನೆಗಳನ್ನು ಕೇಳಾಗುತ್ತಿರಲಿಲ್ಲ. ಸಮಾಜದಲ್ಲಿ ಇತರರೊಡನೆ ನಾವು ಹೇಗೆ ವರ್ತಿಸಬೇಕು, ಇತರರನ್ನು ಹೇಗೆ ಪರಿಭಾವಿಸಿಕೊಳ್ಳಬೇಕು, ಪರಿಸರದ ಬಗ್ಗೆ ಯಾವ ಭಾವನೆ ಬೆಳೆಸಿಕೊಳ್ಳಬೇಕು, ಭಿನ್ನಮತವನ್ನು ಹೇಗೆ ಗೌರವಿಸಬೇಕು ಮುಂತಾದ ಗುಣಗಳನ್ನು ನಾವು ನಾಗರಿಕ ಗುಣಗಳೆಂದು ಕರೆಯಬಹುದು.

ಡಾ॥ ಟಿ.ಆರ್. ಚಂದ್ರಶೇಖರ

ಭಾರತದ, ಅಂತೆಯೇ ಕರ್ನಾಟಕದ ಸಂದರ್ಭದಲ್ಲಿ ನಾಗರಿಕ ಸಮಾಜವೆಂಬುದು ತುಂಬಾ ದುರ್ಬಲವಾಗಿದೆಯೆಂದೂ, ಅದರ ವ್ಯಾಪ್ತಿ, ಅಂದರೆ ಜನರನ್ನು ಒಳಗೊಳ್ಳುವ ಬಗೆ ತುಂಬಾ ಸೀಮಿತವಾಗಿದೆಯೆಂದೂ, ನಾಗರಿಕ ಪ್ರಜ್ಞೆಯೆಂಬುದು ಅಪರೂಪದ ಸಂಗತಿಯಾಗಿದೆಯೆಂದೂ ಹೇಳಲಾಗುತ್ತಿದೆ. ಈ ಕಾರಣಗಳಿಂದಾಗಿಯೇ ಭಾರತ-ಕರ್ನಾಟಕ ಹಿಂದುಳಿದ ಸ್ಥಿತಿಯಲ್ಲಿವೆಯೆಂದೂ ಹೇಳಲಾಗುತ್ತಿದೆ. ಇತ್ತೀಚೆಗೆ ಅಭಿವೃದ್ಧಿ ಕುರಿತ ಸೈದ್ಧಾಂತಿಕ ಚರ್ಚೆಗಳಲ್ಲಿ ಅದನ್ನು 'ಸಾಮಾಜಿಕ ಬಂಡವಾಳ'ವೆಂಬ ಅಭಿದಾನದಲ್ಲಿ ಗುರುತಿಸಲಾಗುತ್ತಿದೆ. ಅಭಿವೃದ್ಧಿಯ ಚಾಲಕಶಕ್ತಿಯಾಗಿ ಅದು ಕೆಲಸ ಮಾಡುತ್ತಿದೆಯೆಂದು ಗುರುತಿಸಲಾಗುತ್ತಿದೆ. ನಾಗರಿಕ ಸಮಾಜ ರೂಪಿಸುವಲ್ಲಿ ಶಿಕ್ಷಣದ ಪಾತ್ರ ತುಂಬಾ ಮಹತ್ವದ್ದಾಗಿದೆ. ನಿಜಕ್ಕೂ ಹೇಳಬೇಕೆಂದರೆ ಜವಾಬುದಾರಿಯುತ ಮತ್ತು ಜಾಗೃತ ನಾಗರಿಕರನ್ನು ರೂಪಿಸುವುದೇ ಶಿಕ್ಷಣದ ಜವಾಬುದಾರಿ. ನಾಗರಿಕರನ್ನು, ಅಂದರೆ ನಾಗರಿಕ ಸಮಾಜವನ್ನು ರೂಪಿಸುವ ಕೆಲಸವನ್ನು ನಮ್ಮ ಶಿಕ್ಷಣ ವ್ಯವಸ್ಥೆ ನಿರ್ವಹಿಸುತ್ತಿದೆಯೇ ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಬೇಕಾಗುತ್ತದೆ. ನಮ್ಮ ಸಂದರ್ಭದಲ್ಲಿ ನಾಗರಿಕ ಸಮಾಜವೆನ್ನುವುದು ಎಷ್ಟರ ಮಟ್ಟಿಗೆ ಕ್ರಿಯಾಶೀಲವಾಗಿದೆ ಮತ್ತು ಆರೋಗ್ಯಶಾಲಿಯಾಗಿದೆ ಎಂಬುದನ್ನು ಚರ್ಚಿಸುವ ಅಗತ್ಯವಿದೆ. ಏಕೆಂದರೆ ಶಿಕ್ಷಣ, ನಾಗರಿಕ ಸಮಾಜ, ಅಭಿವೃದ್ಧಿ ಇವುಗಳ ನಡುವೆ ಸೂಕ್ಷ್ಮವಾದ ಸಂಬಂಧವನ್ನು ಗುರುತಿಸಬಹುದಾಗಿದೆ.

ಅಭಿವೃದ್ಧಿ ಅಧ್ಯಯನದ ವಿದ್ಯಾರ್ಥಿಗಳಿಗೆ ತಿಳಿದಿರುವಂತೆ ಸದರಿ ಸಿದ್ಧಾಂತಗಳು ರೂಪುಗೊಳ್ಳುತ್ತಿದ್ದ ಆರಂಭದ ಹಂತದಲ್ಲಿ ಅಭಿವೃದ್ಧಿ ಹಿಂದಿನ ಚಾಲಕಶಕ್ತಿಯಾಗಿ ಗುರುತಿಸಿದ್ದ ಮುಖ್ಯ ಸಂಗತಿಯೆಂದರೆ ಭೌತಿಕ ಬಂಡವಾಳ. ಬಂಡವಾಳ ಸಂಚಯನ ಹಾಗೂ ಹೂಡಿಕೆಗಳನ್ನು ಅಭಿವೃದ್ಧಿಯ ನಿರ್ಣಾಯಕ ಶಕ್ತಿಗಳೆಂದು ಗುರುತಿಸಲಾಗಿತ್ತು. ಹಿಂದುಳಿದ ದೇಶಗಳಲ್ಲಿ ಬಂಡವಾಳ ಸಂಚಯನ, ಹೂಡಿಕೆಯನ್ನು ಶೇ. ೧೦ ರಿಂದ ಶೇ. ೨೦ಕ್ಕೆ ಏರಿಸುವುದೇ ಅಭಿವೃದ್ಧಿಯೆಂದು ಹೇಳಲಾಗುತ್ತಿತ್ತು. ಯಾವ ದೇಶದಲ್ಲಿ ಬಂಡವಾಳದ ಕೊರತೆಯಿರುತ್ತದೋ ಅದು ಹಿಂದುಳಿದ ದೇಶವೆಂದೂ, ಯಾವ ದೇಶದಲ್ಲಿ ಅದು ಸಮೃದ್ಧವಾಗಿರುತ್ತದೋ ಅದು ಮುಂದುವರಿದ ದೇಶವೆಂದೂ ತೀರ್ಮಾನಿಸಲಾಗುತ್ತಿತ್ತು. ಇಪ್ಪತ್ತನೆಯ ಶತಮಾನದ ೫೦-೬೦ರ ದಶಕಗಳಲ್ಲಿ ಅಭಿವೃದ್ಧಿಗೆ ಸಂಬಂಧಿಸಿದ ಯಾವುದೇ ಪಠ್ಯಗಳನ್ನು ತೆಗೆದುಕೊಂಡರೂ ಅದರಲ್ಲಿ ಬಂಡವಾಳ ಸಂಚಯನಕ್ಕೆ ಪ್ರತ್ಯೇಕ ಪ್ರಮುಖ ಸ್ಥಾನ ನೀಡಲಾಗುತ್ತಿತ್ತು. ಆದರೆ ಇಂದು ಪರಿಸ್ಥಿತಿ ಬದಲಾಗದೆ. ಭಾರತದ ಅಭಿವೃದ್ಧಿ ಕುರಿತಂತೆ ಇತ್ತೀಚೆಗೆ ಜೇನ್‌ಡ್ರೀಜ್ ಮತ್ತು ಅಮರ್ತ್ಯಸೇನ್ ಪ್ರಕಟಿಸಿರುವ ಪ್ರಸಿದ್ಧ ಕೃತಿ 'ಭಾರತ: ಅಭಿವೃದ್ಧಿ ಮತ್ತು ಸಹಭಾಗಿತ್ವ'ದಲ್ಲಿ ಬಂಡವಾಳ ಸಂಚಯನ ಮತ್ತು ಹೂಡಿಕೆ ಬಗ್ಗೆ ಯಾವುದೇ ರೀತಿಯ ಚರ್ಚೆಯಿಲ್ಲ. ಯುಎನ್‌ಡಿಪಿಯು ೧೯೯೦ ರಿಂದಲೂ ಪ್ರಕಟಿಸುತ್ತಿರುವ ವಾರ್ಷಿಕ 'ಮಾನವ ಅಭಿವೃದ್ಧಿ ವರದಿ'ಗಳಲ್ಲಿ ಬಂಡವಾಳದ ಬಗ್ಗೆ ಉಲ್ಲೇಖವಿರುವುದಿಲ್ಲ. ಆದರೆ ಒಂದು ಕಾಲಕ್ಕೆ ಅಭಿವೃದ್ಧಿಯನ್ನು ಬಂಡವಾಳ ಹೂಡಿಕೆಗೆ ಸಮೀಕರಿಸಲಾಗಿತ್ತು.

ಅಭಿವೃದ್ಧಿ ಕುರಿತ ಸಿದ್ಧಾಂತಗಳ ವಿಕಾಸದ ಹಾದಿಯ ಎರಡನೆಯ ಹಂತದಲ್ಲಿ ಭೌತಿಕ ಬಂಡವಾಳದ ಜೊತೆಯಲ್ಲಿ ಗುರುತಿಸಿದ ಮತ್ತೊಂದು ಸಂಗತಿಯೆಂದರೆ 'ಮಾನವ ಬಂಡವಾಳ', ಜನರ ಶಿಕ್ಷಣ, ಕುಶಲತೆ, ತಾಂತ್ರಿಕ ಜ್ಞಾನ, ಮಾಹಿತಿ ಭಂಡಾರ ಮುಂತಾದವುಗಳನ್ನು ಮಾನವ ಬಂಡವಾಳವೆಂದು ಕರೆಯಲಾಗಿದೆ. ಭಾರತದಂತಹ ದೇಶದ ಅಭಿವೃದ್ಧಿಗೆ ಇರುವ ಮುಖ್ಯ ಅಡ್ಡಿಯೆಂದರೆ 'ಮಾನವ ಬಂಡವಾಳ'ದ ಕೊರತೆಯೆಂದು ಗುರುತಿಸಲಾಯಿತು. ಅಭಿ



ವೃದ್ಧಿಗೆ ಮಾನವ ಬಂಡವಾಳದ ಕೊಡುಗೆ ಎಷ್ಟು ಎಂಬುದನ್ನು ಪರಿಮಾಣಾತ್ಮಕವಾಗಿ ಲೆಕ್ಕ ಹಾಕುವ ಮಾದರಿಗಳು ರೂಪುಗೊಂಡವು. ಅಭಿವೃದ್ಧಿಯೆಂಬುದು ಕೇವಲ ಭೌತಿಕ ಬಂಡವಾಳಕ್ಕೆ ಸಂಬಂಧಿಸಿದ ಪ್ರಕ್ರಿಯೆ ಮಾತ್ರವಲ್ಲ. ಅಲ್ಲಿ ಮಾನವ ಬಂಡವಾಳದ ಪಾತ್ರವೂ ಇದೆ ಎಂಬುದನ್ನು ಅಧ್ಯಯನಗಳು ತೋರಿಸಿಕೊಟ್ಟವು.

ಈಗ ಅಭಿವೃದ್ಧಿ ಕುರಿತ ಸಿದ್ಧಾಂತಗಳ ವಿಕಾಸದ ಹಾದಿಯಲ್ಲಿ ಮೂರನೆಯ ಹಂತದಲ್ಲಿ ನಾವಿದ್ದೇವೆ. ಅದೇ 'ಸಾಮಾಜಿಕ ಬಂಡವಾಳ'ದ ಪರ್ವ, ಇಂದು ಅಭಿವೃದ್ಧಿ ಕುರಿತ ಸೈದ್ಧಾಂತಿಕ ಚರ್ಚೆಗಳಲ್ಲಿ ಸಾಮಾಜಿಕ ಬಂಡವಾಳದ ಪಾತ್ರವನ್ನು ಕುರಿತಂತೆ ತೀವ್ರ ಚರ್ಚೆಗಳು ನಡೆಯುತ್ತಿವೆ. ಸಮಾಜದಲ್ಲಿ ಬೇರೆ ಬೇರೆ ಜನವರ್ಗ-ಗುಂಪುಗಳ ನಡುವಿನ ಸಂಬಂಧಗಳು, ಸಂಬಂಧಗಳ ಜಾಲಗಳು ಸಂಘಟನೆ, ಸಂಘಟನಾತ್ಮಕ ಪ್ರಯತ್ನಗಳು ಮುಂತಾದ ಸಂಗತಿಗಳನ್ನು 'ಸಾಮಾಜಿಕ ಬಂಡವಾಳ'ವೆಂದು ಕರೆಯಲಾಗಿದೆ. ಈ ಬಗೆಯ ಸಾಮಾಜಿಕ ಬಂಡವಾಳದ ಉತ್ಪಾದನೆಯಲ್ಲಿ ನಾಗರಿಕ ಸಮಾಜದ ಪಾತ್ರವು ನಿರ್ಣಾಯಕವಾದುದಾಗಿದೆ. ಈ ಬಗೆಯ ಸಾಮಾಜಿಕ ಬಂಡವಾಳದ ಕೊರತೆಯೇ ಕರ್ನಾಟಕದಂತಹ-ಭಾರತದಂತಹ ಆರ್ಥಿಕತೆಗಳು ಹಿಂದುಳಿದಿರುವುದಕ್ಕೆ ಕಾರಣವೆಂದು ಹೇಳಲಾಗುತ್ತಿದೆ.

ಈ ಹಿನ್ನೆಲೆಯಲ್ಲಿ ನಮ್ಮ ಮುಂದೆ ಎದ್ದು ನಿಲ್ಲುವ ಪ್ರಶ್ನೆಗಳು ಹೀಗಿವೆ. ನಾಗರಿಕ ಸಮಾಜವೆಂದರೆ ಯಾವುದು? ಸಮಾಜದೊಳಗೊಂದು ಸಮಾಜವೆ? ನಾಗರಿಕ ಸಮಾಜವೆಂಬುದೊಂದು ಇರುವುದಾದರೆ ಉಳಿದದ್ದು ಅನಾಗರಿಕ ಸಮಾಜವೆ? ನಾಗರಿಕ ಸಮಾಜವೆಂಬುದು ನಗರ ಪ್ರದೇಶದ ವಿಶಿಷ್ಟತೆಯೆ? ನಾಗರಿಕ ಸಮಾಜವೆಂದರೆ ಆಧುನಿಕ ಸಮಾಜವೆ? ನಾಗರಿಕ ಸಮಾಜದ ಉತ್ಪಾದನೆಯಲ್ಲಿ ಶಿಕ್ಷಣದ ಪಾತ್ರವೇನು? ಲಿಂಗ ತಾರತಮ್ಯದಿಂದ ಕೂಡಿರುವ, ಜಾತಿ ಶ್ರೇಣೀಕರಣದ ನಮ್ಮ ಸಂದರ್ಭದ ಹಿನ್ನೆಲೆಯಲ್ಲಿ ನಾಗರಿಕ ಸಮಾಜವನ್ನು ಪರಿಭಾವಿಸಿಕೊಳ್ಳುವುದು ಹೇಗೆ? ಈ ಪ್ರಶ್ನೆಗಳನ್ನು ವಿವರವಾಗಿ ಚರ್ಚಿಸುವುದು ಪ್ರಸ್ತುತ ಪ್ರಬಂಧದ ಉದ್ದೇಶವಾಗಿದೆ.

ಶಿಕ್ಷಣ ವ್ಯವಸ್ಥೆಯ ಮುಖ್ಯವಾದ ಉದ್ದೇಶವೆಂದರೆ 'ನಾಗರಿಕ'ರನ್ನು ಅಂದರೆ 'ಪ್ರಜೆ'ಗಳನ್ನು ರೂಪಿಸುವುದಾಗಿದೆ. ಮಕ್ಕಳನ್ನು ಜವಾಬುದಾರಿ ನಾಗರಿಕರನ್ನಾಗಿ ರೂಪಿಸುವುದೇ ಶಿಕ್ಷಣದ ಜವಾಬುದಾರಿ. ಇತರರನ್ನು ತನ್ನಂತೆ ಪರಿಭಾವಿಸಿಕೊಳ್ಳುವ, ಸಾಮಾಜಿಕ ಬಹುಳತೆಯಲ್ಲಿ ನಂಬಿಕೆಯಿರುವ, ಸಂವಿಧಾನದತ್ತ ಮಾನವ ಹಕ್ಕುಗಳು, ಮೌಲ್ಯಗಳು, ಕರ್ತವ್ಯಗಳ ಬಗ್ಗೆ ವಿಶ್ವಾಸವಿರುವ, ಸಾಮಾಜಿಕ ನ್ಯಾಯವನ್ನು ಪ್ರತಿಪಾದಿಸುವ ಗುಣಗಳನ್ನು ಹೊಂದಿರುವ ಜನಸಮೂಹವನ್ನು ನಾಗರಿಕ ಸಮಾಜವೆಂದು ಕರೆಯಬಹುದು. ಇಂತಹ ನಾಗರಿಕರನ್ನು ರೂಪಿಸುವುದು ಶಿಕ್ಷಣದ ಜವಾಬುದಾರಿ. 'ಮಾರ್ಥನುಸ್‌ಬಾಮ್ ಸರಿಯಾಗಿ ಗುರುತಿಸಿರುವಂತೆ ಸಂಪತ್ತಿನ ಉತ್ಪಾದನೆ ಮಾತ್ರವೇ ಶಿಕ್ಷಣದ ಗುರಿಯಲ್ಲ. ನಾಗರಿಕರನ್ನು ಉತ್ಪಾದಿಸುವುದು ಶಿಕ್ಷಣದ ಜವಾಬುದಾರಿಯಾಗಿದೆ. ಆದರೆ ಇಂದು ನಮ್ಮ ಶಿಕ್ಷಣ ವ್ಯವಸ್ಥೆ ಎತ್ತ ಕಡೆ ಸಾಗಿದೆ? ಶಿಕ್ಷಣವೆಂಬುದು ಕೇವಲ ಬುದ್ಧಿವಂತರನ್ನು ಉತ್ಪಾದಿಸುವ ಕಾರ್ಯಗಾರವಾಗಿ ಬಿಟ್ಟಿದೆ. ಅದಕ್ಕಾಗಿ ಪೈಪೋಟಿ ನಡೆಯುತ್ತಿದೆ. ಈ ವ್ಯವಸ್ಥೆಯೊಳಗಿಂದ ಅತಿ ಬುದ್ಧಿವಂತರಾಗಿ ಹೊರಬರುವವರನ್ನು ಸಮಾಜವು ಗೌರವಿಸುತ್ತದೆ. ಶಿಕ್ಷಣದ ಸುಧಾರಣೆ ಬಗ್ಗೆ ಮಾತನಾಡುತ್ತಿರುವವರು ಅದರ ಗುಣಮಟ್ಟದ ಬಗ್ಗೆ ಮಾತ್ರ ಮಾತನಾಡುತ್ತಿದ್ದಾರೆ. ಅಲ್ಲಿ ಗುಣಮಟ್ಟವನ್ನು ಕೂಡ ಪರೀಕ್ಷೆಗಳಲ್ಲಿ ತೆಗೆಯುವ ಅಂಕಗಳಲ್ಲಿ ಅಳೆಯಲಾಗುತ್ತದೆ. ಮಾಸಿಕ ಲಕ್ಷಗಟ್ಟಲೆ ಸಂಬಳ ನೀಡುವ ಉದ್ಯೋಗ ಪಡೆದವರೇ ಅತಿಯಾದ ಬುದ್ಧಿವಂತರೆನಿಸಿಕೊಳ್ಳುತ್ತಿದ್ದಾರೆ. ಅಂತಹ ಬುದ್ಧಿವಂತರ ಪಡೆಯನ್ನು ಉತ್ಪಾದಿಸುವ ಸಂಸ್ಥೆಗಳನ್ನು ಇನ್ನಿಲ್ಲದಂತೆ ಹಾಡಿ ಹೊಗಳಲಾಗುತ್ತಿದೆ. ನಾಗರಿಕ ಪ್ರಜ್ಞೆಯನ್ನು, ಸಂವಿಧಾನಾತ್ಮಕ ಮೌಲ್ಯಗಳನ್ನು ಮಕ್ಕಳ ಮನಸ್ಸಿನಲ್ಲಿ ಬಿತ್ತುವ ಸಂಗತಿಯು ಮೂಲೆಗುಂಪಾಗಿ ಬಿಟ್ಟಿದೆ. ನಮ್ಮ ಮಕ್ಕಳು ಬುದ್ಧಿವಂತರಾಗಬೇಕು, ಎಂ.ಎನ್.ಸಿಗಳಲ್ಲಿ ಲಕ್ಷಗಟ್ಟಲೆ ಸಂಬಳ ತರುವ ಉದ್ಯೋಗ ಪಡೆಯಬೇಕು. ಅಂತಹ ವಿದ್ಯೆ ನೀಡುವ ಶಾಲಾ-ಕಾಲೇಜುಗಳು ಮಾತ್ರ ಉತ್ಕೃಷ್ಟವಾದವು ಎಂಬ ನಂಬಿಕೆ ಗಟ್ಟಿಯಾಗುತ್ತಿದೆ.

ನಮ್ಮ ಹಿಂದಿನ ರಾಷ್ಟ್ರಪತಿಗಳಾಗಿದ್ದ ಎ.ಪಿ.ಜೆ ಅಬ್ದುಲ್ ಕಲಾಂ ಅವರು ದೇಶಾದ್ಯಂತ ಶಾಲಾ-ಕಾಲೇಜುಗಳನ್ನು ಭೇಟಿ ಮಾಡಿ ಮಕ್ಕಳೊಂದಿಗೆ ಬೆರೆತು ಅವರೊಡನೆ ಚರ್ಚೆ ಮಾಡುತ್ತಿದ್ದರು. ಅಲ್ಲಿ ಅವರು ಯಾವ ವಿಷಯಗಳ ಬಗ್ಗೆ ಚರ್ಚೆ ಮಾಡುತ್ತಿದ್ದರು? ಮಕ್ಕಳ ಬುದ್ಧಿಶಕ್ತಿಯನ್ನು ಕುರಿತಂತೆ ಚರ್ಚೆ ನಡೆಯುತ್ತಿತ್ತು. ಸಮಾಜವನ್ನು ಕಾಡುತ್ತಿರುವ ಕೋಮುಭಾವನೆ, ಅಸ್ಪೃಶ್ಯತೆ, ಲಿಂಗ ತಾರತಮ್ಯ, ಅಸಮಾನತೆ, ಆಹಾರ ಅಭದ್ರತೆ, ಹಸಿವು, ದುಸ್ಥಿತಿಗಳ ಕುರಿತಂತೆ ಮಕ್ಕಳ ಅಭಿಪ್ರಾಯದ ಬಗ್ಗೆ ಪ್ರಶ್ನೆಗಳನ್ನು ಕೇಳಾಗುತ್ತಿರಲಿಲ್ಲ. ಸಮಾಜದಲ್ಲಿ ಇತರರೊಡನೆ ನಾವು ಹೇಗೆ ವರ್ತಿಸಬೇಕು, ಇತರರನ್ನು ಹೇಗೆ ಪರಿಭಾವಿಸಿಕೊಳ್ಳಬೇಕು, ಪರಿಸರದ ಬಗ್ಗೆ ಯಾವ ಭಾವನೆ ಬೆಳೆಸಿಕೊಳ್ಳಬೇಕು, ಭಿನ್ನಮತವನ್ನು ಹೇಗೆ ಗೌರವಿಸಬೇಕು ಮುಂತಾದ ಗುಣಗಳನ್ನು ನಾವು ನಾಗರಿಕ ಗುಣಗಳೆಂದು ಕರೆಯಬಹುದು. ಇಂತಹ ಗುಣಗಳನ್ನುಳ್ಳ ಜನಸಮೂಹವನ್ನು ನಾಗರಿಕ ಸಮಾಜವೆಂದು ಕರೆಯಬಹುದು. ನಮ್ಮ ಶಿಕ್ಷಣ ವ್ಯವಸ್ಥೆಯು ಇಂತಹ ಜವಾಬುದಾರಿಯನ್ನು ಇಂದು ನಿರ್ವಹಿಸುತ್ತಿಲ್ಲ. ಇಂತಹ ಜವಾಬುದಾರಿಯನ್ನು ಶಿಕ್ಷಣ ವ್ಯವಸ್ಥೆಯು ನಿರ್ವಹಿಸಬೇಕು ಎಂದು ಸಮಾಜ-ಸರ್ಕಾರ ನಿರೀಕ್ಷಿಸುತ್ತಿಲ್ಲ.

ನಾಗರಿಕ ಸಮಾಜವನ್ನು ರೂಪಿಸುವಲ್ಲಿ ನಮ್ಮ ಶಿಕ್ಷಣ ವ್ಯವಸ್ಥೆಯು ವಿಫಲವಾಗಿದೆ. ನಮ್ಮ ಶಿಕ್ಷಣ ವ್ಯವಸ್ಥೆಯ ಪ್ರಮುಖವಾದ ಮತ್ತು ಬಹುದೊಡ್ಡ ಸಮಸ್ಯೆಯೆಂದರೆ ಅದು ಮಕ್ಕಳ ದೈನಂದಿನ ಬದುಕಿಗೆ ಅತೀತವಾಗಿ ಬಿಟ್ಟಿದೆ. ಶಾಲೆಗಳಲ್ಲಿ, ಪಠ್ಯಗಳಲ್ಲಿ ಮಕ್ಕಳು ಏನನ್ನು ಕಲಿಯುತ್ತಿದ್ದಾರೋ, ಶಿಕ್ಷಕರು ಏನನ್ನು ಬೋಧಿಸುತ್ತಿದ್ದಾರೋ ಅದನ್ನು ಅವರು ಬದುಕುತ್ತಿರುವ-ಅನುಭವಿಸುತ್ತಿರುವ ಬದುಕಿನ ಜೊತೆ ಸಮೀಕರಿಸಿಕೊಳ್ಳುವುದು ಸಾಧ್ಯವಾಗುತ್ತಿಲ್ಲ. ಇವೆರಡರ ಮಧ್ಯ ದೊಡ್ಡ ಕಂದರ ಉಂಟಾಗಿದೆ. ಈ ಬಗೆಯ ಕಂದರವನ್ನು ಸಮಾಜವು ಉದ್ದೇಶಪೂರ್ವಕವಾಗಿ ರೂಪಿಸಿರುವ ಸಾಧ್ಯತೆಯಿಂದೆ. ನಮ್ಮ ಸಂದರ್ಭದಲ್ಲಿ ನಾಗರಿಕ ಸಮಾಜವು ದುರ್ಬಲವಾಗಿದ್ದರೆ, ಅದರ ವ್ಯಾಪ್ತಿಯು ಸೀಮಿತವಾಗಿದ್ದರೆ ಅದಕ್ಕೆ ನಮ್ಮ ಶಿಕ್ಷಣ ವ್ಯವಸ್ಥೆಯ ವೈಫಲ್ಯವು ಕಾರಣವಾಗಿದೆ.

ನಮ್ಮ ಶಿಕ್ಷಣ ವ್ಯವಸ್ಥೆಯು ಉದ್ಯೋಗಕ್ಕೆ ಅರ್ಹರಾದ ಉತ್ಪನ್ನಗಳನ್ನು ಹೊರಹಾಕುತ್ತಿದೆ ವಿನಾ ನಾಗರಿಕರನ್ನಲ್ಲ. ನಮ್ಮ ಸಂವಿಧಾನದಲ್ಲಿನ ಮೌಲ್ಯಗಳ ಬಗ್ಗೆ, ಲಿಂಗ ತಾರತಮ್ಯದ ಬಗ್ಗೆ ಅದು ಸಂಪೂರ್ಣವಾಗಿ ಮೌನ ತಳೆದಿದೆ. ಸಮಾಜದ ಬಗ್ಗೆ, ಅಲ್ಲಿನ ಆಗುಹೋಗುಗಳ ಬಗ್ಗೆ, ಜನರ ಬದುಕಿನ ಸ್ಥಿತಿಗತಿ ಬಗ್ಗೆ ಅದು ಮಕ್ಕಳಲ್ಲಿ ಯಾವುದೇ ಕುತೂಹಲ ಹುಟ್ಟಿಸುತ್ತಿಲ್ಲ. ನಮ್ಮ ಶಿಕ್ಷಣ ವ್ಯವಸ್ಥೆಯು ಪಠ್ಯಗಳಿಗೆ ಪಠ್ಯಕ್ರಮಕ್ಕೆ ಬಂದಿಯಾಗಿ ಬಿಟ್ಟಿದೆ. ಪಠ್ಯಗಳಲ್ಲಿರುವುದೇ ಜ್ಞಾನವಾಗಿ ಬಿಟ್ಟಿದೆ. ಅಲ್ಲಿ ಅನುಸಂಧಾನಕ್ಕೆ ಅವಕಾಶವಿಲ್ಲ. ತರಗತಿಗಳಲ್ಲಿ ಮಕ್ಕಳು ಕೇವಲ ಪಾಠ ಕೇಳಬೇಕೇ ವಿನಾ ಪ್ರಶ್ನೆ ಕೇಳಬಾರದು. ಪ್ರಶ್ನೆ ಕೇಳುವುದನ್ನು ಅವಿಧೇಯತೆಯೆಂದು ಪರಿಗಣಿಸಲಾಗುತ್ತದೆ ಶಿಕ್ಷಣ ವ್ಯವಸ್ಥೆಯೆನ್ನುವುದು 'ಕಿವುಡು ಶಿಕ್ಷಕರ ಮೂಕ ವಿದ್ಯಾರ್ಥಿಗಳ' ಕೂಪವಾಗಿ ಬಿಟ್ಟಿದೆ. ವಿದ್ಯಾರ್ಥಿಗಳು ಪ್ರಶ್ನೆ ಕೇಳುವಂತಿಲ್ಲ. ಒಂದು ವೇಳೆ ಕೇಳಿದರೂ ಅವು ಶಿಕ್ಷಕರಿಗೆ ಕೇಳುವುದಿಲ್ಲ. ಇಂತಹ ವ್ಯವಸ್ಥೆಯಿಂದ ಹೊರಬಂದ ಮಕ್ಕಳು ನಾಗರಿಕರಾಗುವುದು ಸಾಧ್ಯವಿಲ್ಲ. ಅವರು ಅನಾಗರಿಕರಾಗದಿರಬಹುದು. ಆದರೆ ಅಲ್ಲಿ ನಾಗರಿಕರಾಗುವುದು ಸಾಧ್ಯವಿಲ್ಲ. ಅವರು ವಿಜ್ಞಾನಿಗಳಾಗಬಹುದು, ತಂತ್ರಜ್ಞರಾಗಬಹುದು. ವೈದ್ಯರು, ನ್ಯಾಯಶಾಸ್ತ್ರ ಕೋವಿದರು, ನಿರ್ವಹಣಾ ತಜ್ಞರು ಆಗಬಹುದು. ಆದರೆ ಅಲ್ಲಿ ನಾಗರಿಕ ಪ್ರಜ್ಞೆಯು ಜಾಗೃತವಾಗಿರುವುದಿಲ್ಲ.

ನಾಗರಿಕರೆಂದರೆ ಯಾರು? ನಾಗರಿಕರೆಂದರೆ ಏನು? ನಾಗರಿಕ ಎಂಬುದನ್ನು ಸರಳವಾಗಿ ಮತ್ತು ತುಂಬಾ ಸೀಮಿತವಾಗಿ ಪರಿಭಾವಿಸಿಕೊಳ್ಳಲಾಗಿದೆ. ಓದು ಬರಹ ಬರುವವರನ್ನು, ಆಧುನಿಕತೆಯನ್ನು ಮೈಗೂಡಿಸಿಕೊಂಡವರನ್ನು, 'ಬದುಕು ಬೇರೆ-ತಾವು ಕಲಿತದ್ದು ಬೇರೆ' ಎಂಬ ಕಂದರದಲ್ಲಿ ಬದುಕುವವರನ್ನು, ಗಳಿಸುವುದೊಂದೆ ಜೀವನದ ಉದ್ದೇಶ ಮಾಡಿಕೊಂಡವರನ್ನು, ಇತರರ ಬಗ್ಗೆ ಯಾವುದೇ ಭಾವನೆ ತಳೆಯದವರನ್ನು ನಾಗರಿಕರೆಂದು ಕರೆಯಲಾಗಿದೆ. 'ನಾಗರಿಕ' ಎಂಬುದು 'ಅನಾಗರಿಕ' ಎಂಬುದಕ್ಕೆ ವಿರುದ್ಧವಾಗಿ ಬಳಸಲಾಗುತ್ತಿದೆ. ನಮ್ಮ ಶಿಕ್ಷಣ ವ್ಯವಸ್ಥೆಯು ಇಂತಹ ಗ್ರಾಹಕ ಮನೋಭಾವದ ಜನರನ್ನು ರೂಪಿಸುವ ಕೆಲಸ ಮಾಡುತ್ತಿದೆ. ಆಧುನಿಕರಾಗುವುದೇ ನಾಗರಿಕರಾಗುವುದು ಎಂಬಂತಾಗಿದೆ. ನಿಜಕ್ಕೂ ನಾಗರಿಕರೆಂದರೆ ಯಾರು? ಅದಕ್ಕೆ ಕೇವಲ ಆಧುನಿಕರಾಗಿ ಬಿಟ್ಟರೆ ಸಾಕೆ? ವೈಚಾರಿಕತೆ-ವೈಜ್ಞಾನಿಕತೆ ಮೈಗೂಡಿಕೊಂಡುಬಿಟ್ಟರೆ ಸಾಕೆ? ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ನಾಗರಿಕರಾಗುವುದು ಮತ್ತು ಆಧುನಿಕರಾಗುವುದು ಒಂದೇ ಆಗಿಬಿಟ್ಟಿದೆ.

ಸಂವಿಧಾನಾತ್ಮಕ ಮೌಲ್ಯಗಳನ್ನು ಮಕ್ಕಳಿಗೆ ಬೋಧಿಸುವ ಕೆಲಸವು ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ನಡೆಯುತ್ತಿಲ್ಲ. ಸಾಮಾಜಿಕ ಬಹುಳತೆಯಂತಹ ಸಂಗತಿ ಬಗ್ಗೆ ಮಕ್ಕಳಲ್ಲಿ ಚರ್ಚೆಯನ್ನು ಹುಟ್ಟು ಹಾಕುವುದು ಅದಕ್ಕೆ ಸಾಧ್ಯವಾಗಿಲ್ಲ. ಈ ಕಾರಣದಿಂದಾಗಿ ಮಕ್ಕಳು ಕೋಮುಭಾವನೆಯನ್ನು ಮೈಗೂಡಿಸಿಕೊಂಡರೆ ಆಶ್ಚರ್ಯವಿಲ್ಲ. ಕೋಮು ಭಾವನೆ ಉಂಟಾಗದಂತೆ ಭಾತೃತ್ವದ ಭಾವನೆ ಮಕ್ಕಳಲ್ಲಿ ಉಂಟಾಗುವಂತೆ, ಬಹುಳತೆ ಬಗ್ಗೆ ಮಕ್ಕಳಿಗೆ ಶಾಲಾ-ಕಾಲೇಜುಗಳಲ್ಲಿ ಪಾಠ ನಡೆಯುವುದಿಲ್ಲ. ಇಂತಹ ಸಂಗತಿಗಳ ಬಗ್ಗೆ ಚರ್ಚೆ-ಸಂವಾದ-ಅನುಸಂಧಾನ ನಡೆಸುವುದು ಮಕ್ಕಳಿಗೆ ಸಾಧ್ಯವಾಗುತ್ತಿಲ್ಲ.

ಸಾರ್ವಜನಿಕ ವಲಯದಲ್ಲಿರುವ ಗೊಡ್ಡು ಸಂಪ್ರದಾಯಗಳನ್ನು ಮಕ್ಕಳು ಮೈಗೂಡಿಸಿಕೊಳ್ಳುತ್ತಿದ್ದಾರೆ. ನಮ್ಮ ಹಿರಿಯರು, ಶಿಕ್ಷಕರು, ವಿಜ್ಞಾನಿಗಳು, ನ್ಯಾಯಶಾಸ್ತ್ರ ಕೋವಿದರು, ಕವಿಗಳು, ರಾಜಕಾರಣಿಗಳು, ಯಜ್ಞ-ಯಾಗ, ಹೋಮ-ಹವನ, ಮಂತ್ರಾಕ್ಷತೆ ಮುಂತಾದವುಗಳಲ್ಲಿ ತೊಡಗುತ್ತಿರುವಾಗ ಮಕ್ಕಳು ಅವುಗಳನ್ನು ಮುಗ್ಧವಾಗಿ

ನಂಬಬೇಕಾಗುತ್ತದೆ ವಿನಾ ಅವುಗಳ ಬಗ್ಗೆ ಪ್ರಶ್ನೆ ಕೇಳುವುದು ಸಾಧ್ಯವಾಗುವುದಿಲ್ಲ. ಇಂತಹ ನಂಬಿಕೆ–ಆಚರಣೆ, ವಿಧಿಗಳ ಬಗ್ಗೆ ಚರ್ಚೆ ನಡೆಸುವಂತಹ ವಾತಾವರಣ ಶಾಲಾ-ಕಾಲೇಜುಗಳಲ್ಲಿ ಇಲ್ಲ. ಮಕ್ಕಳು ತಮ್ಮ ದೈನಂದಿನ ಬದುಕಿನಲ್ಲಿ ಎದುರಿಸುವ ಸಮಸ್ಯೆಗಳ ಬಗ್ಗೆ, ಅವರು ಅನುಭವಿಸುವ ಅವಮಾನದ ಬಗ್ಗೆ, ತಾರತಮ್ಯದ ಬಗ್ಗೆ ಅಲ್ಲಿ ಚರ್ಚೆ ನಡೆಯುವುದಿಲ್ಲ. ನಮ್ಮ ಸಮಾಜದ ಒಂದು ಸಮೂಹದಿಂದ ಬಂದ ಮಕ್ಕಳಿಗೆ ಗುಡಿ–ಮಂದಿರಗಳನ್ನು ಪ್ರವೇಶಿಸುವುದು ಸಾಧ್ಯವಿಲ್ಲ. ಹಳ್ಳಿಗಳ ಚಹಾ ಅಂಗಡಿಗಳನ್ನು ಸಮಾಜದ ಒಂದು ಸಮೂಹಕ್ಕೆ ಸೇರಿದ ಜನರು ಉಳಿದವರಂತೆ ಸರಿಸಮವಾಗಿ ಕುಳಿತು ಚಹಾ ಸೇವಿಸುವಂತಿಲ್ಲ. ಸಮಾಜದಲ್ಲಿ ಒಂದು ಸಮೂಹಕ್ಕೆ ಸೇರಿದ ಜನರ ಮನೆಗಳು ಊರಿನ ಅಂಚಿನಲ್ಲಿರುತ್ತವೆ ಯಾಕೆ? ಉನ್ನತ ವರಮಾನದ ಕುಟುಂಬಕ್ಕೆ ಸೇರಿದ ಮಕ್ಕಳು ಕಡಿಮೆ ವರಮಾನದ ಕುಟುಂಬಕ್ಕೆ ಸೇರಿದ ಹಿರಿಯರನ್ನು ಏಕವಚನದಲ್ಲೂ, ಕಡಿಮೆ ವರಮಾನದ ಕುಟುಂಬಕ್ಕೆ ಸೇರಿದ ಹಿರಿಯರು ಉನ್ನತ ವರಮಾನದ ಕುಟುಂಬಗಳಿಗೆ ಸೇರಿದ ಕಿರಿಯರನ್ನು ಬಹುವಚನದಲ್ಲೂ ಸಂಬೋಧಿಸುತ್ತಾರೆ, ಏಕೆ? ಇಂತಹ ಸಂಗತಿಗಳನ್ನು ಮಕ್ಕಳು ದಿನವೂ ಎದುರಿಸುತ್ತಿರುತ್ತಾರೆ, ಅನುಭವಿಸುತ್ತಿರುತ್ತಾರೆ. ಆದರೆ ಇಂತಹ ಸಂಗತಿಗಳ ಬಗ್ಗೆ ಶಾಲಾ ಪಠ್ಯಗಳು ಮೌನ ತಳೆದಿವೆ. ಅವುಗಳ ಬಗ್ಗೆ ಚರ್ಚೆ ಶಾಲೆಗಳಲ್ಲಿ ಸಾಧ್ಯವಾಗುತ್ತಿಲ್ಲ. ಇಂತಹ ಸಂಗತಿಗಳ ಬಗ್ಗೆ ಚರ್ಚೆ ಮಾಡುವುದರ ಮೂಲಕ ಅವುಗಳನ್ನು ಅರ್ಥ ಮಾಡಿಕೊಳ್ಳುವುದು ನಾಗರಿಕ ಸಮಾಜದ ಬಹುಮುಖ್ಯ ಲಕ್ಷಣ.

ಜ್ಞಾನವೆಂಬುದು ಚರ್ಚೆ–ಸಂವಾದ–ಅನುಸಂಧಾನದ ಮೂಲಕ ಕಂಡುಕೊಳ್ಳುವ ಸಂಗತಿಯೆಂಬುದರ ಬಗ್ಗೆ ನಮ್ಮ ಶಿಕ್ಷಣ ವ್ಯವಸ್ಥೆಗೆ ನಂಬಿಕೆಯಿಲ್ಲ. ಅದೊಂದು ಸಿದ್ಧವಾದ ದಾಸ್ತಾನು ಎಂಬ ನಂಬಿಕೆ ಮೇಲೆ ನಮ್ಮ ಶಿಕ್ಷಣ ವ್ಯವಸ್ಥೆಯು ನಿಂತಿದೆ. ಕೇವಲ ಪಠ್ಯದಲ್ಲಿರುವುದನ್ನು ಬಿಟ್ಟರೆ ಉಳಿದುದೆಲ್ಲ ಜ್ಞಾನವಲ್ಲ. ಜ್ಞಾನವೆನ್ನುವುದು ಮಕ್ಕಳು ರೂಪಿಸುವ ಒಂದು ಸಂಗತಿ ಎಂಬುದರ ಬಗ್ಗೆ ಶಿಕ್ಷಣ ವ್ಯವಸ್ಥೆಯಲ್ಲಿ ವಿಶ್ವಾಸವಿಲ್ಲ.

ಅಭಿವೃದ್ಧಿ ಅಧ್ಯಯನ, ಅಭಿವೃದ್ಧಿ ಮೀಮಾಂಸೆಗಳಲ್ಲಿ ಸಾಕ್ಷರತೆ, ಶಿಕ್ಷಣಗಳನ್ನು ಕೇವಲ ಸಾಧನ ಸಂಪನ್ಮೂಲವಾಗಿ ಮಾತ್ರ ಪರಿಗಣಿಸಲಾಗುತ್ತಿದೆ. ಅವು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸಾಧನವಾಗಿ ಕೆಲಸ ಮಾಡುತ್ತಿವೆಯೆಂಬುದು ನಿಜ. ಅನಕ್ಷರಸ್ಥ ತಾಯಿಗಿಂತ ಅಕ್ಷರಸ್ಥ ತಾಯಿಯು ತನ್ನ ಮಗುವನ್ನು ಚೆನ್ನಾಗಿ ಬೆಳೆಸಬಲ್ಲಳು ಶಿಕ್ಷಿತ ರೈತನು ಅಶಿಕ್ಷಿತ ರೈತನಿಗಿಂತ ಚೆನ್ನಾಗಿ ಕೃಷಿ ಮಾಡಬಹುದು. ಪದವಿ ಪಡೆದ ವ್ಯಕ್ತಿಯು ಪದವಿ ಪಡೆಯುವ ವ್ಯಕ್ತಿಗಿಂತ ಹೆಚ್ಚು ಸಂಬಳ ಪಡೆಯಬಹುದು. ಇವೆಲ್ಲವೂ ನಿಜ. ಶಿಕ್ಷಣ–ಸಾಕ್ಷರತೆಯೆಂಬುದನ್ನು ಇಷ್ಟಕ್ಕೆ ಸೀಮಿತಗೊಳಿಸಬಾರದು. ಅವು ಉಪಕರಣಗಳಂತೆ ಕೆಲಸ ಮಾಡುತ್ತವೆ. ಅದಕ್ಕಿಂತ ಮುಖ್ಯವಾಗಿ ಅವು ಜನರನ್ನು ಕುತೂಹಲಿಗಳನ್ನಾಗಿ ಮಾಡುತ್ತವೆ. ಜನರಲ್ಲಿ ಪ್ರಶ್ನೆ ಕೇಳುವ ಗುಣವನ್ನು ಬೆಳೆಸುತ್ತವೆ. ಸಂದರ್ಭ–ಸನ್ನಿವೇಶವನ್ನು ವಿಮರ್ಶೆ ಮಾಡುವ ಸಾಮರ್ಥ್ಯವನ್ನು ಅವು ಒದಗಿಸುತ್ತವೆ. ಜನರು ಸಂದರ್ಭ–ಸನ್ನಿವೇಶಗಳ ಕೈಗೊಂಬೆಯಾಗದಂತೆ ನೋಡಿಕೊಳ್ಳುತ್ತವೆ. ಜನರು ತಮ್ಮ ಸ್ಥಿತಿಗತಿಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುವಂತೆ ಅವು ಮಾಡುತ್ತವೆ. ಅವು ಜನರ ಅಂತರ್ಗತ ಗುಣವನ್ನು ದಷ್ಟಪುಷ್ಟಗೊಳಿಸುತ್ತವೆ. ಜನರಿಗೆ ಅವು ಘನತೆಯನ್ನು ತಂದುಕೊಡುತ್ತವೆ. ನಮ್ಮ ಸುತ್ತಮುತ್ತಲಿನ ಜಗತ್ತಿನ ಆಗುಹೋಗುಗಳನ್ನು, ವಿದ್ಯಮಾನಗಳನ್ನು ಅರ್ಥ ಮಾಡಿಕೊಳ್ಳುವುದು ಅವುಗಳಿಂದ ಸಾಧ್ಯವಾಗುತ್ತಿದೆ. ಒಟ್ಟಾರೆ ಮಾರ್ಥನುಸ್‌ಬಾಮ್ ಹೇಳುವಂತೆ ಶಿಕ್ಷಣವೆಂಬುದು ಕೇವಲ ಸಂಪತ್ತನ್ನು ಮಾತ್ರ ಉತ್ಪಾದಿಸುವುದಿಲ್ಲ. ಅವು ಬಹಳ ಮುಖ್ಯವಾಗಿ ಜವಾಬುದಾರಿಯುತ ನಾಗರಿಕರನ್ನು ಉತ್ಪಾದಿಸುತ್ತದೆ.

ಇಂದು ಶಿಕ್ಷಣವು ಇಂತಹ ನಾಗರಿಕರನ್ನು ಉತ್ಪಾದಿಸುವ ಕೆಲಸ ಮಾಡುತ್ತಿಲ್ಲ. ಅದು ಇಂದು ಲಾಭ, ಪೈಪೋಟಿ, ಉತ್ಪಾದಕತೆ, ಉತ್ಕೃಷ್ಟತೆ ಮುಂತಾದ ಸಂಗತಿಗಳಲ್ಲಿ ಮುಳುಗಿಹೋಗಿದೆ. ಶಿಕ್ಷಣವು ಜನರ ಅಂತಶಕ್ತಿಯನ್ನು ಜಾಗೃತಗೊಳಿಸುವ ಕೆಲಸ ಮಾಡುತ್ತಿಲ್ಲ. ಶಿಕ್ಷಣಕ್ಕೆ ಎರಡು ಪಾತ್ರಗಳಿವೆ. ಅದು ಅಭಿವೃದ್ಧಿಯ ಸಾಧನವಾಗಿ ಕೆಲಸ ಮಾಡುತ್ತದೆ. ಎರಡನೆಯದಾಗಿ ಅದು ತನ್ನಷ್ಟಕ್ಕೆ ತಾನೆ ಮಹತ್ವದ್ದಾಗಿದೆ. ಅದಕ್ಕೆ ಅಂತಸ್ಥವಾದ ಗುಣವಿದೆ.

ಅಭಿವೃದ್ಧಿ ಅಧ್ಯಯನ, ಅಭಿವೃದ್ಧಿ ಮೀಮಾಂಸೆಗಳಲ್ಲಿ ಸಾಕ್ಷರತೆ, ಶಿಕ್ಷಣಗಳನ್ನು ಕೇವಲ ಸಾಧನ ಸಂಪನ್ಮೂಲವಾಗಿ ಮಾತ್ರ ಪರಿಗಣಿಸಲಾಗುತ್ತಿದೆ. ಅವು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸಾಧನವಾಗಿ ಕೆಲಸ ಮಾಡುತ್ತಿವೆಯೆಂಬುದು ನಿಜ. ಅನಕ್ಷರಸ್ಥ ತಾಯಿಗಿಂತ ಅಕ್ಷರಸ್ಥ ತಾಯಿಯು ತನ್ನ ಮಗುವನ್ನು ಚೆನ್ನಾಗಿ ಬೆಳೆಸಬಲ್ಲಳು ಶಿಕ್ಷಿತ ರೈತನು ಅಶಿಕ್ಷಿತ ರೈತನಿಗಿಂತ ಚೆನ್ನಾಗಿ ಕೃಷಿ ಮಾಡಬಹುದು. ಪದವಿ ಪಡೆದ ವ್ಯಕ್ತಿಯು ಪದವಿ ಪಡೆಯುವ ವ್ಯಕ್ತಿಗಿಂತ ಹೆಚ್ಚು ಸಂಬಳ ಪಡೆಯಬಹುದು. ಇವೆಲ್ಲವೂ ನಿಜ. ಶಿಕ್ಷಣ–ಸಾಕ್ಷರತೆಯೆಂಬುದನ್ನು ಇಷ್ಟಕ್ಕೆ ಸೀಮಿತಗೊಳಿಸಬಾರದು. ಅವು ಉಪಕರಣಗಳಂತೆ ಕೆಲಸ ಮಾಡುತ್ತವೆ. ಅದಕ್ಕಿಂತ ಮುಖ್ಯವಾಗಿ ಅವು ಜನರನ್ನು ಕುತೂಹಲಿಗಳನ್ನಾಗಿ ಮಾಡುತ್ತವೆ. ಜನರಲ್ಲಿ ಪ್ರಶ್ನೆ ಕೇಳುವ ಗುಣವನ್ನು ಬೆಳೆಸುತ್ತವೆ. ಸಂದರ್ಭ–ಸನ್ನಿವೇಶವನ್ನು ವಿಮರ್ಶೆ ಮಾಡುವ ಸಾಮರ್ಥ್ಯವನ್ನು ಅವು ಒದಗಿಸುತ್ತವೆ. ಜನರು ಸಂದರ್ಭ–ಸನ್ನಿವೇಶಗಳ ಕೈಗೊಂಬೆಯಾಗದಂತೆ ನೋಡಿಕೊಳ್ಳುತ್ತವೆ. ಜನರು ತಮ್ಮ ಸ್ಥಿತಿಗತಿಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುವಂತೆ ಮಾಡುತ್ತವೆ. ಅವು ಜನರ ಅಂತರ್ಗತ ಗುಣವನ್ನು ದಷ್ಟಪುಷ್ಟಗೊಳಿಸುತ್ತವೆ.

ಇಂದು ಶಿಕ್ಷಣದ ಗುಣಮಟ್ಟವನ್ನು ಉತ್ತಮ ಪಡಿಸುವ ಬಗ್ಗೆ ಚರ್ಚೆಗಳಾಗುತ್ತಿವೆ. ಆದರೆ ಇಲ್ಲಿನ ವೈರುಧ್ಯವನ್ನು ನಾವು ಗಮನಿಸಬೇಕು. ಕರ್ನಾಟಕದ ಸಂದರ್ಭದಲ್ಲಿ ಇನ್ನು ಮುಂದೆ ಒಂದನೆಯ ತರಗತಿಯಲ್ಲಿ ಶಾಲೆಯನ್ನು ಪ್ರವೇಶಿಸುವ ಮಕ್ಕಳ ಸಂಖ್ಯೆಯು ಕಡಿಮೆಯಾಗುತ್ತ ನಡೆಯುತ್ತದೆ. ಉದಾಹರಣೆಗೆ ೧೯೯೧ರಲ್ಲಿ ೦–೬ ವಯೋಮಾನದಲ್ಲಿದ್ದ ಮಕ್ಕಳ ಸಂಖ್ಯೆ ೭೪.೭೮ ಲಕ್ಷ. ಆದರೆ ೨೦೦೧ರಲ್ಲಿ ಅವರ ಸಂಖ್ಯೆಯು ಕರ್ನಾಟಕದಲ್ಲಿ ೭೧.೮೨ ಲಕ್ಷಕ್ಕೆ ಇಳಿದಿದೆ. ಅದು ಹೀಗೆ ಮುಂದುವರಿಯುತ್ತದೆ. ಇನ್ನು ಮುಂದೆ ಶಾಲೆಗಳ ಕೊರತೆ, ಕೊಠಡಿಗಳ ಕೊರತೆ, ಕಟ್ಟಡಗಳ ಕೊರತೆ ಮುಂತಾದವು ಶಿಕ್ಷಣಕ್ಕೆ ಸಂಬಂಧಿಸಿದಂತೆ ಉಂಟಾಗುವುದಿಲ್ಲ. ಈ ಬಗೆಯ ಸಮಸ್ಯೆಗಳನ್ನು ನಾವು ಬಗೆಹರಿಸಿಕೊಂಡು ಬಿಟ್ಟಿದ್ದೇವೆ. ಈಗ ಅದರ ಗುಣಮಟ್ಟದ ಬಗ್ಗೆ ಗಮನಹರಿಸಬೇಕಾಗಿದೆ. ಇಲ್ಲಿ ನಮಗೆ ಎದುರಾಗುವ ಪ್ರಶ್ನೆಯೆಂದರೆ ಯಾವ ಬಗೆಯ ಗುಣಮಟ್ಟ? ಯಾರ ಗುಣಮಟ್ಟ? ಗುಣಮಟ್ಟದ ಮಾನದಂಡ ಯಾವುದು?

ವ್ಯಾಪಾರಿ ಮನೋಭಾವವನ್ನು, ಲೆಕ್ಕಾಚಾರದ ಗುಣವನ್ನು ಮಕ್ಕಳಲ್ಲಿ ಮೂಡಿಸುವ ಗುಣಮಟ್ಟದ ಬಗ್ಗೆ ಕುತೂಹಲ ತಳೆಯುವ, ಸಾಮಾಜಿಕ ನ್ಯಾಯದ ಬಗ್ಗೆ ಆಸಕ್ತಿ ತಳೆಯುವ, ಜನತಾಂತ್ರಿಕ ವ್ಯವಸ್ಥೆ ಬಗ್ಗೆ ನಂಬಿಕೆ ತಳೆಯುವ, ಲಿಂಗಸಮಾನತೆ ಬಗ್ಗೆ ಆಸಕ್ತಿ ತಳೆಯುವ ಗುಣಗಳನ್ನು ರೂಪಿಸುವ ಶಿಕ್ಷಣದ ಗುಣಮಟ್ಟದ ಬಗ್ಗೆ ಮಾತನಾಡಬೇಕೋ? ಶಿಕ್ಷಣದ ಗುಣಮಟ್ಟವೆಂದಾಗ ನಾವು ಮೇಲೆ ತಿಳಿಸಿರುವ ಎರಡನೆಯ ಸಂಗತಿಯನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಮೊದಲು ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಪ್ರಜಾಪ್ರಭುತ್ವದ ಉಪಚಾರಕ್ಕೆ ಒಳಪಡಿಸಬೇಕಾಗಿದೆ. ಏಕೆಂದರೆ ಅಲ್ಲಿ ಪ್ರಜಾಪ್ರಭುತ್ವದ ವಾತಾವರಣವಿಲ್ಲ. ಅದನ್ನು ಅನುಸಂಧಾನಾತ್ಮಕ ವ್ಯವಸ್ಥೆಯಾಗಿ ರೂಪಿಸಬೇಕಾಗಿದೆ. ಸಾಮಾಜಿಕ ವಿಮರ್ಶೆ ಮಾಡುವ ಚರ್ಚಾಗೋಷ್ಠಿಗಳನ್ನಾಗಿ ಶಾಲೆಗಳನ್ನು ಪರಿವರ್ತಿಸಬೇಕಾಗಿದೆ. ನಮ್ಮ ಜನಪ್ರತಿನಿಧಿಗಳು, ವಿಜ್ಞಾನಿಗಳು, ತಂತ್ರಜ್ಞರು, ಸಾಮಾಜಿಕ ಮುಖಂಡರ ವರ್ತನೆಗಳು, ಅವರ ಆಚಾರ–ವಿಚಾರಗಳು ಅಲ್ಲಿ ವಿಮರ್ಶೆಗೆ ಒಳಗಾಗಬೇಕು. ಮುಖ್ಯಮಂತ್ರಿಯೊಬ್ಬ ಅಧಿಕಾರಕ್ಕೆ ಬಂದಾಗ ತನ್ನ ಮುಖ್ಯಮಂತ್ರಿ ಕಚೇರಿಯಲ್ಲಿ ಯಜ್ಞ–ಯಾಗ– ಹೋಮ–ಹವನ ನಡೆಸಿ ಶುದ್ಧೀಕರಿಸುವ ಕೆಲಸವು ಅನಾಗರಿಕವೆನ್ನುವ ಸಂಗತಿಯು ಚರ್ಚೆಯಾಗಬೇಕು. ದೈನಂದಿನ ಬದುಕಿನ ಬಗ್ಗೆ ವಿಮರ್ಶೆ ಮಾಡುವ ಗುಣವನ್ನು ಶಿಕ್ಷಣವು ಬೆಳೆಸಬೇಕು. ಈಗಾಗಲೆ ಹೇಳಿದಂತೆ ಪಠ್ಯಪುಸ್ತಕದ ಜಗತ್ತಿಗೂ ಮತ್ತು ನಮ್ಮ ಸುತ್ತಮುತ್ತಲಿನ ಜಗತ್ತಿಗೂ ನಡುವೆಯಿರುವ ಕಂದರವನ್ನು ಹೋಗಲಾಡಿಸಬೇಕು.

ನಾಗರಿಕ ಸಮಾಜವೆನ್ನುವುದು –ಜನತಾಂತ್ರಿಕ ಮೌಲ್ಯಗಳು ಪೂಜೆ ಪುನಸ್ಕಾರಗಳಿಂದ, ಯಜ್ಞ–ಯಾಗಗಳಿಂದ ಪ್ರಾಪ್ತವಾಗುವುದಿಲ್ಲ. ಅವು ನಿರಂತರ ಚರ್ಚೆ–ಸಂವಾದ, ಅನುಸಂಧಾನದಿಂದ ರೂಪುಗೊಳ್ಳುತ್ತವೆ. ಅಭಿವೃದ್ಧಿಯೆಂಬುದು ಜನರ ಬದುಕಿಗೆ ಸಂಬಂಧಿಸಿದ ಕ್ರಿಯೆಯಾಗಬೇಕು. ಆಗ ಅವು ಒಂದಕ್ಕೊಂದು ಪೂರಕವಾಗಿ ಕೆಲಸ ಮಾಡುತ್ತವೆ. ನಾಗರಿಕ ಸಮಾಜವೆನ್ನುವುದು ದಷ್ಟಪುಷ್ಟವಾದಾಗ ಅಲ್ಲಿ ಅಭಿವೃದ್ಧಿ ಸಾಧ್ಯವಾಗುತ್ತದೆ. ಜನರನ್ನು ಒಳಗೊಳ್ಳುವ ಅಭಿವೃದ್ಧಿ ಸಾಧ್ಯವಾಗುತ್ತದೆ. ಜನರನ್ನು ಒಳಗೊಳ್ಳುವ ಅಭಿವೃದ್ಧಿಯೇ ಜನತಾಂತ್ರಿಕ ಅಭಿವೃದ್ಧಿ. □

ಅಸ್ಸಾಂ ಆದಿವಾಸಿಗಳ ಸಂಘರ್ಷ

ನಾ ದಿವಾಕರ

ಸರ್ಕಾರದಿಂದ ಲಭ್ಯವಿರುವ ಸವಲತ್ತು, ಸೌಕರ್ಯಗಳು ಕ್ರಮೇಣ ಕ್ಷೀಣಿಸುತ್ತಿರುವಂತೆಯೇ, ಅವಕಾಶವಂಚಿತ ಜನಗಳ ಪ್ರಮಾಣ ಏರುತ್ತಲಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. ಲಭ್ಯವಿರುವ ಅಲ್ಪಾವಕಾಶವನ್ನು ಪ್ರಬಲ ಸಮುದಾಯಗಳು ಸುಲಭವಾಗಿ ದಕ್ಕಿಸಿಕೊಳ್ಳುವುದರಿಂದ ಪಟ್ಟಭದ್ರ ಹಿತಾಸಕ್ತಿಗಳೇ ಇಲ್ಲಿ ಹೆಚ್ಚು ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತಿವೆ. ಸಾಮಾನ್ಯ ಜನತೆಯ ಈ ಆಕ್ರೋಶಗಳಿಗೆ ಒಂದು ಪರಿಹಾರ ಸೂಚಿಸುವುದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ತುರ್ತು ಜವಾಬ್ದಾರಿಯಾಗಿದೆ. ಈಗಾಗಲೇ ಅಸ್ಸಾಮಿನಲ್ಲಿ ಅನೇಕ ಅದಿವಾಸಿ ಸಂಘಟನೆಗಳು ಶಸ್ತ್ರಸಜ್ಜಿತ ಹೋರಾಟಕ್ಕೆ ತಯಾರಿ ನಡೆಸುತ್ತಿದ್ದು, ಪ್ರಸ್ತುತ ಪ್ರಕರಣದಲ್ಲೂ ಇದು ವ್ಯಕ್ತವಾಗಿದೆ.

ಕಳೆದ ನವೆಂಬರ್ ೨೪ರಂದು ಅಸ್ಸಾಂನ ಗವಹಾತಿಯಲ್ಲಿ ನಡೆದ ಘಟನೆಗಳು ಇಡೀ ರಾಷ್ಟ್ರದ ಪ್ರಜ್ಞಾವಂತರನ್ನು ಕಂಗೆಡಿಸಿತೆಂದರೆ ಅತಿಶಯೋಕ್ತಿಯಾಗಲಾರದು. ಸುಶಿಕ್ಷಿತ ನಾಗರಿಕ ಸಮಾಜ ನಾಚಿಕೆಯಿಂದ ತಲೆ ತಗ್ಗಿಸುವಂತಹ ಈ ಘಟನೆಗಳಿಗೆ ಮಾಧ್ಯಮಗಳಲ್ಲಿ ಸಾಕಷ್ಟು ಪ್ರಚಾರ ದೊರೆತರೂ, ದೇಶದ ಯಾವುದೇ ಭಾಗದಲ್ಲಿ ತೀವ್ರತರವಾದ ಪ್ರತಿಭಟನೆಗಳು ಕಂಡುಬರಲಿಲ್ಲವೆಂದೇ ಹೇಳಬಹುದು. ಎಲ್ಲಾ ರೀತಿಯ ಗಂಭೀರ ವಿಷಯಗಳನ್ನೂ ಮನರಂಜನಾ ವಸ್ತುವನ್ನಾಗಿ ಮಾರ್ಪಡಿಸುವ ಶಕ್ತಿಯಿರುವ ದೃಶ್ಯ ಮಾಧ್ಯಮಗಳು ಈ ವಿಷಯದಲ್ಲೂ ಇದೇ ಹಾದಿ ಹಿಡಿದಿದ್ದನ್ನು ಕಾಣಬಹುದಿತ್ತು. ಸಿನಿಮಾ ನಟಿ ಶಿಲ್ಪಾ ಶೆಟ್ಟಿಗೆ ಬ್ರಿಟನ್‌ನ ಟಿ.ವಿ.ಕಾರ್ಯಕ್ರಮವೊಂದರಲ್ಲಿ ಜನಾಂಗೀಯ ನಿಂದನೆ ಮಾಡಿದ್ದು, ಇತ್ತೀಚೆಗೆ ಬಿಪಾಶ ಬಸು ಮತ್ತು ಜಾನ್ ಅಬ್ರಹಂರವರಿಗೂ ಇದೇ ರೀತಿ ನಿಂದನೆ ಮಾಡಿರುವುದು ಮಾಧ್ಯಮಗಳಲ್ಲಿ ತೀವ್ರವಾದ ಚರ್ಚಾ ವಿಷಯಗಳಾಗಿದ್ದವು. ಆದರೆ ಅಸ್ಸಾಂನಲ್ಲಿ ನಡೆದ ಘಟನೆ ಅಷ್ಟು ಪ್ರಾಮುಖ್ಯತೆ ಪಡೆಯಲೇ ಇಲ್ಲ. ಬಹುಶಃ ಆದಿವಾಸಿಗಳ ಅಳಲು, ನಗರಕ್ಕೆ ಬಂದರೂ ಅರಣ್ಯ ರೋದನವೇ ಆಗುವುದೇನೋ ಎನಿಸುವ ಮಟ್ಟಿಗೆ ನಮ್ಮ ರಾಜಕೀಯ ಪಕ್ಷಗಳು, ಮಾಧ್ಯಮಗಳು ವರ್ತಿಸಿರುವುದು, ಸುಶಿಕ್ಷಿತ ನಾಗರಿಕ ಸಮಾಜದ ಸಾಮಾಜಿಕ ಕಾಳಜಿ ಮತ್ತು ಬದ್ಧತೆಗಳನ್ನು ಪ್ರತಿಬಿಂಬಿಸುತ್ತದೆ.

ಘಟನೆಯ ಹಿನ್ನೆಲೆ

ನವೆಂಬರ್ ೨೪ರ ಮುಂಜಾನೆ, ಉತ್ತರ ಅಸ್ಸಾಂನ ಬಿಸ್ವತ್ ಚರಿಯಾಲಿ ಎಂಬ ಗ್ರಾಮದಿಂದ ಗವಹಾತಿಗೆ ಬಂದಿದ್ದ ಹತ್ತನೆ ತರಗತಿಯ ವಿದ್ಯಾರ್ಥಿನಿಯನ್ನು ಕೆಲವು ಗಲಭೆಕೋರರು ರಸ್ತೆಯಲ್ಲಿ ಅಟ್ಟಿಸಿಕೊಂಡು ಹೋಗಿ, ಅವಳನ್ನು ಬಹುತೇಕ ನಗ್ನಳನ್ನಾಗಿ ಮಾಡಿ, ಆ ಹುಡುಗಿಯ ಮೇಲೆ ಆಕ್ರಮಣ ಮಾಡಿದ್ದೇ ಅಲ್ಲದೆ, ಆ ಹುಡುಗಿ ತನ್ನನ್ನು ಬಿಟ್ಟುಬಿಡುವಂತೆ ಗೋಗರೆದರೂ ಬೆಲೆ ಕೊಡದೆ, ಅವಮಾನಿಸಿದರು. ಇಷ್ಟು ಸಾಲದೆಂಬಂತೆ ಒಬ್ಬ ವ್ಯಾಪಾರಿ ಆ ಹುಡುಗಿಯ ಮರ್ಮಾಂಗಕ್ಕೆ ಕಾಲಿನಿಂದ ಒದೆಯುತ್ತಿದ್ದುದನ್ನೂ ಮಾಧ್ಯಮಗಳಲ್ಲಿ ಬಿತ್ತರಿಸಲಾಗಿತ್ತು. ಮಾಧ್ಯಮಗಳಿಗೆ ಈ ಸುದ್ದಿಯ ಗಂಭೀರತೆಗಿಂತಲೂ ಅದರಲ್ಲಿನ ರೋಚಕತೆಯೇ ಪ್ರಧಾನವಾಗಿದ್ದು, ಮಾಧ್ಯಮಗಳ ಈ ರೋಚಕತೆಯ ಒಲವಿನಿಂದ ವಾಸ್ತವ ವಿಷಯದ ಗಂಭೀರತೆಯೇ ಗೌಣವಾಗಿದ್ದು ವಿಷಾದನೀಯ. ಈ ಆದಿವಾಸಿ ಹುಡುಗಿ ಗವಹಾತಿಗೆ ವಿಹಾರಕ್ಕಾಗಿ ಬಂದಿರಲಿಲ್ಲ. ಬದಲಾಗಿ **ಅಖಿಲ ಅಸ್ಸಾಂ ಆದಿವಾಸಿ ವಿದ್ಯಾರ್ಥಿ ಸಂಘಟನೆ (AASAA)** ಏರ್ಪಡಿಸಿದ್ದ ಪ್ರತಿಭಟನಾ ಮೆರವಣಿಗೆಯಲ್ಲಿ ಭಾಗವಹಿಸಲು ತನ್ನ ಸಾವಿರಾರು ಸಹಪಾಠಿಗಳೊಡನೆ ಬಂದಿದ್ದಳು. ಆದಿವಾಸಿ ವಿದ್ಯಾರ್ಥಿ ಸಮೂಹವು ಸರ್ಕಾರದ ಪ್ರತಿರೋಧವನ್ನು ಲೆಕ್ಕಿಸದೆ ತಮ್ಮ ಪ್ರತಿಭಟನಾ ರ್‍ಯಾಲಿಯನ್ನು ನಡೆಸಲೂ ಬಲವಾದ ಕಾರಣಗಳಿದ್ದುದನ್ನು ಗಮನಿಸಬೇಕಾಗುತ್ತದೆ. ತಮ್ಮ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಲು ಪ್ರತಿಭಟನಾ ರ್‍ಯಾಲಿ ನಡೆಸಲು ನವೆಂಬರ್ ೬ರಂದೇ ಅನುಮತಿ ಕೋರಿದ್ದರೂ ಅಸ್ಸಾಂ ಸರ್ಕಾರ ಅನುಮತಿ ನೀಡದಿದ್ದುದು ವಿದ್ಯಾರ್ಥಿಗಳ ಮತ್ತು ಆದಿವಾಸಿ ಸಮುದಾಯಗಳ ಆಕ್ರೋಶಕ್ಕೆ ಎಡೆಮಾಡಿಕೊಟ್ಟಿತ್ತು.

ಪ್ರತಿಭಟನಾ ಮೆರವಣಿಗೆಯ ಸಮಯದಲ್ಲಿ ಕೆಲವು ಕಿಡಿಗೇಡಿ ಯುವಕರು ನಡೆಸಿದ ದಾಂಧಲೆಯಿಂದ ಗವಹಾತಿಯ ನಾಗರಿಕರೂ ರೊಚ್ಚಿಗೆದ್ದು ಎರಡೂ ಸಮುದಾಯಗಳ ನಡುವೆ ನಡೆದ ಸಂಘರ್ಷದಲ್ಲಿ ೨೫೦ಕ್ಕೂ ಹೆಚ್ಚು ಮಂದಿ ಗಾಯಗೊಂಡು, ಒಬ್ಬ ವ್ಯಕ್ತಿ ಮೃತಪಟ್ಟಿದ್ದಾಗಿ ವರದಿಯಾಗಿದೆ. ನಂತರದಲ್ಲಿ **AASAA** ಕರೆಯ ಮೇರೆಗೆ ಆಚರಿಸಲಾದ ಅಸ್ಸಾಂ ಬಂದ್ ವೇಳೆಯಲ್ಲಿ ಜರುಗಿದ ಘಟನೆಗಳಲ್ಲಿಯೂ ಒಬ್ಬ ವಿದ್ಯಾರ್ಥಿ ಸಾವನ್ನಪ್ಪಿರುವುದು ವರದಿಯಾಗಿದೆ. ಕ್ರಮೇಣವಾಗಿ ವಿದ್ಯಾರ್ಥಿಗಳ ಸಂಘಟನೆಯ ಈ ಹೋರಾಟಕ್ಕೆ ಅಸ್ಸಾಂ ಟೀ ಟ್ರೈಬ್ಸ್ ವಿದ್ಯಾರ್ಥಿ ಸಂಘಟನೆ *(ATTSA)* ಮತ್ತು ಅಸ್ಸಾಂ ಸಂತಾಲ್ ವಿದ್ಯಾರ್ಥಿ ಸಂಘಟನೆಗಳೂ ಬೆಂಬಲ ಸೂಚಿಸಿದ್ದು ಹೋರಾಟವನ್ನು ತೀಕ್ಷ್ಣಗೊಳಿಸಿದೆ. ಟೀ ತೋಟದ ಅನೇಕ ಆದಿವಾಸಿಗಳು ತಮ್ಮ ಬಿಲ್ಲು ಬಾಣ ಮತ್ತಿತರ ಆಯುಧಗಳೊಡನೆ ನಗರ ಪ್ರದೇಶಗಳಲ್ಲಿ ಪ್ರವೇಶಿಸಿದ್ದರಿಂದ ಪರಿಸ್ಥಿತಿ ಹೆಚ್ಚು ಬಿಗಡಾಯಿ

ಸಿದ್ದು ಹೋರಾಟ ಉಗ್ರ ಸ್ವರೂಪ ಪಡೆಯುವ ಸಾಧ್ಯತೆಗಳೂ ಹೆಚ್ಚಾಗಿವೆ. ಆದಿವಾಸಿಗಳ ವಿರುದ್ಧ ಪೋಲೀಸರು ನಡೆಸಿದ ದೌರ್ಜನ್ಯ ಮತ್ತು ನಗರದ ನಿವಾಸಿಗಳು ನಡೆಸಿದ ದುಷ್ಕೃತ್ಯದಿಂದ, ಜಾರ್ಖಂಡ್ ಪ್ರದೇಶದ ಆದಿವಾಸಿ ರಾಜಕೀಯ ನಾಯಕರೂ ಅಸ್ಸಾಂಗೆ ಭೇಟಿ ನೀಡಿ ಸರ್ಕಾರದ ದಮನಕಾರಿ ನೀತಿಯ ವಿರುದ್ಧ ಪ್ರತಿಭಟನೆ ವ್ಯಕ್ತ ಪಡಿಸಿದ್ದಾರೆ.

ಅಸ್ಸಾಂನ ಚಹಾ ತೋಟಗಳಲ್ಲಿ ನೆಲೆಸಿರುವ ಶ್ರಮಜೀವಿ ವರ್ಗಗಳಾದ ಚಹಾ ತೋಟದ ೯೭ ಬುಡಕಟ್ಟು ಸಮುದಾಯಗಳನ್ನು ಅನುಸೂಚಿತ ಬುಡಕಟ್ಟು ಪಟ್ಟಿಗೆ ಸೇರಿಸಲು ಆಗ್ರಹಿಸಿ ನಡೆದ ಪ್ರತಿ ಭಟನೆ ಮತ್ತು ಸಂಬಂಧಿತ ಗಲಭೆಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಿರ್ಲಕ್ಷ್ಯವೇ ಕಾರಣವೆಂದು ಹೇಳಬಹುದು. ೨೦೦೫ರಲ್ಲೇ ಅಸ್ಸಾಂ ಸರ್ಕಾರವು ಈ ಸಮುದಾಯಗಳನ್ನು ಎಸ್.ಟಿ ಪಟ್ಟಿ ಯಲ್ಲಿ ಸೇರಿಸಲು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿತ್ತೆಂದೂ, ಕೇಂದ್ರ ಸರ್ಕಾರ ತಮ್ಮ ಮನವಿಯನ್ನು ಪರಿಶೀಲಿಸುತ್ತಿದೆ ಎಂದೂ ಅಸ್ಸಾಂನ ಮಂತ್ರಿಗಳು ಹೇಳುತ್ತಾರಾದರೂ, ಕೇಂದ್ರ ಗೃಹ ಮಂತ್ರಿ ಶಿವರಾಜ ಪಾಟೀಲ್‌ರವರು ನವೆಂಬರ್ ೨೭ರಂದು ಸಂಸತ್ತಿನಲ್ಲಿ ಈ ಮನವಿಯನ್ನು ಸಂಪೂರ್ಣವಾಗಿ ತಿರಸ್ಕರಿಸಿದ್ದಾರೆ. ಅಸ್ಸಾಂನ ಚಹಾ ಬುಡಕಟ್ಟು ಸಮುದಾಯಗಳು ಕಾಲಕ್ರಮದಲ್ಲಿ ತಮ್ಮ ಬುಡಕಟ್ಟು ಲಕ್ಷಣಗಳನ್ನು ಕಳೆದುಕೊಳ್ಳುವುದರಿಂದ ಆ ಸಮುದಾಯಗಳನ್ನು ಎಸ್.ಟಿ ಪಟ್ಟಿಯಲ್ಲಿ ಸೇರಿಸಲಾಗುವುದಿಲ್ಲ ಎಂದು ಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ. ಈ ಬೆಳವಣಿಗೆಗಳ ಹಿನ್ನೆಲೆಯಲ್ಲೇ ಸ್ಫೋಟಗೊಂಡಿರುವ ಆದಿವಾಸಿಗಳ ಹೋರಾಟಕ್ಕೆ ತನ್ನದೇ ಆದ ಇತಿಹಾಸವೂ ಇದೆ.

ಶೋಷಣೆಯ ಇತಿಹಾಸ

ಶೋಷಣೆ, ದಬ್ಬಾಳಿಕೆ ಮತ್ತು ವಿಶ್ವಾಸದ್ರೋಹಗಳನ್ನು ಎದುರಿಸುತ್ತಲೇ ಬೆಳೆದು ಬಂದಿರುವ ಅಸ್ಸಾಮಿನ ಚಹಾ ತೋಟದ ಆದಿವಾಸಿ ಸಮುದಾಯಗಳು ಮೂಲತಃ ಅನ್ಯ ಪ್ರದೇಶಗಳಿಂದ ವಲಸೆ ಬಂದವರಾಗಿದ್ದು, ಬ್ರಿಟೀಷರ ಕಾಲದಿಂದಲೂ ಬಂಡವಾಳಶಾಹಿ ವ್ಯವಸ್ಥೆಯ ಅವಕೃಪೆಗೆ ಪಾತ್ರರಾಗಿರುವುದನ್ನು ಕಾಣಬಹುದು. ಅಸ್ಸಾಂ ಪ್ರಾಂತ್ಯವನ್ನು ಬರ್ಮಾದಿಂದ ಕಸಿದುಕೊಂಡ ನಂತರದಲ್ಲಿ ಬ್ರಿಟನ್‌ನ ವಸಾಹತು ಸರ್ಕಾರವು ಇಡೀ ಪ್ರಾಂತ್ಯದಲ್ಲಿ ವ್ಯಾಪಕವಾಗಿ ಚಹಾ ತೋಟಗಳನ್ನು ಪ್ರಾರಂಭಿಸಿತ್ತು. ಮೊದಲನೆಯ ಚಹಾ ತೋಟವನ್ನು ೧೮೩೭ರಲ್ಲಿ ಪ್ರಾರಂಭಿಸಲಾಗಿತ್ತು. ೧೯೦೦ ಇಸವಿಯ ವೇಳೆಗೆ ಈ ಪ್ರಾಂತ್ಯದಲ್ಲಿ ಎಂಟು ನೂರಕ್ಕೂ ಹೆಚ್ಚು ಚಹಾ ತೋಟಗಳು, ಮೂರುವರೆ ಲಕ್ಷ ಎಕರೆಗೂ ಹೆಚ್ಚು ಭೂಮಿಯಲ್ಲಿ ವ್ಯಾಪಿಸಿದ್ದವು. ಈ ಚಹಾ ತೋಟಗಳ ನಿರ್ವಹಣೆಗಾಗಿ ೧೮೩೪ರಲ್ಲೇ ಚಹಾ ಸಮಿತಿಯನ್ನೂ ನೇಮಿಸಲಾಗಿತ್ತು.

ಸ್ಥಳೀಯ ಅಸ್ಸಾಮಿನ ಜನತೆ ತಮ್ಮದೇ ಆದ ಕೃಷಿಯಲ್ಲಿ ತೊಡಗಿಸಿಕೊಂಡಿದ್ದರಿಂದ, ಈ ಚಹಾ ತೋಟಗಳಲ್ಲಿ ದುಡಿಯುವ ಕಾರ್ಮಿಕರ ಕೊರತೆ ಬ್ರಿಟೀಷ್ ಕಂಪನಿಗಳನ್ನು ಕಾಡಿದ್ದರಿಂದ ಹೊರರಾಜ್ಯಗಳಿಂದ ಕಾರ್ಮಿಕರನ್ನು ಕರೆತರುವ ಪ್ರಕ್ರಿಯೆ ಪ್ರಾರಂಭವಾಗಿತ್ತು. ೧೯೩೨ರ ಚಹಾ ಜಿಲ್ಲೆಗಳ ವಲಸೆ ಕಾರ್ಮಿಕರ ಕಾಯ್ದೆಯಡಿಯಲ್ಲಿ ಸುತ್ತಲಿನ ಪ್ರಾಂತ್ಯಗಳಿಂದ ಕಾರ್ಮಿಕರನ್ನು ಕರೆತರುವ ಪ್ರಕ್ರಿಯೆ ಆರಂಭಗೊಂಡಿತ್ತು. ಬಂಗಾಲ, ಬಿಹಾರ, ಒರಿಸ್ಸಾ, ಮಧ್ಯ ಪ್ರಾಂತ್ಯಗಳು, ಸಂಯುಕ್ತ ಪ್ರಾಂತ್ಯಗಳು

ಅಸ್ಸಾಂನ ಚಹಾ ತೋಟಗಳಲ್ಲಿ ನೆಲೆಸಿರುವ ಶ್ರಮಜೀವಿ ವರ್ಗಗಳಾದ ಚಹಾ ತೋಟದ ೯೭ ಬುಡಕಟ್ಟು ಸಮುದಾಯಗಳನ್ನು ಅನುಸೂಚಿತ ಬುಡಕಟ್ಟು ಪಟ್ಟಿಗೆ ಸೇರಿಸಲು ಆಗ್ರಹಿಸಿ ನಡೆದ ಪ್ರತಿ ಭಟನೆ ಮತ್ತು ಸಂಬಂಧಿತ ಗಲಭೆಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಿರ್ಲಕ್ಷ್ಯವೇ ಕಾರಣವೆಂದು ಹೇಳಬಹುದು. ೨೦೦೫ರಲ್ಲೇ ಅಸ್ಸಾಂ ಸರ್ಕಾರವು ಈ ಸಮುದಾಯಗಳನ್ನು ಎಸ್.ಟಿ ಪಟ್ಟಿ ಯಲ್ಲಿ ಸೇರಿಸಲು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿತ್ತೆಂದೂ, ಕೇಂದ್ರ ಸರ್ಕಾರ ತಮ್ಮ ಮನವಿಯನ್ನು ಪರಿಶೀಲಿಸುತ್ತಿದೆ ಎಂದೂ ಅಸ್ಸಾಂನ ಮಂತ್ರಿಗಳು ಹೇಳುತ್ತಾರಾದರೂ, ಕೇಂದ್ರ ಗೃಹ ಮಂತ್ರಿ ಶಿವರಾಜ ಪಾಟೀಲ್‌ರವರು ನವೆಂಬರ್ ೨೭ರಂದು ಸಂಸತ್ತಿನಲ್ಲಿ ಈ ಮನವಿಯನ್ನು ಸಂಪೂರ್ಣವಾಗಿ ತಿರಸ್ಕರಿಸಿದ್ದಾರೆ. ಅಸ್ಸಾಂನ ಚಹಾ ಬುಡಕಟ್ಟು ಸಮುದಾಯಗಳು ಕಾಲಕ್ರಮದಲ್ಲಿ ತಮ್ಮ ಬುಡಕಟ್ಟು ಲಕ್ಷಣಗಳನ್ನು ಕಳೆದುಕೊಳ್ಳುವುದರಿಂದ ಆ ಸಮುದಾಯಗಳನ್ನು ಎಸ್.ಟಿ ಪಟ್ಟಿಯಲ್ಲಿ ಸೇರಿಸಲಾಗುವುದಿಲ್ಲ ಎಂದು ಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ.

ಮತ್ತು ಮದ್ರಾಸ್ ಪ್ರಾಂತ್ಯಗಳಿಂದ ಕಾರ್ಮಿಕರನ್ನು ಕರೆತರಲಾಯಿತು. ೧೯೬೦ರವರೆಗೂ ಕಾರ್ಮಿಕರ ವಲಸೆ ನಿರಂತರವಾಗಿ ಸಾಗಿದ್ದನ್ನು ಕಾಣಬಹುದು.

ತಮ್ಮ ಮೂಲ ನೆಲೆಯನ್ನು ತೊರೆದು ಬಂದ ಈ ಕಾರ್ಮಿಕರಿಗೆ ಗುತ್ತಿಗೆದಾರರು ಉತ್ತಮ ವೇತನ, ಸುಭದ್ರ ನೌಕರಿ ಮತ್ತು ಆರೋಗ್ಯಕರ ವಸತಿಸೌಕರ್ಯಗಳನ್ನು ಒದಗಿಸುವ ಆಶ್ವಾಸನೆ ನೀಡಿದ್ದರೂ, ಕಾರ್ಮಿಕರಿಗೆ ಇವೆಲ್ಲವೂ ಗಗನಕುಸುಮವಾಗಿದ್ದವು. ಸ್ಥಳ ಬದಲಾವಣೆಯ ಪರಿಣಾಮವಾಗಿ ಕಾರ್ಮಿಕರಲ್ಲಿ ಅನಾರೋಗ್ಯ ಹೆಚ್ಚಾಗಿ ಮರಣ ಪ್ರಮಾಣ ಹೆಚ್ಚಾಗತೊಡಗಿತ್ತು. ಗುತ್ತಿಗೆದಾರರ ಕಿರುಕುಳ ತಾಳಲಾರದೆ ಅನೇಕ ಸಂದರ್ಭಗಳಲ್ಲಿ ಕಾರ್ಮಿಕರು ಪ್ರತಿಭಟನೆ ನಡೆಸಿದ್ದೂ ದಾಖಲಾಗಿದೆ. ಈ ಕಾರ್ಮಿಕರ ಪೈಕಿ ಕೆಲವರು ಚಹಾ ತೋಟಗಳಲ್ಲಿ ವಾಸಿಸದೆ ಸರ್ಕಾರಕ್ಕೆ ಸೇರಿದ್ದ ಅನುಪಯುಕ್ತವಾದ ಚಹಾ ತೋಟದ ಜಮೀನಿನಲ್ಲಿ ನೆಲೆಸಿ, ತಮ್ಮದೇ ಆದ ಕೃಷಿಯೊಂದಿಗೆ ದಿನಗೂಲಿ ಮಾಡುವುದರಲ್ಲಿ ತೊಡಗಿದ್ದರು. ಈ ಸಮುದಾಯಗಳನ್ನೇ ಈಗ ಮಾಜಿ ಚಹಾ ತೋಟದ ಸಮುದಾಯಗಳೆಂದು ಕರೆಯಲಾಗುತ್ತದೆ.

ಒರಾನ್, ಸಂತಾಲ್, ಮುಂಡಾ, ಖರಿಯಾ, ಗೊಂಡ್, ಮುಂತಾದ ಬುಡಕಟ್ಟು ಸಮುದಾಯಗಳಿಗೆ ಸೇರಿದ ಈ ಆದಿವಾಸಿಗಳ ಸ್ಥಿತಿಗತಿಗಳ ಬಗ್ಗೆ ಸಂಶೋಧನೆ ನಡೆಸಿದ ಅಸ್ಸಾಂನ ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ಸಮುದಾಯಗಳ ಸಂಶೋಧನಾ ಸಂಸ್ಥೆ ೧೯೯೫ರಲ್ಲಿ, ಈ ಸಮುದಾಯಗಳನ್ನು ಅನುಸೂಚಿತ ಪಂಗಡಗಳ ಪಟ್ಟಿಗೆ ಸೇರಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿತ್ತು. ಅದೇ ವರ್ಷದಲ್ಲಿ ಅಸ್ಸಾಮಿನ ಕಾಂಗ್ರೆಸ್ ಸರ್ಕಾರವೂ ಕೇಂದ್ರ ಸರ್ಕಾರಕ್ಕೆ ಇದೇ ಮನವಿಯನ್ನು ಸಲ್ಲಿಸಿತ್ತು. ೨೦೦೪ರಲ್ಲಿ ಅಸ್ಸಾಮಿನ ವಿಧಾನ ಸಭೆಯು, ಈ ಸಮುದಾಯಗಳೊಡನೆಯೇ ತೈಅಹೋಂ, ಮೋರನ್, ಮೊಟ್ಟಾಕ್, ಚುಟಿಯಾ ಮತ್ತು ಕೊಚ್-ರಾಜ್‌ಬಂಗ್ಷಿ ಎಂಬ ಸಮುದಾಯಗಳನ್ನೂ ಅನುಸೂಚಿತ ಪಟ್ಟಿಗೆ ಸೇರಿಸಲು ಆಗ್ರಹಿಸಿತ್ತು. ಈ ಐದು ಸಮುದಾಯಗಳನ್ನು ಒ.ಬಿ.ಸಿ ಪಟ್ಟಿಗೆ ಸೇರಿಸಲಾಗಿದೆಯಾದರೂ, ಅನುಸೂಚಿತ ಪಂಗಡದಂತೆ ಪರಿಗಣಿಸಲು ಈ ಸಮುದಾಯಗಳ ಬೇಡಿಕೆ ಇಂದಿಗೂ ಕೇಳಿಬರುತ್ತಿದೆ.

ಅಸ್ಸಾಂ ಮತ್ತು ಈಶಾನ್ಯ ರಾಜ್ಯಗಳಲ್ಲಿ ಪ್ರಕಟಗೊಳ್ಳುತ್ತಿರುವ ಜನಾಂಗೀಯ ಸಂಘರ್ಷಗಳನ್ನು ಗ್ರಹಿಸುವಂತೆಯೇ, ಪ್ರಸ್ತುತ ಸಮಸ್ಯೆಯನ್ನೂ ವಿಶ್ಲೇಷಿಸಲಾಗುವುದಿಲ್ಲ. ಹಾಗೆಯೇ ಈ ಸಂಘರ್ಷಗಳನ್ನು ಆದಿವಾಸಿ ಮತ್ತು ನಗರ ವಾಸಿಗಳ ನಡುವಿನ ಅಥವಾ ಆದಿವಾಸಿ ಮತ್ತು ಹಿಂದೂ ಮೇಲ್ಜಾತಿಗಳ ನಡುವಿನ ಸಂಘರ್ಷಗಳೆಂದೂ ಅರ್ಥೈಸಲಾಗುವುದಿಲ್ಲ ಎಂದು ತಜ್ಞರು ಪ್ರತಿಪಾದಿಸುತ್ತಾರೆ. ಇಲ್ಲಿ ಉದ್ಭವಿಸುವ ಸಮಸ್ಯೆ ಎಂದರೆ ಅಸ್ಸಾಂನ ಚಹಾ ತೋಟಗಳಲ್ಲಿ ದುಡಿಯುವ ಈ ೯೭ ಶ್ರಮಜೀವಿ ಸಮುದಾಯಗಳು ಮೂಲತಃ ಆದಿವಾಸಿಗಳೇ ಆಗಿದ್ದರೂ, ಚಹಾ ತೋಟದ ಬುಡಕಟ್ಟು ಸಮುದಾಯಗಳೆಂದು ಕರೆಯಲ್ಪಟ್ಟರೂ ಅವರನ್ನು ಸರ್ಕಾರದ ಅಧಿಕೃತ ದಾಖಲೆಗಳಲ್ಲಿ ಆದಿವಾಸಿಗಳೆಂದು ಪರಿಗಣಿಸಲಾಗಿಲ್ಲ. ಪ್ರಸ್ತುತ ಸಂದರ್ಭದಲ್ಲಿ ಈ ಸಮುದಾಯಗಳಿಗೆ ಆದಿವಾಸಿಗಳೆಂದು ಪರಿಗಣಿಸುವುದಕ್ಕಿಂತಲೂ ಹೆಚ್ಚಾಗಿ ತಮ್ಮ ಬುಡಕಟ್ಟು ಮೌಲ್ಯಗಳನ್ನು ರಕ್ಷಿಸಿಕೊಳ್ಳುವುದು ಮತ್ತು ತಮ್ಮ ಸಾಮುದಾಯಿಕ ಅಸ್ಮಿತೆಯನ್ನು ಉಳಿಸಿಕೊಳ್ಳುವುದು ಪ್ರಮುಖ ಧ್ಯೇಯವಾಗಿದೆ. ಕಳೆದ ೧೫೦ ವರ್ಷಗಳಲ್ಲಿ ತಾವು ಕಳೆದುಕೊಂಡಿರುವ ಸಾಂಸ್ಕೃತಿಕ ಪಿತ್ರಾರ್ಜಿತ ಮೌಲ್ಯಗಳನ್ನು ಪುನಃ ಪಡೆಯಲು ಈ ಸಮುದಾಯಗಳು ಹೋರಾಟದಲ್ಲಿ ತೊಡಗಿರುವುದು ಕಂಡುಬರುತ್ತದೆ.

ಹೊರರಾಜ್ಯಗಳಿಂದ ಬಂದು ಇಲ್ಲಿ ತಮ್ಮ ನೂತನ ನೆಲೆ ಕಂಡುಕೊಂಡ ಆದಿವಾಸಿ ಸಮುದಾಯದ ಜನತೆ ತಮ್ಮ ಪೂರ್ವಿಕರಿಂದ ಪಡೆದು ಬಂದಿದ್ದ ಆದಿವಾಸಿ ಅಸ್ಮಿತೆಯನ್ನು ಕಳೆದುಕೊಂಡಿರುವುದೇ ಇಲ್ಲಿನ ಜನರನ್ನು ಕಾಡುತ್ತಿರುವುದು ಪ್ರಸ್ತುತ ಸಂದರ್ಭದಲ್ಲಿ ಪ್ರಕಟಗೊಳ್ಳುತ್ತಿದೆ. ಈ ನೇತ್ಯಾತ್ಮಕ ಬೆಳವಣಿಗೆಗೆ ಸರ್ಕಾರದ ನೀತಿಗಳೂ ಕಾರಣವೆಂದು ಹೇಳಬಹುದು. ಪ್ರಸ್ತುತ ಸಂವಿಧಾನಿಕ ನಿಯಮಗಳ ಅನುಸಾರವಾಗಿ, ಯಾವುದೇ ಆದಿವಾಸಿ ಸಮುದಾಯದ ಮತ್ತು ವ್ಯಕ್ತಿಯ ಬುಡಕಟ್ಟು ಅಸ್ಮಿತೆಯು ಆ ವ್ಯಕ್ತಿ-ಸಮುದಾಯದ ಮೂಲ ಪ್ರದೇಶವನ್ನು ಅವಲಂಬಿಸಿರುತ್ತದೆ. ಉದಾಹರಣೆಗೆ ಹೇಳುವುದಾದರೆ, ಮುಂಡಾ ಸಮುದಾಯವು ಜಾರ್ಖಂಡ್ ಪ್ರಾಂತ್ಯದಲ್ಲಿ ಬುಡಕಟ್ಟು ಸಮುದಾಯವೆಂದು ಪರಿಗಣಿಸಲ್ಪಡುತ್ತದೆ. ೧೫೦ ವರ್ಷಗಳ ಹಿಂದೆ ಅಸ್ಸಾಮಿಗೆ ಬಂದ ಈ ಸಮುದಾಯದ

ಇಂದಿನ ಪೀಳಿಗೆಯವರು, ಪುನಃ ತಮ್ಮ ಮೂಲ ಸ್ಥಳಗಳಿಗೆ ಹಿಂದಿರುಗಿದಲ್ಲಿ ಮಾತ್ರ ಅವರ ಬುಡಕಟ್ಟು ಅಸ್ಮಿತೆಯನ್ನು ಪಡೆಯಲು ಸಾಧ್ಯವಾಗುತ್ತದೆ. ಅಸ್ಸಾಂನಲ್ಲೇ ನೆಲೆಸಿದರೆ ಅವರು ತಮ್ಮ ಬುಡಕಟ್ಟು ಅಸ್ಮಿತೆಯನ್ನು ಕಳೆದುಕೊಳ್ಳುತ್ತಾರೆ. ಈ ನಿಯಮಗಳು ಕೇವಲ ಆದಿವಾಸಿ ಸಮುದಾಯಗಳಿಗೆ ಮಾತ್ರ ಅನ್ವಯಿಸುತ್ತದೆ. ಇತರ ಸಮುದಾಯಗಳವರು ಯಾವುದೇ ರಾಜ್ಯಕ್ಕೆ ಹೋದರೂ ತಮ್ಮ ಸಾಮುದಾಯಿಕ ಅಸ್ಮಿತೆಯನ್ನು ಉಳಿಸಿಕೊಂಡಿರುತ್ತಾರೆ.

ಈ ವಿಪರ್ಯಾಸಕರ ನಿಯಮಗಳೇ ಪ್ರಸ್ತುತ ಸಂಘರ್ಷಗಳಿಗೆ ಕಾರಣವಾಗಿವೆ. ಅಸ್ಸಾಂ ರಾಜ್ಯದ ಒಳಗೂ ಸಹ ಒಂದು ಪ್ರದೇಶದಿಂದ ಇನ್ನೊಂದಕ್ಕೆ ವಲಸೆ ಹೋಗುವವರೂ ಇದೇ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಕರ್ಬಿ ಅಗ್ಲಾಂಗ್ ಮತ್ತು ಉತ್ತರ ಕಚಾರ್ ಪ್ರಾಂತ್ಯದ ೨೩ ಬೆಟ್ಟದ ಬುಡಕಟ್ಟು ಸಮುದಾಯಗಳು ಮತ್ತು ರಾಜ್ಯದ ಇತರೆಡೆ ನೆಲೆಸಿರುವ ಬುಡಕಟ್ಟು ಸಮುದಾಯಗಳು, ತಮ್ಮ ಪ್ರಾಂತ್ಯಗಳನ್ನು ತೊರೆದು ಹೋದರೆ ಅವರ ಬುಡಕಟ್ಟು-ಆದಿವಾಸಿ ಅಸ್ಮಿತೆಯನ್ನು ಕಳೆದು ಕೊಳ್ಳಬೇಕಾಗುತ್ತದೆ. ಹಾಗಾಗಿಯೇ ಗವಹಾತಿಯಲ್ಲಿನ ಜನ ಗಣತಿಯನ್ನು ನೋಡಿದಾಗ ಒಬ್ಬ ಆದಿವಾಸಿ ವ್ಯಕ್ತಿಯನ್ನೂ ಕಾಣಲಾಗುವುದಿಲ್ಲ. ಬೆಟ್ಟದ ಪ್ರದೇಶಗಳಲ್ಲೂ ಇದೇ ವಿದ್ಯಮಾನವನ್ನು ನೋಡಬಹುದು.

ಅಸ್ಸಾಮಿನ ಆದಿವಾಸಿಗಳು ತಮ್ಮ ಪ್ರಾಚೀನ-ಪಾರಂಪರಿಕ ಆದಿವಾಸಿ ಅಸ್ಮಿತೆಯ ಉಳಿವಿಗಾಗಿ ಪ್ರಬಲವಾದ ಹೋರಾಟ ನಡೆಸುತ್ತಿರುವುದು ಒಂದೆಡೆಯಾದರೆ ಇನ್ನೊಂದೆಡೆ ಅನುಸೂಚಿತ ವರ್ಗದಲ್ಲಿ ಸೇರಿಸಲು ಆಗ್ರಹಿಸಿ ಹೋರಾಡುತ್ತಿರುವ ಇತರ ಐದು ಸಮುದಾಯಗಳ ಪಾಡು ಇನ್ನೂ ಸಂಕೀರ್ಣವಾಗಿದೆ. ಪ್ರಸ್ತುತ ಒ.ಬಿ.ಸಿ ಪಟ್ಟಿಯಲ್ಲಿ ಸೇರಿರುವ ಕೊಚ್-ರಾಜಬೊಂಗ್ಷಿ ಸಮುದಾಯವು ಎಸ್.ಟಿ ಪಟ್ಟಿಗೆ ಸೇರ್ಪಡಿಸುವಂತೆ ಆಗ್ರಹಿಸಿ ಹೋರಾಡುತ್ತಿದೆ. ಸರನಿಯಾ ಕಚಾರಿ ಎಂದು ಕರೆಯಲಾಗುವ ಈ ಸಮುದಾಯವು ಮೂಲತಃ ಬೋಡೋ ಕಚಾರಿ ಸಮುದಾಯಕ್ಕೆ ಸೇರಿದ್ದು, ಬ್ರಿಟೀಷರು ಅಸ್ಸಾಮನ್ನು ಆಕ್ರಮಿಸಿಕೊಳ್ಳುವ ಮೊದಲೇ ಕೆಲವು ವಿಶಿಷ್ಟ ಐತಿಹಾಸಿಕ ಸಂದರ್ಭಗಳಲ್ಲಿ ವೈಷ್ಣವ ಮತಕ್ಕೆ ಮತಾಂತರಗೊಂಡು ಅಸ್ಸಾಮಿನ ಹಿಂದೂ ಧರ್ಮದೊಳಗೆ ಸೇರಿಕೊಂಡಿತ್ತು. ಆದರೆ ಸ್ವತಂತ್ರೋತ್ತರ ಭಾರತದಲ್ಲಿ ಈ ಸಮುದಾಯಗಳು ಮತಾಂತರದಿಂದ ಗಳಿಸಿದ ಸವಲತ್ತುಗಳು ತಮ್ಮ ಪ್ರಸ್ತುತತೆಯನ್ನು ಕಳೆದುಕೊಳ್ಳತೊಡಗಿದವು. ಏಕೆಂದರೆ ಸ್ವಾತಂತ್ರಾನಂತರದಲ್ಲಿ ಭಾರತೀಯ ಸಮಾಜದಲ್ಲಿ ಬುಡಕಟ್ಟು-ಆದಿವಾಸಿ ಸಮುದಾಯಗಳಿಗೆ ಲಭ್ಯವಾಗಬೇಕಾದ ಅನೇಕ ಸೌಕರ್ಯಗಳನ್ನು ಇತರ ಪ್ರಭಾವೀ ಸಮುದಾಯಗಳೇ ಗಳಿಸಿರುವುದನ್ನು ನಾವು ಕಾಣಬಹುದಾಗಿದೆ. ಹಾಗಾಗಿಯೇ ಇತರ ಸಮುದಾಯಗಳೂ ಅನುಸೂಚಿತ ವರ್ಗಕ್ಕೆ ಸೇರಿಸಲು ಆಗ್ರಹಿಸುತ್ತಿರುವುದು ಹೆಚ್ಚಾಗುತ್ತಿದೆ.

ಒಂದು ವೇಳೆ ಸರ್ಕಾರವು ಆದಿವಾಸಿ ಸಮುದಾಯಗಳ ಬೇಡಿಕೆಗಳನ್ನು ಈಡೇರಿಸಿದಲ್ಲಿ, ಇತರ ಸಮುದಾಯಗಳೂ ಇದೇ ನಿಟ್ಟಿನಲ್ಲಿ ಹೋರಾಟ ನಡೆಸುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ರಾಜಸ್ಥಾನದ ಗುಜ್ಜರ್ ಸಮುದಾಯದ ಹೋರಾಟವನ್ನು ಸ್ಪಷ್ಟ ನಿದರ್ಶನವಾಗಿ ಉಲ್ಲೇಖಿಸಬಹುದು. ಅಸ್ಸಾಮಿನಲ್ಲಿ ಚಹಾ ತೋಟದ ಆರು ಸಮುದಾಯಗಳನ್ನು ಸರ್ಕಾರ ಅನುಸೂಚಿತ ವರ್ಗದ ಪಟ್ಟಿಗೆ ಸೇರಿಸುವುದನ್ನು ಈಗಾಗಲೆ ಈ ಪಟ್ಟಿಯಲ್ಲಿರುವ ಇತರ ಅನುಸೂಚಿತ ವರ್ಗ ಸಮುದಾಯಗಳೂ ವಿರೋಧಿಸುವ ಸಾಧ್ಯತೆಗಳಿವೆ. ರಾಜ್ಯದ ಒಟ್ಟು ಬುಡಕಟ್ಟು ಸಮುದಾಯಗಳಲ್ಲಿ ಈ ಸಮುದಾಯಗಳು ಶೇ ೨೦ರಷ್ಟಿವೆ (ಸುಮಾರು ಇಪ್ಪತ್ತು ಲಕ್ಷ). ಈ ಪ್ರಮಾಣದ ಜನಸಮುದಾಯವನ್ನು ಎಸ್.ಟಿ. ಪಟ್ಟಿಗೆ ಸೇರಿಸುವುದರಿಂದ ಸರ್ಕಾರದ ಯೋಜನಾ ವೆಚ್ಚಗಳೂ ಹೆಚ್ಚಾಗುತ್ತವೆ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳನ್ನು ಕಾಡುತ್ತಿರುವುದು ಒಂದೆಡೆ ಯೋಜನಾ ವೆಚ್ಚವಾದರೆ ಇನ್ನೊಂದೆಡೆ ತಮ್ಮ ವೋಟ್ ಬ್ಯಾಂಕುಗಳು.

ಈ ಇಡೀ ಪ್ರಕರಣದಲ್ಲಿ ಮತ್ತು ದೇಶದಲ್ಲಿ ವಿವಿಧೆಡೆ ನಡೆಯುತ್ತಿರುವ ಜನಸಮುದಾಯಗಳ ಹೋರಾಟಗಳಲ್ಲಿ ವ್ಯಕ್ತವಾಗುವ ಒಂದು ಸಮಾನ ಅಂಶವೆಂದರೆ ಅಸ್ಸಾಂ ಮತ್ತು ಈಶಾನ್ಯ ರಾಜ್ಯಗಳಲ್ಲಿ ಉತ್ಪಾದಕೀಯ ಶಕ್ತಿಗಳು ತಮ್ಮ ಪರಿಶ್ರಮದಿಂದ ಉತ್ಪಾದಿಸುತ್ತಿರುವ ಬಂಡವಾಳ ಮತ್ತು ಸಂಪನ್ಮೂಲಗಳು ಅವರ ಸಮಾಜೋ-ಆರ್ಥಿಕ ಬೆಳವಣಿಗೆಗೆ ಸಹಾಯಕವಾಗುತ್ತಿಲ್ಲ. ಚಹಾ ತೋಟಗಳಿಂದ ಕೋಟ್ಯಾಂತರ ರೂಗಳನ್ನು ಗಳಿಸಿರುವ ಟಾಟಾ ಮುಂತಾದ ಬಂಡವಾಳಿಗ ಉದ್ಯಮಿಗಳು ತಮ್ಮ ಲಾಭಾಂಶದೊಂದಿಗೆ, ಈ ಪ್ರದೇಶದಲ್ಲಿ ಒಟ್ಟಾಗುತ್ತಿರುವ ಬಂಡವಾಳವನ್ನೂ ಬೇರೆಡೆಗೆ ವರ್ಗಾಯಿಸುತ್ತಿದ್ದಾರೆ. ಇದು ಬ್ರಿಟೀಷರ ಕಾಲದಿಂದಲೂ ನಡೆದುಬಂದಿದ್ದು, ಸ್ವತಂತ್ರ ಭಾರತದಲ್ಲೂ ಮುಂದುವರೆದಿದೆ. ಜಾಗತೀಕರಣದ ಪರಿಣಾಮವಾಗಿ ಆರ್ಥಿಕ-ಸಾಮಾಜಿಕ ಗುಲಾಮಗಿರಿಯನ್ನು ಪರೋಕ್ಷವಾಗಿ ಅನುಭವಿಸುತ್ತಿರುವ ಈ ಅವಕಾಶ ವಂಚಿತ ಸಮುದಾಯಗಳಿಗೆ ತಮ್ಮ ಆದಿವಾಸಿ-ಬುಡಕಟ್ಟು ಅಸ್ಮಿತೆ ಒಂದು ಸಂವಿಧಾನಿಕ ಅಸ್ತ್ರವಾಗಿ ತೋರುತ್ತಿರುವುದು ಸ್ಪಷ್ಟವಾಗಿದೆ. ಒಂದೆಡೆ ತಮ್ಮ ಪಾರಂಪರಿಕ ಬುಡಕಟ್ಟು ಲಕ್ಷಣಗಳನ್ನು ಉಳಿಸಿಕೊಳ್ಳುವ ಸಮಸ್ಯೆಯಾದರೆ, ಇನ್ನೊಂದೆಡೆ ಆಧುನಿಕ ಬಂಡವಾಳಶಾಹಿಯ ಪ್ರಗತಿಯ ಪರಿಕಲ್ಪನೆ ಈ ಸಮುದಾಯಗಳನ್ನು ತಮ್ಮ ಮೂಲ ಸ್ಥಾನಗಳಿಂದ ಉಚ್ಚಾಟಿಸುತ್ತಿರುವುದೂ ಈ ಸಮುದಾಯಗಳ ಆತಂಕಕ್ಕೆ ಕಾರಣವಾಗಿದೆ.

ಹೊಸ ಆರ್ಥಿಕ ನೀತಿಗಳ ಫಲವಾಗಿ ಉದ್ಯೋಗವಕಾಶಗಳು ಕ್ಷೀಣಿಸಿದಂತೆಲ್ಲಾ ನಗರ ಪ್ರದೇಶದಲ್ಲಿ ಅಶಾಂತಿ, ಕ್ಷೋಭೆ, ಅಸಹನೆ ಹೆಚ್ಚಾಗುತ್ತಿದೆ. ಚಹಾ ತೋಟಗಳಲ್ಲಿನ ಬಂಡವಾಳಶಾಹಿ ಬಿಕ್ಕಟ್ಟಿನಿಂದ ತಮ್ಮ ಕೆಲಸ ಕಳೆದುಕೊಂಡು ನಗರಗಳಿಗೆ ವಲಸೆಬರುವ ಬುಡಕಟ್ಟು ಸಮುದಾಯಗಳು ನಗರವಾಸಿಗಳ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆ. ರಾಜಸ್ಥಾನದ ಗುಜ್ಜರ್ ಹೋರಾಟದಲ್ಲಿ ಈ ವಿದ್ಯಮಾನವನ್ನು ಸ್ಪಷ್ಟವಾಗಿ ಗಮನಿಸಬಹುದು. ಮೀಸಲಾತಿಯಿಂದ ಹಿಡಿದು ಸರ್ಕಾರದ ಸಮಾಜ ಕಲ್ಯಾಣ ಯೋಜನೆಗಳವರೆಗೆ ಸರ್ಕಾರದಿಂದ ಲಭ್ಯವಿರುವ ಸವಲತ್ತು, ಸೌಕರ್ಯಗಳು ಕ್ರಮೇಣ ಕ್ಷೀಣಿಸುತ್ತಿರುವಂತೆಯೇ, ಅವಕಾಶ ವಂಚಿತ ಜನಗಳ ಪ್ರಮಾಣ ಏರುತ್ತಲಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. ಲಭ್ಯವಿರುವ ಅಲ್ಪಾವಕಾಶವನ್ನು ಪ್ರಬಲ ಸಮುದಾಯಗಳು ಸುಲಭವಾಗಿ ದಕ್ಕಿಸಿಕೊಳ್ಳುವುದರಿಂದ ಪಟ್ಟಭದ್ರ ಹಿತಾಸಕ್ತಿಗಳೇ ಇಲ್ಲಿ ಹೆಚ್ಚು ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತಿವೆ. ಸಾಮಾನ್ಯ ಜನತೆಯ ಈ ಆಕ್ರೋಶಗಳಿಗೆ ಒಂದು ಪರಿಹಾರ ಸೂಚಿಸುವುದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ತುರ್ತು ಜವಾಬ್ದಾರಿಯಾಗಿದೆ. ಈಗಾಗಲೇ ಅಸ್ಸಾಮಿನಲ್ಲಿ ಅನೇಕ ಅದಿವಾಸಿ ಸಂಘಟನೆಗಳು ಶಸ್ತ್ರಸಜ್ಜಿತ ಹೋರಾಟಕ್ಕೆ ತಯಾರಿ ನಡೆಸುತ್ತಿದ್ದು, ಪ್ರಸ್ತುತ ಪ್ರಕರಣದಲ್ಲೂ ಇದು ವ್ಯಕ್ತವಾಗಿದೆ.

ಇತ್ತೀಚೆಗೆ ಆದಿವಾಸಿಗಳ ವಿರುದ್ಧ ನಡೆದಿರುವ ಆಕ್ರಮಣಕ್ಕೆ ಪ್ರತಿರೋಧವಾಗಿ ಅಸ್ಸಾಮಿನ ನಾಗರಿಕರು ಮತ್ತು ಸರ್ಕಾರಿ ಅಧಿಕಾರಿಗಳ ಮೇಲೆ ಆಕ್ರಮಣ ಮಾಡುವುದಾಗಿ All Adivasi National Liberation Army ಕರಪತ್ರದ ಮೂಲಕ ಎಚ್ಚರಿಕೆ ನೀಡಿರುವುದು ಆಳುವ ವರ್ಗಗಳಿಗೆ ಒಂದು ಎಚ್ಚರಿಕೆಯ ಗಂಟೆಯಾಗಿದೆ. ಕೇವಲ ಕೆಲವು ಪ್ರಬಲ ಸಮುದಾಯಗಳ ಬೇಡಿಕೆಗಳನ್ನು ಈಡೇರಿಸುವುದರಿಂದಲೇ ಈ ಸಮಸ್ಯೆ ಬಗೆಹರಿಯುವುದಿಲ್ಲ. ಜಾಗತೀಕರಣ ಉಂಟುಮಾಡಿರುವ ಅನಿಶ್ಚಿತತೆ ಮತ್ತು ಸಾಮಾಜಿಕ-ಆರ್ಥಿಕ ಅಭದ್ರತೆಯನ್ನು ಹೋಗಲಾಡಿಸುವುದು ಸರ್ಕಾರದ ಆದ್ಯ ಕರ್ತವ್ಯವಾಗಬೇಕಾಗಿದೆ. ಭಯೋತ್ಪಾದನೆ ಎಂದರೆ ಮುಸ್ಲಿಂ ಸಮುದಾಯವನ್ನು ಮಾತ್ರ ನಿರ್ದಿಷ್ಟವಾಗಿ ಗುರುತಿಸುವ ರಾಜಕೀಯ ಪಕ್ಷಗಳು ಮತ್ತು ಆಳುವ ವರ್ಗಗಳು, ಅಸ್ಸಾಂ ಮತ್ತಿತರ ಈಶಾನ್ಯ ರಾಜ್ಯಗಳಲ್ಲಿ ಉದ್ಭವಿಸುತ್ತಿರುವ ಸನ್ನಿವೇಶವನ್ನು ಸೂಕ್ಷ್ಮವಾಗಿ ಗಮನಿಸಬೇಕಾಗಿದೆ. ಈಗಾಗಲೇ ಭಯೋತ್ಪಾದನೆಗೊಳಗಾಗಿ ಈ ಪ್ರದೇಶ ಜರ್ಝರಿತಗೊಂಡಿದ್ದು, ಸಾಮಾನ್ಯ ಜನ ಜೀವನ ದುಸ್ತರವಾಗಿದೆ. ಬಾಂಗ್ಲಾ ದೇಶ, ಬರ್ಮಾ ಮತ್ತು ಪಾಕಿಸ್ತಾನಗಳನ್ನು ದೂಷಿಸುವುದರಿಂದ ಈ ಭಯೋತ್ಪಾದನೆಯನ್ನು ತಡೆಗಟ್ಟಲಾಗುವುದಿಲ್ಲ. ಭಾರತದ ಮೂಲನಿವಾಸಿಗಳಾದ ಆದಿವಾಸಿಗಳ ಪ್ರಭುತ್ವದ ವಿರುದ್ಧದ ಆಕ್ರೋಶ ಭಯೋತ್ಪಾದನೆಗೆ ಮೂಲ ಬಂಡವಾಳವಾದರೂ ಅತಿಶಯವೇನಲ್ಲ. ಈ ಬೆಳವಣಿಗೆಯನ್ನು ನಿಯಂತ್ರಿಸುವುದು ಇಂದಿನ ತುರ್ತು ಅಗತ್ಯತೆಯಾಗಿದೆ.

ಮುಂಬೈ ಸೂಚ್ಯಂಕ, ಜಿ.ಡಿ.ಪಿ., ಹೆಚ್ಚುತ್ತಿರುವ ಕೋಟ್ಯಾಧಿಪತಿಗಳ ಸಂಖ್ಯೆ, ಶೇ ೯ರಷ್ಟು ಆರ್ಥಿಕ ಅಭಿವೃದ್ಧಿ, ಚತುಷ್ಪಥ-ಷಟ್ಪಥ ರಸ್ತೆಗಳು, ಐ.ಟಿ.-ಬಿ.ಟಿ ಪಾರ್ಕುಗಳು, ಈ ಬಂಡವಾಳಶಾಹಿ ವ್ಯವಸ್ಥೆಯ ಸಂಕೇತಗಳನ್ನು ದಾಟಿಯೂ ಅಭಿವೃದ್ಧಿಗಾಗಿ ಹಾತೊರೆಯುತ್ತಿರುವ ಜನಸಮುದಾಯಗಳು ತಮ್ಮ ಆಶೋತ್ತರಗಳ ಈಡೇರಿಕೆಗಾಗಿ ಪ್ರಭುತ್ವವನ್ನು ಆಶ್ರಯಿಸಿರುತ್ತವೆ. ಈ ಸಮುದಾಯಗಳು ಐಷಾರಾಮಿ ಭೋಗ ಜೀವನಶೈಲಿಯನ್ನು ಬೇಡುವುದಿಲ್ಲ, ಸೂಪರ್ ಹೈವೇ, ಕಾರಿಡಾರ್‌ಗಳನ್ನು ಕೇಳುವುದಿಲ್ಲ. ಈ ಸಮುದಾಯಗಳಿಗೆ ಬೇಕಿರುವುದು ತಮ್ಮ ಅಸ್ಮಿತೆ ಮತ್ತು ತಮ್ಮ ಆದಿವಾಸಿ ಸಾಮುದಾಯಿಕ ಘನತೆ ಮಹತ್ತರವಾಗಿದೆ. ಆದರೆ ಇದಕ್ಕಾಗಿ ಆದಿವಾಸಿ ಸಮುದಾಯಗಳು ತರಬೇಕಾದ ಬೆಲೆ ಮೇಲೆ ಉಲ್ಲೇಖಿಸಿದ ಪ್ರಕರಣದಲ್ಲಿ ಸಾಬೀತಾಗಿದೆ. ಎಲ್ಲಾ ಸವಲತ್ತುಗಳನ್ನೂ ತಮ್ಮದಾಗಿಸಿಕೊಂಡು, ಸಾಮಾಜಿಕ ಕಾಳಜಿಯನ್ನು ಕಾಲಡಿ ಹೊಸಕಿ ತಮ್ಮ ದಂತದರ ಮನೆಗಳಲ್ಲಿ ಬದುಕುತ್ತಿರುವ ನಗರದ ಸುಶಿಕ್ಷಿತ (ಅ)ನಾಗರಿಕ ಸಮುದಾಯ ಈ ಸತ್ಯವನ್ನು ಗ್ರಹಿಸಬೇಕಾಗಿದೆ. ಹಿಂದೂಗಳ ರಕ್ಷಣೆಗೆ ಟೊಂಕ ಕಟ್ಟಿ ನಿಂತಿರುವ ಸಂಘ ಪರಿವಾರ ಮತ್ತು ಭಾಜಪದ ದೃಷ್ಟಿಯಲ್ಲಿ ಇಂದಿಗೂ ಆದಿವಾಸಿ ಸಮುದಾಯಗಳು **"ನಮ್ಮವರು"** ಎನಿಸದಿರುವುದು ಈ ಸಂದರ್ಭದಲ್ಲಿ ಸ್ಪಷ್ಟವಾಗಿದೆ. ಕ್ರೈಸ್ತ ಮಿಷನರಿಗಳು ಆದಿವಾಸಿಗಳನ್ನು ಮತಾಂತರಗೊಳಿಸುವಾಗ ಹೌಹಾರುವ ಹಿಂದುತ್ವವಾದಿಗಳು, ಪ್ರಸ್ತುತ ಸನ್ನಿವೇಶದಲ್ಲಿ ದಿವ್ಯಮೌನ ವಹಿಸಿರುವುದು ನಿದರ್ಶನವಷ್ಟೆ. ತಮ್ಮ ಅಸ್ಮಿತೆಗಾಗಿ ಆದಿವಾಸಿಗಳು ಪ್ರಾಣ-ಶೀಲವನ್ನು ತ್ಯಾಗ ಮಾಡಬೇಕಾದ ಸನ್ನಿವೇಶ ಒದಗಿರುವುದು ಸ್ವತಂತ್ರ ಭಾರತದ ಪ್ರಜ್ಞಾವಂತ ಜನತೆಗೆ ಅವಮಾನಕರ ಸಂಗತಿಯಾಗಿದೆ. □

ರೈತರ ಆತ್ಮಹತ್ಯೆ ನಿರಂತರ!

೧೯೯೭ರಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವ ಭಾರತೀಯರ ಸಂಖ್ಯೆ ೯೬,೦೦೦ ಇದ್ದರೆ, ೨೦೦೫ರಲ್ಲಿ ಇದು ೧.೧೪ ಲಕ್ಷಕ್ಕೆ ಏರಿತು. ಇದೇ ಅವಧಿಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವ ರೈತರ ಸಂಖ್ಯೆ ನಾಟಕೀಯವಾಗಿ ಹೆಚ್ಚಳವಾಯಿತು. ೧೯೯೭ರಲ್ಲಿ ೧೪,೦೦೦ಕ್ಕೂ ಕಡಿಮೆ ಇದ್ದ ಕೃಷಿ ಆತ್ಮಹತ್ಯೆಗಳ ಸಂಖ್ಯೆ ೨೦೦೫ರಲ್ಲಿ ೧೭,೦೦೦ಕ್ಕೂ ಅಧಿಕವಾಯಿತು. ಕೃಷಿ ಆತ್ಮಹತ್ಯೆಗಳು ಕಳೆದ ದಶಕದಲ್ಲಿ ಹೆಚ್ಚುತ್ತಾ ಬಂದಿರುವುದು ಸರಿಯಷ್ಟೆ. ಆದರೆ, ಕೆಲವು ವರ್ಷಗಳಲ್ಲಿ ತೀಕ್ಷ್ಣವಾಗಿ ಹೆಚ್ಚಳವಾಗಿರುವುದನ್ನು ಗಮನಿಸಬಹುದು. ಉದಾಹರಣೆಗೆ, ೨೦೦೪ರಲ್ಲಿ ಭಾರತದಲ್ಲಿ ಸುಮಾರು ೧೮,೨೦೦ಕ್ಕೂ ಹೆಚ್ಚು ಕೃಷಿ ಆತ್ಮಹತ್ಯೆಗಳು ಸಂಭವಿಸಿದೆ. ಇದರಲ್ಲಿ ಬಹುತೇಕ ೨/೩ರಷ್ಟು ಆತ್ಮಹತ್ಯೆಗಳು ಈ ಮೇಲೆ ತಿಳಿಸಿದ ನಾಲ್ಕು ದೊಡ್ಡ ರಾಜ್ಯಗಳು ಅಥವಾ "ವಿಶೇಷ ಆತ್ಮಹತ್ಯಾ ವಲಯ"ದ ರಾಜ್ಯಗಳಲ್ಲಿ ನಡೆದಿವೆ.

ಮೂಲ: ಪಿ. ಸಾಯಿನಾಥ್
ಅನು: ಸತ್ಯಪ್ರಕಾಶ್ ಎಂ ಆರ್

ರಾಷ್ಟ್ರೀಯ ಅಪರಾಧ ವರದಿಗಳ ಬ್ಯೂರೋ (ಎನ್‌ಸಿಆರ್‌ಬಿ) ಪ್ರಕಾರ ೧೯೯೭ರಿಂದ ೨೦೦೫ರವರೆಗಿನ ಅವಧಿಯಲ್ಲಿ ೧.೫ ಲಕ್ಷದಷ್ಟು ಕೃಷಿ ಆತ್ಮಹತ್ಯೆಗಳು ಸಂಭವಿಸಿದೆ. ರೈತರ ಆತ್ಮಹತ್ಯೆಯ ಪ್ರಮಾಣ (ಎಫ್‌ಎಸ್‌ಆರ್)- ಒಂದು ಲಕ್ಷ ರೈತರಲ್ಲಿ, ಆತ್ಮಹತ್ಯೆ ಮಾಡಿಕೊಳ್ಳುವ ರೈತರ ಪ್ರಮಾಣ- ೨೦೦೧ರ ಜನಗಣತಿಯ ಪ್ರಕಾರ ೧೨.೯ ಇದ್ದರೂ, ಆತ್ಮಹತ್ಯೆಗಳ ಪ್ರಮಾಣ ಇನ್ನೂ ಹೆಚ್ಚಾಗಿರುವುದು ನಿಜ.

೧೯೯೭ರಿಂದ ೨೦೦೧ರವರೆಗಿನ ಅವಧಿಯಲ್ಲಿ ದೇಶದಲ್ಲಿ ಸುಮಾರು ೭೮,೭೩೭ ಕೃಷಿ ಆತ್ಮಹತ್ಯೆಗಳು ಸಂಭವಿಸಿದೆ. ಅಂದರೆ ವಾರ್ಷಿಕ ಸರಾಸರಿ ೧೫,೭೪೭ ಕೃಷಿ ಆತ್ಮಹತ್ಯೆಗಳು ಸಂಭವಿಸಿವೆ. ನಂತರದ ನಾಲ್ಕು ವರ್ಷಗಳಲ್ಲಿ ಅಂದರೆ, ೨೦೦೨ರಿಂದ ೨೦೦೫ರವರೆಗಿನ ಅವಧಿಯಲ್ಲಿ ಕೃಷಿ ಆತ್ಮಹತ್ಯೆಗಳ ಸಂಖ್ಯೆ ಸುಮಾರು ೭೦, ೫೦೭ರಷ್ಟಿದೆ. ಇದರ ವಾರ್ಷಿಕ ಸರಾಸರಿ ೧೭,೬೨೭ ಇದೆ. ಈ ಎರಡೂ ಅವಧಿಗೂ ನಡುವೆ ೧,೯೦೦ರಷ್ಟು ವ್ಯತ್ಯಾಸ ಕಂಡುಬರುತ್ತದೆ. ಇದರರ್ಥ ಇಷ್ಟೆ: ೨೦೦೧ರ ನಂತರ ಕೃಷಿ ಬಿಕ್ಕಟ್ಟು ತೀವ್ರವಾಗುತ್ತಾ ಹೋದಂತೆ, ಕೃಷಿ ಆತ್ಮಹತ್ಯೆಗಳು ಕೂಡ ಅಧಿಕವಾಗಿದೆ.

ಮದ್ರಾಸ್ ಅಭಿವೃದ್ಧಿ ಅಧ್ಯಯನ ಸಂಸ್ಥೆ (ಎಂಐಡಿಎಸ್)ಯ ಪ್ರೊ. ಕೆ ನಾಗರಾಜ್‌ರವರು ಕೃಷಿ ಆತ್ಮಹತ್ಯೆಗಳ ಬಗೆಗಿನ ಅಧಿಕೃತ ದಾಖಲೆಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿ ಈ ಮೇಲಿನ ಹಾಗೂ ಇತರ ಪ್ರಮುಖ ಅಂಕಿ-ಅಂಶಗಳನ್ನು ನಮ್ಮ ಮುಂದಿಡುತ್ತಾರೆ. ಎನ್‌ಸಿಆರ್‌ಬಿ ಪ್ರಕಟಣೆಯ 'ಭಾರತದಲ್ಲಿ ಆಕಸ್ಮಿಕ ಮರಣಗಳು ಮತ್ತು ಆತ್ಮಹತ್ಯೆಗಳು' ಎಂಬ ನಿಯತಕಾಲಿಕೆಯ ವಿವಿಧ ಸಂಚಿಕೆಗಳಿಂದ ಅಂಕಿ-ಅಂಶಗಳನ್ನು ಕ್ರೋಢೀಕರಿಸಿ ಪ್ರೊ. ನಾಗರಾಜ್ ಅಧ್ಯಯನ ನಡೆಸಿದ್ದಾರೆ. ಅವರು, ರೈತರ ಆತ್ಮಹತ್ಯೆಗಳ ಸರಾಸರಿ (ಎಫ್‌ಎಸ್‌ಆರ್) ಇನ್ನೂ ಹೆಚ್ಚಾಗಿರಲೂ ಸಾಧ್ಯ ಎನ್ನುವುದಕ್ಕೆ ಕೆಲವು ವಿವರಣೆಗಳನ್ನು ನೀಡುತ್ತಾರೆ.

೨೦೦೧ರಲ್ಲಿ ಕೃಷಿ ಆತ್ಮಹತ್ಯೆಗಳು ಈಗಿನಷ್ಟು ತೀವ್ರವಾಗಿಲ್ಲದ ಸಂದರ್ಭದಲ್ಲಿ ಕೂಡ ೧೨.೯ರಷ್ಟಿದ್ದ ಎಫ್‌ಎಸ್‌ಆರ್ ೧೦.೬೩ರಷ್ಟಿದ್ದ ಸಾಮಾನ್ಯ ಆತ್ಮಹತ್ಯೆಗಳ ಸರಾಸರಿ (ಜಿಎಸ್‌ಆರ್)ಗಿಂತ ಹೆಚ್ಚಿತ್ತು. (ಒಂದು ಲಕ್ಷ ಜನಸಂಖ್ಯೆಯಲ್ಲಿ, ಆತ್ಮಹತ್ಯೆಗಳ ಪ್ರಮಾಣ.) ಕೃಷಿ ಆತ್ಮಹತ್ಯೆಗಳ ಪ್ರಮಾಣ ಅಧಿಕವಾಗಿದ್ದರೂ ನಿಜವಾದ ಬಿಕ್ಕಟ್ಟನ್ನು ಇದು ಮರೆಮಾಚುತ್ತದೆ. ಯಾಕೆಂದರೆ, ರಾಜ್ಯ ಮಟ್ಟದಲ್ಲಿ ಕೃಷಿ ಆತ್ಮಹತ್ಯೆಗಳನ್ನು ಪರಿಗಣಿಸಲು ಇರುವ ಮಾನದಂಡಗಳು ಕಠಿಣವಾಗಿವೆ. ಉದಾಹರಣೆಗೆ, ಮಹಿಳೆಯರು ಮತ್ತು ಹಕ್ಕು ಪತ್ರವಿಲ್ಲದ ರೈತರು ಈ ವ್ಯಾಖ್ಯಾನದ ವ್ಯಾಪ್ತಿಗೆ ಒಳಪಡುವುದಿಲ್ಲ. ಈ ವ್ಯಾಖ್ಯಾನದ ಪ್ರಕಾರ, ಯಾರ ಬಳಿ ಹಕ್ಕು ಪತ್ರವಿರುತ್ತದೆಯೋ ಅವರು ಮಾತ್ರ ರೈತರೆಂದು ಪರಿಗಣಿಸಲ್ಪಡುತ್ತಾರೆ. ಆದರೆ ಜನಗಣತಿಯ ದಾಖಲೆಗಳು ಇನ್ನೂ ಸ್ವಲ್ಪ ಉದಾರವಾದ 'ಬೆಳೆಗಾರರು' ಎಂಬ ವ್ಯಾಖ್ಯಾನವನ್ನು ಅವಲಂಬಿಸಿದೆ.

ಬೆಳೆಗಾರರ ವಿಭಾಗೀಕರಣ

೨೦೦೧ರ ಜನಗಣತಿ 'ಬೆಳೆಗಾರರ' ಎರಡು ವಿಭಾಗಗಳಿಗೆ ಸಂಬಂಧಿಸಿದ ಅಂಕಿ-ಅಂಶಗಳನ್ನು ನೀಡುತ್ತದೆ. 'ಪ್ರಮುಖ ಕಾರ್ಮಿಕ' ವರ್ಗಕ್ಕೆ ಸೇರುವ ಬೆಳೆಗಾರರು ಹಾಗೂ 'ಕೂಲಿ ಕಾರ್ಮಿಕ' ವರ್ಗಕ್ಕೆ ಸೇರುವ ಬೆಳೆಗಾರರು. ಮೊದಲ ಗುಂಪಿನಲ್ಲಿರುವ ಬೆಳೆಗಾರರ ಪ್ರಮುಖ ಕಸುಬು ಕೃಷಿ. ಎರಡನೆಯ ಗುಂಪಿನಲ್ಲಿರುವ ಬೆಳೆಗಾರರು ಕೆಲವೊಮ್ಮೆ ಮಾತ್ರ ಕೃಷಿ ಚಟುವಟಿಕೆಗಳಲ್ಲಿ ತೊಡಗುವವರು. ಆದರೆ, ಎರಡೂ ಗುಂಪುಗಳ ಬೆಳೆಗಾರರನ್ನು ರೈತರು ಎಂದು ಪರಿಗಣಿಸಲಾಗಿದೆ. ಈ ಎರಡು ಪ್ರಕ್ರಿಯೆಗಳ ಒಟ್ಟಾರೆ

ಫಲಿತಾಂಶವೇನೆಂದರೆ; ಎನ್‌ಸಿಆರ್‌ಬಿ ಮತ್ತು ಜನಗಣತಿಯ ಅಂಕಿ-ಅಂಶಗಳನ್ನು ಗಮನಿಸಿದಾಗ, ಕೃಷಿ ಆತ್ಮಹತ್ಯೆಗಳನ್ನು ಕಡಿಮೆಗೊಳಿಸುವ ಆದರೆ, 'ರೈತ'ರನ್ನು ಹೆಚ್ಚಾಗಿ ಎಣಿಕೆ ಮಾಡುವ ಪ್ರವೃತ್ತಿ ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ೧೨.೯ರಷ್ಟಿರುವ ಎಫ್‌ಎಸ್‌ಆರ್‌ಗಿಂತ ಹೆಚ್ಚಿನ ಕೃಷಿ ಆತ್ಮಹತ್ಯೆಗಳು ಸಂಭವಿಸಿರುವುದು ಮನದಟ್ಟಾಗುತ್ತದೆ. ಪ್ರೊ. ನಾಗರಾಜ್ ಹೇಳುವಂತೆ, "ಪ್ರಮುಖ ಕಾರ್ಮಿಕ ವರ್ಗಕ್ಕೆ ಸೇರಿದ ಬೆಳೆಗಾರರನ್ನು ಮಾತ್ರ ಗಣನೆಗೆ ತೆಗೆದುಕೊಂಡರೆ, ಎಫ್‌ಎಸ್‌ಆರ್ ೧೫.೮ಗೆ ಏರುತ್ತದೆ. ಇದು ೨೦೦೧ರ ಜಿಎಸ್‌ಆರ್ (೧೦.೬)ಗಿಂತ ಒಂದೂವರೆ ಪಟ್ಟು ಹೆಚ್ಚು."

ಎರಡನೆಯದಾಗಿ, ಜನಗಣತಿ ೨೦೦೧ರಲ್ಲಿ ನಡೆದ ಸಲುವಾಗಿ ಎಫ್‌ಎಸ್‌ಆರ್ ಕೂಡ ಅದೇ ವರ್ಷದಲ್ಲಿ ಎಣಿಕೆಗೊಳಪಟ್ಟಿದೆ. ೨೦೦೧ರಲ್ಲಿ ಕೃಷಿ ಆತ್ಮಹತ್ಯೆಗಳು ಹಿಂದಿನ ವರ್ಷಗಳಿಗಿಂತ ಕಡಿಮೆಯಾಗಿತ್ತು. ಆದರೆ ನಂತರದ ಸಾಲಿನಲ್ಲಿ, ಅಂದರೆ ೨೦೦೧ರಲ್ಲಿ ಕೃಷಿ ಆತ್ಮಹತ್ಯೆಗಳ ಪ್ರಮಾಣ ೧೦% ಹೆಚ್ಚಳವಾಯಿತು. ೨೦೦೪ರಲ್ಲಿ ಆತ್ಮಹತ್ಯೆಗಳು ತೀವ್ರವಾಯಿತು. ಹೀಗಾಗಿ, ೨೦೦೧ರ ನಂತರ ರೈತರ ಆತ್ಮಹತ್ಯೆಗಳು ಮೇಲ್ಮುಖ ಕಂಡರೆ, ರೈತರ ಸಂಖ್ಯೆ ಕ್ಷೀಣಿಸುತ್ತಾ ಬಂದಿದೆ.

ಕೃಷಿಕರು ಅಥವಾ ಬೆಳೆಗಾರರ ಸಂಖ್ಯೆ ಕುಂಠಿತಗೊಳ್ಳುವ ಪ್ರಕ್ರಿಯೆ ಇನ್ನೂ ಹಿಂದೆಯೇ ಆರಂಭವಾಗಿಬಿಟ್ಟಿದೆ. ಜನಗಣತಿಯ ಪ್ರಕಾರ ೧೯೯೧ರಲ್ಲಿ ೧೧೧ ಮಿಲಿಯನ್ ಕೃಷಿಕರು ಇದ್ದರು. ೨೦೦೧ರಲ್ಲಿ ಕೃಷಿಕರ ಸಂಖ್ಯೆ ೧೦೩ ಮಿಲಿಯನ್‌ಗೆ ಇಳಿದಿದೆ. ಕೃಷಿ ಸಂಕಷ್ಟ ತೀವ್ರಗೊಂಡ ೨೦೦೧ರ ನಂತರ ಇಳಿಕೆ ಇನ್ನೂ ಮುಂದುವರೆದಿದೆ. ಹೌದು, ಈಗ ಕೃಷಿ ಕೆಲಸಕ್ಕೆ ಯಾರೂ ಮುಂದೆ ಬರುತ್ತಿಲ್ಲ ಎನ್ನುವುದು ನಿಜ.

ಪ್ರೊ. ನಾಗರಾಜ್ ಅವರ ವರದಿ ಸ್ಪಷ್ಟಪಡಿಸುವಂತೆ, ೧೯೯೭ರಿಂದ ೨೦೦೫ರವರೆಗಿನ ಒಂಭತ್ತು ವರ್ಷಗಳ ಅವಧಿಯಲ್ಲಿ ಭಾರತದ ಆತ್ಮಹತ್ಯೆಯ ವಾರ್ಷಿಕ ಸಮಗ್ರ ಸರಾಸರಿ (ಎಸಿಜಿಆರ್) ೨.೧೮% ಇದೆ. ಜನಸಂಖ್ಯೆಯ ಹೆಚ್ಚಳದ ಪ್ರಮಾಣಕ್ಕಿಂತ ಇದು ಹೆಚ್ಚೇನೂ ಅಲ್ಲ. ಕೃಷಿ ಆತ್ಮಹತ್ಯೆಗಳ ಪ್ರಮಾಣ ಮಾತ್ರ ಬಹುತೇಕ ೩% ಇದೆ. ಈ ಸರಾಸರಿ ವರ್ಷದಿಂದ ವರ್ಷಕ್ಕೆ ಕ್ಷೀಣಿಸುತ್ತಿರುವ ಒಟ್ಟಾರೆ ಕೃಷಿಕರಿಗೆ ಅನ್ವಯಿಸುವುದರಿಂದ, ನಿಜಕ್ಕೂ ಆತಂಕಕಾರಿ ಮಟ್ಟ ತಲುಪಿದೆ. ಇದರರ್ಥ ಇಷ್ಟೆ; ೨೦೦೧ರ ನಂತರ ಕೃಷಿ ಆತ್ಮಹತ್ಯೆಗಳು ಹೆಚ್ಚಾಗಿವೆ.

೧೯೯೭ರಿಂದ ೨೦೦೫ರ ಅವಧಿಯಲ್ಲಿ ರೈತರ ಆತ್ಮಹತ್ಯೆಗಳ ಪ್ರಮಾಣ ೨೭%ರಷ್ಟು ಹೆಚ್ಚಳವಾಗಿದೆ. ಆದರೆ ಕೃಷಿಯೇತರ ಆತ್ಮಹತ್ಯೆಗಳ ಪ್ರಮಾಣ ೧೮% ಹೆಚ್ಚಿದೆ. ೨೦೦೧ರ ನಂತರ ಸಮಗ್ರ ಆತ್ಮಹತ್ಯೆಗಳ ಪ್ರಮಾಣ ಕಡಿಮೆಯಾಗಿರುವುದು ನಿಜ- ೨೦೦೧ರಲ್ಲಿ ೧೦.೬ರಷ್ಟಿದ್ದ ಪ್ರಮಾಣ ೨೦೦೫ರಲ್ಲಿ ೧೦.೩ಕ್ಕೆ ಇಳಿದಿದೆ. ಇದರರ್ಥ, ಜನಸಂಖ್ಯೆಯ ಹೆಚ್ಚಳದ ಜತೆಜತೆಗೆ ಸಾಮಾನ್ಯ ಆತ್ಮಹತ್ಯೆಗಳು ಹೆಚ್ಚಾಗಿಲ್ಲ. ಆದರೆ, ೨೦೦೧ರ ನಂತರ ಕೃಷಿ ಆತ್ಮಹತ್ಯೆಗಳು ಹೆಚ್ಚಾದಂತೆ ಕೃಷಿಯಲ್ಲಿ ತೊಡಗಿಸಿಕೊಂಡ ರೈತರ ಸಂಖ್ಯೆ ಕ್ಷೀಣಿಸುತ್ತಾ ಬಂದಿದೆ. ಸಂಕಷ್ಟವನ್ನು ಎದುರಿಸಿದ ಸಾವಿರಾರು ಮಂದಿ ರೈತರು ಕೃಷಿಯನ್ನೇ ತೊರೆದು ನಗರಗಳಿಗೆ ವಲಸೆ ಬರುತ್ತಿದ್ದಾರೆ. ಒಂದೆಡೆ ಕೃಷಿ ವಲಯದಲ್ಲಿನ ಜನಸಂಖ್ಯೆ ಇಳಿಮುಖವಾಗುತ್ತಿದ್ದರೆ, ಇನ್ನೊಂದೆಡೆ ರೈತರ ಆತ್ಮಹತ್ಯೆಗಳು ವ್ಯಾಪಕವಾಗಿ ಹೆಚ್ಚಾಗುತ್ತಿವೆ.

೧೯೯೭ರಿಂದ ೨೦೦೫ರ ಅವಧಿಯಲ್ಲಿ ರೈತರ ಆತ್ಮಹತ್ಯೆಗಳ ಪ್ರಮಾಣ ೨೭% ರಷ್ಟು ಹೆಚ್ಚಳವಾಗಿದೆ. ಆದರೆ ಕೃಷಿಯೇತರ ಆತ್ಮಹತ್ಯೆಗಳ ಪ್ರಮಾಣ ೧೮% ಹೆಚ್ಚಿದೆ. ೨೦೦೧ರ ನಂತರ ಸಮಗ್ರ ಆತ್ಮಹತ್ಯೆಗಳ ಪ್ರಮಾಣ ಕಡಿಮೆಯಾಗಿರುವುದು ನಿಜ- ೨೦೦೧ರಲ್ಲಿ ೧೦.೬ ರಷ್ಟಿದ್ದ ಪ್ರಮಾಣ ೨೦೦೫ರಲ್ಲಿ ೧೦.೩ಕ್ಕೆ ಇಳಿದಿದೆ. ಇದರರ್ಥ, ಜನಸಂಖ್ಯೆಯ ಹೆಚ್ಚಳದ ಜತೆಜತೆಗೆ ಸಾಮಾನ್ಯ ಆತ್ಮಹತ್ಯೆಗಳು ಹೆಚ್ಚಾಗಿಲ್ಲ. ಆದರೆ, ೨೦೦೧ರ ನಂತರ ಕೃಷಿ ಆತ್ಮ ಹತ್ಯೆಗಳು ಹೆಚ್ಚಾದಂತೆ ಕೃಷಿಯಲ್ಲಿ ತೊಡಗಿಸಿಕೊಂಡ ರೈತರ ಸಂಖ್ಯೆ ಕ್ಷೀಣಿಸುತ್ತಾ ಬಂದಿದೆ. ಸಂಕಷ್ಟವನ್ನು ಎದುರಿಸಿದ ಸಾವಿರಾರು ಮಂದಿ ರೈತರು ಕೃಷಿಯನ್ನೇ ತೊರೆದು ನಗರಗಳಿಗೆ ವಲಸೆ ಬರುತ್ತಿದ್ದಾರೆ.

ಅಂಕಿ-ಅಂಶಗಳ ಭಾರೀ ವ್ಯತ್ಯಯ

ನಾವು ಕೃಷಿ ಆತ್ಮಹತ್ಯೆಗಳ ಸರಾಸರಿಯನ್ನು ೧೨.೯ ಅಥವಾ ೧೫.೮, ಎಷ್ಟೇ ಪರಿಗಣಿಸಿದರೂ, ಇದು ಇಡೀ ರಾಷ್ಟ್ರಕ್ಕೆ ಅನ್ವಯವಾಗುವ ಅಂಕಿ-ಅಂಶ. ಈ ಅಂಕಿ-ಅಂಶ ದೇಶಾದ್ಯಂತ ವಿವಿಧ ರಾಜ್ಯಗಳ ನಡುವಿನ ಅಗಾಧವಾದ ವ್ಯತ್ಯಾಸಗಳನ್ನು ಮರೆಮಾಚುತ್ತದೆ. ದೇಶದ ಕೆಲವು ರಾಜ್ಯಗಳಲ್ಲಿ ಎಫ್‌ಎಸ್‌ಆರ್ ತೀವ್ರ ಸ್ವರೂಪ ಪಡೆದು ಕೊಂಡರೆ, ಕೆಲವೆಡೆ ಇದು ತೀರ ಕಡಿಮೆ ಇದೆ.

ಈ ಹಿನ್ನೆಲೆಯಲ್ಲಿ ಪ್ರೊ. ನಾಗರಾಜ್ ದೇಶದ ಎಲ್ಲಾ ರಾಜ್ಯಗಳನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸುತ್ತಾರೆ. ಮೊದಲ ಗುಂಪು: ಅಧಿಕ ಪ್ರಮಾಣದ ಸಾಮಾನ್ಯ ಆತ್ಮಹತ್ಯೆಗಳು ಸಂಭವಿಸುವ ರಾಜ್ಯಗಳು; ಎರಡನೆಯ ಗುಂಪು: ಅಧಿಕ ಪ್ರಮಾಣದ ಸಾಮಾನ್ಯ ಮತ್ತು ರೈತರ ಆತ್ಮಹತ್ಯೆಗಳು ಸಂಭವಿಸುವ ರಾಜ್ಯಗಳು (ಇದು ಅತ್ಯಂತ ಪ್ರಮುಖವಾದ ಗುಂಪು); ಮೂರನೆಯ ಗುಂಪು: ಸ್ವಲ್ಪ ಮಟ್ಟಿಗಿನ ಸಾಮಾನ್ಯ ಆತ್ಮಹತ್ಯೆಗಳು ಹಾಗೂ ರೈತರ ಆತ್ಮಹತ್ಯೆಗಳು ಸಂಭವಿಸುವ ರಾಜ್ಯಗಳು. ನಾಲ್ಕನೆಯ ಗುಂಪು; ಅಲ್ಪ ಪ್ರಮಾಣದ ಸಾಮಾನ್ಯ ಆತ್ಮಹತ್ಯೆಗಳು ಮತ್ತು ರೈತರ ಆತ್ಮಹತ್ಯೆಗಳು ಸಂಭವಿಸುವ ರಾಜ್ಯಗಳು.

ಆತ್ಮಹತ್ಯೆಗಳ ಮಾದರಿ ಕೂಡ, ಎರಡನೆಯ ಗುಂಪು- ತೀವ್ರವಾಗಿ ಸಂಕಷ್ಟದಲ್ಲಿರುವ ಗುಂಪು- ಇತರ ಗುಂಪುಗಳಿಗಿಂತ ಭಿನ್ನ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಈ ಗುಂಪಿನಲ್ಲಿರುವ ಮಹಾರಾಷ್ಟ್ರ, ಆಂಧ್ರ ಪ್ರದೇಶ, ಕರ್ನಾಟಕ

ರಾಜ್ಯಗಳ ತಂಡ	ರಾಜ್ಯಗಳು	ಸಾಮಾನ್ಯ ಆತ್ಮಹತ್ಯೆ ಪ್ರಮಾಣ (ಪ್ರತಿ ನೂರು ಜನಕ್ಕೆ) ಜಿ.ಎಸ್.ಆರ್	ರೈತರ ಆತ್ಮಹತ್ಯೆ ಪ್ರಮಾಣ (ಪ್ರತಿ ನೂರು ಜನಕ್ಕೆ) ಎಫ್.ಎಸ್.ಆರ್	ಒಟ್ಟು ಆತ್ಮಹತ್ಯೆ ಪ್ರಮಾಣ % ಜಿ.ಎಸ್.ಆರ್
ಮೊದಲನೇ ತಂಡದ ರಾಜ್ಯಗಳು (ಅತ್ಯಂತ ಹೆಚ್ಚು ಆತ್ಮಹತ್ಯೆ ಪ್ರಮಾಣ)	ಕೇರಳ	30.1	142.9	4.7
	ತಮಿಳುನಾಡು	18.1	19.3	1.1
	ಪಾಂಡಿಚೇರಿ	54.3	834.9	15.4
	ಪಶ್ಚಿಮ ಬಂಗಾಳ	17.1	22.0	1.3
	ತ್ರಿಪುರ	26.7	13.1	0.5
	1ನೇ ತಂಡದ ರಾಜ್ಯಗಳು	20.1	28.8	1.4
ಎರಡನೇ ತಂಡದ ರಾಜ್ಯಗಳು (ಅತ್ಯಂತ ಹೆಚ್ಚು ಸಾಮಾನ್ಯ ಆತ್ಮಹತ್ಯೆ & ಹೆಚ್ಚು ರೈತರ ಆತ್ಮ ಹತ್ಯೆ)	ಕರ್ನಾಟಕ	22.5	36.4	1.6
	ಮಹಾರಾಷ್ಟ್ರ	15.1	29.9	2.0
	ಗೋವ	19.0	35.7	1.9
	ಮಧ್ಯ ಪ್ರದೇಶ (ಚತ್ತೀಸ್‌ಘಡ ಸೇರಿ)	13.4	18.4	1.4
			19.2	1.4
	ಆಂಧ್ರಪ್ರದೇಶ	13.8		
	2ನೇ ತಂಡದ ರಾಜ್ಯಗಳು	15.6	25.8	1.7
3ನೇ ತಂಡದ ರಾಜ್ಯಗಳು (ಮಧ್ಯಮ ಪ್ರಮಾಣದ ಸಾಮಾನ್ಯ ಆತ್ಮಹತ್ಯೆ& ರೈತರ ಆತ್ಮ ಹತ್ಯೆ)	ಅಸ್ಸಾಂ	9.9	45	0.5
	ಗುಜರಾತ್	9.5	10.2	1.1
	ಹರಿಯಾಣ	9.5	4.8	0.5
	ಒರಿಸ್ಸಾ	11.0	6.0	0.5
	3ನೇ ತಂಡದ ರಾಜ್ಯಗಳು	10.0	6.9	0.7
4ನೇ ತಂಡದ ರಾಜ್ಯಗಳು (ಕಡಿಮೆ ಪ್ರಮಾಣದ ಸಾಮಾನ್ಯ ಆತ್ಮಹತ್ಯೆ& ರೈತರ ಆತ್ಮ ಹತ್ಯೆ)	ಬಿಹಾರ್ (ಜಾರ್ಕಂಡ್ ಸೇರಿ)	0.8	07	0.9
	ಹಿಮಾಚಲ್	5.1	1.1	0.2
	ಜಮ್ಮು-ಕಾಶ್ಮೀರ	1.5	0.9	0.6
	ಪಂಜಾಬ್	27	2.2	0.8
	ರಾಜಸ್ತಾನ್	57	3.8	0.7
	ಮಧ್ಯ ಪ್ರದೇಶ (ಚತ್ತೀಸ್‌ಘಡ ಸೇರಿ)	2.2	3.0	0.4
	4ನೇ ತಂಡದ ರಾಜ್ಯಗಳು	2.3	2.6	1.1
ಭಾರತದಾದ್ಯಂತ		**10.6**	**12.9**	**12**

Source: Table Formalated by Dr. N. Nagaraj. MIDS drawing from various issues of the NCRB publication Accidental Deaths and Suicides in India (Ministry of Home Affairs, Government of India) and the Census of 2001.

ಕೃಷಿ ಬಿಕ್ಕಟ್ಟನ್ನು ವರದಿ ಮಾಡಿದ ಮಾಧ್ಯಮ ಕೂಡ ಮಹಾರಾಷ್ಟ್ರ, ಆಂಧ್ರಪ್ರದೇಶ, ಕರ್ನಾಟಕ, ಮತ್ತು ಕೇರಳ ರಾಜ್ಯಗಳ ಕೃಷಿ ಆತ್ಮಹತ್ಯೆಗಳ ಬಗ್ಗೆ ಹೆಚ್ಚಿನ ಗಮನ ಹರಿಸಿರುವುದು ಸರಿಯಷ್ಟೆ. ಈ ಎಲ್ಲಾ ರಾಜ್ಯಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕೃಷಿ ಆತ್ಮಹತ್ಯೆಗಳು ಸಂಭವಿಸುತ್ತಿವೆ. ಆದರೆ ಮಾಧ್ಯಮ, ಕೃಷಿ ಆತ್ಮಹತ್ಯೆಗಳ ಪ್ರಮಾಣ ಹೆಚ್ಚಾಗಿರುವ ಮಧ್ಯಪ್ರದೇಶ ರಾಜ್ಯವನ್ನು ಕಡೆಗಣಿಸಿದೆ. (ಸಣ್ಣ ರಾಜ್ಯಗಳಲ್ಲಿ, ಗೋವಾ ಮತ್ತು ಪಾಂಡಿಚೆರಿಯಲ್ಲಿ ಕೃಷಿ ಆತ್ಮಹತ್ಯೆಗಳ ಪ್ರಮಾಣ ಹೆಚ್ಚಾಗಿದೆ. ಆದರೆ ಇಲ್ಲಿನ ಜನಸಂಖ್ಯೆ ಹೆಚ್ಚಾಗಿರುವುದರಿಂದ ಹಾನಿಯ ಪ್ರಮಾಣ ಕಡಿಮೆಯೆಂದೇ ಹೇಳಬಹುದು.) ೧.೫ ಲಕ್ಷ ಕೃಷಿ ಆತ್ಮಹತ್ಯೆಗಳು ಕೆಳಹಂತದ ಅಂದಾಜಾಗಿದೆ. ಈ ಅಂಕಿ-ಅಂಶ ನಿಖರ ಮತ್ತು ಸಮಗ್ರವಾದುದಲ್ಲ. ಬಹಳಷ್ಟು ಜನರನ್ನು ಹೊರಗಿಟ್ಟು ಎಣಿಕೆ ಮಾಡಲಾಗಿರುವ ಎನ್‌ಸಿಆರ್‌ಬಿ ಅಂಕಿ-ಅಂಶಗಳಲ್ಲಿಯೇ ಆಂತರಿಕವಾದ ಮತ್ತು ಗಂಭೀರವಾದ ತೊಡಕುಗಳಿವೆ. ಪ್ರೊ. ನಾಗರಾಜ್ ಹೇಳುವಂತೆ: "ಈ ವರದಿಗಳಲ್ಲಿ ರೈತರ ಆತ್ಮಹತ್ಯೆಗಳನ್ನು ಕಡಿಮೆ ಪ್ರಮಾಣದಲ್ಲಿ ಆಂದಾಜು ಮಾಡಲಾಗಿದೆ.

[illegible] (ಛತ್ತೀಸ್‌ಗಢ [illegible]) ಮತ್ತು [illegible] ಒಟ್ಟಾರೆ ಆತ್ಮಹತ್ಯೆಯ ಸರಾಸರಿ ೧.೭ ಇದೆ. [illegible] ಈ ಗುಂಪಿನಲ್ಲಿ ರೈತರ ಆತ್ಮಹತ್ಯೆಯ ಪ್ರಮಾಣ, [illegible] ರಾಷ್ಟ್ರೀಯ ಆತ್ಮಹತ್ಯೆಯ ಪ್ರಮಾಣಕ್ಕಿಂತ ೭೨% ಅಧಿಕವಾಗಿದೆ.

ಈ ನಾಲ್ಕು ರಾಜ್ಯಗಳಲ್ಲಿ, ರೈತರ ಆತ್ಮಹತ್ಯೆಗಳು ಹಾಗೂ ಸಾಮಾನ್ಯ ಆತ್ಮಹತ್ಯೆಗಳ ನಡುವಿನ ಅನುಪಾತ ಮಹಾರಾಷ್ಟ್ರ ರಾಜ್ಯದಲ್ಲಿ ೦.೨ರಷ್ಟು ಕಳಪೆ ಮಟ್ಟದಲ್ಲಿದೆ. ಅಂದರೆ ರಾಜ್ಯದ ಒಟ್ಟಾರೆ ಜನಸಂಖ್ಯೆಯಲ್ಲಿನ ಆತ್ಮಹತ್ಯೆಗಳ ಪ್ರಮಾಣಕ್ಕಿಂತ ೧೦೦% ಅಧಿಕವಾಗಿದೆ. ನಂತರದ ಸ್ಥಾನ ೧.೬ರಷ್ಟು ಅನುಪಾತವಿರುವ ಕರ್ನಾಟಕ ರಾಜ್ಯಕ್ಕೆ ಸಲ್ಲುತ್ತದೆ. ಸಣ್ಣ ರಾಜ್ಯಗಳಲ್ಲಿ, ಮೊದಲನೆಯ ಗುಂಪಿನಲ್ಲಿರುವ ಕೇರಳ ರಾಜ್ಯ ನಿರಾಶಾದಾಯಕ ೪.೭ ಅನುಪಾತ ಹೊಂದಿದೆ. ಆದರೆ, ಇಲ್ಲಿ ೨೦೦೪ರ ನಂತರ ಆತ್ಮಹತ್ಯೆಗಳ ಪ್ರಮಾಣ ಕಡಿಮೆಯಾಗುತ್ತಿದೆ. ಪಾಂಡಿಚೆರಿ ೧೫.೪ರಷ್ಟು ಕಳಪೆ ಅನುಪಾತ ಹೊಂದಿದೆ. ಈ ಎರಡು ರಾಜ್ಯಗಳ ಒಟ್ಟಾರೆ ಜನಸಂಖ್ಯೆ ಕಡಿಮೆ ಇರುವುದರಿಂದ ಸಮಸ್ಯೆ ಅಷ್ಟು ತೀವ್ರವಾಗಿಲ್ಲವೆಂದು ಹೇಳಬಹುದು.

ಎರಡನೆಯ ಗುಂಪಿನಲ್ಲಿ ಕಂಡುಬರುತ್ತಿರುವ ಮಾದರಿ ಆತಂಕ ಹುಟ್ಟಿಸುವಂತಹುದು. ಅಂಕಿ-ಅಂಶಗಳ ವಿಶ್ಲೇಷಣೆಯಿಂದ ಈ ಅಂಶ ಸ್ಪಷ್ಟವಾಗುತ್ತದೆ. ೧೯೯೭ರಿಂದ ೨೦೦೫ರ ಅವಧಿಯಲ್ಲಿ ಈ ರಾಜ್ಯಗಳಲ್ಲಿನ ಎಸಿಜಿಆರ್ ೫.೩೩ ಇದೆ. ಇದು ರಾಷ್ಟ್ರೀಯ ಪ್ರಮಾಣಕ್ಕಿಂತ ಬಹುತೇಕ ಎರಡರಷ್ಟಿದೆ. ಇದೇ ಪರಿಸ್ಥಿತಿ ಮುಂದುವರೆದರೆ, ಈ ಗುಂಪಿನಲ್ಲಿ ಪ್ರತಿ ೧೩ ವರ್ಷಗಳಿಗೊಮ್ಮೆ ರೈತರ ಆತ್ಮಹತ್ಯೆಗಳ ಪ್ರಮಾಣ ದ್ವಿಗುಣಗೊಳ್ಳತ್ತದೆ. ಈ ಗುಂಪಿನ ಐದು ರಾಜ್ಯಗಳಲ್ಲಿ ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶ ರೈತರ ಪಾಲಿನ ಸ್ಮಶಾಣಗಳಾಗಿ ಪರಿವರ್ತಿತವಾಗುವುದಂತೂ ದಿಟ.

೪ ರಾಜ್ಯಗಳಲ್ಲಿ ತೀವ್ರಗೊಳ್ಳುತ್ತಿರುವ ಕೃಷಿ ಆತ್ಮಹತ್ಯೆಗಳು

೧೯೯೭ರಿಂದ ೨೦೦೫ರವರೆಗೆ ದೇಶದಲ್ಲಿ ಆತ್ಮಹತ್ಯೆ ಮಾಡಿಕೊಂಡ ೧.೫ ಲಕ್ಷ ರೈತರಲ್ಲಿ ೨/೩ರಷ್ಟು ಮಂದಿ ಮಹಾರಾಷ್ಟ್ರ, ಆಂಧ್ರಪ್ರದೇಶ, ಕರ್ನಾಟಕ, ಮತ್ತು ಮಧ್ಯಪ್ರದೇಶ (ಚತ್ತೀಸ್‌ಗಢ ಕೂಡ ಸೇರಿದೆ.) ರಾಜ್ಯಗಳಿಗೆ ಸೇರಿದವರಾಗಿದ್ದಾರೆ. ಇನ್ನೂ ಆತಂಕಕಾರಿ ವಿಷಯವೇನೆಂದರೆ, ಮದ್ರಾಸ್ ಅಭಿವೃದ್ಧಿ ಅಧ್ಯಯನಗಳ ಸಂಸ್ಥೆ (ಎಂಐಡಿಎಸ್)ಯ ಪ್ರೊ. ನಾಗರಾಜ್ ಪ್ರಕಾರ, "ಒಂಭತ್ತು ವರ್ಷಗಳ ಅವಧಿಯಲ್ಲಿ ಈ ನಾಲ್ಕು ರಾಜ್ಯಗಳಲ್ಲಿ ಆತ್ಮಹತ್ಯೆಗಳ ಸಂಖ್ಯೆ ಮೇಲ್ಮುಖ ಕಾಣುತ್ತಿದೆ." ಈ ಅಂಶಗಳು ರಾಷ್ಟ್ರೀಯ ಅಪರಾಧ ವರದಿಗಳ ಬ್ಯೂರೋ (ಎನ್‌ಸಿಆರ್‌ಬಿ), ದಾಖಲೆಗಳನ್ನಾಧರಿಸಿದ, ಎಂಐಡಿಎಸ್ ಕೈಗೊಂಡ ಗಂಭೀರವಾದ ಅಧ್ಯಯನದಲ್ಲಿ ಬೆಳಕಿಗೆ ಬಂದಿದೆ.

"೧೯೯೫ರ ನಂತರ ಎನ್‌ಸಿಆರ್‌ಬಿ ರೈತರ ಬಗೆಗಿನ ದಾಖಲೆಗಳನ್ನು ಸಂಗ್ರಹಿಸಲು ಆರಂಭಿಸಿದೆ. ಆದರೆ ಕೆಲವು ಪ್ರಮುಖ ರಾಜ್ಯಗಳು ೧೯೯೭ರ ನಂತರವಷ್ಟೆ ದಾಖಲೆಗಳನ್ನು ಸಂಗ್ರಹಿಸಲು ಶುರು ಮಾಡಿರುವುದು. ಹೀಗಾಗಿ ಅಧ್ಯಯನ ೧೯೯೭ರಿಂದ ಆರಂಭವಾಗಿ ೨೦೦೫ಕ್ಕೆ ಕೊನೆಗೊಳ್ಳುತ್ತದೆ. ಯಾಕೆಂದರೆ, ೨೦೦೫ರವರೆಗೆ ಮಾತ್ರ ಈ ಕುರಿತ ರಾಷ್ಟ್ರವ್ಯಾಪಿ ದಾಖಲೆಗಳು ಲಭ್ಯವಿರುವುದು" ಎನ್ನುತ್ತಾರೆ ಪ್ರೊ. ನಾಗರಾಜ್. ರೈತರ ಆತ್ಮಹತ್ಯೆಗಳ ಪ್ರಮಾಣ (ಎಫ್‌ಎಸ್‌ಆರ್) ಅಂದರೆ, ಒಂದು ಲಕ್ಷ ರೈತರಲ್ಲಿ ಆತ್ಮಹತ್ಯೆಯ ಮಾಡಿಕೊಂಡ ರೈತರ ಪ್ರಮಾಣವನ್ನು ನಿರ್ಧರಿಸುವ ಸಲುವಾಗಿ ಇವರು, ೨೦೦೧ರ ಜನಗಣತಿಯ ಅಂಕಿ ಅಂಶಗಳನ್ನು ಬಳಸಿಕೊಂಡಿದ್ದಾರೆ.

ನಾಟಕೀಯ ಏರಿಕೆ

೧೯೯೭ರಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವ ಭಾರತೀಯರ ಸಂಖ್ಯೆ ೯೬,೦೦೦ ಇದ್ದರೆ, ೨೦೦೫ರಲ್ಲಿ ಇದು ೧.೧೪ ಲಕ್ಷಕ್ಕೆ ಏರಿತು. ಇದೇ ಅವಧಿಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವ ರೈತರ ಸಂಖ್ಯೆ ನಾಟಕೀಯವಾಗಿ ಹೆಚ್ಚಳವಾಯಿತು. ೧೯೯೭ರಲ್ಲಿ ೧೪,೦೦೦ಕ್ಕೂ ಕಡಿಮೆ ಇದ್ದ ಕೃಷಿ ಆತ್ಮಹತ್ಯೆಗಳ ಸಂಖ್ಯೆ ೨೦೦೫ರಲ್ಲಿ ೧೭,೦೦೦ಕ್ಕೂ ಅಧಿಕವಾಯಿತು. ಕೃಷಿ ಆತ್ಮಹತ್ಯೆಗಳು ಕಳೆದ ದಶಕದಲ್ಲಿ ಹೆಚ್ಚುತ್ತಾ ಬಂದಿರುವುದು ಸರಿಯಷ್ಟೆ. ಆದರೆ, ಕೆಲವು ವರ್ಷಗಳಲ್ಲಿ ತೀಕ್ಷ್ಣವಾಗಿ ಹೆಚ್ಚಳವಾಗಿರುವುದನ್ನು ಗಮನಿಸಬಹುದು. ಉದಾಹರಣೆಗೆ, ೨೦೦೪ರಲ್ಲಿ ಭಾರತದಲ್ಲಿ ಸುಮಾರು ೧೮,೨೦೦ಕ್ಕೂ ಹೆಚ್ಚು ಕೃಷಿ ಆತ್ಮಹತ್ಯೆಗಳು ಸಂಭವಿಸಿದೆ. ಇದರಲ್ಲಿ ಬಹುತೇಕ ೨/೩ರಷ್ಟು ಆತ್ಮಹತ್ಯೆಗಳು ಈ ಮೇಲೆ ತಿಳಿಸಿದ ನಾಲ್ಕು ದೊಡ್ಡ ರಾಜ್ಯಗಳು ಅಥವಾ "ವಿಶೇಷ ಆತ್ಮಹತ್ಯಾ ವಲಯ"ದ ರಾಜ್ಯಗಳಲ್ಲಿ ನಡೆದಿವೆ.

೧೯೯೮ರಲ್ಲಿ ಕೂಡ ಹಿಂದಿನ ವರ್ಷಕ್ಕೆ ಹೋಲಿಸಿದರೆ ಅಗಾಧವಾಗಿ ಆತ್ಮಹತ್ಯೆಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ. ಈ ವರ್ಷದಲ್ಲಿ ಕೃಷಿ ಆತ್ಮಹತ್ಯೆಗಳ ಸಂಖ್ಯೆ ೧೬,೦೦೦ಕ್ಕೂ ಹೆಚ್ಚಾಗಿತ್ತು. ಅಂದರೆ, ೨,೪೦೦ಕ್ಕೂ ಹೆಚ್ಚಿನ ಆತ್ಮಹತ್ಯೆಗಳು. ೧೯೯೭ರಲ್ಲಿ ೧೪.೨ರಷ್ಟಿದ್ದ ಆತ್ಮಹತ್ಯೆಗಳ ಸರಾಸರಿ ಪ್ರಮಾಣ, ೨೦೦೫ರಲ್ಲಿ ೧೫.೦ಕ್ಕೆ ಏರಿದೆ.

"ರಾಷ್ಟ್ರವ್ಯಾಪಿ ಆತ್ಮಹತ್ಯೆಗಳ ಪ್ರಮಾಣ, ರೈತರ ಆತ್ಮಹತ್ಯೆಗಳ ಪ್ರಮಾಣ ಹಾಗೂ ಕ್ರಿಮಿನಾಶಕಗಳನ್ನು ಸೇವಿಸಿ ಆತ್ಮಹತ್ಯೆ ಮಾಡಿಕೊಂಡ ರೈತರ ಪ್ರಮಾಣ"ಗಳ ಒಟ್ಟಾರೆ ರೂಪ, ವಾರ್ಷಿಕ ಸಮಗ್ರ ವೃದ್ಧಿ ಸರಾಸರಿ (ಎಸಿಜಿಆರ್)ಯನ್ನೂ ಗಮನಿಸಬೇಕಿದೆ ಎನ್ನುತ್ತಾರೆ ಪ್ರೊ. ನಾಗರಾಜ್. ಕಳೆದ ೯ ವರ್ಷಗಳಲ್ಲಿ ಭಾರತದಾದ್ಯಂತ ಎಸಿಜಿಆರ್‌ನ ಪ್ರಮಾಣ ೨.೧೮%ರಷ್ಟಿದೆ. ಇದು ಜನಸಂಖ್ಯೆಯ ವೃದ್ಧಿಗಿಂತ ಹೆಚ್ಚೇನೂ ಅಲ್ಲ. ಆದರೆ ಕೃಷಿ ಆತ್ಮಹತ್ಯೆಗಳ ಪ್ರಮಾಣ ಬಹುತೇಕ ೩% ಇದೆ. ವಿಷಪೂರಿತ ಕ್ರಿಮಿನಾಶಕಗಳನ್ನು ಸೇವಿಸಿ ಆತ್ಮಹತ್ಯೆ ಮಾಡಿಕೊಂಡವರ ಪ್ರಮಾಣ ಇದರಲ್ಲಿ ೨.೫% ಇದೆ.

ಕೃಷಿ ಸಂಕಷ್ಟದ ಸಮಯದಲ್ಲಿ ಕ್ರಿಮಿನಾಶಕಗಳು ರೈತರಿಗೆ ಬಹಳ ಸುಲಭವಾಗಿ ದೊರಕುವುದರಿಂದ ಇಂತಹ ಆತ್ಮಹತ್ಯೆಗಳು ಸಂಭವಿಸುತ್ತವೆ. "ಕೃಷಿ ಆತ್ಮಹತ್ಯೆಗಳು ಹಾಗೂ ಕ್ರಿಮಿನಾಶಕಗಳಿಂದಾಗುವ ಆತ್ಮಹತ್ಯೆಗಳ ನಡುವೆ ವಿಷಾದಕರ ಸಾಮ್ಯತೆಯನ್ನು ಕಾಣಬಹುದುದು" ಎನ್ನುತ್ತಾರೆ ಪ್ರೊ. ನಾಗರಾಜ್.

ಸಮರ್ಪಕ ಚಿತ್ರಣ ಅಲ್ಲ

ಇಷ್ಟೆಲ್ಲ ಇದ್ದರೂ ಈ ಮೇಲಿನ ಮಾಹಿತಿ ಸಮರ್ಪಕವಾದ ಚಿತ್ರಣ ನೀಡುವುದಿಲ್ಲ. ಆತ್ಮಹತ್ಯೆಗಳನ್ನು ಕುರಿತ ಮಾಹಿತಿ ಸಂಕೀರ್ಣವಾಗಿದ್ದು, ಕೆಲವೊಮ್ಮೆ ದಾರಿ ತಪ್ಪಿಸಿಬಿಡುತ್ತವೆ. ಇಂತಹ ಅಂಕಿ-ಅಂಶಗಳ ಮೂಲ ಹಾಗೂ ಮಾನದಂಡಗಳ ಕಾರಣದಿಂದ ಮಾತ್ರ ಇವು ಸಂಕೀರ್ಣವೆನಿಸಿಕೊಳ್ಳುವುದಿಲ್ಲ. ಇದರ ಜತೆಗೆ ಇನ್ನೂ ಹಲವು ಸಮಸ್ಯೆಗಳಿವೆ. ಒಟ್ಟು ರೈತರ ಜನಸಂಖ್ಯೆಗನುಗುಣವಾಗಿ ರೈತರ ಆತ್ಮಹತ್ಯೆಗಳ ವಾರ್ಷಿಕ ಪ್ರಮಾಣವನ್ನು ಎಣಿಕೆ ಮಾಡುವುದು ಕಷ್ಟಕರ ಕೆಲಸ. ೨೦೦೧ರಲ್ಲಿ ಜನಗಣತಿ ನಡೆದ ಕಾರಣ ಆ ವರ್ಷಕ್ಕೆ ಮಾತ್ರ ರಾಷ್ಟ್ರೀಯ 'ಕೃಷಿ ಆತ್ಮಹತ್ಯೆ ಪ್ರಮಾಣ' ಲಭ್ಯವಿರುವುದು. ಜನಗಣತಿಯ ವರ್ಷದಲ್ಲಿ ಮಾತ್ರ ರೈತರ ಜನಸಂಖ್ಯೆಯ ಬಗ್ಗೆ ಸ್ಪಷ್ಟ ಮಾಹಿತಿ ದೊರಕಿರುವುದು.

ಕೃಷಿ ಆತ್ಮಹತ್ಯೆಗಳು ವಿಪರೀತಕ್ಕೆ ಹೋಗದ ೨೦೦೧ರಲ್ಲಿಯೂ ಕೂಡ, ಸಾಮಾನ್ಯ ಆತ್ಮಹತ್ಯೆಗಳ ಪ್ರಮಾಣ (೧೦.೬)ಕ್ಕಿಂತ, ಕೃಷಿ ಆತ್ಮಹತ್ಯೆಗಳ ಪ್ರಮಾಣ ೧೨.೯ರಷ್ಟು ಅಧಿಕವಾಗಿತ್ತು. ಒಟ್ಟು ಆತ್ಮಹತ್ಯೆಗಳ ಪ್ರಮಾಣ ಹೆಚ್ಚಳವಾದರೂ ಜಿಎಸ್‌ಆರ್ ಪ್ರಮಾಣ ೨೦೦೫ರಷ್ಟರಲ್ಲಿ ೧೦.೩ಕ್ಕೆ ಇಳಿದಿತ್ತು. ಇದರರ್ಥ ಏನೆಂದರೆ, ಜನಸಂಖ್ಯೆಯ ಏರಿಕೆಗೆ ಅನುಗುಣವಾಗಿ ಆತ್ಮಹತ್ಯೆಗಳ ಪ್ರಮಾಣದಲ್ಲಿ ಏರಿಕೆಯಾಗಿಲ್ಲ. ಆದರೆ, ೨೦೦೧ರ ನಂತರ

ಒಟ್ಟು ಆತ್ಮಹತ್ಯೆ			ರೈತರ ಆತ್ಮಹತ್ಯೆ		ಕ್ರಿಮಿನಾಶಕ ಆತ್ಮಹತ್ಯೆ	
ವರ್ಷ	ಸಂಖ್ಯೆ	ಆತ್ಮಹತ್ಯೆ ಪ್ರಮಾಣ (ಪ್ರತಿ ನೂರು ಜನಕ್ಕೆ)	ಸಂಖ್ಯೆ	ಒಟ್ಟು ಆತ್ಮಹತ್ಯೆ ಪ್ರಮಾಣ %	ಸಂಖ್ಯೆ	ಒಟ್ಟು ಆತ್ಮಹತ್ಯೆ ಪ್ರಮಾಣ %
1997	95829(100)	10.0	13622(100)	14.2	1831(100)	19.1
1998	104713(109)	10.8	16015(118)	15.3	19075(104)	15.3
1999	110587(115)	11.2	16082(118)	14.5	20251(111)	18.3
2000	108593(113)	10.6	16603(122)	15.3	21801(119)	20.1
2001	108506(113)	10.6	16415(121)	15.1	21530(118)	19.8
2002	110417(115)	10.5	17971(132)	16.3	21414(117)	19.4
2003	110851(116)	10.4	17164(126)	15.5	23001(126)	20.8
2004	113697(119)	10.5	18241(134)	16.0	23311(127)	20.5
2005	113914(119)	10.3	17131(126)	15.0	2216(122)	19.6
ಒಟ್ಟು ಆತ್ಮಹತ್ಯೆ 1997–2005	977107		149244		191010	
1997–2005ರ ನಡುವಿನ ವಾರ್ಷಿಕ ಒಟ್ಟು ಆತ್ಮಹತ್ಯೆ ಹೆಚ್ಚಳ	2.18		2.91		2.50	

Note Figures in brackets give indices with 1997 as the base.
Source: various issues of Accidental Deaths and Suicides In India, National Crime Records Bureau- (NCRB), minisitry of Home Affairs. Government of India

ಎಫ್‌ಎಸ್‌ಆರ್ ತೀವ್ರ ಏರಿಕೆ ಕಂಡಿದೆ. ಕೃಷಿ ಆತ್ಮಹತ್ಯೆಗಳು ಹೆಚ್ಚಳವಾದಂತೆ, ಕೃಷಿಯನ್ನು ತೊರೆಯುವವರ ಸಂಖ್ಯೆ ಕೂಡ ಹೆಚ್ಚಾಗುತ್ತಿದೆ.

೨೦೦೫ರಲ್ಲಿ ನಾಲ್ಕು ದೊಡ್ಡ ರಾಜ್ಯಗಳು ಅಥವಾ 'ವಿಶೇಷ ಆತ್ಮಹತ್ಯಾವಲಯ'ದಲ್ಲಿ ದೇಶದ ಒಟ್ಟಾರೆ ಪ್ರಮಾಣದಲ್ಲಿ, ೪೩.೯% ಆತ್ಮಹತ್ಯೆಗಳು ಸಂಭವಿಸಿದ್ದು ೬೪% ಕೃಷಿ ಆತ್ಮಹತ್ಯೆಗಳು ಸಂಭವಿಸಿದೆ. ಇದಕ್ಕೆ ವ್ಯತಿರಿಕ್ತವಾಗಿ, ಸಾಮಾನ್ಯ ಆತ್ಮಹತ್ಯೆಗಳ ಪ್ರಮಾಣ ಹೆಚ್ಚಾಗಿರುವ ತಮಿಳು ನಾಡು, ಕೇರಳ, ಪಶ್ಚಿಮ ಬಂಗಾಳ, ತ್ರಿಪುರಾ, ಪಾಂಡಿಚೆರಿ ರಾಜ್ಯಗಳಲ್ಲಿ ಕೃಷಿ ಆತ್ಮಹತ್ಯೆಗಳ ಪ್ರಮಾಣ ೨೦.೫% ಇದೆ. "೧೯೯೭ರಿಂದ ೨೦೦೫ರ ನಡುವೆ ಸಾಮಾನ್ಯ ಮತ್ತು ಕೃಷಿ ಆತ್ಮಹತ್ಯೆಗಳ ಪ್ರಮಾಣ ಈ ಗುಂಪಿನ ರಾಜ್ಯಗಳಲ್ಲಿ ಕಡಿಮೆಯಾಗುತ್ತಾ ಬಂದರೆ, ನಾಲ್ಕು ದೊಡ್ಡ ರಾಜ್ಯಗಳಲ್ಲಿ ಇವು ಹೆಚ್ಚಾಗುತಾ ಬಂದಿದೆ" ಎಂದು ಪ್ರೊ. ನಾಗರಾಜ್ ಅಭಿಪ್ರಾಯ ಪಡುತ್ತಾರೆ.

ಕೃಷಿ ಬಿಕ್ಕಟ್ಟನ್ನು ವರದಿ ಮಾಡಿದ ಮಾಧ್ಯಮ ಕೂಡ ಇದೇ ಚಿತ್ರಣವನ್ನು ನೀಡುತ್ತದೆ. ಮಾಧ್ಯಮ ಕೂಡ ಮಹಾರಾಷ್ಟ್ರ, ಆಂಧ್ರ ಪ್ರದೇಶ, ಕರ್ನಾಟಕ, ಮತ್ತು ಕೇರಳ ರಾಜ್ಯಗಳ ಕೃಷಿ ಆತ್ಮಹತ್ಯೆಗಳ ಬಗ್ಗೆ ಹೆಚ್ಚಿನ ಗಮನ ಹರಿಸಿರುವುದು ಸರಿಯಷ್ಟೆ. ಈ ಎಲ್ಲಾ ರಾಜ್ಯಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕೃಷಿ ಆತ್ಮಹತ್ಯೆಗಳು ಸಂಭವಿಸುತ್ತಿವೆ. ಆದರೆ ಮಾಧ್ಯಮ, ಕೃಷಿ ಆತ್ಮಹತ್ಯೆಗಳ ಪ್ರಮಾಣ ಹೆಚ್ಚಾಗಿರುವ ಮಧ್ಯ ಪ್ರದೇಶ ರಾಜ್ಯವನ್ನು ಕಡೆಗಣಿಸಿದೆ. (ಸಣ್ಣ ರಾಜ್ಯಗಳಲ್ಲಿ, ಗೋವಾ ಮತ್ತು ಪಾಂಡಿಚೆರಿಯಲ್ಲಿ ಕೃಷಿ ಆತ್ಮಹತ್ಯೆಗಳ ಪ್ರಮಾಣ ಹೆಚ್ಚಾಗಿದೆ. ಆದರೆ ಇಲ್ಲಿನ ಜನಸಂಖ್ಯೆ ಹೆಚ್ಚಾಗಿರುವುದರಿಂದ ಹಾನಿಯ ಪ್ರಮಾಣ ಕಡಿಮೆಯೆಂದೇ ಹೇಳಬಹುದು.)

೧.೫ ಲಕ್ಷ ಕೃಷಿ ಆತ್ಮಹತ್ಯೆಗಳು ಕೆಳಹಂತದ ಅಂದಾಜಾಗಿದೆ. ಈ ಅಂಕಿ-ಅಂಶ ನಿಖರ ಮತ್ತು ಸಮಗ್ರವಾದುದಲ್ಲ. ಬಹಳಷ್ಟು ಜನರನ್ನು ಹೊರಗಿಟ್ಟು ಎಣಿಕೆ ಮಾಡಲಾಗಿರುವ ಎನ್‌ಸಿಆರ್‌ಬಿ ಅಂಕಿ-ಅಂಶಗಳಲ್ಲಿಯೇ ಆಂತರಿಕವಾದ ಮತ್ತು ಗಂಭೀರವಾದ ತೊಡಕುಗಳಿವೆ. ಪ್ರೊ. ನಾಗರಾಜ್ ಹೇಳುವಂತೆ: "ಈ ವರದಿಗಳಲ್ಲಿ ರೈತರ ಆತ್ಮಹತ್ಯೆಗಳನ್ನು ಕಡಿಮೆ ಪ್ರಮಾಣದಲ್ಲಿ ಅಂದಾಜು ಮಾಡಲಾಗಿದೆ. ಮೂಲಭೂತವಾಗಿ, ರೈತನ ವ್ಯಾಖ್ಯಾನದಲ್ಲಿಯೇ ಸಮಸ್ಯೆಯಿದೆ: ಕೇವಲ ಹಕ್ಕುಪತ್ರ ಹೊಂದಿರುವವ ಮಾತ್ರ ರೈತ. ಹೀಗಾದಾಗ, ಕೃಷಿ ಕಾರ್ಮಿಕರು, ಮಹಿಳಾ ರೈತರು ಹೊರಗುಳಿಯುತ್ತಾರೆ."

ಆಹ್ವಾನ

ಬನ್ನಿ ಬಿಸಾಡಿ
ಗನ್ನುಗಳನ್ನು!
ಕೊಡುತ್ತೇವೆ
(ಬರೆಯಲು
ಈ ದೇಶಕ್ಕೆ
ಹೊಸ ಸಂವಿಧಾನ)
ಪೆನ್ನುಗಳನು!

ಟಿ.ಎಸ್. ರಾಜೇಂದ್ರ ಪ್ರಸಾದ್



ವರದಿಗಳ ಗುಣಮಟ್ಟದಲ್ಲಿ ಕೂಡ ರಾಜ್ಯದಿಂದ ರಾಜ್ಯಕ್ಕೆ ವ್ಯತ್ಯಾಸಗಳು ಕಂಡುಬರುತ್ತವೆ. ಉದಾಹರಣೆಗೆ, ಹರಿಯಾಣ ರಾಜ್ಯ ಸಾಮಾನ್ಯ ಆತ್ಮಹತ್ಯೆಗಳು ಮತ್ತು ಕೃಷಿ ಆತ್ಮಹತ್ಯೆಗಳ ಅನುಪಾತವನ್ನು ಕಡಿಮೆ ತೋರಿಸುತ್ತದೆ. ಆದರೆ, ಈ ಅನುಪಾತ, ರಾಜ್ಯದ ಕೃಷಿ ಸಂಬಂಧಿತ ಇತರ ಅಂದಾಜುಗಳಿಗೆ ಹೊಂದಾಣಿಕೆಯಾಗುವುದಿಲ್ಲ. ಕೃಷಿ ಸಮಸ್ಯೆಗಳನ್ನು ಅವಲೋಕನ ಮಾಡುತ್ತಿರುವ ಗುಂಪುಗಳು ಪಂಜಾಬ್ ರಾಜ್ಯದ ಅಂಕಿ-ಅಂಶಗಳನ್ನು ಪ್ರಶ್ನಿಸುತ್ತವೆ.

ಈ ಅಸಮರ್ಪಕ ಅಂಕಿ-ಅಂಶಗಳು ಕೂಡ, ಆತಂಕಕಾರಿ ಮಾದರಿಯನ್ನು ಪ್ರತಿಬಿಂಬಿಸುವುದಂತೂ ನಿಜ. ಆದರೆ, 'ವಿಶೇಷ ಆತ್ಮಹತ್ಯಾ ವಲಯ'ದಲ್ಲಿ ಅಂದರೆ ನಾಲ್ಕು ದೊಡ್ಡ ರಾಜ್ಯಗಳಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಆತ್ಮಹತ್ಯೆಗಳು ಹೆಚ್ಚಲು ಕಾರಣವೇನು? ಪ್ರೊ. ನಾಗರಾಜ್ ಪ್ರಕಾರ, "ಒಟ್ಟಾರೆ ಈ ರಾಜ್ಯಗಳಲ್ಲಿ ತೊಂಭತ್ತರ ದಶಕದ ನಡುವಿನಿಂದ ತೀವ್ರವಾದ ಕೃಷಿ ಬಿಕ್ಕಟ್ಟು ಇದೆ. ಇದೇ ಮಾದರಿ ರಾಷ್ಟ್ರಾದ್ಯಂತ ಕೂಡ ಕಂಡುಬರುತ್ತದೆ. ನಾಲ್ಕು ದೊಡ್ಡ ರಾಜ್ಯಗಳು ಮತ್ತು ಇನ್ನಿತರ ರಾಜ್ಯಗಳಲ್ಲಿ ಇತರ ಅಂಶಗಳು ಕೂಡ ಸಮಸ್ಯೆ ಬಿಗಡಾಯಿಸಲು ಕಾರಣವಾಗಿವೆ. ಈ ರಾಜ್ಯಗಳಲ್ಲಿ ವಾಣಿಜ್ಯ ಕೃಷಿ ಎಲ್ಲೆಡೆ ಹರಡಿಕೊಂಡಿದೆ. ಹಣದ ಬೆಳೆ ಅತ್ಯಧಿಕ. ನೀರಿನ ಅಭಾವ ಕೂಡ ಸಾಮಾನ್ಯ ಅಂಶ. ಸರ್ಕಾರ ಕೃಷಿ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆಯನ್ನು ಕಡಿಮೆ ಮಾಡುತ್ತಾ ಬಂದಂತೆ, ಭೂಮಿ ಮತ್ತು ನೀರಿನ ಸಮಸ್ಯೆ ತೀವ್ರಗೊಳ್ಳುತ್ತಾ ಬಂದಿದೆ. ಬಿತ್ತನೆಯ ಬೀಜಗಳು, ರಾಸಾಯನಿಕಗಳ ಬೆಲೆ ಗಗನಕ್ಕೆ ಏರಿದೆ. ಈ ಸಮಸ್ಯೆಗಳು ಹಾಗೂ ಮತ್ತಿತರ ಕೃಷಿ ಸಂಬಂಧಿತ ಅಂಶಗಳನ್ನು ಕುರಿತು ಸಮರ್ಪಕವಾದ ಶಾಸನಗಳು ಇಲ್ಲದಿರುವುದರಿಂದ, ಸಮಸ್ಯೆಗಳು ಬಿಗಡಾಯಿಸುತ್ತಿವೆ. ಅಮೆರಿಕಾ ಮತ್ತು ಯುರೋಪ್ ಒಕ್ಕೂಟಗಳು ತಮ್ಮ ರೈತರಿಗೆ ಸಬ್ಸಿಡಿ ನೀಡಿರುವುದರಿಂದ, ನಮ್ಮ ಬೆಳೆಗಳ ಬೆಲೆ ಬಿದ್ದುಹೋಗಿದೆ. ಜತೆಗೆ ಕೃಷಿ ಉತ್ಪನ್ನಗಳ ಮಾರಾಟದಲ್ಲಿರುವ ಕಂಪನಿಗಳು ಬೆಲೆಯನ್ನು ನಿಯಂತ್ರಿಸುವುದರಿಂದ ಸಮಸ್ಯೆ ಬಗೆಹರಿಯದೆ ಕಗ್ಗಂಟಾಗಿದೆ."

ಸಾಲವ್ಯೂಹ

"ತೊಂಭತ್ತರ ದಶಕದ ನಡುವಿನಿಂದ ಕೃಷಿ ಆದಾಯ ನೆಲಕಚ್ಚಿದೆ. ಬ್ಯಾಂಕ್ ಸಾಲ ಖಾಲಿ. ಬೆಳೆಗೆ ಖರ್ಚು ಹೆಚ್ಚು. ಸಾಲದ ಹೊರೆ ಕೂಡ ಹೆಚ್ಚು. ಪಶ್ಚಿಮದವರು ರೈತರಿಗೆ ಸಬ್ಸಿಡಿ ಕೊಡುತ್ತಿದ್ದರೆ, ನಾವು ಇರುವ ರಿಯಾಯಿತಿಗಳನ್ನು ಹಿಂಪಡೆಯುತ್ತಿದ್ದೇವೆ. ರೈತರಿಗೆ ಯಾವುದೇ ರೀತಿಯ ಸಹಾಯ ಕೂಡ ಮಾಡುತ್ತಿಲ್ಲ. ಕೃಷಿಯಲ್ಲಿ ಬಂಡವಾಳ ಹೂಡಿಕೆ ಕಡಿಮೆಯಾಗುತ್ತಿರುವುದರಿಂದ ಈ ಸಾಲವ್ಯೂಹದಿಂದ ಹೊರಬರುವುದು ದಿನೇ ದಿನೇ ಕಷ್ಟವಾಗುತ್ತಿದೆ."

(ಸೌಜನ್ಯ : 'ದಿ ಹಿಂದೂ')

ಕೈವಾರ ತಾತಯ್ಯನವರ ಎರಡು ತತ್ವ ಪದಗಳು

ಅನು: ಸ. ರಘುನಾಥ್

ಆನಂದವನ್ನೋ
ನಿತ್ಯಾನಂದವನ್ನೋ
ಪರಮಾನಂದವನ್ನೋ



ಬಿತ್ತರಿ ಗುರುಗಳು ಬೆತ್ತವ ಹಿಡಿದು
ಕಟ್ಟಿಗೆ ಮೇಲೆ ನಡೆಯುವರೋ
ಕಳ್ಳಿನ ಗಡಿಗೆಯ ರೀತಿಲಿ ಬೊಜ್ಜನು ಬೆಳೆಸುತ
ಮೇಲ್ ಗಂಧವ ಪೂಸುವರೋ

ಕಾಗೆಯ ತೆರದಲಿ ಕಾವ್ ಕಾವ್ ಎನ್ನುತ
ವೇದಗಳೇನೇನೆಂಬುದನರಿಯರೋ
ಕುಂಡದಿ ಬೆಂಕಿ ಕೆರಳುರಿಯುವ ವ್ಯಾಳೆಗೆ
ತುಪ್ಪ ಪುರುಳೆಗಳನೊಡ್ಡುವುದ್ಯಾತಕೋ

ಪಶುವಿಗೆ ಬರೆಗನಿಕ್ಕುವ ವಿಧದಲಿ
ಭುಜಗಳ ಸುಟ್ಟರೆ ದೋಷವೆಲೋ
ತಿಕವನು ತೊಳೆಯುವ ಕೈಯಲಿ ಸುದ್ದೆ
ಉಂಡೆಯ ತೇಯುತ ಪಟ್ಟೆ
ನಾಮವ ಧರಿಸಲು ಫಲವೇನೋ

ಹುಟ್ಟು ಬ್ರಹ್ಮಚಾರಿ ಆಚಾರ್ಯನೆನಬಹುದು
ಕಡೆಗಣದವರೆಲ್ಲ ಅನಾಚಾರಿಗಳೋ
ಕೆಲ ದಿನ ಶೂದ್ರರು ಕೆಲ ದಿನ ವಿಪ್ರರು
ವೇಷವ ತೊಡುವುದು ಏತಕ್ಕೋ

ಪಂಚಮ ವೇದವನೋದುವುದರಿಯದೆ
ಲೋಪವನೆಣಿಸಲು ಮುಸುವಗಳೋ
ಶಾರದೆಯಾಯುಧ ಕೈಯೊಳಗಿರಲು
ರಾಮ ನಾಮಾಮೃತ ಪಾನವದೋ

ಅನ್ಯರ ಉಚ್ಚೆಗೆ ಹುಟ್ಟಿದ ಹೆಂಗಳ
ಮದುವೆಯನಾಗಲು ಹಿರಿಯರೆನಬಹುದೇ
ತರ್ಕಶಾಸ್ತ್ರವ ಕಲಿತು ತಾ ಘನರೆಂಬುವರು
ತರ್ಕವು ನಾಯ್ಗಳ ಕಚ್ಚಾಟವದೋ
ಹೆಚ್ಚಿನ ಮತಗಳು ಸಿಕ್ಕು ಪುರಾಣವೋ
ಸಿಕ್ಕದು ಮಾರ್ಗವು ಕತ್ತಲೆಯೋ
ವಾದಕೆ ಯಾರೇ ಬಂದರು ಎನ್ನಲು
ವಾಶಿಷ್ಟ ಗುರುಗಳೆ ಬಣ್ಣಿಪರೋ

ಬ್ರಹ್ಮವಿದ್ಯೆಯನರಿಯದೆ ಬ್ರಾಹ್ಮಣರೆಂಬರು
ಲೋಕಾರ್ಥಪರರೆಲ್ಲರು ತಾ ನಗೆಯಾಡುವರೋ
ಏಕಾಂತವನರಿಯದ ಕೋಣಿಗ ಮಕ್ಕಳು
ನುಡಿದರೆ ಬಲು ಮೋಸವದೋ

ಮುಖ್ಯರು ಶೂದ್ರರು ಮೂರ್ಲೋಕದೊಳು
ಉಳಿದವರೆಲ್ಲ ಅವರಡಿಯೋ
ಪಟ್ಟು ಹಿಡಿದು ಹೇಳಿದೆನೆಂದರೆ
ನಿಷ್ಠೆಗಳೆಲ್ಲ ಹೊಳೆ ಪಾಲಹುದೋ

ಸುಂದರವಾದ ಶೂದ್ರಾಂಗನೆ ಯೋನಿಯ
ಬಯಸೋ ಜನರಿಗೆ ಆಚಾರಗಳೆ?
ಯೋಗಿಗಳೆನುತ ಅಲೆಯುವ ಜೋಗಿ ಜನರಿಗೆ
ಎಂದಿಗುಮೋಕ್ಷವು ಸಿದ್ಧಿಸದೋ

ಲಿಂಗಪುರದ ಹಾದಿ ಜಂಗಮರರಿಯರು
ಲಿಂಗದ ಧಾರಣೆ ವ್ಯರ್ಥವದೋ
ಜಂಗಕ್ಕೆ ಕುಲವಿಲ್ಲ ಲಿಂಗಕ್ಕೆ ಹೊಲೆಯಿಲ್ಲ
ಶಿವ ಭಕ್ತರಿಗೆ ಈಗ ಸಾರಿದೆನೋ

ತಿಂಗಳು ಒಂದಕ್ಕೆ ಹೊಲೆ ಮೂರ್ ದಿನದಲಿ
ಲಿಂಗಪ್ಪನಿದ್ದಾನೆ ಇದು ಕೇಳಿರೋ
ಮುಂಗೈಲಿ ಗಿಣಿಯಿದ್ದು ಯತ್ತ ಹೋಯಿತೊ ಎಂದು
ಅಂಬರವ ನೋಡಿದ ಇದು ಕೇಳಿರೋ

ಬ್ಯಾಡರ ಮನೆ ಊಟ ಮಾಡಿದ ನಂಜುಂಡ
ಇದ್ದಷ್ಟು ಹೇಳಿದೆ ಇದು ಕೇಳಿರೋ
ಶ್ರೀನಾರೇಯಣಸ್ವಾಮಿ ಹೇಳಿದ ಶಿಂಧು ನುಡಿ
ಸುಳ್ಳೆನ್ನುವ ಬಾಯಿಗೆ ಮುಳಾಕಿರೋ.

ಯಾ ಜಾತಿಯವರೋ ತಿಳಿಯಲಾರೆವಯ್ಯ



ಯಾ ಜಾತಿಯವರೊ ತಿಳಿಯಲಾರೆವಯ್ಯ
ಸ್ತ್ರೀ ಪುರುಷ ಜಾತಿಗಳು ಸೃಷ್ಟಿಯಲೆರಡು
ತಂದೆ ತಾಯ್ಗಳು ಭಾಳ ಸಾಹಸದಿ ಕೂಡಿ
ರತಿಯಾಡೆ ರಮಣಿ ಗರ್ಭದಲಿ
ತನುವು ರೂಪಕೆ ಬಂತು ತಲೆ ಕೆಳಗೆ ನಿಂತು
ಉಚ್ಚೆ ದ್ವಾರದಿ ನುಗ್ಗಿ ಬಂದರೀ ನರರು
ಬಾಯಲ್ಲಿ ಮಾಂಸವು ಕಣ್ಣಲ್ಲಿ ಉಪ್ಪುನೀರು
ಯಾವ್ಯಾಳೆ ಮೂಗು ಬೆರಳು ಮೆದುಳೋ
ಕಂಡು ಕಾಣದೆ ಈ ಮಿಥ್ಯ ಜಾತಿಗಳು
ಹಿಗ್ಗೋದು ಉಚಿತವೆ ಸಿಗ್ಗೇಕೆ ಇಲ್ಲವೋ

ಗುಂಡಿಗೆ ಮೂಳೆಗಳು ನೆತ್ತರು ಮಜ್ಜೆ ಒಂಬತ್ತು ರಂಧ್ರಗಳು
ಕಾರೆ ಮುಳ್ಳಂತೆ ಇರುವೂದೊಂದು ಮೂಳೆ
ಕಳ್ಳುಗಡಿಗೆ ರೀತಿ ಗಬ್ಬು ಹುಳುಗಳ ಹೊಟ್ಟೆ
ಕರುಳು ಮುವ್ವತ್ತಮೂರು ಹೊಸೆದುಕೊಂಡಿಹುದು

ಮೇಲು ನಮ್ಮಯ ಜಾತಿ ಕೀಳು ನಿಮ್ಮಯ ಜಾತಿ
ಎಂಬ ತರ್ಕವಾದ ತರವಲ್ಲ ನಿಮಗೆ
ಗಾಳಿ ಬುಡ್ಡೆಯು ದೇಹ ಘನವಾಗಿ ಕಾಂಬುವಿರ
ಆ ಮರ್ಮವರಿಯದೆ ಮಾತನಾಡೋದೇಕೊ

ಅವನಿಯಲಿ ಕೈವರವು ಅಮರನಾರೇಯಣಾ
ಹರಿಗುರುವ ಧ್ಯಾನಿಸುವ ಅರ್ಥಿಗಳು ನಾವು.

ಅಷ್ಟಮಠ: ಎಲ್ಲಾ ಸ್ವಾರ್ಥಕ್ಕಾಗಿ!

ಅಷ್ಟ ಮಠಗಳ ಇಡೀ ಪ್ರಕರಣದ ಹಿಂದೆ ಧಾರ್ಮಿಕ, ಸಾಂಪ್ರದಾಯಿಕ ಮೌಲ್ಯಗಳಿಗಿಂತಲೂ, ಇತರ ಕಾರಣಗಳೇ ಪ್ರಧಾನವಾಗಿವೆ ಎಂದು ಹೇಳಬಹುದು. ಪರ್ಯಾಯ ಪೀಠವನ್ನು ಅಲಂಕರಿಸುವುದೆಂದರೆ ಎರಡು ವರ್ಷಗಳ ಅಧಿಕಾರ ನಡೆಸುವುದೆಂದೇ ಅರ್ಥ. ಕರ್ನಾಟಕದ ರಾಜಕೀಯ ಪ್ರಹಸನದಂತೆ. ಇಲ್ಲಿ ಪ್ರಕಟಗೊಳ್ಳುವ ಅನೇಕ ಆರ್ಥಿಕ ಸಮಸ್ಯೆಗಳು ಆಗಾಗ್ಗೆ ಅಷ್ಟ ಮಠಗಳಲ್ಲಿ ವಿವಾದಗಳನ್ನು ಹುಟ್ಟುಹಾಕುತ್ತಿರುತ್ತವೆ. ಅಪಾರ ಐಶ್ವರ್ಯ ಮತ್ತು ಸ್ಥಿರಾಸ್ಥಿಗಳನ್ನು ಹೊಂದಿರುವ ಎಲ್ಲಾ ಧಾರ್ಮಿಕ ಮಠಗಳಲ್ಲೂ ಈ ವಿದ್ಯಮಾನಗಳನ್ನು ಕಾಣಬಹುದು. ಮಧ್ವ ಸಂಪ್ರದಾಯದ ಉತ್ತರಾಧಿಮಠದಲ್ಲೂ ಇದೇ ರೀತಿಯ ವ್ಯಾಜ್ಯಗಳು ಕಂಡುಬಂದಿವೆ. ಇದೀಗ ವಾಲ್ಮೀಕಿ ಮಠದಲ್ಲೂ ಇದೇ ಸಮಸ್ಯೆ ತಲೆದೋರಿದೆ. ಕೆಲವು ವರ್ಷಗಳ ಹಿಂದೆ ಒಕ್ಕಲಿಗರ ಮಠ ಇಬ್ಬಾಗವಾದದ್ದನ್ನೂ ಇಲ್ಲಿ ಸ್ಮರಿಸಬಹುದು.

ನಾಡ ಬಂಗಾರಪೇಟೆ

ಉಡುಪಿ ಅಷ್ಟ ಮಠಗಳಲ್ಲಿ ವಿವಾದಗಳು ಪರ್ಯಾಯದಷ್ಟೇ ನಿಯತಕಾಲಿಕವಾಗಿ ಶಿಸ್ತಿನಿಂದ ನಡೆಯುವುದು ಪಾರಂಪರಿಕವಾಗಿ ಕಂಡುಬಂದಿರುವ ಸತ್ಯ. ಇತ್ತೀಚಿನ ಪುತ್ತಿಗೆ ಮಠದ ಸುಗುಣೇಂದ್ರ ತೀರ್ಥ ಸ್ವಾಮಿಗಳ ವಿವಾದ ಹೊಸ ಸ್ವರೂಪ ಪಡೆದಿದೆ. ಯಾವುದೇ ಒಂದು ಧಾರ್ಮಿಕ ಚಿಂತನೆಗಳು ಆಧುನಿಕ ಜಗತ್ತಿನಲ್ಲಿ ತಮ್ಮ ಅಸ್ತಿತ್ವವನ್ನು, ಅಸ್ಮಿತೆಯನ್ನು ಉಳಿಸಿಕೊಳ್ಳಲು ಎರಡು ಮಾರ್ಗಗಳಿರುತ್ತವೆ. ಮೊದಲನೆಯದು ಆಧುನಿಕತೆಯಲ್ಲಿ ಕಂಡುಬರುವ ವೈರುಧ್ಯಗಳನ್ನು ಎದುರಿಸಿ, ಸೈದ್ಧಾಂತಿಕವಾಗಿ ಹಾಗೂ ಭೌತಿಕವಾಗಿ ಅವುಗಳನ್ನು ನಿವಾರಿಸಿಕೊಂಡು ತಮ್ಮ ಅಸ್ಮಿತೆಯನ್ನು ಉಳಿಸಿಕೊಂಡು ಹೋಗುವುದು. ಎರಡನೆಯದು ಪರಿವರ್ತನೆಯನ್ನು ಸಾರಾಸಗಟಾಗಿ ನಿರಾಕರಿಸಿ, ತನ್ನ ಅಸ್ಮಿತೆಗಳನ್ನು ತನ್ನದೇ ಆದ ಪಾರಂಪರಿಕ ಸಂಪ್ರದಾಯಗಳಲ್ಲಿ, ಕೆಲವೊಮ್ಮೆ ಮೂಲ ಕೃತಿ-ಸ್ಮೃತಿಗಳಲ್ಲಿ ಕಂಡುಕೊಳ್ಳಲು ಪ್ರಯತ್ನಿಸಿ, ಆ ಮಧ್ಯಕಾಲೀನ ಭೌದ್ಧಿಕ ಮೌಲ್ಯಗಳನ್ನು ಆಧುನಿಕ ಮೌಲ್ಯಗಳಿಗೆ ಒರೆ ಹಚ್ಚಿ, ತಮ್ಮ ಧಾರ್ಮಿಕತೆಯನ್ನು ರಕ್ಷಿಸಿಕೊಳ್ಳುವುದು.

ಈ ದ್ವಂದ್ವ ಮತ್ತು ವಿರೋಧಾಭಾಸಗಳು ಎಲ್ಲ ಧರ್ಮಗಳಲ್ಲೂ ಕಂಡುಬಂದಿವೆ. ಜಾಗತಿಕ ಮಟ್ಟದಲ್ಲಿ ಕ್ರೈಸ್ತ ಮತ್ತು ಇಸ್ಲಾಂ ಮತಗಳಲ್ಲೂ ಇದನ್ನು ಗಮನಿಸಬಹುದಾಗಿದೆ. ಇತ್ತೀಚೆಗೆ ಸೂಡಾನ್ ಸರ್ಕಾರ ಶರಿಯತ್ ಹೆಸರಿನಲ್ಲಿ ಕ್ರೈಸ್ತ ಶಿಕ್ಷಕಿಯನ್ನು ಬಂಧಿಸಿರುವುದು, ಶಬರಿಮಲೆಯಲ್ಲಿ ನಟಿ ಜಯಮಾಲಾರ ಭೇಟಿಯ ಘಟನೆ, ಡಾ ವಿನ್ಸಿ ಕೋಡ್ ಕೃತಿಯ ವಿರುದ್ಧ ವ್ಯಾಟಿಕನ್ ಚರ್ಚ್ ಪ್ರತಿಭಟಿಸಿದ್ದು, ಈ ಎಲ್ಲಾ ಘಟನೆಗಳನ್ನೂ ಇದೇ ದೃಷ್ಟಿಯಲ್ಲಿ ನೋಡಬಹುದು. ಈ ಎಲ್ಲಾ ಘಟನೆಗಳಲ್ಲಿ ಅಪರಾಧಿಯ ಸ್ಥಾನದಲ್ಲಿ ನಿಲ್ಲುವವರು ಮೇಲೆ ಹೇಳಿದ ಮೊದಲನೆ ಮಾರ್ಗದಲ್ಲಿ ನಡೆಯುವವರೇ ಆಗಿರುತ್ತಾರೆ. ಅಷ್ಟ ಮಠದ ವಿವಾದದಲ್ಲೂ ಇದನ್ನೇ ಕಾಣಬಹುದು.

ಅದ್ವೈತ ಸಿದ್ಧಾಂತದ ತತ್ವಗಳಿಗೆ ವ್ಯತಿರಿಕ್ತವಾಗಿ ಮೂಡಿಬಂದ ದ್ವೈತ ಸಿದ್ಧಾಂತ ಪ್ರತಿಪಾದಕ ಮಧ್ವಾಚಾರ್ಯರ ಕಾಲಾವಧಿ ಕ್ರಿ.ಶ ೧೩ನೇ ಶತಮಾನ. ಆ ವೇಳೆಗಾಗಲೇ ಕರ್ನಾಟಕದಲ್ಲಿ ಮತ್ತು ಭರತ ಖಂಡದಲ್ಲಿ ಅನೇಕ ರೀತಿಯ ಭಕ್ತಿ ಪಂಥಗಳು, ನಾಥ [illegible] ಶರಣ ಸಂಸ್ಕೃತಿಗಳು, ವಚನಕಾರರು ತಮ್ಮದೇ ಆದ ಛಾಪು [illegible] ಸಿದ್ದರು. ಮೂಲಭೂತವಾಗಿ ಜೈನ ಧರ್ಮದ ಕೆಲವು ಅಂಶಗಳನ್ನು ತಾತ್ವಿಕವಾಗಿ ಸ್ವೀಕರಿಸಿ, ಭಕ್ತಿಪಂಥದ ಜಾಡನ್ನು ಮಧ್ವಾಚಾರ್ಯರು ಅನುಸರಿಸಿದ್ದು ಸ್ಪಷ್ಟವಾಗಿದೆ.. ಪರಮಾತ್ಮ ಮತ್ತು ಜೀವವನ್ನು ಪ್ರತ್ಯೇಕವೆಂದೇ ಬೋಧಿಸಿದ ದ್ವೈತ ಸಿದ್ಧಾಂತದಲ್ಲಿ ಕಂಡುಬರುವ ಕೆಲವು ಅಂಶಗಳು ಜೈನ ಮತ್ತು ಭಕ್ತಿ ಪಂಥದ ಸೂಚನೆ ನೀಡುತ್ತವೆ. ಆಧ್ಯಾತ್ಮಿಕ ಮತ್ತು ಭೌತಿಕ ವಸ್ತುಗಳ ನಡುವಿನ ವ್ಯತ್ಯಾಸ, ಎರಡು ಜೀವಗಳ ನಡುವಿನ ಅಂತರ, ಜೀವ ಮತ್ತು ಭೌತವಸ್ತುಗಳ ನಡುವಿನ ವ್ಯತ್ಯಾಸ, ಇವೆಲ್ಲವೂ ಈ ನಿಟ್ಟಿನಲ್ಲಿ ಉಲ್ಲೇಖನಾರ್ಹ. ಧಾರ್ಮಿಕ ಆಚರಣಾ ವಿಧಿಗಳಾದ ಅಂಕಣ, ಅಂದರೆ ದೇಹದ ಮೇಲೆ ಸಂಕೇತಗಳನ್ನು ಪ್ರದರ್ಶಿಸುವುದು ಶರಣ-ವೀರಶೈವ ಧರ್ಮದ ಕುರುಹಾದರೆ, ಮಕ್ಕಳಿಗೆ ದೇವರ-ಗುರುಗಳ ಹೆಸರಿಡುವ ಆಚರಣೆ ಜೈನ ಪರಂಪರೆಯಲ್ಲಿ ಕಾಣಬಹುದು. ಭಕ್ತಿಪಂಥದ ಭಜನೆಯನ್ನು ದ್ವೈತ ಸಿದ್ಧಾಂತ ತನ್ನ ಆಚರಣೆಯ ಒಂದು ಅಂಗವಾಗಿಯೇ ಸ್ವೀಕರಿಸಿದೆ. ಮೋಕ್ಷ ಸಾಧನೆಗಾಗಿ ಭಕ್ತಿ, ಧ್ಯಾನ ಮತ್ತು ಪರಿತ್ಯಾಗದ ನೀತಿಗಳಿಗೂ ಜೈನ-ಬೌದ್ಧ ಮತದ ಹಿನ್ನೆಲೆ ಇದ್ದಿರಬಹುದು.

ಈ ವೈವಿಧ್ಯತೆಯನ್ನು ತಮ್ಮೊಳಗೆ ಅಡಗಿಸಿಕೊಂಡಿದ್ದರಿಂದಲೇ ಮಾಧ್ವ ಮತಾಚಾರ್ಯರು ದೇಶ ಪರ್ಯಟನೆ ಮಾಡಿ ಜನರನ್ನು ತಮ್ಮ ಮತಕ್ಕೆ ಧರ್ಮಾಂತರಿಸಲು ಸಾಧ್ಯವಾಗಿರಬೇಕು. ತಮ್ಮ ದ್ವೈತ ಮತ ಸ್ಥಾಪನೆಗಾಗಿ ಅವಿರತವಾಗಿ ದುಡಿದ ಆಚಾರ್ಯರಿಗೆ ಸಮುದ್ರ ಲಂಘನ ಒಂದು ವಿಶೇಷ ಚರ್ಚೆಯ ವಿಷಯವಾಗಿರಲಿಕ್ಕಿಲ್ಲ ಎಂದೂ ಯೋಚಿಸಬಹುದು. ೧೨-೧೩ನೆಯ ಶತಮಾನದ ಸಮುದ್ರ ಲಂಘನಕ್ಕೂ, ೨೧ನೆಯ ಶತಮಾನದ ಸಮುದ್ರ ಯಾನಕ್ಕೂ ಇರುವ



ವಿಶ್ವೇಶ ತೀರ್ಥ ಸ್ವಾಮಿ

ಸುಗುಣೇಂದ್ರ ತೀರ್ಥ ಸ್ವಾಮಿ

ವ್ಯತ್ಯಾಸವನ್ನು ಗುರುತಿಸಿದಾಗ, ಆ ಕಾಲಾವಧಿಯ ಯತಿಗಳು ಈ ಬಗ್ಗೆ ಎಲ್ಲಿಯೂ ಉಲ್ಲೇಖಿಸಿರುವ ಸಾಧ್ಯತೆಗಳು ಕಡಿಮೆ ಎಂದೇ ಹೇಳಬಹುದು. ಮತ ಧರ್ಮಗಳನ್ನು ಅನ್ಯ ದೇಶಗಳಿಗೆ ಕೊಂಡೊಯ್ಯಲು ಸಮುದ್ರ ಮಾರ್ಗವನ್ನು ಉಪಯೋಗಿಸಿಕೊಂಡ ಐರೋಪ್ಯ ರಾಷ್ಟ್ರಗಳೇ ತಮ್ಮ ಕಾರ್ಯವನ್ನು ವಾಣಿಜ್ಯಮುಖೇನ ಸಾಧಿಸಿದ್ದನ್ನು ಇತಿಹಾಸದಲ್ಲಿ ಕಂಡಿದ್ದೇವೆ. ಹಾಗಾಗಿ ಆ ಕಾಲದಲ್ಲಿ ಸಮುದ್ರಯಾನ ವಾಣಿಜ್ಯಕ್ಕಾಗಿ ಅಥವಾ ಅನ್ಯ ದೇಶಗಳನ್ನು ಆಕ್ರಮಿಸಿಕೊಳ್ಳಲು ಒಂದು ಸಾಧನವಾಗಿತ್ತೆಂದೂ ಹೇಳಬಹುದು. ಈ ನಿಟ್ಟಿನಲ್ಲಿ ಆಲೋಚಿಸಿದರೆ ಹಿಂದೂ ಧರ್ಮದ ಆಚಾರ್ಯ ತ್ರಯರು ಸಮುದ್ರಯಾನವನ್ನು ಎಲ್ಲೋ ಒಂದು ಕಡೆ ವಿರೋಧಿಸಿರಬಹುದು. ಬಹುಶಃ ತಮ್ಮ ಧಾರ್ಮಿಕ, ಆಧ್ಯಾತ್ಮಿಕ ಮತ್ತು ಭೌತಿಕ ಮೌಲ್ಯಗಳು ಭ್ರಷ್ಟವಾಗುವ ಭಯವೂ ಅವರನ್ನು ಕಾಡಿರಬಹುದು. ಹಾಗಾಗಿಯೇ ಯಾವುದೇ ಕೃತಿ-ಸ್ಮೃತಿಗಳಲ್ಲೂ ಸಮುದ್ರಲಂಘನದ ಬಗ್ಗೆ ತೀವ್ರವಾದ ಚರ್ಚೆ ನಡೆದಿಲ್ಲ.

ಆದರೆ ನಾವಿಂದು ೨೧ನೆಯ ಆಧುನಿಕ ಜಾಗತೀಕೃತ ಪ್ರಪಂಚದಲ್ಲಿದ್ದೇವೆ. ಮಠಗಳು, ದೇವಾಲಯಗಳು ತಮ್ಮ ಪಾರಂಪರಿಕ ಸಾಂಪ್ರದಾಯಿಕ ಸೊಗಸನ್ನಾಗಲೀ, ಸೊಗಡನ್ನಾಗಲೀ ಉಳಿಸಿಕೊಂಡಿಲ್ಲ. ಸಗಣಿಯಿಂದ ಸಾರಿಸಿದ ನೆಲ ಅಥವಾ ಕಲ್ಲು ಚಪ್ಪಡಿಯ ಪ್ರಾಂಗಣಗಳು ಇಂದು ಗ್ರಾನೈಟ್‌ಗಳಿಂದ ಫಳಫಳ ಹೊಳೆಯುತ್ತಿವೆ, ಹಣತೆಯ ದೀಪದ ಸ್ಥಾನವನ್ನು ಝಗಮಗಿಸುವವ ವಿದ್ಯುತ್ ದೀಪಗಳು ಆಕ್ರಮಿಸಿಕೊಂಡಿವೆ, ಸಂಗೀತಗಾರರ ಸುಮಧುರ ನಾದದ ಸ್ಥಾನದಲ್ಲಿ ಕ್ಯಾಸೆಟ್-ಸಿ.ಡಿಗಳು ಬಂದಿವೆ, ಅಮೇರಿಕದಲ್ಲಿರುವ ಕೃಷ್ಣ ಭಕ್ತ ಅಂತರ್ಜಾಲದಲ್ಲಿ ಉಡುಪಿ ಕೃಷ್ಣನನ್ನು ಪೂಜಿಸಬಹುದಾಗಿದೆ, ಅನೇಕ ಮಠಗಳು, ದೇವಾಲಯಗಳ ಜೀರ್ಣೋದ್ಧಾರಕ್ಕೆ ಅನಿವಾಸಿ ಭಾರತೀಯರ ಡಾಲರ್‌ಗಳು ಕಾರಣವಾಗಿವೆ. ಅನೇಕ ವಿದೇಶಗಳಲ್ಲೂ ಹಿಂದೂ ದೇವಾಲಯಗಳು, ಮಠಗಳು ತಮ್ಮ ಶಾಖೆಗಳನ್ನು ಪ್ರಾರಂಭಿಸಿವೆ. ಇಂತಹ ಕಾಲಾವಧಿಯಲ್ಲಿ ಯಾವುದೇ ಸ್ವಾಮಿಗಳು ಸಮುದ್ರ ಯಾನ ಮಾಡುವುದರಲ್ಲಿ ತಪ್ಪೇನಿದೆ ಎಂದು ಪ್ರಾಜ್ಞರು ತಿಳಿಸಬೇಕಾಗಿದೆ. ಸುಗುಣೇಂದ್ರ ತೀರ್ಥರು ವಿದೇಶಕ್ಕೆ ಹೋದದ್ದು ತಮ್ಮ ಮತ ಪ್ರಚಾರಕ್ಕಾಗಿಯೇ ಹೊರತು ವಿಲಾಸಕ್ಕಲ್ಲವಲ್ಲ. ಅಥವಾ ಅವರು ಯಾರಿಗೂ ಹೇಳದೆ ವಿದೇಶಕ್ಕೆ ಹೋಗಿರಲೂ ಸಾಧ್ಯವಿಲ್ಲ. ಈಗ ಅವರ ವಿರುದ್ಧ ಕತ್ತಿ ಮಸೆಯುತ್ತಿರುವವರು ಆಗಲೇ ಅವರಿಗೆ ಬುದ್ಧಿವಾದ ಹೇಳಿ ತಡೆಯಬಹುದಿತ್ತಲ್ಲವೇ?

ಕರ್ನಾಟಕದ ಮಟ್ಟಿಗೇ ಹೇಳುವುದಾದರೆ ಮಧ್ವ ಮತಸ್ಥರಲ್ಲಿ ಅನೇಕ ಜ್ಞಾನ ಪ್ರತಿಭೆಗಳು ಹೊರಹೊಮ್ಮಿವೆ. ಆಸ್ತಿಕ ಪರಂಪರೆ ಇರಲಿ, ನಾಸ್ತಿಕ ಪರಂಪರೆ ಇರಲಿ ಮಧ್ವ ಮತದವರ ಕೊಡುಗೆ ಇದ್ದೇ ಇದೆ. ಸಾಮುದಾಯಿಕ ದೃಷ್ಟಿಯಿಂದ ನೋಡುವುದಾದರೆ, ಮಧ್ಯಮ ವರ್ಗದ ಮಧ್ವ ಮತಸ್ಥರು ಆಧುನಿಕತೆಯನ್ನು ಅಪ್ಪಿಕೊಂಡು ಮುನ್ನಡೆಯುತ್ತಿರುವುದು ಸ್ಪಷ್ಟವಾಗಿದೆ. ಮಧ್ವರ ಚಿಂತನೆಯನ್ನು ವೈಜ್ಞಾನಿಕ ದೃಷ್ಟಿಕೋನದಿಂದ ವಿಶ್ಲೇಷಿಸುವ ಪ್ರಯತ್ನಗಳೂ ನಡೆಯುತ್ತಿವೆ. ಆದರೆ ದುರದೃಷ್ಟವಶಾತ್ ಮಧ್ವ ಮತವನ್ನು ನಿಯಂತ್ರಿಸುವ ಮಠಮಾನ್ಯಗಳು ಸಮುದಾಯವನ್ನು ಆಧುನಿಕತೆಯಿಂದ ಪ್ರಾಚೀನತೆಗೆ ಕೊಂಡೊಯ್ಯುತ್ತಿವೆ. ಈ ವಿದ್ಯಮಾನವನ್ನು ಅನೇಕ ಮಠಗಳ ಆಚರಣೆಗಳಲ್ಲೂ, ಸಂಪ್ರದಾಯದ ಹೆಸರಿನಲ್ಲಿ ನಡೆಸುವ ಆಚಾರಗಳಲ್ಲೂ ಕಾಣಬಹುದಾಗಿದೆ. ಎಲ್ಲೋ ಒಂದೆಡೆ ಸಮುದಾಯವನ್ನು ತಮ್ಮ ಹಿಡಿತದಿಂದ ಮುಕ್ತಿಗೊಳಿಸದಿರುವ ತಂತ್ರವನ್ನು ಇಲ್ಲಿ ಕಾಣಬಹುದಾಗಿದೆ. ಹಾಗಾಗಿಯೇ ವಿದ್ಯಾಭೂಷಣರಂತಹ ಪ್ರತಿಭಾವಂತ ಸಂಗೀತಗಾರರೂ ಉಚ್ಚಾಟಿತರಾಗುತ್ತಾರೆ.

ಇಡೀ ಪ್ರಕರಣವನ್ನು ಗಮನಿಸಿದಾಗ ಧಾರ್ಮಿಕ, ಸಾಂಪ್ರದಾಯಿಕ ಕಾರಣಗಳಿಗಿಂತಲೂ, ವೈಯಕ್ತಿಕ ಕಾರಣಗಳು ಎದ್ದುಕಾಣುತ್ತವೆ.

ಸುಗುಣೇಂದ್ರ ತೀರ್ಥರಂಥವರು ದೂಷಿತರಾಗುತ್ತಾರೆ. ಸಮುದ್ರ ಲಂಘನ ಮಾಡಿದ ಆಂಜನೇಯ ಪ್ರಾಣದೇವರಾಗಬಹುದಾದರೆ, ಲಂಕೆಗೆ ಸಮುದ್ರದ ಮೂಲಕವೇ ಪಯಣಿಸಿದ ರಾಮ ಆದರ್ಶನಾಗಬಹುದಾದರೆ, ಸಮುದ್ರ ತಳದಲ್ಲಿ ಮಥುರಾ ಪಟ್ಟಣ ನಿರ್ಮಿಸಿದ ಕೃಷ್ಣ ಆರಾಧ್ಯ ದೈವನಾಗಬಹುದಾದರೆ, ಸುಗುಣೇಂದ್ರರಾಗಲೀ ಇತರ ಸ್ವಾಮಿಗಳಾಗಲೀ ಧರ್ಮ ಕಾರ್ಯಾರ್ಥವಾಗಿ ಸಮುದ್ರ ಯಾನ ಮಾಡುವುದು ಅಕ್ಷಮ್ಯ ಅಪರಾಧ ಹೇಗಾಗುತ್ತದೆ.? ಹಿಂದೂ ಧರ್ಮದ ಪುನರುತ್ಥಾನದಲ್ಲಿ ತಮ್ಮದೇ ಆದ ಕೊಡುಗೆ ನೀಡಿದ ವಿವೇಕಾನಂದರನ್ನು ಮಧ್ವ ಮಠಾಧಿಪತಿಗಳು ಗೌರವಿಸುವುದಿಲ್ಲವೇ? ಅಥವಾ ಪೇಜಾವರರಿಗೆ ಅತ್ಯಂತ ಪ್ರಿಯವಾದ, ಸಂಘ ಪರಿವಾರದ ದೃಷ್ಟಿಯಲ್ಲಿ ದೈವ ಸ್ವರೂಪಿಯಾದ, ವಿವೇಕಾನಂದರೂ ನಿರ್ಲಕ್ಷಿತರಾಗುತ್ತಾರೆಯೇ?

ಬಹುಶಃ ಇಡೀ ಪ್ರಕರಣದ ಹಿಂದೆ ಧಾರ್ಮಿಕ, ಸಾಂಪ್ರದಾಯಿಕ ಮೌಲ್ಯಗಳಿಗಿಂತಲೂ, ಇತರ ಕಾರಣಗಳೇ ಪ್ರಧಾನವಾಗಿವೆ ಎಂದು ಹೇಳಬಹುದು. ಪರ್ಯಾಯ ಪೀಠವನ್ನು ಅಲಂಕರಿಸುವುದೆಂದರೆ ಎರಡು ವರ್ಷಗಳ ಅಧಿಕಾರ ನಡೆಸುವುದೆಂದೇ ಅರ್ಥ. ಕರ್ನಾಟಕದ ರಾಜಕೀಯ ಪ್ರಹಸನದಂತೆ. ಇಲ್ಲಿ ಪ್ರಕಟಗೊಳ್ಳುವ ಅನೇಕ ಆರ್ಥಿಕ ಸಮಸ್ಯೆಗಳು ಆಗಾಗ್ಗೆ ಅಷ್ಟ ಮಠಗಳಲ್ಲಿ ವಿವಾದಗಳನ್ನು ಹುಟ್ಟುಹಾಕುತ್ತಿರುತ್ತವೆ. ಅಪಾರ ಐಶ್ವರ್ಯ ಮತ್ತು ಸ್ಥಿರಾಸ್ತಿಗಳನ್ನು ಹೊಂದಿರುವ ಎಲ್ಲಾ ಧಾರ್ಮಿಕ ಮಠಗಳಲ್ಲೂ ಈ ವಿದ್ಯಮಾನಗಳನ್ನು ಕಾಣಬಹುದು. ಮಧ್ವ ಸಂಪ್ರದಾಯದ ಉತ್ತರಾಧಿಮಠದಲ್ಲೂ ಇದೇ ರೀತಿಯ ವ್ಯಾಜ್ಯಗಳು ಕಂಡುಬಂದಿವೆ. ಇದೀಗ ವಾಲ್ಮೀಕಿ ಮಠದಲ್ಲೂ ಇದೇ ಸಮಸ್ಯೆ ತಲೆದೋರಿದೆ. ಕೆಲವು ವರ್ಷಗಳ ಹಿಂದೆ ಒಕ್ಕಲಿಗರ ಮಠ ಇಬ್ಭಾಗವಾದದ್ದನ್ನೂ ಇಲ್ಲಿ ಸ್ಮರಿಸಬಹುದು.

ಇಡೀ ಪ್ರಕರಣವನ್ನು ಗಮನಿಸಿದಾಗ, ಎಲ್ಲೋ ಒಂದು ಕಡೆ ಧಾರ್ಮಿಕ, ಸಾಂಪ್ರದಾಯಿಕ ಕಾರಣಗಳಿಗಿಂತಲೂ, ವೈಯಕ್ತಿಕ ಕಾರಣಗಳು ಎದ್ದುಕಾಣುತ್ತವೆ. ಆಧುನಿಕ ಯುಗದಲ್ಲಿ ಯಾವುದೇ ಧಾರ್ಮಿಕ ಪರಂಪರೆ ತನ್ನ ಅಸ್ತಿತ್ವ ಮತ್ತು ಅಸ್ಮಿತೆಗಳನ್ನು ರಕ್ಷಿಸಿಕೊಳ್ಳಲು ಪ್ರಾಚೀನತೆಗೆ ತೆರಳುವುದು ತರ್ಕಬದ್ಧವಾಗುವುದಿಲ್ಲ. ಸಂಪ್ರದಾಯಗಳು ಮತ್ತು ಆಚಾರಗಳು ಕಾಲಕಾಲಕ್ಕೆ ಸಮುದಾಯದ ಅರಿವಿಗೆ ಬಾರದಂತೇ ಬದಲಾಗುತ್ತಿರುತ್ತವೆ. ಆಗುತ್ತಲೂ ಇವೆ. ಆದರೆ ಈ ವಾಸ್ತವವನ್ನು ಒಪ್ಪಿಕೊಳ್ಳುವುದು ಕಷ್ಟವಾದಾಗ ಪಟ್ಟ ಭದ್ರ ಹಿತಾಸಕ್ತಿಗಳು ಕೃತಿ-ಸ್ಮೃತಿಗಳಿಗೆ ಮೊರೆ ಹೋಗುವುದನ್ನು ನಾವು ಕಾಣುತ್ತಿದ್ದೇವೆ. ಅಷ್ಟ ಮಠಗಳಲ್ಲಿನ ವಿವಾದವನ್ನೂ ಇದೇ ಹಿನ್ನೆಲೆಯಲ್ಲೇ ಗ್ರಹಿಸಬೇಕಾಗುತ್ತದೆ. □

ಸಂವಾದ

ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಚೇರಿಯಲ್ಲಿ ಒಮ್ಮೆ ವಿಚಾರಿಸಿ – ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಚೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದ ವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

–ವ್ಯವಸ್ಥಾಪಕರು

ಪುಸ್ತಕ ಅವಲೋಕನ

ಕನ್ನಡಕ್ಕೆ ಕಾಲಿರಿಸಿದ 'ಮೂಲಮಾಧ್ಯಮಕಕಾರಿಕ'

ನಾಗಾರ್ಜುನ ಕೇವಲ ವೈದಿಕ ದರ್ಶನಗಳ ಮಿತಿ ಮತ್ತು ಸಮಸ್ಯೆಗಳನ್ನಷ್ಟೇ ವಿವರಿಸದೆ, ತನ್ನ ಮನೆಯೊಳಗಿನ ಶತ್ರುಗಳಾದ ಸೌತಾಂತ್ರಿಕರು, ಸರ್ವಸ್ತಿವಾದಿಗಳು, ಕ್ಷಣವಾದಿಗಳ ಮುಂತಾದವರ ದರ್ಶನಗಳ ಬಿಕ್ಕಟ್ಟುಗಳನ್ನು ತನ್ನ 'ಕಾರಿಕ'ದಲ್ಲಿ ಅನಾವರಣಗೊಳಿಸಿದ. ಈ ಕೃತಿಯ ಇಪ್ಪತ್ತೇಳು ಅಧ್ಯಾಯಗಳು 'ಪರೀಕ್ಷೆ'ಗೆ ಬದ್ಧವಾಗಿವೆ. ಪ್ರತ್ಯಯ, ಗತಾಗತ, ಸ್ಕಂದ ಧಾತು, ರಾತ-ರಕ್ತ, ಕರ್ಮ, ಸ್ವಭಾವ, ಆತ್ಮ, ಕಾಲ, ಸಾಮಗ್ರಿ, ಆರ್ಯಸತ್ಯ ಇತ್ಯಾದಿಗಳನ್ನು ಪರೀಕ್ಷೆಗೆ ಗುರಿಪಡಿಸುವ ನಾಗಾರ್ಜುನನ ಉದ್ದೇಶ ಇದರಿಂದ ನಿಚ್ಚಳವಾಗುತ್ತದೆ. ಉಪನಿಷತ್ತುಗಳು ಆತ್ಮವನ್ನು ಅವಿನಾಶಿಯೆಂದು, ಮೋಕ್ಷವನ್ನು ಗುರಿಯೆಂದು, ಕರ್ಮವನ್ನು ಅನಿವಾರ್ಯವೆಂದು, ಸಂಸಾರವನ್ನು ಬಂಧನವೆಂದು ಬಿಂಬಿಸಿದವು. ಇಂತಹ 'ಅನರ್ಥೈಕೆ'ಗಳನ್ನು ನಾಗಾರ್ಜುನ ಕಾರಿಕೆಯೆಂಬ ಬಡಿಗೆಯಿಂದ ಘಟ್ಟಿಸಿ ಛಿದ್ರಗೊಳಿಸುತ್ತಾನೆ.

ಡಾ|| ಬಿ.ಸಿ. ನಾಗೇಂದ್ರ ಕುಮಾರ್

ಆಕಾರ ನಿರಾಕಾರವೆಂಬ ಪ್ರಭೇದಂಗಳು
ಒಂದು ಆಹ್ವಾನ ಒಂದು ವಿಸರ್ಜನೆ
ಒಂದು ವ್ಯಾಕುಳ ಒಂದು ನಿರಾಕುಳ
ಉಭಯ ಕುಳರಹಿತ ಗುಹೇಶ್ವರ

ಇದು ಅಲ್ಲಮ ನೀಡಿದ ಪಂಥಾತೀತವಾದ ಲೋಕ ವಿವರಣೆ. ನಮ್ಮ ಸುತ್ತಲಿನ ಲೋಕವನ್ನು ಗ್ರಹಿಸಬೇಕಾಗಿರುವ ಸರಿಯಾದ ಕ್ರಮವನ್ನು ಮತ್ತು ನಾವು ಲೋಕಗ್ರಹಿಕೆಯಲ್ಲಿ ಮಾಡುತ್ತಿರುವ ಸಾಮಾನ್ಯ ತಪ್ಪನ್ನು ಪ್ರಭು ಇಲ್ಲಿ ವಿವರಿಸಿದ್ದಾನೆ. ಈ ವಚನದ ವಿಶೇಷವೆಂದರೆ ನಮಗೆ ಈಗ ಅತ್ಯಂತ ಕ್ಲಿಷ್ಟವೆನಿಸುತ್ತಿರುವ ಈ ಸಂಗತಿಯನ್ನು ಸರಳಗೊಳಿಸಿ ನುಡಿಯಲು ಬೇಕಾಗುವ ಪರಿಭಾಷೆಯನ್ನು ಈ ವಚನದಲ್ಲಿ ಕನ್ನಡದಲ್ಲಿ ಸಿದ್ಧಪಡಿಸಲಾಗಿದೆ. ಇದು ಒಂದು ಭಾಷೆಯ ಸಾಮರ್ಥ್ಯವನ್ನೇ ವಿಸ್ತರಿಸಿರುವ ದೊಡ್ಡ ಪ್ರಯತ್ನ. ಸಾಮಾನ್ಯವಾಗಿ ನಾವು ಲೋಕವನ್ನು ಅವಳಿ ವೈರುಧ್ಯಗಳಲ್ಲಿ ಗ್ರಹಿಸಿ ತಪ್ಪಾಗಿ ನಡೆದುಕೊಳ್ಳುತ್ತೇವೆ. ಎದುರಿಗೆ ಕಂಡ ಆಕಾರಗಳನ್ನೆಲ್ಲ ಸ್ವತಂತ್ರ ಶಾಶ್ವತ ವಸ್ತುಗಳೆಂದು ಭ್ರಮಿಸಿಬಿಡುತ್ತೇವೆ. ಅವುಗಳು ಶಾಶ್ವತ 'ನಿಜ'ಗಳೆಂದು ಭಾವಿಸಿ ಸ್ವೀಕರಿಸಿಬಿಡುತ್ತೇವೆ, ಆಹ್ವಾನಿಸುತ್ತೇವೆ. ಬದಲಾಗುವ ಅದನ್ನು ಕಂಡು ವ್ಯಾಕುಲಗೊಳ್ಳುತ್ತೇವೆ. ಅಥವಾ ಎದುರಿಗೆ ಸಂಭವಿಸುತ್ತಿರುವ ಮತ್ತು ಸಂಭವಿಸಬಹುದಾದ ಸಂಗತಿಗಳನ್ನು ಅವು ಶಾಶ್ವತವಾಗಿ 'ಇಲ್ಲ'ವೆಂದು ಭಾವಿಸಿ, ವಿಸರ್ಜಿಸಿ ಕೈ ತೊಳೆದುಕೊಳ್ಳುತ್ತೇವೆ. ಸುಖ-ದುಃಖಗಳನ್ನು ಉಂಟುಮಾಡುವ (ಈ ಎರಡನ್ನೂ ಸೇರಿಸಿ ಬೌದ್ಧಧರ್ಮದಲ್ಲಿ 'ದುಃಖ'ವೆಂದು ಸೂಚಿಸಲಾಗಿದೆ) ನಮ್ಮೆದುರಿಗೆ ಜರುಗುತ್ತಿರುವ, ಲೋಕಸಮಸ್ತವನ್ನೂ ಹಾಗೆ ನಿರಾಕರಿಸಿ ನಿರಾಕುಳಗೊಳ್ಳಲಾಗದು. ಆಕಾರ ನಿರಾಕಾರ ಎರಡೂ ಅಲ್ಲದ, ಆಹ್ವಾನ-ವಿಸರ್ಜನ ಎರಡೂ ಅಲ್ಲದ ಈ ಅವಳಿ ವೈರುದ್ಧ್ಯಗಳನ್ನು ಬಿಟ್ಟು ಸರಿಯಾದ ಲೋಕಸತ್ಯವನ್ನು (ಗುಹೇಶ್ವರನ್ನು) ಕಟ್ಟಿಕೊಳ್ಳುವ ಕ್ರಮವನ್ನು ಅಲ್ಲಮ ಕುಳರಹಿತನಾಗಿ ನೀಡಿದ್ದಾನೆ. ಅವಳಿ ವೈರುದ್ಧ್ಯಗಳನ್ನು ಬಿಟ್ಟುಕೊಟ್ಟರೆ ಉಳಿವ 'ಯಾನ'ವನ್ನು ಮಾತ್ರ ಸೂಚಿಸಿದ್ದಾನೆ. ಇದು ಬುದ್ಧ ನೀಡಿದ, ನಾಗಾರ್ಜುನ ವಿವರಿಸಿದ ಮತ್ತು ಅಲ್ಲಮ ಸೂಚಿಸುತ್ತಿರುವ ಮಾಧ್ಯಮ ಮಾರ್ಗ.

ಬುದ್ಧ ಲೋಕವನ್ನು ಇದೆ-ಇಲ್ಲ ಎಂಬ ಎರಡು ತುದಿಗಳಿಂದ ವಿವರಿಸದೆ ಅದನ್ನು ನಿರಂತರವಾಗಿ ಹರಿಯುತ್ತಿರುವ ಪ್ರವಾಹವೆಂದು ವಿವರಿಸಿದ್ದಾನೆ. ಲೋಕದಲ್ಲಿ 'ಆಗಿ ಇರುವುದು' ಯಾವುದೂ ಇಲ್ಲ; ಇಲ್ಲವೂ 'ಆಗುತ್ತಲೇ' ಇರುತ್ತದೆ. ಆದರೆ ಸಾಮಾನ್ಯ ಮಾನವ ಮತಿ ಎಲ್ಲದರಲ್ಲೂ ಶಾಶ್ವತವಾದ ಒಂದನ್ನು ಹುಡುಕುತ್ತಿರುತ್ತದೆ. ಈ ಹುಡುಕಾಟ ಎಲ್ಲದಕ್ಕೂ ಒಂದು ನಿಶ್ಚಿತ ಪ್ರಾರಂಭವನ್ನು ಶಾಶ್ವತ ಅಂತ್ಯವನ್ನೂ ಕಂಡುಕೊಳ್ಳಲು ಹಾತೊರೆಯುತ್ತದೆ. ಈ ನಿಲುವು ಅಂತಿಮವಾಗಿ ದುಃಖವಾಗಿ ಪರಿಣಮಿಸುತ್ತದೆ. ಏಕೆಂದರೆ ಸದಾ ಬದಲಾಗುತ್ತಲೇ ಇರುವುದನ್ನು, 'ಹಾಗೇ ಇದೆ' ಎಂದುಕೊಂಡು ವ್ಯವಹರಿಸಿದಾಗ ನಿರಾಸೆಯಾಗಲೇಬೇಕು. ಈ ದುಃಖಕ್ಕೆ ಪರಿಹಾರವೆಂದರೆ ಲೋಕವನ್ನು ಸರಿಯಾಗಿ ಅದು ಇರುವಂತೆಯೇ ಎಂದರೆ ಸದಾ ಹರಿಯುತ್ತಿರುವ ಪ್ರವಾಹವೆಂದು ಭಾವಿಸಬೇಕು. ಹಾಗೆ ಭಾವಿಸಿದಾಗ ವ್ಯಾಕುಳವಾಗಲಿ ನಿರಾಕುಳವಾಗಲೀ ಉಂಟಾಗದು. ಇದು ಯಾವುದೇ ಧರ್ಮದ ಅಥವಾ ಪಂಥಬದ್ಧವಾದ ವಿವರಣೆ ಅಲ್ಲ. ನಾವೆಲ್ಲಾ ಇರಬೇಕಾದ್ದೇ ಹಾಗೆ. ಈ ಮಧ್ಯಮ ಮಾರ್ಗವನ್ನು ಪೂರ್ಣ ಪ್ರಮಾಣದ ಚಿಂತನಾ ಪ್ರಸ್ಥಾನವನ್ನಾಗಿ ರೂಪಿಸಿಕೊಟ್ಟವನು ದಾರ್ಶನಿಕ ನಾಗಾರ್ಜುನ. ಕನ್ನಡದ ನೆಲದವನು. ಇಂದಿಗೂ ವಿಶ್ವದ ಮಹಾನ್ ದಾರ್ಶನಿಕರಲ್ಲೊಬ್ಬ.

ಧರ್ಮಗಳ ನೆಲೆಯಿಂದ ಪ್ರೇರಿತವಾದ ಜ್ಞಾನ ಮೀಮಾಂಸೆಗಳು 'ಗೊತ್ತಿರುವುದರ' ಕಡೆಯಿಂದ 'ಗೊತ್ತಿಲ್ಲದ್ದರ' ಕಡೆಗೆ ಚಲಿಸಿದರೆ, ವಿಜ್ಞಾನ 'ಗೊತ್ತಿಲ್ಲದ್ದ'ರಿಂದ 'ಗೊತ್ತಾಗಿಸಿಕೊಳ್ಳುವ'ತ್ತ ಸಂಚಲನೆ ಮಾಡುತ್ತದೆ. ಧರ್ಮದೃಷ್ಟಿಗೆ 'ಎಲ್ಲವೂ ತಿಳಿದಿದೆ'ಯೆಂಬ ಭ್ರಮೆ ಸ್ಥಾಯಿಯಾದದು. ಇವುಗಳಲ್ಲಿ ಎಲ್ಲ ಪ್ರಶ್ನೆಗಳಿಗೂ ಉತ್ತರವಿರುತ್ತದೆ. ಸಿದ್ಧಗೊಳ್ಳದೇ ಇರುವ ಬಿಕ್ಕಟ್ಟುಗಳಿಗೂ ಪರಿಹಾರವಿರುತ್ತದೆ. ತನ್ನ ತಿಳುವಳಿಕೆ ಪ್ರಶ್ನಾತೀತವೆಂಬ ದಾರ್ಷ್ಟ್ಯ ಇವುಗಳದ್ದು. ಹೀಗಾಗಿ ಸದಾ ಯಜಮಾನಿಯ ರಾಜಕೀಯದೊಂದಿಗೆ ಬೆರೆತಿರುತ್ತವೆ. ವಿಜ್ಞಾನ ಲೋಕರಹಸ್ಯಗಳನ್ನು "Unknown to known" ವಿಧಾನದಲ್ಲಿ ಬೇಧಿಸುತ್ತಾ ಹೋದಂತೆ ಅದೂ ಯಾಜಮಾನ್ಯದ ನೆಲಯನ್ನು ಸ್ಥಾಪಿಸಿಬಿಡುತ್ತದೆ. ಇದೊಂದು ಬಗೆಯ ಪಾಂಥಿಕ ಕುರುಡು. ಯಾವುದೇ ರಚನೆ ಅಂತಿಮವಾಗಿ ತನ್ನ ಭಜನೆಯಲ್ಲಿ ತಾನೆ ಮುಳುಗುವ ವ್ಯಾಧಿಗೆ ಸಿಲುಕುತ್ತದೆ. ಹೀಗಾಗಿ ಯಾವುದೇ ರಚನೆಯನ್ನು ವಿರಚನೆ ಮಾಡುವ ವಿರಚನೆಯನ್ನೇ ಪುನಾರ್ರಚಿಸುವ ಆವರ್ತನ ಚಿಂತನೆಯೆ ತತಾಗತ ಬುದ್ಧನು ವಿವರಿಸಿದ ಶೂನ್ಯತತ್ವ.

ಕ್ರಿಸ್ತಪೂರ್ವ ೫ನೇ ಶತಮಾನದಲ್ಲಿ ಬಾಳಿದ ಬುದ್ಧನಿಗೆ ಸುಮಾರು ಕ್ರಿಸ್ತಶಕ ಎರಡನೇ ಶತಮಾನದಲ್ಲಿ ಜೀವಿಸಿದ್ದ ನಾಗಾರ್ಜುನನ ಕಾಲಕ್ಕೂ ಅಂತರವಿದೆ. ನಾಗಾರ್ಜುನ ಬುದ್ಧನಿಂದ ವಿವರಿಸಲ್ಪಟ್ಟ ಮಾಧ್ಯಮಕ ಫಿಲಾಸಫಿಯನ್ನು ತನ್ನ 'ಕಾರಿಕಾ'ದಲ್ಲಿ ವ್ಯಾಖ್ಯಾನಿಸಿದ. ನಟರಾಜ ಬೂದಾಳ ಅವರು ಈ ತತ್ವದ ಸಾರವನ್ನು ಕನ್ನಡೀಕರಿಸಿದ್ದಾರೆ.

ಇಪ್ಪತ್ತನೆ ಶತಮಾನದ ಜ್ಞಾನ ಪ್ರಸ್ಥಾನಗಳ ಮಿತಿಯೆಂದರೆ ಪಾಶ್ಚಾತ್ಯ ಚಿಂತನಾ ವಿಧಾನಗಳನ್ನು ಪ್ರಮಾಣವೆಂದು ನಂಬಿದ್ದು. ಸಾಹಿತ್ಯ ಕಲೆ. ವಿಜ್ಞಾನ ಮುಂತಾದ ಎಲ್ಲ ವಿಷ

ನಾಗಾರ್ಜುನನ
ಮೂಲಮಾಧ್ಯಮಕಕಾರಿಕ
ಲೇ: ಎಸ್. ನಟರಾಜ ಬೂದಾಳು
ಬೆಲೆ: ರೂ. ೧೫೦/-
ಪ್ರಕಾಶಕರು: ಅಭಿನವ ಪ್ರಕಾಶನ
ಬೆಂಗಳೂರು

ಯಗಳಿಗೂ ಈ ಮಾತು ಅನ್ವಯಿಸುತ್ತದೆ. ಪೌರ್ವಾತ್ಯ ಚಿಂತನಾಧಾರೆಗಳ ಅವಜ್ಞೆಗೆ ಕಾರಣಗಳು ಹಲವಾರು ಇರಬಹುದು. ಆ ಚರ್ಚೆ ಇಲ್ಲಿ ಮುಖ್ಯವಲ್ಲ. ಈ ಗ್ಲಾನಿಯಿಂದ ಬಿಡಿಸಿಕೊಳ್ಳುವ ಕರ್ಮಗಳನ್ನು ಇಂಗ್ಲಿಷ್ ಬರಹಗಾರರಾದ ಎಡ್ವರ್ಡ್‌ಸೈದ್‌ನಿಂದ ತೊಡಗಿ ಕನ್ನಡದಲ್ಲಿ ಡಿ.ಆರ್. ನಾಗರಾಜ್, ಯು.ಆರ್. ಅನಂತಮೂರ್ತಿ ಮುಂತಾದವರು ಹುಡುಕಿದ್ದಾರೆ. ಈ ಮಾರ್ಗದ ಮುಂದುವರಿಕೆಯಾಗಿ ಎಸ್. ನಟರಾಜ ಬೂದಾಳರ 'ಮೂಲ ಮಾಧ್ಯಮಕ ಕಾರಿಕೆ' ಕೃತಿಯು ಹೊಸ 'ದೇಸಿ ಕಣ್ಣಾಗಿ' ಮೂಡಿಬಂದಿದೆ.

ಬುದ್ಧ, ಅಲ್ಲಮ, ನಾಗಾರ್ಜುನ ಮುಂತಾದವರು ದೇಶಿಯೂ ಅಲ್ಲ; ವೈಶ್ವಿಕವೂ ಅಲ್ಲ; ಯಾವ ವಿಶೇಷಣಗಳಿಗೂ ನಿಲುಕದವರು. ಎಲ್ಲಾ ದ್ವಿಮಾನಗಳನ್ನು ಭಂಗಗೊಳಿಸಿದಂಥವರನ್ನು ಮತ್ತೆ ಅವಳಿ ವೈರುಧ್ಯಗಳಿಗೆ ಅಂಟಿಸುವುದು ಸೂಕ್ತವಲ್ಲ. ಈ ಎಲ್ಲಾ ಸೂಕ್ಷ್ಮಗಳೊಂದಿಗೆ ಬೂದಾಳು ಅವರು ಬುದ್ಧ-ನಾಗಾರ್ಜುನರ ಚಿಂತನೆಯ ಸಾರವನ್ನು ಕನ್ನಡದ ಕಣ್ಣಿನಲ್ಲಿ ದರ್ಶಿಸಿದ್ದಾರೆ. ನಾಗಾರ್ಜುನ ತನ್ನ ಕಾಲದಲ್ಲಿ ಹೇಗೆ ಬುದ್ಧನ ಚಿಂತನೆಯನ್ನು ಪುನಃ ವಿವರಿಸದೆ ಮರುಚಿಂತನೆಗೆ ಗುರಿಪಡಿಸಿದನೊ ಹಾಗೆಯೇ ನಟರಾಜ್ ಸಹ ನಿರಂತರವಾಗಿ ಪ್ರವಹಿಸುತ್ತಿರುವ ವರ್ತಮಾನದಲ್ಲಿ ಈ ಇಬ್ಬರ ಮೂಲಕ ಹರಿದು ಬಂದ 'ಕಾರಿಕೆ'ಯನ್ನು ವ್ಯಾಖ್ಯಾನಿಸಿದ್ದಾರೆ.

ತತ್ವಜ್ಞಾನ, ವಿಜ್ಞಾನ, ಶಾಸ್ತ್ರ, ಕಲೆಗಳು ಲೋಕವನ್ನು ವಿವರಿಸಲು ತಮ್ಮದೇ ಆದ ಕ್ರಮವನ್ನು ಅನುಸರಿಸುತ್ತವೆ; ಹಾಗೂ ತಂತಮ್ಮ ಕ್ರಮಗಳೆ ಆತ್ಯಂತಿಕವೆಂದು ಭಾವಿಸುತ್ತವೆ. ಜ್ಞಾನ ಮೀಮಾಂಸೆಗಳು ಅನುಸರಿಸುವ ವಿಧಾನಗಳ ಮಿತಿಯನ್ನು ಒಡೆದು ಹಾಕುವ ಬಗೆ 'ಮಾಧ್ಯಮಕ ಕಾರಿಕೆ'ಯ ಅಂತಹಃ ಸತ್ವ ಎನ್ನಬಹುದು. 'ಮಾಧ್ಯಮಕ ಮಾರ್ಗ' ಎಂಬುದು ಸಮಚಿತ್ತದ ದೃಷ್ಟಿಕೋನ. ಹೀಗೇ ನೋಡಬೇಕೆನ್ನುವುದಕ್ಕಿಂತ, ಹೀಗೂ ನೋಡಬಹುದೆಂಬ, ಹೀಗೇಕೆ ನೋಡಬೇಕೆಂಬ, ಹೀಗೇಕೆ ನೋಡಬಾರದೆಂಬ ಪ್ರಶ್ನೆಗಳ ಭಿನ್ನ ಮಾರ್ಗಗಳ ಸಂಕಲನಾನುಸಂಧಾನ ಕಾರಿಕೆಯದು. ಪ್ರಮಾಣಗಳನ್ನು ಆಧರಿಸಿ ಲೋಕವನ್ನು ವಿವರಿಸಲು ದರ್ಶನಗಳು ಯತ್ನಿಸುತ್ತಿದ್ದಾಗ ನಾಗಾರ್ಜುನ, ಅಲ್ಲಮರು ಪ್ರಮಾಣಗಳನ್ನು ಅಪ್ರಮಾಣವೆಂದು ನಿರಾಕರಿಸಿಬಿಡುತ್ತಾರೆ. ಇದೇ ರೀತಿ ಡಾ॥ ನಿರಾಕುಳಗೊಳಿಸುವ ಪರಂಪರೆಯನ್ನು ಮುಂದುವರಿಸಿದ್ದಾರೆ.

ಪ್ರತಿಯೊಂದನ್ನೂ ಅವಳಿ ವೈರುಧ್ಯಗಳಲ್ಲಿ ನೋಡುವುದು ಇಂದಿನ ಜ್ಞಾನಶಿಸ್ತುಗಳ ಮಿತಿಯಾಗಿದೆ. ಸರ್ವವಿದಿತ ಸ್ಥಿತಿಯಲ್ಲಿ ನಿಂತು ವಿವರಿಸುವ ಜಗದ್ಗುರು, ಜ್ಯೋತಿಷಿಗಳ ದೃಷ್ಟಿಕೋನದ ಅಬ್ಬರದ ಎದುರಿಗೆ 'ಮಾಧ್ಯಮಕ ಕಾರಿಕೆ' ಭಿನ್ನವಾಗಿ, ಬಿಡುಗಡೆಯಾಗಿ ಪರ್ಯಾಯವಾಗಿ ಕಾಣಿಸುತ್ತದೆ. ನಾಗಾರ್ಜುನ ಕೇವಲ ವೈದಿಕ ದರ್ಶನಗಳ ಮಿತಿ ಮತ್ತು ಸಮಸ್ಯೆಗಳನ್ನಷ್ಟೇ ವಿವರಿಸದೆ, ತನ್ನ ಮನೆಯೊಳಗಿನ ಶತ್ರುಗಳಾದ (ಅಂದರೆ ಬೌದ್ಧ ಧರ್ಮದ ಒಳಗಿದ್ದೂ ಬುದ್ಧನ ಚಿಂತನೆಗಳನ್ನು ಸರಿಯಾಗಿ ಅರ್ಥೈಸದೆ ಇರುವ) ಸೌತಾಂತ್ರಿಕರು, ಸರ್ವಸ್ತಿವಾದಿಗಳು, ಕ್ಷಣವಾದಿಗಳು ಮುಂತಾದವರ ದರ್ಶನಗಳ ಬಿಕ್ಕಟ್ಟುಗಳನ್ನು ತನ್ನ 'ಕಾರಿಕೆ'ದಲ್ಲಿ ಅನಾವರಣಗೊಳಿಸಿದ. ಈ ಕೃತಿಯ ಇಪ್ಪತ್ತೇಳು ಅಧ್ಯಾಯಗಳು 'ಪರೀಕ್ಷೆ'ಗೆ ಬದ್ಧವಾಗಿವೆ. ಪ್ರತ್ಯಯ, ಗತಾಗತ, ಸ್ಕಂದ ಧಾತು, ರಾತ-ರಕ್ತ, ಕರ್ಮ, ಸ್ವಭಾವ, ಆತ್ಮ, ಕಾಲ, ಸಾಮಗ್ರಿ, ಆರ್ಯಸತ್ಯ ಇತ್ಯಾದಿಗಳನ್ನು ಪರೀಕ್ಷೆಗೆ ಗುರಿಪಡಿಸುವ ನಾಗಾರ್ಜುನನ ಉದ್ದೇಶ ಇದರಿಂದ ನಿಚ್ಚಳವಾಗುತ್ತದೆ. ಉಪನಿಷತ್ತುಗಳು ಆತ್ಮವನ್ನು ಅವಿನಾಶಿಯೆಂದು, ಮೋಕ್ಷವನ್ನು ಗುರಿಯೆಂದು, ಕರ್ಮವನ್ನು ಅನಿವಾರ್ಯವೆಂದು, ಸಂಸಾರವನ್ನು ಬಂಧನವೆಂದು ಬಿಂಬಿಸಿದವು. ಇಂತಹ 'ಅನರ್ಥೈಕೆ'ಗಳನ್ನು ನಾಗಾರ್ಜುನ ಕಾರಿಕೆಯೆಂಬ ಬಡಿಗೆಯಿಂದ ಘಟ್ಟಿಸಿ ಛಿದ್ರಗೊಳಿಸುತ್ತಾನೆ. ಎಲ್ಲಾ ಬಗೆಯ ದೃಷ್ಟಿವಾದಗಳಿಂದ ಬಿಡುಗಡೆ ಹೊಂದಲು ಬುದ್ಧನಿಂದ ವಿವರಿಸಲಾದ 'ಶೂನ್ಯತೆ'ಯೆಂಬ ಚಿಂತನಾ ದಂಡವನ್ನು ಪ್ರಯೋಗಿಸುತ್ತಾನೆ.

ಈ ಕೃತಿಯು ಯಾವುದೋ ಕಾಲದ ಕೃತಿಯೆನಿಸದೆ ಅತ್ಯಂತ ಸಮಕಾಲೀನವೆನಿಸುತ್ತದೆ. 'ಕಾಲ ಪರೀಕ್ಷೆ' ಅಧ್ಯಾಯನ್ನು ಓದುವಾಗ ಐನ್‌ಸ್ಟೈನ್‌ರ 'ಸಾಪೇಕ್ಷ ಸಿದ್ಧಾಂತ'ಕ್ಕೆ ಎದುರಾದಂತೆನಿಸುತ್ತದೆ. ಸ್ಟೀಫನ್ ಹಾಕಿಂಗ್‌ರ ಎ ಬ್ರೀಫ್ ಹಿಸ್ಟರಿ ಆಫ್ ಟೈಮ್' ಕೃತಿ ಕುರಿತು ಓದಿದ ನೆನೆಪಾಗುತ್ತದೆ. ಹೀಗಾಗಿ 'ಕಾರಿಕೆಯು ಒಂದು ತತ್ವಜ್ಞಾನ ಕೃತಿಯಲ್ಲ; ಸಾಹಿತ್ಯ ಕೃತಿಯೂ ಅಲ್ಲ' ಯಾವುದೇ ವರ್ಗೀಕರಣಕ್ಕೂ ನಿಲುಕದೆ ತಾನು ನಿರ್ವಹಿಸುವ ವಸ್ತುವಿನಂತೆಯೆ ನಿಗದಿತಗಳಿಗೆ ಒಳಪಡದಿರುವುದೇ ಈ ಕೃತಿಯ ವೈಶಿಷ್ಟ್ಯ. ಎಲ್ಲಾ ಪ್ರಮಾಣಗಳನ್ನು ಅಪ್ರಮಾಣವಾಗಿಸುವ

> **ಧರ್ಮಗಳ ನೆಲೆಯಿಂದ ಪ್ರೇರಿತವಾದ ಜ್ಞಾನ ಮೀಮಾಂಸೆಗಳು 'ಗೊತ್ತಿರುವುದರ' ಕಡೆಯಿಂದ 'ಗೊತ್ತಿಲ್ಲದ್ದರ' ಕಡೆಗೆ ಚಲಿಸಿದರೆ, ವಿಜ್ಞಾನ 'ಗೊತ್ತಿಲ್ಲದ್ದ'ರಿಂದ 'ಗೊತ್ತಾಗಿಸಿಕೊಳ್ಳುವ'ತ್ತ ಸಂಚಲನೆ ಮಾಡುತ್ತದೆ. ಧರ್ಮದೃಷ್ಟಿಗೆ 'ಎಲ್ಲವೂ ತಿಳಿದಿದೆ'ಯೆಂಬ ಭ್ರಮೆ ಸ್ಥಾಯಿಯಾದದು. ಇವುಗಳಲ್ಲಿ ಎಲ್ಲ ಪ್ರಶ್ನೆಗಳಿಗೂ ಉತ್ತರವಿರುತ್ತದೆ. ಸಿದ್ಧಗೊಳ್ಳದೇ ಇರುವ ಬಿಕ್ಕಟ್ಟುಗಳಿಗೂ ಪರಿಹಾರವಿರುತ್ತದೆ. ತನ್ನ ತಿಳಿವಳಿಕೆ ಪ್ರಶ್ನಾತೀತವೆಂಬ ದಾರ್ಷ್ಟ್ಯ ಇವುಗಳದ್ದು. ಹೀಗಾಗಿ ಸದಾ ಯಜಮನಿಯ ರಾಜಕೀಯದೊಂದಿಗೆ ಬೆರೆತಿರುತ್ತವೆ. ವಿಜ್ಞಾನ ಲೋಕರಹಸ್ಯಗಳನ್ನು "Unknown to known" ವಿಧಾನದಲ್ಲಿ ಬೇಧಿಸುತ್ತಾ ಹೋದಂತೆ ಅದೂ ಯಾಜಮಾನ್ಯದ ನೆಲೆಯನ್ನು ಸ್ಥಾಪಿಸಿಬಿಡುತ್ತದೆ. ಇದೊಂದು ಬಗೆಯ ಪಾಂಥಿಕ ಕುರುಡು. ಯಾವುದೇ ರಚನೆ ಅಂತಿಮವಾಗಿ ತನ್ನ ಭಜನೆಯಲ್ಲಿತಾನೆ ಮುಳುಗುವ ವ್ಯಾಧಿಗೆ ಸಿಲುಕುತ್ತದೆ. ಹೀಗಾಗಿ ಯಾವುದೇ ರಚನೆಯನ್ನು ವಿರಚನೆ ಮಾಡುವ ವಿರಚನೆಯನ್ನೇ ಪುನಾರ್ರಚಿಸುವ ಆವರ್ತನ ಚಿಂತನೆಯೆ ತತಾಗತ ಬುದ್ಧನು ವಿವರಿಸಿದ ಶೂನ್ಯತತ್ವ.**

ಬುದ್ಧ, ನಾಗಾರ್ಜುನರ ದಾರಿಯಲ್ಲಿ ಸಾಗಿದ ಬೂದಾಳರು ಒಂದು ಕಡೆ ಹೀಗೆ ಬರೆಯುತ್ತಾರೆ. ನಾಗಾರ್ಜುನ ಅನುಸರಿಸುವ ಪ್ರತಿಯೊಂದನ್ನೂ ಪರೀಕ್ಷಿಸುತ್ತಾ ಹೋಗುವ ಕ್ರಮವನ್ನು ವಿವರಿಸುವಾಗ "ಆಧುನಿಕ ವಿಜ್ಞಾನವೂ ಒಪ್ಪುವ ಕ್ರಮ" ಎಂದು ಬರೆಯುತ್ತಾರೆ. ಸಮಕಾಲೀನ ಸಂದರ್ಭದಲ್ಲಿನ ಚಿಂತನೆಗಳ ಮೇಲಿನ ವಿಜ್ಞಾನ ಯಾಜಮಾನ್ಯಕ್ಕೆ ಇದು ಸಣ್ಣ ನಿದರ್ಶನ.

ಮೂಲ ಮಾಧ್ಯಮಕ ಕಾರಿಕ ಕೃತಿಯನ್ನು ಪ್ರವೇಶಿಸಲು ಕೆಲವು ಸಾಧನಗಳು ಅನಿವಾರ್ಯ. ಇವುಗಳು ಕೃತಿ ರಚನೆಯ ಹಿಂದಿನ ತಾತ್ವಿಕೆಯಲ್ಲೂ ಪಾತ್ರವಹಿಸಿವೆ. ಅವುಗಳೆಂದರೆ ೧. ಕಾರಣ ಮೀಮಾಂಸೆ ೨. ಪರಿಣಾಮ ಮೀಮಾಂಸೆ ೩. ಪ್ರಕ್ರಿಯಾ ೪. ಪ್ರತೀತ್ಯ ಸಮುತ್ಪಾದ ೫. ಪ್ರಮಾಣ ನಿರಾಕರಣೆ ಮತ್ತು ೬ ಭಿನ್ನಾಭಿನ್ನ ನಿರಾಕರಣೆ.

ಕಾರಣ ಮೀಮಾಂಸೆ ಲೋಕ ವಿವರಣೆಗೆ ಆದಿಕಾರಣವೊಂದನ್ನು ಆಧರಿಸುತ್ತದೆ. ಪರಿಣಾಮ ಮೀಮಾಂಸೆ ಲೋಕಕ್ಕೊಂದು ನಿಶ್ಚಿತ ಅಂತ್ಯವುಂಟು ಎಂಬ ನಿಲುವನ್ನು ತಾಳುತ್ತದೆ. ಇವೆರಡು ಪರಿಕಲ್ಪನೆಗಳು ಜಡ ದೃಷ್ಟಿವಾದಿಗಳು ಅನುಸರಿಸುವಂಥವು. ಇಂತಹ ಕ್ರಮಗಳಿಂದ ಬಿಡುಗಡೆಯನ್ನು ಕಂಡುಕೊಳ್ಳುವ ವಿಧಾನಗಳಾಗಿ ಪ್ರಕ್ರಿಯಾ, ಪ್ರತೀತ್ಯ ಮುಂತಾದ ಮೇಲೆ ವಿವರಿಸಲಾದ ಚಿಂತನಾ ವಿಧಾನಗಳು ಒದಗಿ ಬಂದಿವೆ. ಪ್ರಕ್ರಿಯಾ ಮೀಮಾಂಸೆಯದು ಲೋಕದಲ್ಲಿನ ಎಲ್ಲವೂ ಚಲನಶೀಲವೆಂಬ ಗ್ರಹಿಕೆ. ಹೀಗಾಗಿ ಇದು ಕಾರಣ ಮತ್ತು ಪರಿಣಾಮಗಳ ವಿವರಣೆಗೆ ಹೋಗುವುದಿಲ್ಲ. ಈ ಮಾರ್ಗವನ್ನು ಅನುಸರಿಸಿದ ಕಾರಣದಿಂದಾಗಿ ಬುದ್ಧನಿಗೆ ಜಗತ್ತಿನ ಆದಿ ಅಂತ್ಯಗಳ ಬಗೆಗೆ ಮಹಾ ಮೌನವಹಿಸಲು ಸಾಧ್ಯವಾಯಿತು. ಪ್ರತೀತ್ಯ ಸಮುತ್ಪಾದವು ಯಾವುದಕ್ಕೂ ಸ್ವತಂತ್ರವೆಂದು ಗುರುತಿಸಬಹುದಾದ ಅಸ್ತಿತ್ವವಿರುವುದಿಲ್ಲ, ಪರಸ್ಪರ ಅವಲಂಬನೆಯಿಂದ ಮಾತ್ರ ಒಂದು ಸಂಬಂಧ ಭಂಗಗೊಂಡರೆ ಪರಿಣಾಮವೂ ಭಂಗಗೊಳ್ಳುತ್ತದೆ ಎಂದು ವಿವರಿಸುತ್ತದೆ.

ಕವಿಯ ಸೃಜನಶೀಲತೆ, ವಿದ್ವಾಂಸನ ಅಧ್ಯಯನದ ಹಸಿವು ಹಾಗೂ ಜ್ಞಾನಿಯ ಅಂತರ್ವೀಕ್ಷಣೆಯ ತ್ರಿವಳಿ ಗುಣಗಳು ನಟರಾಜ ಬೂದಾಳರಲ್ಲಿ ಸಹಜವಾಗಿ ಸಮ್ಮಿಳಿತಗೊಂಡಿವೆ. ಈ ಕೃತಿಯ ಪ್ರಸ್ತಾವನೆಯಲ್ಲಿ ಅವರು 'ಕಾರಿಕೆ'ಯ ಸೂಕ್ತ ಪ್ರವೇಶಕ್ಕೆ ಬಾಗಿಲುಗಳನ್ನು ತೆರೆದಿರಿಸಿದ್ದಾರೆ. ಆಧುನಿಕ ಚಿಂತನಾ ಪ್ರಸ್ಥಾನಗಳಲ್ಲಿ ಒಂದಾದ ಡಿಸ್‌ಕೋರ್ಸ್ ಪರಿಕಲ್ಪನೆಗೂ 'ಶೂನ್ಯತೆ'ಗೂ ಇರುವ ಗಾಢವಾದ ಸಂಬಂಧಗಳು, ಡೆರಿಡಾ ಮಂಡಿಸಿದ ಅವಕೇಂದ್ರೀಕರಣ ಪರಿಲ್ಪನೆ, ರಾಚನಿಕೋತ್ತರ ವಾದಿಗಳ ಕೇಂದ್ರಭಂಜಕ ವಿಧಾನ ಇತ್ಯಾದಿಗಳು ಶೂನ್ಯತತ್ವದೊಂದಿಗೆ ಹೊಂದಿರುವ ಜಲಭೂಮಿ ಸಂಬಂಧದ ನೆಲೆಗಳನ್ನು ವಿಸ್ತಾರವಾಗಿ ಪ್ರಸ್ತಾಪಿಸಿದ್ದಾರೆ.

ಕೆ.ವಿ. ನಾರಾಯಣ ಅವರ ಮುನ್ನುಡಿ ಮತ್ತು ಕೆ.ಟಿ. ಶಿವಪ್ರಸಾದ್ ಅವರ ಹಿನ್ನುಡಿಗಳು ಕಾರಿಕೆಯನ್ನು ಹೊಕ್ಕು ಹೊರಬರುವ ಕದಗಳಂತಿವೆ. ಬುದ್ಧ, ಎರಡನೆ ಬುದ್ಧನೆಂದು ಪ್ರಸಿದ್ಧನಾದ ನಾಗಾರ್ಜುನ ಹಾಗೂ 'ಮೂಲ ಮಾಧ್ಯಮಕ ಕಾರಿಕೆ'ವನ್ನು ಕನ್ನಡದ ಕಣ್ಣಿನಲ್ಲಿ ಕಂಡು ಪುನರ್ವ್ಯಾಖ್ಯಾನಿಸಿದ ನಟರಾಜ ಬೂದಾಳರಿಗೆ "ಶರಣಂ ಗಚ್ಛಾಮಿ". ಈ ಕೃತಿಯ ಬಗೆಗಿನ ಗಂಭೀರವಾದ ವ್ಯಾಪಕವಾದ ಚರ್ಚೆಯು ಕನ್ನಡ ಚಿಂತನಾ ಪರಂಪರೆಗೆ ಹೊಸ ಸಾಧ್ಯತೆಯನ್ನು ತೋರಿಸಿಕೊಡುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ. □

ಕಥೆ

ಸಹಗೀತ

ಡಾ॥ ಹೆಚ್. ನಾಗವೇಣಿ

ಹಗಲು ಇರುಳಿನ ಸಂಧಿಕಾಲವದು. ಬೈಗುಗೆಂಪು ನಸುಗಪ್ಪಿಗೆ ವಾಲುತ್ತಿತ್ತು. ಸಿರಿದೇವಿ ಆಗಲೇ ಕಡಲ ದಂಡೆಯ ಮೇಲೆ ಬಂದು ಕೂತಾಗಿತ್ತು. ಗಂಡ ಮಾದೇಗೌಡನೂ ಪಕ್ಕದಲ್ಲಿದ್ದ. ಎಂದಿನಂತೆ ಇಂದೂ ಮಡದಿಗೊಂದು ಕತೆ ಹೇಳುವ ಕಾತುರ ಆತನಿಗೆ. ಆತ ಹೇಳುವ ಕತೆ ಅಂತಿಂಥದ್ದಲ್ಲ. ಸಿರಿದೇವಿಯ ಒಡಲು ಕರಗುವಂತಹದ್ದು. ತಾನು ಕೇಳಿದ್ದ ನೋಡಿದ್ದ ಘಟನೆಗಳಿಗೆ ರಕ್ತ ಮಾಂಸ ತುಂಬಿ, ಜೀವಕೊಟ್ಟು, ಕಣ್ಣಿಗೆ ಕಟ್ಟುವಂತಹ ಕತೆ ಹೆಣೆಯುತ್ತಾನವ.

ಇಂತಹ ಎದೆ ಕಲಕವಂತಹ ಕತೆಗಳನ್ನೂ ಹೇಳಿ ಹೇಳಿಯೇ ಈ ಗಟ್ಟದ ಮಾಸ್ಟ ಮಾದೇಗೌಡ, ಗುತ್ತಿನ ಶೆಟ್ಟರ ಹುಡುಗಿ ಸಿರಿದೇವಿಯನ್ನು ತನ್ನ ಬಗಲಿಗೆ ಸೇರಿಸಿಕೊಂಡಿದ್ದಲ್ಲವೇ? ಶಾಲೆ ಕಲಿಯಲು ಹೋದ ಶೆಟ್ಟರ ಮಗಳು ಗೌಡ ಮಾಸ್ಟನ ಕತಾ ಬಿಂಡಿಯೊಳಗೆ ಸಿಲುಕಿ, ಆತನ ಬೆಚ್ಚನೆಯ ಪ್ರೀತಿಗೆ ಕರಗಿ, ಮನದರಸಿಯಾಗಿ ಆತನೊಳಗೇ ನೆಲೆ ನಿಂತಿದ್ದು ಮತ್ತೊಂದು ಕತೆ!

ತನ್ನೊಳಗಿರುವ ಅಷ್ಟೊಂದು ಕತಾ ಸರಕಿನಲ್ಲಿ ಯಾವುದನ್ನು ಆರಿಸಲಿ ಎಂಬ ದ್ವಂದ್ವ-ಯೋಚನೆ ಗೌಡಮಾಸ್ಟನನ್ನು ಕಾಡುತ್ತಿರುವಾಗಲೇ ತಿಂಗಳು ಮೂಡಿತ್ತು. ಕತೆಗಾಗಿ ಕಾದು ಕಾದು ಸುಸ್ತಾದ ಸಿರಿದೇವಿ ಗಂಡನ ತೊಡೆ ಮೇಲೆ ತಲೆಯಿರಿಸಿ ಬಾನು ದಿಟ್ಟಿಸಲಾರಂಭಿಸಿದ್ದಳು. ಬಾನು ತುಂಬ ಬೆಳಕಿನ ಹೊಳಪು ದೀವಟಿಗೆಗಳು ಹುಟ್ಟಿಕೊಂಡಿದ್ದವು. ಕತೆಯಲ್ಲೇ ಮರೆತಳು ಸಿರಿದೇವಿ. ಚುಕ್ಕೆಯ ಲೆಕ್ಕಾಚಾರಕಿಳಿದಿತ್ತು ಆಕೆಯ ಮನಸ್ಸು.

ಗೌಡ ಮಾಸ್ಟ ಕೊನೆಗೂ ಕತೆ ಆಯ್ಕೆ ಮಾಡಿದ್ದ. ಅದೇ ಕತೆ ಮೊನ್ನೆ ಮೊನ್ನೆ ಕಂಚಾರುವಿನಲ್ಲಿ ನಡೆದ ಕವಿಗೋಷ್ಠಿಯೊಂದು ಪೆರ್ಮುದೆಯ ಗೋವಿಂದ ಭಟ್ಟರು ಹೇಳಿದ್ದ ಬಯಲುಸೀಮೆಯ ಬಡಕವಿಯ ಬದುಕಿನ ಘಟನೆಯದು. ಕೇಳುಗರೆಲ್ಲರ ಅಂತಃಕರಣ ಕಲಕುವ ಆ ಘಟನೆ ಗೌಡಮಾಸ್ಟನ ಚಿಂತನೆಯ ಕುಲುಮೆಯೊಳಗೆ ಕಾದು ಕನಲಿ ಕತೆಯಾಗಿ ರೂಪುಗೊಂಡಿತ್ತು.

ಸಿರಿದೇವಿ ಗಂಡನ ಈ ಪರಿಯ ಮೈಲುದ್ದದ ಕತಾ ಪೀಠಿಕೆ ಕೇಳಿ ಅಸಹನೆಯಿಂದ ಕುದಿಯತೊಡಗಿದಳು. ಆದರೂ ಒಂದಷ್ಟು ತಾಳ್ಮೆ ತುಂಬಿಕೊಂಡು ಮುಂದಿನ ಕತಾತಿರುಳಿಗಾಗಿ ಗಂಡನ ಮುಖವನ್ನೇ ದಿಟ್ಟಿಸುತ್ತಿದ್ದಂತೆ ಆತ ಕತೆ ಮುಂದುವರೆಸಿದ್ದ.

ಗಟ್ಟದ ಮೇಲಿನ ಆ ಕವಿಗಳಿಗೆ ನಿಮ್ಮ ಕನ್ನಡ ಜಿಲ್ಲೆಯೆಂದರೆ ಪ್ರಾಣ. ಪ್ರಾಣ ಇಲ್ಲಿಯ ಜನರಿಗಾಗಿ ಅಲ್ಲ. ಇಲ್ಲಿಯ ಕಡಲಿಗಾಗಿ ಅವರಿಗೆ ಇನ್ನಿಲ್ಲದ ಸೆಳೆತ. ಅವರು ಅದೆಷ್ಟೋ ಬಾರಿ ಅದೂ ಇದೂ ಸಾಹಿತ್ಯದ ಕೆಲಸಗಳಿಗೆಂದು ಈ ಕಡಲ ಜಿಲ್ಲೆಗೆ ಬಂದಿದ್ದಾರೆ. ಊರು ಕೇರಿ ಸುತ್ತಿದ್ದಾರೆ. ಮೀನುಘಾಟು ಕುಡಿದ ಕಡಲ ತೆರೆಗಳೊಡನೆ ಆಟವಾಡಿದ್ದಾರೆ. ಅರಳು ಮರುಳಿನ ವಯಸ್ಸಲ್ಲೂ ಗೂಡುಮನೆ ಕಟ್ಟಿದ್ದಾರೆ. ಆದರೂ ಅವರಿಗೆ ಮತ್ತೆ ಮತ್ತೆ ಕಡಲೂರಿಗೆ ಬರುವ ಆಸೆ. ಆಸೆ ಹುಟ್ಟಿತೆಂದು ಉಟ್ಟ ಬಟ್ಟೆಯಲ್ಲೇ ಎದ್ದು ಬರುವಂತ ಸಿರಿವಂತಿಗೆ ಅವರಲ್ಲಿಲ್ಲ. ಕಿತ್ತು ತಿನ್ನುವ ಬಡತನ. ಒಮ್ಮೆ ಏನಾಯ್ತೊಂದ್ರೆ, ಕೃಷ್ಣಮಠದಲ್ಲಿ ಆಗ ಪರ್ಯಾಯದ ಸಂಭ್ರಮ. ಆ ಸಂಭ್ರಮ-ಗದ್ದಲದ ನಡುವೆ ಇನ್ನಷ್ಟು ಗೌಜಿ ಗಮ್ಮತ್ತು ಸೇರ್ಪಡೆಯಾಗಲಿ ಎಂಬ ಕಾರಣಕ್ಕೊ ಏನೋ... ಉಡುಪಿ ಹಿರಿ-ಕಿರಿ ಸಾಹಿತಿಗಳೆಲ್ಲ ಸೇರಿ ಬಿಟ್ಟು ಸಾಹಿತ್ಯ



ಎಂದಿನಂತೆ ಕತಾಪೀಠಿಕೆ ಶುರುವಾಯ್ತು. ಸಿರಿದೇವಿ ಮುನಿಸಿಕೊಂಡಳು. ಮೂಗಿಗಿಂತ ಮೂಗುತಿ ಭಾರ, ಯಾಕೆ ಇಷ್ಟೊಂದು ಪೀಠಿಕೆ ಎಂದು ಗೊಣಗಿಕೊಂಡಳು ಗಂಡ ಮುಗುಳ್ನಕ್ಕ. ಪೀಠಿಕೆ ಮುಂದರಿಸಿದ್ದ. ಆಡಿಕೆಯ ಮಾತನ್ನು ತಮ್ಮ ಕಾವ್ಯದಲ್ಲಿ ಎಳೆತಂದು ವಾಡಿಕೆಗಿಂತ ಮಿಗಿಲಾದ ಅರ್ಥತುಂಬಿ ಜನಮನವನ್ನು ಸೆಳೆದ ಈ ಕವಿ ಹುಟ್ಟಿ ಬೆಳೆದಿದ್ದು ಬಯಲು ಸೀಮೆಯಲ್ಲಿ. ಜನಪದ ಗೀತೆಯ ಶೃಂಗಾರ, ಪ್ರಾಸ ಸಂಪತ್ತನ್ನು ಹೀರಿಕೊಂಡು ಕಾವ್ಯದಾಳಕ್ಕೆ ಇಳಿಸಿ ಮೋಡಿ ಮಾಡುವಂತಹ ಪದಗಳನ್ನೇ ಹೊಸೆದು ಪದ್ಯ ಕಟ್ಟುವ ಗಾರುಡಿಗ ಕವಿಯವರು. ತೆರವಿಲ್ಲದ ಬಡತನದಲ್ಲಿ ಬೆಂದು ನುಂಗಲಾಗದಂತಹ ನೋವಲ್ಲಿ ನೊಂದ ಅವರ ಜೀವನದಷ್ಟೇ ಪರಿಪಕ್ವವಾದುವು ಅವರ ಕಾವ್ಯಗಳು.

ಗೋಷ್ಠಿ ಏರ್ಪಡಿಸುವ ನಿರ್ಣಯ ಕೈಗೊಂಡಿದ್ದರು. ಅದರಲ್ಲೊಂದು ದಿನ ಕಾವ್ಯಗೋಷ್ಠಿಯೂ ಏರ್ಪಾಡಾಗಿತ್ತು. ಈ ಕಾವ್ಯಗೋಷ್ಠಿಯ ಮುಖ್ಯಸ್ಥಿಕೆಗೆ ಗಟ್ಟದ ಮೇಲಿನ ಗಾರುಡಿಗ ಕವಿಯನ್ನು ಎಳೆದು ತರುವ ಆಸೆ ಆತುರ ಅಲ್ಲಿನ ಎಲ್ಲರಿಗೂ. ಸರಿ, ಅವರನ್ನೇ ಕರೆತರುವುದೆಂದು ತೀರ್ಮಾನವಾದೊಡನೆ ಕವಿಗಳ ಒಪ್ಪಿಗೆ ಪಡೆಯಲು ಪರ್ಯಾಯ ಸ್ವಾಮಿಗಳ ಒದ್ದೆ ಲಂಗೋಟಿಯಂತಿದ್ದ ವಾಮನ ಪೈಗಳ ಮೋಟಾರು ಕಾರೊಂದು ಬಯಲು ಸೀಮೆಯನ್ನು ಹೊಕ್ಕಿಯೂ ಆಯ್ತು.

ಮುಂಜಾನೆ ಅಲ್ಲಿ ಬಯಲ್ಲು ಸೀಮೆಯಲ್ಲಿ ಚುಮು ಚುಮು ಚಳಿ. ಕವಿಗಳನ್ನರಸಿ ಬಂದ ಕಾರು ಕವಿಯ ಬಡ ಕುಟೀರದ ಎದುರಿಗೆ ನಿಂತಿತು. ಕವಿಗಳು ಅಡುಗೆ ಮನೆಯಲ್ಲಿ ರೊಟ್ಟಿ ಬಡಿಯುತ್ತಿದ್ದ ಮಡದಿಯ ಪಕ್ಕ ಆತುಕೂತು ಚೌಳಿಕಾಯಿಯ ತೊಟ್ಟು ತೆಗೆಯುತ್ತಿದ್ದರು. ಇದೀಗ ಅಚಾನಕ್ಕಾಗಿ ಕಡಲಕಡೆಯಿಂದ ಬಂದ ನೆಂಟರನ್ನು ಕಂಡೊಡನೆ ಕವಿಗಳ ಮುಖ ಮೊರವಾಗಿ ನಗುವಿನ ಅಲೆಯೇ ಅಲ್ಲಿಂದ ಹಾರಿಕೆಯಾಯಿತು. 'ಬರ್ರಿ... ಬರ್ರಿ... ಏನ್ ಎಲ್ಲಾ ಅರಾಮ್‌ರಾ... ಏನ್ ಎಲ್ಲ ಅಪರೂಪ ಆಗ ಬಿಟ್ರಲಾss ಮತ್ತೆನಾss ಸಮಾಚಾರ. ಮನೆ ಕಡಿ ಎಲ್ಲಾ ಆರಾಂ ಇದ್ದಾರಾss ಹೌದಿಲ್ಲಾ...' ಎಂಬ ಕುಶಲೋಪರಿ ಮಾತುಕತೆಯಾಡುತ್ತ ದೂರದಿಂದ ಬಂದ ನೆಂಟರನ್ನು ಕವಿಗಳು ಒಳಗೆ ಕರೆತಂದು ಕುಶಲೋಪರಿ ನಡೆಸುತ್ತಿರುವಾಗ ರೊಟ್ಟಿ ಸುಡುತ್ತಿದ್ದ ಕವಿಪತ್ನಿಯ ಕಿವಿಯೆಲ್ಲ ಗಂಡನ ಮಾತುಕತೆಯತ್ತಲೆ. ತಮ್ಮಲ್ಲಿ ಇಂತಿಂಥ ಕಾರ್ಕ್ರಮ... ಇಂತಿಂಥ ಹೊತ್ತು... ತಾವು ಅತಿಥಿಯಾಗಿ ಬರಲೇಬೇಕು... ಕರೆದೊಯ್ಯಲು ಕಾರು ಬರುತ್ತೆ... ಆರಾಮವಾಗಿ ಬರಬಹುದು... ಹೀಗೆ ಅದೂ ಇದೂ ಮಾತು ಹೊರಗಡೆ ಚಾವಡಿಯಲ್ಲಿ ಹೊರಳಾಡುತ್ತಲೇ ಇತ್ತು. ಕಡಲತೀರದ ಕಾರ್ಯಕ್ರಮವದು ಕವಿಗಳು ಆರು ಮೂರು ಯೋಚಿಸದೆ ತಟ್ಟನೆ ಒಪ್ಪಿಗೆ ನೀಡಿದ್ದರು.

ಅರೆ ಗಂಡನ ಒಪ್ಪಿಗೆ! ಒಳಗಡೆ ಒಲೆಯ ಮುಂದೆ ಕೂತು ಮೈಯೆಲ್ಲಾ ಕಿವಿಯಾಗಿರಿಸಿ ಮಾತುಕತೆ ಕೇಳಿಸಿಕೊಳ್ಳುತ್ತಿದ್ದ ಪತ್ನಿಯ ಎದೆ ತುಂಬಾ ಸಂತಸದ ಹೊನಲು! ಉಡುಪಿಯಲ್ಲಿ ಕಾರ್ಯಕ್ರಮವಂತೆ, ಕಾರು ಗೀರು ಬರುವ ಮಾತು, ಗಂಡನ ಒಪ್ಪಿಗೆ! ಕವಿಪತ್ನಿಯ ಎದೆಯಾಳದಿಂದ ಆಸೆಯ ಬುಗ್ಗೆಯೊಂದು ನೀರಲ್ಲಿ ಅದುಮಿಟ್ಟ ಮರದ ದಿಮ್ಮಿಯಂತೆ ದಿಮ್ಮೆಂದು ದಿಗಿಣ ತೆಗೆದು ಮೇಲೆದ್ದು ಬಂದು, ಅವರಿದ್ದ ಖುಷಿಯ ಜತೆಯೇ ಕುಣಿಯಲಾರಂಭಿಸಿದಾಗ ಆಕೆ ಕೂತಲ್ಲಿಂದ ಎದ್ದು ನಿಂತಿದ್ದರು. ಬಂದವರಿಗೆ ಬಾಯಾರಿಕೆ ನೀಡುವುದು ಕೂಡಾ ಮರೆತು ಹೋಗಿತ್ತಾಕೆಗೆ.

ಬಂದ ನೆಂಟರಿಗೆಂದು ಕಂಚಿನ ಲೋಟದಲ್ಲಿ ಕರಿಕಾಫಿ ಸುರಿಯುತ್ತಿದ್ದಂತೆ ಆಕೆಯ ಮನರ್ಗ್ಳಿಡಿ, ಉಡುಪಿಯ ಶ್ರೀ ಕೃಷ್ಣನೇ ಕುಣಿಯಲಾರಂಭಿಸಿದ್ದ. ಗಂಡನಿಗೆ ಮತ್ತೊಮ್ಮೆ ಕನ್ನಡ ಜಿಲ್ಲೆಯಿಂದ ಆಹ್ವಾನ ಬಂದಿದೆ. ಕರೆದೊಯ್ಯಲು ಕಾರು ಬೇರೆ ಬರುತ್ತಿದೆ. ಈ ಸಂಧ್ಯಕಾಲದಲ್ಲಾದರೂ ಶ್ರೀಕೃಷ್ಣನ ದರ್ಶನ ಮಾಡುತ್ತಿದ್ದೆ..., ಈ ಹಾಳು ಬದುಕಲ್ಲಿ ಬಡತನದ ಬೇಗೆಯಲ್ಲಿ ಒಮ್ಮೆಯಾದರೂ ನನ್ನತ್ತ ಈ ಭಾಗ್ಯ ಸುಳಿಯಲಿಲ್ಲ. ಇದೀಗ ಕೃಷ್ಣ ದರ್ಶನ ಮಾಡಬಹುದಾದ ಅವಕಾಶವೊಂದು ತನ್ನ ಕಾಲಬುಡಕ್ಕೆ ಬಂದು ಬಿದ್ದಿದೆ...

ಕವಿಯವರ ಪತ್ನಿ ಉಡುಪಿಯ ಶ್ರೀಕೃಷ್ಣನನ್ನು ಸ್ಮರಿಸುತ್ತಾ ನೆಂಟರಿಗೆ ಬಾಯಾರಿಕೆ ಕೊಟ್ಟು ಬಂದವರೇ ಬಾಗಿಲ ಬಳಿ ನಿಂತು ತನ್ನೊಳಗಿನ ಆಸೆಗೆ ಮತ್ತಷ್ಟು ಜೀವ ತುಂಬ ತೊಡಗಿದ್ದರು.

ಕಿತ್ತು ತಿನ್ನುವ ಬಡತನ ಉಡುಪಿಯ ಕೃಷ್ಣನ ದರ್ಶನವನ್ನೊಮ್ಮೆ ಮಾಡಬೇಕೆನ್ನುವ ಆಕೆಯ ಜೀವಮಾನದ ಆಸೆಯೊಂದು ಬಹುಕಾಲದಿಂದ ಆಸೆಯಾಗೇ ಉಳಿದಿತ್ತು. ಬಡಕವಿಗಳು ಉದ್ಯೋಗಪರ್ವದಿಂದ ವಿಶ್ರಾಂತಿಪರ್ವಕ್ಕೆ ಬಂದು ಆಗಲೇ ಹತ್ತು ವರ್ಷಗಳು ಸಂದಿವೆ. ಇದೀಗ ಕೂತು ತಿನ್ನುವ ಕಾಲಕ್ಕೆ ಕೈಲಿದ್ದ ಮೂರು ಕಾಸನ್ನು ದೇವದರ್ಶನ–ಭೂತದರ್ಶನ ಎಂದು ಖರ್ಚುಮಾಡುವ ತಾಕತ್ತು ಕವಿಗಳಲ್ಲಿಲ್ಲ–ಮಡದಿಯ ಮನದೂಳಗೆ ಸುಪ್ತವಾಗಿದ್ದ ಆಸೆ ಅವರಿಗೇನು ತಿಳಿಯದ್ದೂ ಅಲ್ಲ– ತನ್ನ ಜೀವನದುದ್ದಕ್ಕೂ ಬಡತನದಲ್ಲಿಯೇ ಕೈತೊಳೆದುಕೊಂಡು ಬಂದು, ಪ್ರೀತಿ ಒಂದನ್ನು ಬಿಟ್ಟು ಗಂಡನಿಂದ ಬೇರೆಂತಹ ಸಂಪತ್ತನ್ನೂ ಬಯಸದ ತನ್ನ ಸಂಗಾತಿಯ ಒಂದೇ ಒಂದು ಚಿಕ್ಕ ಆಸೆಯನ್ನು ತಳ್ಳಿ ಹಾಕಲಾಗದೆ ನಾಳೆ... ನಾಳೆ... ನಾಡಿದ್ದು ಎನ್ನುತ್ತಾ ಉಡುಪಿಯ ಕೃಷ್ಣನ ದರ್ಶನವನ್ನು ವರ್ಷಗಟ್ಟಲೆಯಿಂದ ಮುಂದೂಡಿಕೊಂಡೇ ಬಂದಿದ್ದಾರೆ ಈ ಕವಿಗಳು.

ಇದೀಗ ಮನೆ ಬಾಗಿಲಿಗೆ ಬಂದ ನೆಂಟರು ಹೊಸಿಲು ದಾಟುವವರೆಗೂ ತನ್ನೊಳಗಿನ ಆಸೆಯನ್ನು ಬಲವಾಗಿ ಅದುಮಿಟ್ಟುಕೊಂಡಿದ್ದ ಕವಿಯವರ ಪತ್ನಿ, ಬಂದವರ ಬೆನ್ನು ಮರೆಯಾದೊಡನೆ ನೇರ ಗಂಡನೆದುರು ಬಂದು ತನ್ನಾಸೆಯನ್ನು ತೋಡಿಕೊಂಡಿದ್ದರು– ಕವಿಯವರು ಬಾಗಿಲು ಚೌಕಟ್ಟಿಗೆ ಒರಗಿ ನಿಂತು ಮಡದಿಯ ಆಸೆಯನ್ನು ನಗುನಗುತ್ತಲೇ ಕೇಳಿಸಿಕೊಂಡಿದ್ದರು.

'...ನಮಗಂತ್ರೂ ಈಗಿನ ಕೈಕಟ್ಟಿದ ಸ್ಥಿತ್ಯಾಗ, ಕೃಷ್ಣನ ದರ್ಶನ ಆಗೋದು ಕನಸಿನ ಮಾತೆ ಅದ. ನೀವೇ ದುಡಿಯೋ ಕಾಲದಾಗಂತ್ರೂ ಅದನ್ನ ನೆನಸ್ಗೊಳೋ ಹಾಗಿಲ್ಲ. ಈಗ, ಮತ್ತೆ ಉಡುಪಿಗೆ ಹೊಂಟಿರಿ... ಹ್ಯಾಂಗೂ ಕಾರದ, ನನ್ನೂ ಈಸರೆ ಕರ್ಕೊಂಡು ಹೋಗಿ ಕೃಷ್ಣನ ದರ್ಶನ ಮಾಡಸಬಾರ್ದ! ಮುಂದ ನನಗ ಈ ಭಾಗ್ಯ ಸಿಗುತ್ತೋ ಇಲ್ಲೋ...'

ಒಲೆಯಲ್ಲಿ ಒಗ್ಗರಣೆಯೊಗೆ ಬಾಡುತ್ತಿದ್ದ ಚೌಳಿಕಾಯಿಯ ಪರಿಮಳವನ್ನು

ಕಿತ್ತು ತಿನ್ನುವ ಬಡತನ ಉಡುಪಿಯ ಕೃಷ್ಣನ ದರ್ಶನವನ್ನೊಮ್ಮೆ ಮಾಡಬೇಕೆನ್ನುವ ಆಕೆಯ ಜೀವಮಾನದ ಆಸೆಯೊಂದು ಬಹುಕಾಲದಿಂದ ಆಸೆಯಾಗೇ ಉಳಿದಿತ್ತು. ಬಡಕವಿಗಳು ಉದ್ಯೋಗಪರ್ವದಿಂದ ವಿಶ್ರಾಂತಿಪರ್ವಕ್ಕೆ ಬಂದು ಆಗಲೇ ಹತ್ತು ವರ್ಷಗಳು ಸಂದಿವೆ. ಇದೀಗ ಕೂತು ತಿನ್ನುವ ಕಾಲಕ್ಕೆ ಕೈಲಿದ್ದ ಮೂರು ಕಾಸನ್ನು ದೇವದರ್ಶನ–ಭೂತದರ್ಶನ ಎಂದು ಖರ್ಚುಮಾಡುವ ತಾಕತ್ತು ಕವಿಗಳಲ್ಲಿಲ್ಲ–ಮಡದಿಯ ಮನದೊಳಗೆ ಸುಪ್ತವಾಗಿದ್ದ ಆಸೆ ಅವರಿಗೇನು ತಿಳಿಯದ್ದೂ ಅಲ್ಲ– ತನ್ನ ಜೀವನದುದ್ದಕ್ಕೂ ಬಡತನದಲ್ಲಿಯೇ ಕೈತೊಳೆದುಕೊಂಡು ಬಂದು, ಪ್ರೀತಿ ಒಂದನ್ನು ಬಿಟ್ಟು ಗಂಡನಿಂದ ಬೇರೆಂತಹ ಸಂಪತ್ತನ್ನೂ ಬಯಸದ ತನ್ನ ಸಂಗಾತಿಯ ಒಂದೇ ಒಂದು ಚಿಕ್ಕ ಆಸೆಯನ್ನು ತಳ್ಳಿ ಹಾಕಲಾಗದೆ ನಾಳೆ... ನಾಳೆ... ನಾಡಿದ್ದು ಎನ್ನುತ್ತಾ ಉಡುಪಿಯ ಕೃಷ್ಣನ ದರ್ಶನವನ್ನು ವರ್ಷಗಟ್ಟಲೆಯಿಂದ ಮುಂದೂಡಿಕೊಂಡೇ ಬಂದಿದ್ದಾರೆ ಈ ಕವಿಗಳು.

ಆಘ್ರಾಣಿಸುತ್ತಿದ್ದ ಕವಿಯವರನ್ನು ಇದೀಗ ಮಡದಿಯ ಮನದಾಳದಿಂದ ಎದ್ದ ಮಾತು ಇಡಿಯಾಗಿ ಕಲಕ್ಕಿತ್ತು. ಯಾವತ್ತೂ ಮುಗುಳು ನಗೆಯೊಳಗೇ ಬದುಕಿನ ಸವಾಲುಗಳನ್ನು ಎದುರಿಸುತ್ತಿದ್ದ ಕವಿಯವರು ಮಡದಿಯ ಅಂಗಲಾಚುವ ಮಾತಿಗೆ ಬಾಯ್ತುಂಬಾ ನಗುತ್ತಾ, 'ಹ್ಞೂss.. ಈ ಬಾರಿ ಹೋಗೋಣss... ಹೋಗೋಣss... ಹ್ಯಾಂಗೂ ಹೋಗಿ ಬರಲಿಕ್ಕ ಕಾರದ, ನಿನ್ನೂ ಜೋಡಿಲೆ ಕರ್ಕೊಂಡು ಹೋದ್ರಾತು...' ಕವಿಗಳು ಹೆಂಡತಿಯ ಬೆನ್ನು ತಡವಿ ಸಮಾಧಾನಿಸಿದ್ದರು.

ಈ ಬಡಪಾಯಿ ಬದುಕಿನಲ್ಲಿ ಅಳು ನುಂಗಿ ನಗುತ್ತಲೇ ತನ್ನನ್ನು ಅನುಸರಿಸಿ ಬಂದ ಆಕೆಯನ್ನು ಸಿರಿವಂತಿಗೆಯ ಸುಪ್ಪತ್ತಿಗೆಯಲ್ಲಿ ಇರಿಸಲಾಗಲಿಲ್ಲ. ತನ್ನಿಂದ ಬರೀ ತಾಪತ್ರಯವನ್ನಲ್ಲದೇ ಬೇರೇನನ್ನೂ ಆಕೆಗೆ ಕೊಡಲಾಗಲಿಲ್ಲ. ಇದೀಗ ಆಕೆಯ ಬದುಕಿನ ಬಹುದೊಡ್ಡ ಆಸೆಯೊಂದನ್ನು ಈಡೇರಿಸುವ ಅವಕಾಶ. ಕವಿಯವರು ಆಗ ತಾನೆ ಮೀಸೆ ಚಿಗುರಿದ ಹುಡುಗನಂತೆ ಬಹಳ ಉತ್ಸಾಹದಿಂದ ಓಡಾಡುತ್ತಾ ತುಳುವ ಜಿಲ್ಲೆಗೆ ಮಡದಿಯನ್ನು ಕರೆದೊಯ್ಯುವ ಸಿದ್ಧತೆಯಲ್ಲಿ ತೊಡಗಿದ್ದರು.

ಬಡಕವಿಗಳು ತಮ್ಮ ಮಡದಿಯ ಬಲುದಿನಗಳ ಆಸೆಯನ್ನು ಈಡೇರಿಸುವ ಸಲುವಾಗಿ ಉಡುಪಿಗೆ ಹೊರಡುವ ಆ ಸಿದ್ಧತೆಯ ಪರಿಯನ್ನು ಗೌಡಮಾಸ್ಪ ಇನ್ನೇನು ಸಿರಿದೇವಿಗೆ ವರ್ಣಿಸಬೇಕೆನ್ನುವಷ್ಟರಲ್ಲಿ ಇದೇ ಪ್ರಶಸ್ತ ಸಮಯವೆಂಬಂತೆ ಆಕೆ ತನ್ನ ಗಂಡನೆದುರು ಬಲುದಿನಗಳ ಆಸೆಯೊಂದನ್ನು ತೆರೆದಿಟ್ಟದ್ದಳು.

'ನೋಡಿ... ನಂಗೂ ಆ ಕವಿ ಹೆಂಡ್ತಿಗಿರುವಂತೆಯೇ ಒಂದು ಪುಟ್ಟ ಆಸೆ ಮಾರಾಯ್ರೆ ಮುಂದಿನ ಪರ್ಯಾಯದೊಳಗೆ ಈ ಮುಷ್ಟಿಮಾಲೆಯ ನಡು ನಡುವೆ ಒಂದು ಮುತ್ತು. ಒಂದು ಹವಳೆ ಕಟ್ಟಿಸಬೇಕೂಂತ. ಅದಕ್ಕೊಂದು ಕಿವಿದ್ದೂ ಜೊತೆ ಇರಬೇಕು...' ಕೊರಳೊಳಗಿನ ಚಿನ್ನದ ಮುಷ್ಟಿಮಾಲೆಯನ್ನೆತ್ತಿ ಗಂಡನತ್ತ ತೋರಿಸುವಾಗ ಮಾಸ್ಪನ ಸಿಟ್ಟು ಕಾಲ ಉಂಗುಷ್ಠದಿಂದ ಮೇಲೇರಿತ್ತು. ತಾನು ಕತೆಯೊಳಗೇ ಮುಳುಗಿ ಅಷ್ಟೊಂದು ತನ್ಮಯವಾಗಿ ಕತೆ ಹೇಳುತ್ತಿರಬೇಕಾದರೆ ಈಕೆ ನಡು ನಡುವೆ ಬಾಯಿ ಹಾಕಿ ಅದ್ಯಾವುದೋ ಮುತ್ತು ಹವಳದ ಪೀರಿಕೆ ಹಾಕಿ ಕತೆಯ ದಾರಿ ತಪ್ಪಿಸುತ್ತಿದ್ದಾಳೆ! ಮಾಸ್ಪ ಸಿಟ್ಟಿನಿಂದಲೇ ಸಿರಿದೇವಿಯ ಮೂತಿ ದಿಟ್ಟಿಸಿದ್ದ! ಕೊರಳ ಸರವನ್ನು ಕೈಯಲ್ಲಿ ಎತ್ತಿ ಹಿಡಿದು ಗಂಡನಿಂದ 'ಮುತ್ತಿನಂತಹ' ಪ್ರತಿಕ್ರಿಯೆ ನಿರೀಕ್ಷಿಸಿದ್ದ ಸಿರಿದೇವಿ ಆತನ ಮುಖದಲ್ಲಿ ಅವುಚಿದ್ದ ಅಸಹನೆ, ಸಿಟ್ಟು ಕಂಡು ಅರೆಕ್ಷಣ ಬೆಪ್ಪಾಗಿ ತೆಪ್ಪಗಾದಳು.

ಮಾಸ್ಪ ಕ್ಷಣಕಾಲ ಬಾನು ನೋಡುತ್ತಾ, ತನ್ನ ಕೈತಪ್ಪಿ ಹೋದ ಕತೆಯ ಎಳೆಯನ್ನು ಮತ್ತೆ ಹಿಡಿದೆಳೆಯಲು ಪ್ರಯತ್ನಿಸಿದ್ದ. ಕತಾಸೂತ್ರ ಮತ್ತೆ ತನ್ನ ಕೈಯೊಳಗೆ ಬಂದೊಡನೆ ಕತೆ ಆರಂಭಿಸಿದ್ದ– ಸಿರಿದೇವಿಯ ಕೆನ್ನೆಯನು ನಯವಾಗಿ ಹಿಂಡುತ್ತ.

...ಕವಿದಂಪತಿಗಳಿಗೆ ಉಡುಪಿಗೆ ಹೊರಡುವ ಗಡಿಬಿಡಿ ಸಂಭ್ರಮ ಹಾಗೆ ಪೂರ್ವ ಸಿದ್ಧತೆಗಳೆಲ್ಲಾ ಮುಂದರಿದಿತ್ತು. ಮಕ್ಕಳೆಲ್ಲಾ ಬೆಳೆದು ಬಿಟ್ಟಿದ್ದರಿಂದ ಮನೆಯ

...ಲೋಚನೆಯಿಲ್ಲ. ಮಕ್ಕಳ ರಂಪವಿಲ್ಲ. ಕಡಲೂರಿನಿಂದ ಕಾರು ಬರಲು ಇನ್ನೂ ... [illegible] ...ಪ್ಪವಾಗಿ ಜೋಡಿಸಿಟ್ಟಾಗಿತ್ತು. ಕವಿಗಳ ಕಪ್ಪು ಟೋಪಿಯೂ ಆ ಚೀಲ ಸೇರಿತ್ತು. ಆಗಷ್ಟೇ ಅವರು ಹೊಸದಾಗಿ ಹೆಣೆದಿದ್ದ ಕಾವ್ಯಮಾಲೆಯೂ ಆ ಟೋಪಿಯೊಳಗಡೆ ಸುರುಳಿಯಾಗಿ ಮಲಗಿತ್ತು. ರೊಟ್ಟಿ, ಖಾರದಪುಡಿ, ಚಟ್ನಿಪುಡಿಯೂ ಟೋಪಿಯ ಪಕ್ಕದಲ್ಲೇ ಚೀಲದಲ್ಲಿತ್ತು. ಆ ತುಳುವ ಜಿಲ್ಲೆಯ ಕುಚ್ಚಿಲಕ್ಕಿಯ ಅನ್ನವೆಂದರೆ ಕವಿಗಳಿಗಂತೂ ಮಾರು ದೂರ. ಅದು ತಿಂದರೆ ಹೊಟ್ಟೆಗೆ ಪುಟ್ಟ ಪುಟ್ಟ ಕಲ್ಲು ತುಂಬಿ ಬಿಟ್ಟಂತೆ ಎಂದು ಅವರು ಆಗಾಗ್ಗೆ ಹೇಳುವುದಿತ್ತು. ಅಂತೂ ಎಲ್ಲ ಸಿದ್ಧತೆಯೂ ಮುಗಿದುಬಿಟ್ಟು ಇನ್ನು ಬಾಕಿ ...ನ್ನು ಹೊರಡುವ ಕ್ಷಣ ಮಾತ್ರ.

ಅಂತೂ ಉಡುಪಿಗೆ ಹೊರಡುವ ಸುದಿನ ಬಂದೇ ಬಿಟ್ಟಿತ್ತು. ಮುದಿ ಸೂರ್ಯ ಪಡುವಣದ ಚಡಾವು ಇಳಿಯುವ ಹೊತ್ತದು. ದಂಪತಿಗಳಿಬ್ಬರು ಹೊರಟು ಸನ್ನದರಾಗಿ ಮನೆಯ ಮುಂಬಾಗಿಲಲ್ಲಿ ನಿಂತು ಬರಲಿರುವ ಕಾರಿಗಾಗಿ ಗೋಣುದ್ದ ಮಾಡಿ ಕಣ್ಣಾಡಿಸುತ್ತಿದ್ದರು. ಕವಿಯವರ ಮಡದಿಗಂತೂ ಮನದೊಳಗೆ ವಿಪರೀತ ಸಡಗರ. ಪುಟ್ಟ ಮಕ್ಕಳಂತೆ ಮನೆಯ ಒಳಗೊಮ್ಮೆ ಹೊರಗೊಮ್ಮೆ ಅಡ್ಡಾಡುತ್ತಾ ತಮ್ಮ ಸಡಗರವನ್ನು ಆದಷ್ಟು ಹೊರ ಚೆಲ್ಲುತ್ತಿದ್ದರು. ಹೆಂಡತಿಯ ಮುಖದಲ್ಲಿ ಮಾತ್ರವಲ್ಲ ದೇಹದಿಂದಿಡೀ ಹೊರಸೂಸುತ್ತಿದ್ದ ಸಂಭ್ರಮವನ್ನು ಕಂಡು ಆ ಇಳಿವಯಸ್ಸಿನಲ್ಲೂ ಕವಿಯವರ ಎದೆ ತುಂಬಾ ಎಂತೆಂಥದ್ದೋ ನಾನಾ ನಮೂನೆಯ ಭಾವನೆಗಳು, ರಂಗು ರಂಗಿನ ರಾಗಗಳು. ಕವಿಯವರು ಭಾವವನ್ನು ಹತ್ತಿಕ್ಕಿಕೊಳ್ಳಲಾಗದೆ ಕೊಂಡಾಟದಿಂದ ಮಡದಿಯ ತಲೆ ನೇವರಿಸಿದ್ದರು.

ಅಪರೂಪಕ್ಕೆ ತನ್ನ ಪತ್ನಿ ಸಂಭ್ರಮದಿಂದ ಕಂಪಿಸುತ್ತಿದ್ದಾಳೆ; ಹದಿನಾರರ ಯುವತಿಯಂತೆ ಸಡಗರದಿಂದ ಓಡಾಡುತ್ತಿದ್ದಾಳೆ. ಕವಿಯ ಮನದಲ್ಲೂ ಸಂಭ್ರಮ ಉಕ್ಕೇರತೊಡಗಿತ್ತು. ತಮಗಿಬ್ಬರಿಗೂ ಜತೆಯಾಗಿ ಕಾರಲ್ಲಿ ಹೋಗುವ ಅವಕಾಶ-ಅದೂ ಎಷ್ಟೊಂದು ದೂರಕ್ಕೆ! ಮುದಿ ವಯಸ್ಸಲ್ಲೂ ತಮ್ಮದೊಂದು ರೀತಿಯ ಪ್ರೇಮಪಯಣವೆಂದು ಕಲ್ಪಿಸಿಕೊಂಡು ಮನಸ್ಸೊಳಗೇ ನಕ್ಕಿದ್ದರು ಕವಿಗಳು.

ಹೊತ್ತು ಜಾರುತ್ತಿತ್ತು. ಹೊಂಬಣ್ಣದಲ್ಲಿ ಹೊಳೆಯುತ್ತಿದ್ದ ಪಡುವಣ ಬಾನಾಗಲೆ ಕೆಂಬಣ್ಣದಲ್ಲಿ ಓಕುಳಿಯಾಡತೊಡಗಿದ್ದರೂ ಇನ್ನೂ ಕಡಲೂರಿನ ಕಾರಿನ ಪತ್ತೆಯಿಲ್ಲ! ಕವಿಪತ್ನಿಯವರಲ್ಲಿ ನಿಧಾನಕ್ಕೆ ಆತಂಕ ಸುಳಿಯತೊಡಗಿತ್ತು. ದೇಹವಿಡೀ ಸಂಭ್ರಮ ತುಳುಕಿಸಿಕೊಂಡಿದ್ದ ಮಡದಿ ಇದ್ದಕ್ಕಿದ್ದಂತೆ ಹಿಂಡಿದ ಕಬ್ಬಿನ ಜಲ್ಲೆಯಂತೆ ಸಪ್ಪಗಾಗಿ ಮುಖವಿಡೀ ಆತಂಕ ಹೊದ್ದುಕೊಂಡಿದ್ದನ್ನು ಕವಿಯವರಿಂದ ಸಹಿಸಲಾಗದೇ ಮಡದಿಯನ್ನು ಪರಿಪರಿಯಾಗಿ ಸಮಾಧಾನಿಸತೊಡಗಿದ್ದರು. ಆಕೆಯ ಬೆನ್ನು ತಡವುತ್ತಾ ಇನ್ನೇನು ಅಂಗಳದಿಂದ ಮನೆಚಾವಡಿಯೊಳಗೆ ಕಾಲಿರಿಸಬೇಕೆನ್ನುವಷ್ಟರಲ್ಲಿ ಕಾರೊಂದು ಬರ್ರನೆ ಧೂಳೆಬ್ಬಿಸುತ್ತಾ ದಂಪತಿಗಳು ನಿಂತಿದ್ದ ಅಂಗಳದತ್ತಲೇ ನುಗ್ಗಿ ಬಂದಿತ್ತು.

ಕತೆಯಲ್ಲಿ ತನ್ಮಯಳಾಗಿದ್ದ ಸಿರಿದೇವಿ, 'ಅಬ್ಬ ಕೊರಗಜ್ಜ... ಕಡೆಗೂ ಕವಿಗಳ ಅಂಗಳಕ್ಕೆ ಕಾರು ಬಂತಲ್ಲವಾ' ಎಂದು ತನ್ನ ಪ್ರಿಯ ದೈವ ಕೊರಗಜ್ಜನನ್ನು ನೆನಪಿಸಿಕೊಂಡು ನೀಡಿದಾದ ನಿಟ್ಟುಸಿರು ಬಿಟ್ಟಿದ್ದಳು. 'ನಾನೆಣಿಸಿದ್ದ ನಮ್ಮವರು ಕವಿಗಳಿಗೆ ಮೂರು ನಾಮ ಹಾಕಿದ್ರೂಂತ. ಸಿರಿದೇವಿ ಕತೆಯಲ್ಲೇ ತನ್ಮಯಳಾಗಿ, ಮುಂದೇನಾಗುತ್ತೋ ಎನ್ನುವ ಆತಂಕದಿಂದ ಕುದಿಯುತ್ತಿದ್ದವಳು ತನಗಾದ ನೆಮ್ಮದಿಯನ್ನು ಗಂಡನೆದುರು ಬಿಚ್ಚಿಟ್ಟಿದ್ದಳು. ಮಾಸ್ತ ಸಿರಿದೇವಿಯಿಂದ ಇದೇ ಪ್ರತಿಕ್ರಿಯೆಯನ್ನು ನಿರೀಕ್ಷಿಸಿದ್ದ- ನಸುನಗುತ್ತಾ ಹೆಂಡತಿಯ ಕೆಳತುಟಿಯನ್ನು ಹಿಂಡುತ್ತಾ ಮತ್ತೆ ಕತೆ ಮುಂದರಿಸಿದ್ದ.

ಬರ್ರೆಂದು.. ಬಂದ ಕಾರಿನ ಸುತ್ತಲೆದ್ದ ಕರಿಧೂಳ ರಾಶಿ ಒಂದು ಹಂತಕ್ಕೆ ಬರುವಷ್ಟರಲ್ಲಿ ಕವಿಯವರು ನಾಕುದಿಕ್ಕಿಗೂ ಸಡಗರದಿಂದ ಹಾರುತ್ತಿದ್ದ ತನ್ನೆದೆಯನ್ನು ಅದುಮಿಡುತ್ತಾ ಪಕ್ಕದಲ್ಲಿ ನಿಂತಿದ್ದ ಪತ್ನಿಯೆಡೆ ಕಣ್ಣು ಮಿಟುಕಿಸಿ ನಸುನಗುತ್ತಾ ಕಾರಿನತ್ತ ದಿಟ್ಟಿಸಿದ್ದರು..., ಮತ್ತೆ ಮತ್ತೆ ದಿಟ್ಟಿಸಿದ್ದರು! ಕವಿಯವರ ಮುಖದ ಸುಕ್ಕುಗಳ ಮೇಲಿನ ನಗುವಿನ ಲೇಪನ 'ಸುಯ್ಯೆಂದು' ಹಾರಿ ಎಲ್ಲೋ ಹೋಗಿತ್ತು. ಎದೆಯೊಳಗೆ ಆ ಕೇರಿ ಮಂದಿಯೆಲ್ಲ ನುಗ್ಗಿ ಬಂದು ಒದ್ದಂತಹ ಅನುಭವ ಅವರದ್ದಾಗಿತ್ತು! ಬರ್ರೆಂದು ಬಂದ ಆ ಕಾರೊಳಗೆ ಒಂದು ರಾಶಿ ಜನರಿದ್ದಾರೆ! ಹಿಂದಕ್ಕೆ ಮುಂದಕ್ಕೆ ಕೂತು ಕವಿಗಳ ಹಲ್ಲಿಯಂತಿರುವ ಆ ಬಡದೇಹಕ್ಕಾಗುವಷ್ಟು ಜಾಗವಿರಿಸಿದ್ದಾರಷ್ಟೆ! ಕವಿಯ ಎದೆಯಾಳದಿಂದೆದ್ದ ನೋವು ನಿರಾಸೆಯ ಅಲೆಗಳು ಅವರ ಕಣ್ಣಾಲಿಗಳನ್ನು ತೇವಗೊಳಿಸಿದ್ದವು. ತನ್ನ ಕೈಯಲ್ಲಿದ್ದ ಬಟ್ಟೆಯ ಚೀಲವನ್ನು ಎದೆಗಾನಿಸಿಕೊಂಡು ಅಲ್ಲೇ ನಿಂತಿದ್ದ ಮಡದಿಯತ್ತ ಅದೇನೋ ಪಿಸುರಬೇಕೆಂದು ತಿರುಗಿದ್ದಾರಷ್ಟೆ, ಅಷ್ಟರೊಳಗೆ ಆಕೆ ಕಣ್ಣಿಗೆ ಸೆರಗೊತ್ತಿ ಹಿಡಿದು ಕೈಯ ಚೀಲವನ್ನು ಎದೆಗಮುಕಿಕೊಂಡು ಅಡುಗೆ ಮನೆ ಸೇರಿಯಾಗಿತ್ತು. ಕವಿಯವರಿಗೆ ಈಗ ಪತ್ನಿಯನ್ನು ಮನಸ್ಸಿಚ್ಛೆ ಸಮಧಾನಿಸುವ ಸಮಯಾವಕಾಶವಿಲ್ಲ. ತನ್ನ ಪ್ರಾಣವನ್ನೊಯ್ಯಲು ಬಂದ ಯಮಕಿಂಕರರಂತೆ ಕಾರ ಒಳಗೆ ಕಾರ್ಯಕ್ರಮ ಸಂಘಟಕರಿದ್ದಾರೆ! ತಾನು ಪತ್ನಿಯನ್ನು ಬಿಟ್ಟು ಕಾರಿನಲ್ಲಿ... [illegible] ಹೋಗಲಾರೆ ಎಂದು ಕುಳಿತರೆ ಕೊಟ್ಟ ಮಾತು ತಪ್ಪಿದಂತಾಗುತ್ತದೆ. ಕವಿಗಳು ತೀರಾ ಅಸಹಾಯಕರಾಗಿ ಜೀವಂತ ಶವದಂತೆ ಅಂಗಳದಲ್ಲಿ ನಿಂತು ಮತ್ತೆ ಮತ್ತೆ ಆ ಕಾರನ್ನು ದಿಟ್ಟಿಸಿದ್ದರು. ಆಗಲೇ ಕತ್ತಲಾಗಿದೆ. ಬಾನು ತುಂಬಾ ಚುಕ್ಕೆಗಳಿದ್ದವು. ತಾನು ಕಾರಿನಲ್ಲಿ [illegible] ಬೇಕು. ಆಕೆಯನ್ನು ಇಲ್ಲೇ ಬಿಟ್ಟು ಕವಿಯವರ ಎದೆ ಕರಗಿ ಕಣ್ಣಲ್ಲಿ ನೀರು ಹನಿ ಹನಿಯಾಗಿ ಜಿನುಗತೊಡಗಿತ್ತು.

ಆಕೆಯನ್ನು ತಾನ್ಹೇಗೆ ಸಮಾಧಾನಿಸಲಿ, ನಿರಾಸೆಯ ಪ್ರಪಾತಕ್ಕೆ ಬಿದ್ದು, ಹೊರಳಾಡುತ್ತಿರುವವಳನ್ನು ಸಂತೈಸದೆ ಅದ್ಹೇಗೆ ಬಿಟ್ಟು ಹೊರಡಲಿ? ಒಟ್ಟಿನಲ್ಲಿ ಕವಿಯವರು ಸಂದಿಗ್ಧತೆ ಅಸಹಾಯಕತೆಯಿಂದ ಬೇಯುತೊಡಗಿದ್ದರು. ಕವಿಗಳು ತಮ್ಮ ಕ್ಷಣಗಳನ್ನು ನುಂಗತೊಡಗಿದ್ದನ್ನು ಸಹಿಸಿಕೊಳ್ಳಲಾಗದ ಸಂಘಟಕರೊಬ್ಬರು ಕಾರೊಳಗಿನಿಂದ ಇಳಿದು ಬಂದು ಕವಿಯವರ ಕೈಯಲ್ಲಿದ್ದ ಚೀಲವನ್ನು ಎತ್ತಿಕೊಳ್ಳ ಬರುವಷ್ಟರಲ್ಲಿ ಕವಿಯವರು ಚೀಲ ಸಮೇತರಾಗಿ ಅಡುಗೆ ಮನೆಗೆ ನುಗ್ಗಿ ಮಂಡಿಯೊಳಗೆ ಮುಖ ಮುಚ್ಚಿ ಅಳುತ್ತಿದ್ದ ಪತ್ನಿಯೆದುರು ಕುಕ್ಕರಗಾಲಲ್ಲಿ ಕೂತು ಆಕೆಯ ಕಣ್ಣೊರೆಸಿ ಸಾಂತ್ವನದ ಮಾತಿಗೆ ಇಳಿದು ಬಿಟ್ಟಿದ್ದರು.

ಬೆಟ್ಟದಷ್ಟು ನಿರಾಸೆ ಹೊತ್ತು ಕಣ್ಣೀರಿಡುತ್ತಿದ್ದ ಪತ್ನಿಯ ಮುಖವನ್ನು ತನ್ನೆಡೆಗೆ ತಿರುಗಿಸಿಕೊಳ್ಳುತ್ತಾ 'ನೋಡವ್ವ ಜೀವನದಾಗ ಇದಕ್ಕಿಂತ ಎಷ್ಟೋ ದೊಡ್ಡ ತ್ರಾಸ ಸೈಸ್‌ಕೊಂಡಿ ಇದನ್ನೂ ಹಾಂಗ ಸೈಸ್‌ಗೊಂಡುಬಿಡ್ಲಾ.. ಹ್ಯಾಂಗೂ ಒಪ್ಪಿಗೊಂಡೀನಿ... ಮಾತಿಗೆ ತಪ್ಪಾಂಗಿಲ್ಲ. ನನ್ನ ಜೀವ್ನಾನ ಇಲೇ ಬಿಟ್ಟು ಹೊಂಟಿನಿ. ನನಗೊತ್ತದ ನನ್ನ ಕೈಹಿಡ್ದು ಬಾಳ್ಯ ತ್ರಾಸ್ ಅನುಭವಿಸಿದೀsss ಅಂತ... ನಿನಗಾದ ಬ್ಯಾಸರ್ನಾನ ಈ ಒಂದು ಸಾರೇ ಒಳಿಗ್ಹಾಕೋ, ನಾ ಬಂದ ಮೇಲೆ ಇಬ್ರೂ ಮತ್ತ ಉಡುಪಿಗೆ ಹೋಗುಣಾ..' ಅಂತಾ ಮಡದಿಯನ್ನು ಸಮಧಾನಿಸುತ್ತಾ ಆಕೆಯ ನಡುನೆತ್ತಿಯನ್ನು ನವಿರಾಗಿ ಪೊಸುತ್ತಾ 'ನನ್ನ ನಗನಗತ ಕಳಿಸಿಬಿಡು'... ಎಂದು ತಲೆತಗ್ಗಿಸಿ ಕೂತಿದ್ದ ಆಕೆಯನ್ನು ರಟ್ಟೆ ಹಿಡಿದು ಎಬ್ಬಿಸಿದ್ದರು. ಕಣ್ಣೊರಸುತ್ತಾ ಮಡದಿ ಬಾಗಿಲಿಗೆ ಬಂದೊಡನೆ ಅಂಗಳವಿಳಿದ ಕವಿಯವರು ಹನಿಗಣ್ಣಾಗಿಯೇ ಕಾರನ್ನೇರಿ ತನಗಿರಿಸಿದ್ದ ಇಲಿ ಬೋನಿನಷ್ಟಗಲದ ಜಾಗದಲ್ಲಿ ಕೂತು ಮಡದಿಯನ್ನೇ ದಿಟ್ಟಿಸಿದ್ದರು.

ಗಂಡ ಹೇಳುವ ಕತೆಯನ್ನು ಉಸಿರು ಬಿಗಿ ಹಿಡಿದು ತನ್ಮಯಳಾಗಿ ಕೇಳಿಸಿಕೊಳ್ಳುತ್ತಿದ್ದ ಸಿರಿದೇವಿಗೆ, ಕವಿಪತ್ನಿಗಾದ ನಿರಾಸೆಯನ್ನು ಕೇಳಿ ಕಣ್ಣು ತೇವಗೊಳ್ಳತೊಡಗಿತ್ತು. ಆಕೆಗೆ ಕಣ್ಣೀರು ಯಾವತ್ತೂ ಒಂದು ಗೇಣು ಮುಂದೆಯೇ. ಇದೀಗ ಕವಿಪತ್ನಿಯ ನೋವಿನ ಕತೆ ಕೇಳಿ ಆಕೆಯ ಮೆಲ್ಲೆದೆ ಕರಗಿ ಕಣ್ಣಲ್ಲಿ ಹನಿಯತೊಡಗಿತ್ತು.

ಹೆಂಡತಿಯ ಕಣ್ಣಾಲಿ ತುಂಬುತ್ತಿರುವುದನ್ನು ಕಂಡು ಗೌಡಮಾಸ್ತ ತನ್ನ ಕತೆ ಹೇಳುವ ತಂತ್ರವನ್ನು ತಾನೇ ಮೆಚ್ಚುತ್ತಾ ಮತ್ತಷ್ಟು ಉಮೇದಿನಿಂದ ಕತೆ ಮುಂದುವರಿಸಿದ್ದ. ಉಡುಪಿಯ ಸಾಹಿತ್ಯ ಹಬ್ಬವನ್ನು ಭಾರವಾದ ಎದೆ ಹೊತ್ತು ಹಾಗೂ ಹೀಗೂ ಮುಗಿಸಿ ಹಿಂದಿರುಗಿದ್ದ ಕವಿಗಳಿಗೆ ಮಡದಿಯನ್ನೊಮ್ಮೆ ಕೃಷ್ಣ ದರ್ಶನಕ್ಕೆ ಕರೆದೊಯ್ಯಲು

ಆಕೆಯನ್ನು ತಾನ್ಹೇಗೆ ಸಮಾಧಾನಿಸಲಿ, ನಿರಾಸೆಯ ಪ್ರಪಾತಕ್ಕೆ ಬಿದ್ದು, ಹೊರಳಾಡುತ್ತಿರುವವಳನ್ನು ಸಂತೈಸದೆ ಅದ್ಹೇಗೆ ಬಿಟ್ಟು ಹೊರಡಲಿ? ಒಟ್ಟಿನಲ್ಲಿ ಕವಿಯವರು ಸಂದಿಗ್ಧತೆ ಅಸಹಾಯಕತೆಯಿಂದ ಬೇಯುತೊಡಗಿದ್ದರು. ಕವಿಗಳು ತಮ್ಮ ಕ್ಷಣಗಳನ್ನು ನುಂಗತೊಡಗಿದ್ದನ್ನು ಸಹಿಸಿಕೊಳ್ಳಲಾಗದ ಸಂಘಟಕರೊಬ್ಬರು ಕಾರೊಳಗಿನಿಂದ ಇಳಿದು ಬಂದು ಕವಿಯವರ ಕೈಯಲ್ಲಿದ್ದ ಚೀಲವನ್ನು ಎತ್ತಿಕೊಳ್ಳ ಬರುವಷ್ಟರಲ್ಲಿ ಕವಿಯವರು ಚೀಲ ಸಮೇತರಾಗಿ ಅಡುಗೆ ಮನೆಗೆ ನುಗ್ಗಿ ಮಂಡಿಯೊಳಗೆ ಮುಖ ಮುಚ್ಚಿ ಅಳುತ್ತಿದ್ದ ಪತ್ನಿಯೆದುರು ಕುಕ್ಕರಗಾಲಲ್ಲಿ ಕೂತು ಆಕೆಯ ಕಣ್ಣೊರೆಸಿ ಸಾಂತ್ವನದ ಮಾತಿಗೆ ಇಳಿದು ಬಿಟ್ಟಿದ್ದರು.



ಜೇಕಾಗುವಷ್ಟು ಹಣವನ್ನು ಜೋಡಿಸುವುದೇ ಒಂದು ಗೀಳಾಗಿ ಬಿಟ್ಟಿತ್ತು. ಆ ಗೀಳಿಗೆ ಬಿದ್ದು ಕವಿಗಳು ಹೊರಳಾಡುತ್ತಿರುವಷ್ಟರಲ್ಲಿ, ಈ ಭಾರತನಾಡಿನ ಭಾರೀ ದೊಡ್ಡ ಪುರಸ್ಕಾರವೊಂದು ಅವರ ಕಾವ್ಯ ಮಾಲೆಗೆ ಒಲಿದು ಬಂದು, ಸಿರಿಯ ಜೊತೆಗೆ ಹಿರಿಮೆಯ ಗರಿಯನ್ನು ಜೋಡಿಸಿ ಬಿಟ್ಟಿತ್ತು. ಕೈಗೆ ಸಿಗದ ಕಾಂಚಾಣವನ್ನು ಹಿಡಿದಿಡಲು ಇನ್ನಿಲ್ಲದ ಪಾಡುಪಟ್ಟಿದ್ದ ಕವಿಗಳತ್ತ ಸದ್ದಿಲ್ಲದೆ ಕಾಂಚಾಣವೇ ಹುಡುಕಿ ಬಂದಿತ್ತು. ಇನ್ನೇನು... ಹಣಕ್ಕೇನು ಕೊರತೆಯಿಲ್ಲ..., ಕವಿಯವರು ಪತ್ನಿ ಸಮೇತರಾಗಿ ಉಡುಪಿಗೆ ಹೊರಡುವ ದಿನವನ್ನಷ್ಟೇ ಗುಣಿಸಿ ಬಾಗಿಸಿ ನಿರ್ಧರಿಸುವಷ್ಟರಲ್ಲಿ ಕವಿಪತ್ನಿಯವರಿಗೆ ಇದ್ದಕ್ಕಿದ್ದಂತೆ ಬಡತನದ ಕೊಡುಗೆಯೆಂಬಂತೆ ಲಕ್ವ ಬಡಿದು ಬಿಟ್ಟಿತ್ತು. ಹಾಗೇ ಹಾಸಿಗೆ ಹಿಡಿದ ಕವಿಪತ್ನಿ ಮತ್ತೆ ಮೇಲೆದ್ದಿದ್ದು ಹೆಣವಾಗಿ.

ಪತ್ನಿಯ ಮಣ್ಣಾದರೂ ಆಕೆಯ ಕೊನೆಯಾಸೆಯ ನೆನಪು ಮಾತ್ರ ಕವಿಯವರಲ್ಲಿ ಹಸಿರಾಗಿತ್ತು. ಆಕೆಯ ಮರಣವಾಗಿ ವರುಷ ಉರುಳುವಷ್ಟರಲ್ಲಿ ಮತ್ತೆ ಮರಳಿ ಬಂದಿತ್ತು- ಉಡುಪಿಯ ಪರ್ಯಾಯ ಸಂಭ್ರಮ. ಆ ಬಾರಿಯಂತೆ ಈ ಬಾರಿಯೂ ಉಡುಪಿಯ ಕಾವ್ಯಪ್ರಿಯರು ಪರ್ಯಾಯದ ಗೌಜಿಯ ನಡುವೆಯೇ ಕಾವ್ಯ ಗೋಷ್ಠಿಯೊಂದನ್ನು ಹಮ್ಮಿಕೊಳ್ಳಲು ತೀರ್ಮಾನಿಸಿದ್ದರು. ಆ ಗೋಷ್ಠಿಯಲ್ಲಿ, ನಾಡಿನ ಬಲುಮಾನ್ಯರಾದ ಈ ಗಾರುಡಿಗ ಕವಿಯವರನ್ನು ಸನ್ಮಾನಿಸಲು ತೀರ್ಮಾನಿಸಿ ಮರುದಿನವೇ ಕಾರೊಂದನ್ನು ಬಯಲು ಸೀಮೆಯತ್ತ ಅಟ್ಟಿ... ಕವಿಯವರನ್ನು ಕಡಲೂರಿಗೆ ಬರುವಂತೆ ಒಪ್ಪಿಸಿಯೂ ಆಯ್ತು. ಕವಿಗಳು ಉಡುಪಿಗೆ ಹೊರಡುವ ದಿನ ಹತ್ತಿರ ಬಂದು... ಇನ್ನೇನು ನಾಳೆಯೇ ತಾನು ಉಡುಪಿಗೆ ಹೊರಡುತ್ತಿದ್ದೇನೆ ಎಂದರೂ ಕವಿಗಳಿಗೆ ಎದೆಯಲ್ಲಿ ಎಳ್ಳಷ್ಟೂ ಸಂತಸವಿಲ್ಲ. ಮಣ್ಣಾದ ಪತ್ನಿಯನ್ನು... ಆಕೆಯಾಸೆಯನ್ನು ಕ್ಷಣ ಕ್ಷಣಕ್ಕೂ ಕವಿಗಳು ಚಿತ್ತಕ್ಕೆತ್ತಿ ತಂದು ತನ್ನ ಮುದಿ ಕಣ್ಣಲ್ಲಿ ಸಾಕಷ್ಟು ನೀರಮುತ್ತುಗಳನ್ನು ಉರುಳಿಸಿದರು. ಇನ್ನೇನು... ಅಂದು ಸಂಜೆಗೇ ತುಳುನಾಡಿಗೆ ಹೊರಡುವ ಕಾರು ಬರುತ್ತಿದೆ- ಎಂದರೂ ಕವಿಗಳಿನ್ನೂ ಸಿದ್ಧರಾಗಿಲ್ಲ. ಅವರು ಅದೇನೋ ಮಹತ್ವರವಾದ ಹತಾರಿನ (ವಸ್ತುವಿನ) ಹುಡುಕಾಟದಲ್ಲಿದ್ದರು. ಕೌದಿಯ ಕೆಳಗೆ ತಡಕಾಡಿದರೂ ಅದರ ಪತ್ತೆಯಿಲ್ಲ... ಟ್ರಂಕಿನಡಿ ಹುಡುಕಾಡಿದರೂ ಪತ್ತೆಯಿಲ್ಲ. ಅಡುಗೆಮನೆಯಲ್ಲಿ ಡಬ್ಬ ಡಬ್ಬ ಶೋಧನೆಯಾಯ್ತು. ಅಲ್ಲೂ ಪತ್ತೆಯಿಲ್ಲ! ಮತ್ತೆಲ್ಲಿದೆ... ಮತ್ತೆಲ್ಲಿದೆ? ಕವಿಗಳು ಕಂಗೆಡತೊಡಗಿದ್ದರು. ಅದನ್ನು ಹುಡುಕಿ ಕೊಡಬೇಕಾದ ಮೂರು ಮಕ್ಕಳೂ ತಾಯಿಗೂಡು ಬಿಟ್ಟು ಪ್ರತ್ಯೇಕ ಗೂಡು ಕಟ್ಟಿ ಹಾರಿಹೋಗಿದ್ದಾರೆ! ಕವಿಗಳು ಮಾನಸಿಕವಾಗಿ ಹಣ್ಣಾಗಿ... ತಣ್ಣಗಾಗ ತೊಡಗಿದ್ದರು.

ಅನೇಕ ಯುಗಾದಿಗಳಿಂದ ತಮ್ಮ ಮಡದಿಗೆ ಸಂಗಾತಿಯಾಗಿದ್ದ ಆಕೆಯ ಕಪ್ಪು ಚಾಳೀಸಿನ ಹುಡುಕಾಟದಲ್ಲಿದ್ದ ಕವಿಗಳು ಇದೀಗ ಅದನ್ನು ಹುಡುಕಿ... ಹುಡುಕಿ... ಬಳಲಿ ಬೆಂಡಾಗುತ್ತಿದ್ದಂತೆ ಧೂಳೆಬ್ಬಿಸುತ್ತ ಆ ಕಾರು ಬಂದೇ ಬಿಟ್ಟಿತ್ತು.

ಕವಿಗಳ ಕಣ್ಣಲ್ಲಿ ಧಾರಾಕಾರವಾಗಿ ನೀರಿಳಿಯತೊಡಗಿತ್ತು. ಈ ಬಾರಿ ಕಡಲ ಜಿಲ್ಲೆಗೆ ಹೊರಡುವಾಗ ಪತ್ನಿ ಜತೆಗಿಲ್ಲದಿದ್ದರೂ ಆಕೆಯಷ್ಟೇ.. ಆಕೆಯ ಮೊಗದಷ್ಟೇ ಪ್ರಿಯವಾಗಿದ್ದ ಆಕೆಯ ಚಾಳೀಸನ್ನು ತುಳುವ ಜಿಲ್ಲೆಗೆ ಕೊಂಡೊಯ್ದು ಅದಕ್ಕೆ ಕೃಷ್ಣದರ್ಶನ ಮಾಡಿಸುವ ಮೂಲಕ, ಆಕೆಗೇ ಕೃಷ್ಣದರ್ಶನ ಮಾಡಿಸಿದೆನೆಂಬ ಆತ್ಮತೃಪ್ತಿ ಪಟ್ಟುಕೊಳ್ಳಲು ಭಾವುಕ ಕವಿಗಳು ನಿರ್ಧರಿಸಿದ್ದರು.

ಕಾರು ಬಂದು ಅಂಗಳದಲ್ಲಿ ನಿಂತರೂ ಕವಿಗಳಿನ್ನೂ ಹನಿಗಣ್ಣಾಗಿಯೇ ಚಳೀಸಿನ ಹುಡಕಾಟದಲ್ಲಿದ್ದರು. ಕವಿಗಳು 'ಹಣದ ಗಂಟಿನ ಹುಡುಕಾಟದಲ್ಲಿದ್ದಾರೆ' ಎಂದು ಕಡಲೂರಿನವರು ತಿಳಿಯುತ್ತಿದ್ದಂತೆ ಕವಿಗಳ ಕೈಗೇ ಪತ್ನಿಯ ಚಾಳೀಸು ಸಿಕ್ಕೇ ಬಿಟ್ಟಿತ್ತು. ಕವಿಯವರು ದೂರದೂರಿಗೆಲ್ಲ ಹೋಗುವಾಗ ತೊಟ್ಟುಕೊಳ್ಳುತ್ತಿದ್ದ ಕಪ್ಪು ಕೋಟಿನ ಬಲಭಾಗದ ಜೇಬಲ್ಲದು ಭದ್ರವಾಗಿ ಕೂತಿತ್ತು. ಕವಿಗಳ ಕೈಗಂತೂ ಸ್ವರ್ಗವೇ ಬಂದಂತಾಗಿತ್ತು. ಮಳೆ ಬಂದು ನಿಂತೊಡನೆ ಕಾಣುವ ಶುಭ್ರ ಆಕಾಶದಂತೆ ಕವಿಗಳ ಮುಖ ಭಾವನೆ ಸಂಪೂರ್ಣ ಬದಲಾಗಿತ್ತು.

ಕಾರು ನಿಧಾನಕ್ಕೆ ಕಡಲೂರತ್ತ ಸಾಗಿತ್ತು. ಪಯಣದುದ್ದಕ್ಕೂ ಕವಿಗಳ ಕರಿಕೋಟಿನ ಬಲಜೇಬಿನ ಕತ್ತಲಲ್ಲೇ ಅಡಗಿ ಕೂತು ದಾರಿ ಸವೆಸುತ್ತಿದ್ದ ಆ ಚಾಳೀಸು ಬೆಳಕು ಕಂಡಿದ್ದು ಕಾರು ಅಷ್ಟಮಠಗಳ ಹೊರ ಆವರಣ ಹೊಕ್ಕ ನಂತರವಷ್ಟೆ. ಉಡುಪಿ ದೇವಳದ ಪ್ರಾಂಗಣವೇರಿದ ಕವಿಗಳು ತನ್ನ ಚಾಳೀಸನ್ನು ಕೋಟಿನ ಎಡಜೇಬಿಗಿಳಿಸಿ, ಬಲಜೇಬಲ್ಲಿದ್ದ ಪತ್ನಿಯ ಚಾಳೀಸನ್ನು ಹಾಕಿಕೊಂಡು ಕನಕನ ಕಿಂಡಿಯಲ್ಲಿ ಇಣುಕು ಹಾಕಿದರು- ಮತ್ತೆ ಮತ್ತೆ ಇಣುಕು ಹಾಕಿ ಶ್ರೀಕೃಷ್ಣನನ್ನು ಸಾಕಷ್ಟು ದಿಟ್ಟಿಸಿದ್ದರು; ಕಣ್ಣು ಸೋಲುವಷ್ಟು ದಿಟ್ಟಿಸಿದರು- ಕಡಲೂರ ಕಾರು ಅವರಿಗಾಗಿ ಸಾಕಷ್ಟು ಹೊತ್ತು ಹೊರಗಡೆ ಕಾದಿತ್ತು...

ಗೌಡಮಾಸ್ಟ ತನ್ನ ಕತೆಮುಗಿಸುವಷ್ಟರಲ್ಲಿ ಮೂಡಿದ್ದ ತಿಂಗಳು ಸಾಕಷ್ಟು ಮೇಲೇರಿಯಾಗಿತ್ತು. ಕಡಲಂತೂ ಆ ಚಂದ್ರನ ಮೋಡಿಗೆ ಸಿಲುಕಿ ಮೊರೆಯುತ್ತಾ... ಅಬ್ಬರಿಸುತ್ತ ಹಿಗ್ಗ ತೊಡಗಿತ್ತು. ಸಿರಿದೇವಿ ಹಾಗೆಯೇ ಗಂಡನನ್ನು ಅಪ್ಪುತ್ತ ಆ ಕವಿಯನ್ನೂ ಕವಿಪತ್ನಿಯ ಚಾಳೀಸನ್ನೂ ನೆನಪಿಸಿಕೊಳ್ಳ ತೊಡಗಿದ್ದಳು. □

ನಾಗರಿಕರೆನಿಸಿದವರೆಲ್ಲರೂ ಭಯೋತ್ಪಾದಕರೇ!

ಭಯೋತ್ಪಾದನೆ ಇಡೀ ಜಗತ್ತನ್ನು ನಡುಗಿಸುತ್ತಿರುವ ಬಹು ದೊಡ್ಡ ಪಿಡುಗು. ಬಲಿಷ್ಠ ರಾಷ್ಟ್ರಗಳು ದುರ್ಬಲ ರಾಷ್ಟ್ರಗಳನ್ನು ಹದ್ದುಬಸ್ತಿನಲ್ಲಿಡಲು ಬಳಸುತ್ತಿದ್ದ ಈ ಅಸ್ತ್ರ ಈಗ ಬಹುವ್ಯಾಪಿಯಾಗಿದ್ದು, ಇಡೀ ಜಗತ್ತನ್ನೇ ನಡುಗಿಸುತ್ತಿದೆ. ಶಾಂತಿ-ಸಹಬಾಳ್ವೆ ಆಶಿಸುವ ಎಲ್ಲರ ನೆಮ್ಮದಿ ಕೆಡಿಸಿದೆ. ಇತ್ತೀಚೆಗಂತೂ ಅದು ಧಾರ್ಮಿಕ ನೆಲೆಗಟ್ಟಿನ ಮೇಲೆ ವಿಸ್ತರಿಸಿಕೊಳ್ಳುತ್ತ ಜನಾಂಗ- ಜನಾಂಗಗಳ ನಡುವಿನ ದ್ವೇಷಕ್ಕೆ ಕಾರಣವಾಗುತ್ತಿದೆ. ಈ ಕುರಿತು ಚರ್ಚಿಸಬೇಕೆಂದು 'ಸಂವಾದ' ಇಚ್ಛಿಸಿದೆ. ಅದಕ್ಕಾಗಿ ಈ ಕೆಳಗಿನ ಪ್ರಶ್ನೆಗಳನ್ನು ಆಯ್ದ ಕೆಲವು ಚಿಂತಕರು ಹಾಗೂ ಸಾಮಾಜಿಕ ಕಾರ್ಯಕರ್ತರಿಗೆ 'ಸಂವಾದ' ಕಳುಹಿಸಿಕೊಟ್ಟಿತ್ತು. ಬಂದ ಉತ್ತರಗಳಲ್ಲಿ ಕೆಲವನ್ನು ಇಲ್ಲಿ ಮುದ್ರಿಸುತ್ತಿದ್ದೇವೆ. ಓದುಗರೂ ಈ ಚರ್ಚೆಯಲ್ಲಿ ಪಾಲ್ಗೊಳ್ಳಬೇಕೆಂಬುದು ನಮ್ಮ ಆಶಯ.

ಪ್ರಶ್ನೆಗಳು:

೧. ಭಯೋತ್ಪಾದನೆಯನ್ನು ನೀವು ಹೇಗೆ ವ್ಯಾಖ್ಯಾನಿಸುತ್ತೀರಿ? ಭಯೋತ್ಪಾದನೆಯ ಹಿಂದೆ ಇರುವ 'ಯುದ್ಧ ಸಿದ್ಧಾಂತ'ಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆ ಏನು?

೨. ಮುಸ್ಲಿಮರೆಲ್ಲ ದುಷ್ಟರು ಮತ್ತು ಭಯೋತ್ಪಾದಕರೆಂದು ಬಿಂಬಿಸುವ ಪ್ರಯತ್ನ ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ವ್ಯವಸ್ಥಿತವಾಗಿ ನಡೆಯುತ್ತಿದೆ. ಒಂದು ಧರ್ಮವನ್ನು ಹಾಗೂ ಅದನ್ನು ಅವಲಂಬಿಸಿರುವವರನ್ನು ಸಾರಾ ಸಗಟು ಭಯೋತ್ಪಾದಕರೆಂದು ನಿಂದನೆಗೆ ಗುರಿ ಮಾಡುವುದು ಸರಿಯೇ? ಚರಿತ್ರೆಯ ದೀರ್ಘಕಾಲೀನ ಪರಿಣಾಮದಲ್ಲಿ ಇದು ಯಾವ ಆಯಾಮಗಳನ್ನು ಪಡೆದುಕೊಳ್ಳಬಹುದು?

೩. ಭಯೋತ್ಪಾದನೆ ಮೂಲತಃ ಅಮೆರಿಕಾದಂತಹ ಬಂಡವಾಳಶಾಹಿ ರಾಷ್ಟ್ರಗಳ ರಾಜಕೀಯ ದಾಳವಾಗಿ ಬಳಸಲ್ಪಡುತ್ತಿತ್ತಾದರೂ ಈಚೆಗೆ "ಇಸ್ಲಾಂ" ಮಾತ್ರ ಇಂಥ ಆಪಾದನೆಗೇಕೆ ಗುರಿಯಾಯಿತು? ಬೇರೆ ಧರ್ಮದ ಜನ ಭಯೋತ್ಪಾದನೆಯಲ್ಲಿ ತೊಡಗಿದ್ದರೂ ಆ ಧರ್ಮವನ್ನೇಕೆ ಭಯೋತ್ಪಾದನೆ ಜತೆ ಸಮೀಕರಿಸುತ್ತಿಲ್ಲ?

೪. ಭಯೋತ್ಪಾದನೆಯ ನಿವಾರಣೆಗೆ ನೀವು ಸೂಚಿಸುವ ಮಾರ್ಗೋಪಾಯಗಳೇನು?

ಕೃಷ್ಣಮೂರ್ತಿ ಬಿಳಿಗೆರೆ
ಸಾಹಿತಿ, ಚಿಂತಕ



೧. ಮ[illegible] ಉದ್ರೇಕ ನೀಡುತ್ತಾ [illegible] ದುರಂತಕ್ಕೆ ಕಾರಣ ಮತ್ತು ಈ ಉದ್ರೇಕದ ಪರಿಣಾಮವೇ ಧರ್ಮಯುದ್ಧಗಳೆಂಬ ರಕ್ತಕ್ರಾಂತಿ.

ಪ್ರಭುತ್ವ ಮತ್ತು ಧರ್ಮಗಳಿಗೆ ಬಹುಜನರ ಹಿತ ಎಂದೂ ಮುಖ್ಯವಾಗಿರಲಿಲ್ಲ. ತಮ್ಮ ಅಸ್ತಿತ್ವ ಮತ್ತು ಏಳಿಗೆ ಮಾತ್ರ ಮುಖ್ಯ ಹಿಂದೆಯೂ ಈಗಲೂ. ಒಳ್ಳೆಯ ಜನರ ಮಹಾಪ್ರಯತ್ನದ ಫಲವಾಗಿ ಶ್ರೇಷ್ಠವಾದ ಪ್ರಜಾಪ್ರಭುತ್ವ ಅಸ್ತಿತ್ವಕ್ಕೆ ಬಂದರೂ ಅದೂ ಸೋಲುತ್ತಿರುವುದಕ್ಕೆ ಪ್ರಭುತ್ವ ದೊಳಗೆ ನುಸುಳಿರುವ ರಾಜತ್ವ ಮತ್ತು ಶ್ರೀಮಂತ ಪ್ರಭುತ್ವದ ವೈರಸ್‌ಗಳು ಕಾರಣ. ಇದಕ್ಕೂ ಮುಖ್ಯವಾಗಿ ಸಾಂಸ್ಥಿಕ ಧರ್ಮಗಳು ಈಗಲೂ ಪ್ರಜಾಪ್ರಭುತ್ವದ ವ್ಯಾಪ್ತಿಗೆ ಬರದೆ ಬಿಟ್ಟು ಮೇಯುತ್ತಿರುವುದು ಕಾರಣವಾಗಿದೆ.

೨. ಈ ಪ್ರಕೃತಿಯ ದೃಷ್ಟಿಯಲ್ಲಿ ಮುಸ್ಲಿಮರೇ ಏಕೆ ಈ ಭೂಮಂಡಲದ ಮೇಲೆ ನಾಗರಿಕರೆನಿಸಿದವರೆಲ್ಲರೂ ಭಯೋತ್ಪಾದಕರೇ. ಇಲ್ಲಿ ಏನನ್ನು ತಾನೆ ಬಾಳಬಿಟ್ಟಿದ್ದೇವೆ? ಕಾಡು, ಪ್ರಾಣಿ, ಪಕ್ಷಿ, ನದಿ, ಆಕಾಶ, ಗುಡ್ಡ, ತೊರೆ, ಮಣ್ಣು ಗಾಳಿ ಎಲ್ಲವನ್ನೂ ಬಗಾಲು ಮಾಡಿದ್ದೇವೆ. ನದಿ ಕೊಳೆಸಿ, ಕಾಡು ಸುಟ್ಟು, ಓಜೋನ್ ಸೂಡಾಡಿ ಪ್ರಾಣಿ ಪಕ್ಷಿಗಳನ್ನು ಕೊಂದು ಎಲ್ಲೆಲ್ಲೂ ಮನುಷ್ಯ ಹುಳುಗಳೇ ಪ್ರತಿಷ್ಠಾಪಿತವಾಗಿದ್ದೇವೆ. ಇಲ್ಲೂ ಅನ್ಯಾಯ ಅಸಮಾನತೆಗಳೇ ತುಂಬ. ನಮಗೆ ನಾವೇ ಹಗೆಯಾಗಿದ್ದೇವೆ..ಆ ಮಾತು ಒತ್ತಟ್ಟಿಗಿರಲಿ.

ಮುಸ್ಲಿಂ ಧರ್ಮೀಯರು ಮಹಾಮೂರ್ಖರ, ರಕ್ತಪ್ರಿಯರ ಕೈಗೆ ಸಿಕ್ಕಿ ನರಳುತ್ತಿರುವುದು, ಸ್ವಹಿಂಸೆಗೆ ತೊಡಗಿರುವುದು, ಹಾಗೆಯೇ ಇತರರನ್ನು ನರಳುವಂತೆ ಮಾಡುತ್ತಿರುವುದು ನಿಜವೇ. ಇದಕ್ಕಿಂತಲೂ ಹೆಚ್ಚಾಗಿ ಈ ಸಗಟು ಭಯೋತ್ಪಾದನೆಯಲ್ಲಿ ತೊಡಗಿರುವುದು, ಶ್ರೀಮಂತ ಅದರಲ್ಲೂ ಈಗ್ಗೆ ಎರಡು ಶತಮಾನಗಳಿಂದಲೂ ತಿಂದು ಕೊಬ್ಬಿರುವ ಯೂರೋಪಿನ ಶ್ರೀಮಂತ ರಾಷ್ಟ್ರಗಳ ವ್ಯಾಪಾರಿ ಪ್ರಭುತ್ವ. ಇರಾನ್, ಇರಾಕ್, ಪಾಕಿಸ್ತಾನ, ಆಫ್ಘಾನಿಸ್ತಾನ, ಪ್ಯಾಲಸ್ಟೀನ್‌ಗಳಲ್ಲಿ ಸದರಿ ಪ್ರಾಣವ್ಯಾಪಾರಿಗಳು ನಡೆಸುತ್ತಿರುವ ಕೇಡಿನ ವಿರಾಟ್ ಕ್ರಿಯೆಗಳಿಗೆ ಪ್ರತಿಕ್ರಿಯೆ ತೋರುತ್ತಿರುವವರು ಈ ಧಾರ್ಮಿಕ ಭಯೋತ್ಪಾದಕರು ಎಲ್ಲಾ ಧರ್ಮಗಳಲ್ಲೂ ಸ್ಫೋಟಿಸಿ ಆವರಿಸುವ ಕ್ರೌರ್ಯ ಇರುವಂತೆ ಮುಸ್ಲಿಂ ಧರ್ಮದಲ್ಲೂ ಇದೆ. ಹಾಗೆ ನೋಡಿದರೆ ಎಲ್ಲಾ ಅಹಂಕಾರಿ ಸಾಂಸ್ಥಿಕ ಧರ್ಮಗಳೂ ಯುದ್ಧ ಮತ್ತು ಭಯೋತ್ಪಾದನೆಗೆ ಮಣೆ ಹಾಕಿದ ಚರಿತ್ರೆಯನ್ನೇ ಹೊಂದಿವೆ. ಕ್ರುಸೇಡ್, ಧರ್ಮಯುದ್ಧ, ಜೆಹಾದ್ ಹೀಗೆ ಹೆಸರು ಬೇರೆ ಬೇರೆ ಅಷ್ಟೆ

ಮುಸ್ಲಿಂ ಧರ್ಮ ಒಂದರ ಮೇಲೆ ಹೀಗೆ ಗೂಬೆ ಕೂರಿಸುತ್ತಿರುವುದಕ್ಕೆ ಕಾರಣ ಅಮೆರಿಕನ್ ಗೌಡಿಕೆ ಅಷ್ಟೆ. ರಷ್ಯಾ ಪತನ ನಂತರವಷ್ಟೇ ಈ ಬೆಳವಣಿಗೆಗಳು ಹೆಚ್ಚಾಗಿರುವುದನ್ನು ಗಮನಿಸಿದರೆ ಇದು ಸ್ಪಷ್ಟವಾಗುತ್ತದೆ. ಧರ್ಮ ವಿಚಾರ ಅರ್ಥ ವಿಚಾರ ಕಾಮ ವಿಚಾರ ಮತ್ತು ಮೋಕ್ಷ ವಿಚಾರಗಳಲ್ಲೆಲ್ಲಾ ಅಮೆರಿಕಾದ ಮಾತೇ ಅಂತಿಮ ಎನ್ನುವಂತಾಗಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ.

೩. ಕ್ರೈಸ್ತ ಧರ್ಮ ತಲುಪಬಯಸಿದ್ದ ಜಗತ್ತಿನ ಬಹುಪ್ರದೇಶಗಳನ್ನು ಅಗೋ ಇಗೋ ಎನ್ನುವ ಹೊತ್ತಿಗೆ ಇಸ್ಲಾಂ ಹಬ್ಬಿ ಬೆಳೆದ ಚೋದ್ಯವನ್ನು ಕ್ರೀಡಾ ಮನೋಭಾವದಿಂದ ಗ್ರಹಿಸದ ಯೂರೋಪ್ ಮತ್ತು ಅಮೆರಿಕಾ ಸೇಡಿನ ರಾಜಕೀಯ ಮಾಡಬಯಸಿರುವುದು ನಿಚ್ಚಳವಾಗಿದೆ. ಇದು ಧರ್ಮದ್ವೇಷಕ್ಕೆ ಮಾತ್ರವಲ್ಲದೆ ಕಾಂಚಾಣ ಸಾಮ್ರಾಜ್ಯ ಸ್ಥಾಪನೆಯ ಗುರಿ ಹೊಂದಿದೆ.

ಸಹಜವಾಗಿಯೇ ಬಾಯಿ ಮುಂದೆ ಮಾಡಿ ಬೆಳ್ಳಗೆ ಮಾತನಾಡುವ ಅಮೆರಿಕಾಕ್ಕೆ ಇಸ್ಲಾಂ ಧರ್ಮವನ್ನು ಇಸ್ಲಾಂ

(೨೮ನೇ ಪುಟಕ್ಕೆ)

ಜಾಗತಿಕ ಮಾರುಕಟ್ಟೆಯಲ್ಲಿ ಭಯದ ಉತ್ಪಾದನೆ ಮತ್ತು ಮಾರಾಟ

ಡಾ॥ ವಸು
ಚರಿತ್ರಕಾರರು, ಚಿಂತಕರು

ಭಯೋತ್ಪಾದನೆ ಚರ್ಚೆ

ದಮನಕಾರಿ ಚಟುವಟಿಕೆಯ ಮೂಲಕ ಪ್ರಭುತ್ವದ ಗಮನ ಸೆಳೆಯಲು ಮಾಡುವ ಪ್ರಯತ್ನ ಭಯೋತ್ಪಾದನೆ ಎಂದು ವ್ಯಾಖ್ಯಾನಿಸಬಹುದು. ವ್ಯವಸ್ಥೆಗೆ ವಿರುದ್ಧವಾಗ ಆಶೋತ್ತರಗಳನ್ನು ಅದರಲ್ಲೂ ಸೈದ್ಧಾಂತಿಕ ಗುರಿಗಳನ್ನು ಹೊಂದಿದ ವ್ಯಕ್ತಿಗಳು ಅಥವಾ ಸಂಘಟನೆಗಳು ಭಯೋತ್ಪಾದನೆಯನ್ನು ಹೋರಾಟದ ಒಂದು ತಂತ್ರವಾಗಿ ಬಳಸಿಕೊಳ್ಳುತ್ತಾ ಬಂದಿವೆ. ಶಸ್ತ್ರ ಸಜ್ಜಿತ ಸೈನ್ಯದೊಂದಿಗೆ ಯುದ್ಧ ಮಾಡಲು ಈ ಸಂಘಟನೆಗಳಿಗೆ ಸಾಧ್ಯವಿರುವುದಿಲ್ಲ. ಏಕೆಂದರೆ ಅಸ್ತಿತ್ವದಲ್ಲಿರುವ ದೇಶಗಳ ಎದುರು ಹೋರಾಡುವಷ್ಟು ಹಣಬಲವಾಗಲೀ, ಸೈನಿಕಬಲವಾಗಲಿ ಇಲ್ಲದಿರುವುದು ಇಂತಹ ಬೆದರಿಕೆಯ ಮಾರ್ಗವನ್ನೇ ಹುಡುಕಿಕೊಳ್ಳುತ್ತದೆ. ಇನ್ನು ಪ್ರಜಾಪ್ರಭುತ್ವದ ವ್ಯಾಪ್ತಿಯೊಳಗೆ ಹೋರಾಡಲು ಇವು ಕಾನೂನು ಬಾಹಿರ ಪಟ್ಟಿಯನ್ನು ಸೇರಿರುತ್ತವೆ. ವಿಸ್ತಾರವಾದ ಜನಸ್ತೋಮವನ್ನು ತನ್ನೆಡೆಗೆ ಸೆಳೆದುಕೊಳ್ಳುವಷ್ಟು ನಿಧಾನಗತಿಯಲ್ಲಿ ಹೋಗುವ ಮನಸ್ಥಿತಿಯಲ್ಲಿರದೆ ಆವೇಶದ ದ್ವೇಷದ ಮನಸ್ಥಿತಿಯಲ್ಲಿ ಹೋರಾಟಗಳು ಹುಟ್ಟಿರುವ ಸಾಧ್ಯತೆಯೂ ಇರುತ್ತದೆ. ಎರಡು ಮಹಾಯುದ್ಧಗಳ ನಡುವೆ ೨೦ನೆಯ ಶತಮಾನದ ಮೊದಲಭಾಗದಲ್ಲಿ ಬೆಳೆದ ಸಾಮ್ರಾಜ್ಯಶಾಹಿ, ವಸಾಹತುಶಾಹಿ ವಿರೋಧಿ ಹೋರಾಟದ ಒಂದು ವೈಖರಿ ಭಯೋತ್ಪಾದನೆಯಾಗಿತ್ತು. ಪ್ರಭುತ್ವವನ್ನು ಸಂಕೇತಿಸುವ ಕಟ್ಟಡಗಳನ್ನು ಸಿಡಿಸಿ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸುವ ಮೂಲಕ ಐರಿಶ್ ಜನತೆ ಸ್ವಾಯತ್ತತೆಯನ್ನು ಪಡೆದುಕೊಳ್ಳಬಯಸಿದರು. ಇಂಗ್ಲೆಂಡಿನ ದಬ್ಬಾಳಿಕೆಯನ್ನು ನಿರಂತರವಾಗಿ ವಿರೋಧಿಸಿದ್ದರು. ಅದೇ ಭಾರತದ ಭಯೋತ್ಪಾದಕರಿಗೂ ಪ್ರೇರಣೆಯಾಗಿತ್ತು.

ಭಾರತದಲ್ಲಿ ೧೮೫೭ರ ನಂತರ ನಾಗರಿಕ ಹೋರಾಟಗಳು ಆರಂಭವಾದ ನಂತರ ಅಲ್ಲಲ್ಲಿ ಹಿಂಸಾತ್ಮಕ ಮಾರ್ಗದಲ್ಲಿ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸತೊಡಗಿದರು. ಸಾವರ್ಕರ್, ಸುಖದೇವ್, ರಾಜ್‌ಗುರು, ಭಗತ್‌ಸಿಂಗ್‌ರಂತಹ ಹೋರಾಟಗಾರರು ರಾಷ್ಟ್ರಪ್ರೇಮಿಗಳಾಗಿ ಆರಾಧನೆಗೆ ಒಳಗಾಗಿದ್ದಾರೆ. ಅದೇ ಶಸ್ತ್ರಸಜ್ಜಿತ ಹೋರಾಟವನ್ನು ನಂಬಿ ಸೈನ್ಯಕಟ್ಟಿಕೊಂಡಿದ್ದ ಸುಭಾಸ್ ಚಂದ್ರಭೋಸ್ ಭಯೋತ್ಪಾದಕರೆನಿಸಿಕೊಳ್ಳುವುದಿಲ್ಲ. ಏಕೆಂದರೆ ಅವರು ನೇರ ಯುದ್ಧಕ್ಕೆ ಇಳಿದಿದ್ದರು. ವಸಾಹತು ವಿರುದ್ಧ ೧೮೫೭ಕ್ಕೆ ಮೊದಲು ದೇಶದಾದ್ಯಂತ ಬುಡಕಟ್ಟು ಮತ್ತು ರೈತದಂಗೆಗಳು ನಡೆದವು. ಅವರು ಶಸ್ತ್ರಾಸ್ತ್ರಗಳನ್ನು ಹಿಡಿದೇ ಹೋರಾಡಿದರು. ಆದರೆ ಅವರನ್ನು ಭಯೋತ್ಪಾದಕರೆಂದು ಕರೆಯುವುದಿಲ್ಲ. ಅವು ಶಸ್ತ್ರ ಸಜ್ಜಿತವಾದ ದಂಗೆಗಳಾಗಿದ್ದವು.

ಆಧುನಿಕ ಭಾರತದಲ್ಲಿ ಕಾಶ್ಮೀರ ವಿಮೋಚನೆ, ಖಲಿಸ್ತಾನದ ಹಿನ್ನೆಲೆಯಲ್ಲಿ ಭಯೋತ್ಪಾದಕ ಚಟುವಟಿಕೆಗಳು ಆರಂಭವಾದವು. ದೇಶದ ಆಂತರಿಕ ಭದ್ರತೆಯನ್ನೇ ಅಲುಗಾಡಿಸಿದವು. ಸಣ್ಣ ಗುಂಪುಗಳಾಗಿದ್ದರೂ ತಮ್ಮ ಆಲೋಚನೆಗೆ ನಿಲುಕಿದ ವಿಚಾರವನ್ನು ಆದರ್ಶವೆಂದು ನಂಬುತ್ತಾ ಪ್ರತ್ಯೇಕತೆಯ ಹೋರಾಟವನ್ನು ಆರಂಭಿಸಿದವು. ಸರ್ಕಾರದ ವಿರುದ್ಧ ನಡೆಯುವ ಚಟುವಟಿಕೆಯಾದ್ದರಿಂದ ಅವರ ಚಟುವಟಿಕೆಗಳು ಭೂಗತವಾಗಿದ್ದವು. ಇದೇ ಅವಕಾಶವನ್ನು ಬಳಸಿಕೊಂಡ ಪಾಕಿಸ್ತಾನ ಇದಕ್ಕೆ ಬೆಂಬಲನೀಡತೊಡಗಿತು. ರಾಜಕೀಯಕ್ಕೆ ಧರ್ಮವನ್ನು ಎಳೆದುತರಲಾಯಿತು.

> **ಭಯೋತ್ಪಾದನೆಯಲ್ಲಿ ಮುಸ್ಲಿಮರು ಮಾತ್ರವಲ್ಲ ತಮಿಳು ಸಿಂಹಳೀಯರು ಶ್ರೀಲಂಕಾದಲ್ಲಿ ಇದೇ ಮಾರ್ಗವನ್ನು ಅನುಸರಿಸುತ್ತಾ ಬಂದಿದ್ದಾರೆ.**

ಅಂತರರಾಷ್ಟ್ರೀಯ ಮಟ್ಟದಲ್ಲಿ ಇಸ್ರೇಲ್ ಭಯೋತ್ಪಾದಕರ ವಿರುದ್ಧ ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸತೊಡಗಿತು. ಹಾಗೆಯೇ ರಷ್ಯಾ ಮತ್ತು ಅಮೆರಿಕದ ನಡುವಿನ ಪೈಪೋಟಿಯಲ್ಲಿ ಪರಸ್ಪರ ಆಂತರಿಕ ಭದ್ರತೆಯನ್ನು ಹಾಳುಮಾಡಲೋಸುಗ ಕಟ್ಟಡಗಳನ್ನು ಸಿಡಿಸಿ ಅಣೆಕಟ್ಟೆಗಳನ್ನು ಒಡೆದುಹಾಕುತ್ತಿದ್ದವು. ಇಲ್ಲಿಯ ಭಯೋತ್ಪಾದಕತೆಯ ಉದ್ದೇಶ ಪರಸ್ಪರ ಪೈಪೋಟಿ ಮಾತ್ರವೇ ಆಗಿತ್ತು. ಈ ಹೋರಾಟ ಎರಡು ದೇಶಗಳ ನಡುವೆ ಮಾತ್ರ ಉಳಿಯದೆ ಎರಡು ಬಣಗಳಾಗಿ ಮಾರ್ಪಟ್ಟವು. ಎರಡು ಬಣಗಳ ನಡುವಿನ ಘರ್ಷಣೆಯ ಭಾಗವಾಗಿ ಭಯೋತ್ಪಾದಕತೆ ಬಳಕೆಯಾಗತೊಡಗಿತು. ಕ್ಯೂಬಾವನ್ನು ಅಮೆರಿಕ ಗುಮಾನಿಯಿಂದ ನೋಡಿದರೆ, ಉತ್ತರ ಕೊರಿಯಾವನ್ನು ದಕ್ಷಿಣ ಕೊರಿಯ ಅನುಮಾನಿಸುತ್ತಿತ್ತು. ಈ ಹಂತದಲ್ಲಿ ಶೀತಲ ಸಮಾರದ ಭಾಗವಾಗಿ ಭಯೋತ್ಪಾದನೆಯನ್ನು ನೋಡಬಹುದು.

ಈ ಭಯೋತ್ಪಾದನೆಯ ಮಸಿ ಇಸ್ಲಾಂ ದೇಶಗಳಿಗೆ ಅಂಟಿಕೊಂಡಾಗ ಜಾಗತಿಕವಾಗಿ ರಷ್ಯಾ ಕುಸಿದು ಅಮೆರಿಕದಲ್ಲಿ ಶಕ್ತಿ ಧ್ರುವೀಕರಣಗೊಂಡಿತ್ತು. ಪರಸ್ಪರ ದೇಶಗಳ ನಡುವಿನ ವ್ಯಾಪಾರಕ್ಕೆ ಬದಲಾಗಿ ಜಾಗತಿಕ ಮಾರುಕಟ್ಟೆಯ ಕಡೆ ಪಾಶ್ಚಿಮಾತ್ಯ ರಾಷ್ಟ್ರಗಳು ದಾಪುಗಾಲು ಹಾಕಿದವು. ಅಮೆರಿಕದ ಚಾಕಚಕ್ಯತೆಯಿಲ್ಲದ ಅಪಾರ ಎಣ್ಣೆ ಸಂಪತ್ತನ್ನು, ಯೂರೋಪಿಯನ್ನರಿಂದ ಭಿನ್ನವಾದ ಧರ್ಮವನ್ನು ಹೊಂದಿದ ಮಧ್ಯ ಏಷ್ಯಾ ರಾಷ್ಟ್ರಗಳು ಅಮೆರಿಕದ ವಕ್ರದೃಷ್ಟಿಗೆ ಬಲಿಯಾಗತೊಡಗಿದವು. ಅಫ್ಘಾನಿಸ್ತಾನದಂತಹ ಹಿಂದುಳಿದ ದೇಶ ರಾಜಕೀಯವಾಗಿ, ಸಾಮಾಜಿಕವಾಗಿಯೂ ಅಸ್ಥಿರವಾಗಿದ್ದು ಧಾರ್ಮಿಕ ಮೂಲಭೂತವಾದ ಅಮೆರಿಕದ ಹದ್ದಿನ ಕಣ್ಣಿಗೆ ಬಿತ್ತು. ಹಾಗೆಯೇ ಇರಾಕ್‌ನ್ನು ತನ್ನ ಕೈಗೆ ತೆಗೆದುಕೊಳ್ಳಲು ಅಮೆರಿಕಕ್ಕೆ ಸಾಕಾಯಿತು. ತೋಳ-ಕುರಿಯ ನೀತಿಯಲ್ಲಿ ಸಮರ್ಥನೆಗಳನ್ನು ಪ್ರಶ್ನಿಸುವವರಾರು? ಅಮೆರಿಕಾದಂತಹ ದೈತ್ಯಶಕ್ತಿಯನ್ನು ಯುದ್ಧದಲ್ಲಿ ಎದುರಿಸಲಾಗದ ಮಧ್ಯ ಏಷ್ಯಾ ಅಸಹಾಯಕತೆ, ಅವ್ಯುಡುಗಚ್ಚಿದ ದ್ವೇಷ, ಅಂತರಂಗದ ಉರಿಯನ್ನು ಹೊರಹಾಕಲು ಭಯೋತ್ಪಾದನೆಯನ್ನು ಮಾರ್ಗವಾಗಿಸಿಕೊಂಡಿತು. ಇಂತಹದೇ ರಾಜಕೀಯ ದಾಳಕ್ಕೆ ಬಲಿಯಾಗುತ್ತಿರುವ ಮತ್ತೊಂದು ದೇಶ ಪಾಕಿಸ್ತಾನ.

ಧಾರ್ಮಿಕ ಕಾರಣದಿಂದ ಭಾರತದಿಂದ ಪ್ರತ್ಯೇಕವಾಗಿ ಅಭಿವೃದ್ಧಿಯಲ್ಲೂ ಹಿಂದೆ ಬಿದ್ದ ಪಾಕಿಸ್ತಾನ ಭಾರತದೊಂದಿಗಿನ ಪೈಪೋಟಿಯನ್ನು ಮುಂದುವರೆಸುತ್ತಾ ಭಯೋತ್ಪಾದಕ ಶಕ್ತಿಗಳನ್ನು ಹುಟ್ಟುಹಾಕುವ ಮೂಲಕ ಭಾರತದ ಹಿಂದೂ ಮೂಲಭೂತವಾದಕ್ಕೆ ಉತ್ತರಕೊಡಲು ಪ್ರಯತ್ನಿಸುತ್ತಾ ಬಂದಿದೆ.

ಭಯೋತ್ಪಾದನೆಯಲ್ಲಿ ಮುಸ್ಲಿಮರು ಮಾತ್ರವಲ್ಲ ತಮಿಳು ಸಿಂಹಳೀಯರು ಶ್ರೀಲಂಕಾದಲ್ಲಿ ಇದೇ ಮಾರ್ಗವನ್ನು ಅನುಸರಿಸುತ್ತಾ ಬಂದಿದ್ದಾರೆ. ಭಾರತದಲ್ಲೇ ಉತ್ತರ ಪೂರ್ವ ರಾಜ್ಯಗಳಲ್ಲಿ ಆಗಾಗ್ಗೆ ಇದು ವ್ಯಕ್ತವಾಗಿದೆ. ಭಯೋತ್ಪಾದಕರಿಗೆ ತರಬೇತು ನೀಡುವ ರಾಷ್ಟ್ರಗಳಲ್ಲಿ ಯೂರೋಪಿನ ರಾಷ್ಟ್ರಗಳೇ ಮುಖ್ಯವಾಗಿದೆ. ಇಸ್ಲಾಂ ರಾಷ್ಟ್ರಗಳಿಗೆ ಭಯೋತ್ಪಾದಕತೆಯ ಹಣೆಪಟ್ಟಿಯನ್ನು ಹಚ್ಚಿ ಅಮೆರಿಕ ತನ್ನ ರಾಜಕೀಯ ದಾಳವನ್ನು ನಡೆಸುತ್ತಿದೆ.

'ಭಯೋತ್ಪಾದನೆಯ ನಿರ್ಮೂಲನೆ', 'ವಿಶ್ವಶಾಂತಿ' ಈ ಮಂತ್ರಗು ಶ್ರೀಮಂತ ರಾಷ್ಟ್ರಗಳ-ಮಗುವನ್ನು ಚಿವುಟಿ, ತೊಟ್ಟಿಲು ತೂಗುವ ತಂತ್ರ ಭಾರತದಂತಹ ರಾಷ್ಟ್ರಗಳಲ್ಲಿ ಜಾತ್ಯತೀತತೆಯನ್ನು ಮಾತನಾಡುತ್ತ ಧಾರ್ಮಿಕ ಮೂಲಭೂತವಾದವನ್ನು ಅನುಸರಿಸುವವರಿಗೆ ಭಯೋತ್ಪಾದಕತೆಯನ್ನು ಹೋಗಲಾಡಿಸಲು ಸಾಧ್ಯವಿಲ್ಲ. ಪ್ರಾದೇಶಿಕ ಅಸಮತೋಲನಗಳನ್ನು ಬಳಸಿಕೊಂಡು ಶ್ರೀಮಂತ ರಾಷ್ಟ್ರಗಳು ಮತ್ತೊಂದು ರಾಷ್ಟ್ರದ ಆರ್ಥಿಕತೆಯನ್ನು ತನ್ನ ಸ್ವಾರ್ಥಕ್ಕಾಗಿ ಬಳಸಿಕೊಳ್ಳುವವರೆಗೆ ಭಯೋತ್ಪಾದನೆಯನ್ನು ಹುಟ್ಟುಹಾಕುತ್ತದೆ. ಇಂದು ಇಸ್ಲಾಂ ರಾಷ್ಟ್ರಗಳೂ ಎಚ್ಚೆತ್ತುಕೊಳ್ಳಬೇಕಾಗಿದೆ. ತಿರಸ್ಕೃತವಾದ ಪ್ರದೇಶ, ದೇಶ, ಸಮುದಾಯಗಳು ಭಯೋತ್ಪಾದಕತೆಗೆ ಬಲಿಯಾಗುವ ಎಲ್ಲ ಸಾಧ್ಯತೆಗಳೂ ಇರುವುದರಿಂದ ಪ್ರತಿ ಹಂತದಲ್ಲೂ ಅಸಮಾನತೆಯನ್ನು ನಿವಾರಿಸಿಕೊಳ್ಳಬೇಕಾಗುತ್ತದೆ. ವಿಶ್ವಶಾಂತಿಯನ್ನು ಕಾಯುವುದು ವಿಶ್ವ ಸಂಸ್ಥೆಯ ಪ್ರಾಮಾಣಿಕ ಗುರಿಯೇ ಆಗಿದ್ದರೆ ಜಗತ್ತಿನ ಎಲ್ಲ ರಾಷ್ಟ್ರಗಳಿಗೂ ವಿಶ್ವಸಂಸ್ಥೆಯಲ್ಲಿ ಸಮಾನ ಧ್ವನಿಯಿರಬೇಕಾಗುತ್ತದೆ. □

ಸಾಮಾನ್ಯವಾಗಿ ಈಗ ಸಮಾಜದಲ್ಲಿ [illegible] ಉಂಟುಮಾಡುವುದೇ ಭಯೋತ್ಪಾದನೆ. ಆದರೆ ಹೀಗೆ ವ್ಯಾಖ್ಯಾನಿಸುವಾಗ ಅದರ ಹಿಂದಿರುವ ಹುನ್ನಾರ ಮತ್ತು ಹೊಳಹುಗಳನ್ನು ಗ್ರಹಿಸಿದಂತಾಗುವುದಿಲ್ಲ. ಅಲ್ಲದೆ ನಾವು ಯಾವಾಗಲೂ ಮಾಧ್ಯಮಗಳು ಬಿಂಬಿಸುವ ಚಿತ್ರ, ಚಿತ್ರಿಕೆ ವಿಷಯಗಳನ್ನೇ ವಾಸ್ತವ/ನಿಜ ಸಂಗತಿಗಳೆಂದು ಗ್ರಹಿಸುತ್ತೇವೆ. ಪ್ರಸ್ತುತ ಜಗತ್ತು ಬಿಂಬಿತವಾಗುವುದೇ ಈ ಮಾಧ್ಯಮಗಳು ಅದರಲ್ಲೂ ಎಲೆಕ್ಟ್ರಾನಿಕ್ ಮಾಧ್ಯಮಗಳು ಕಟ್ಟುವ ಪರಿಭಾಷೆ ಮತ್ತು ಇಮೇಜ್‌ಗಳಿಂದ. ಆದ್ದರಿಂದ ಈ ಮಾಧ್ಯಮಗಳ ಅಧಿಕಾರ ಸಂಬಂಧಗಳು, ಅವುಗಳ ಮಾರಾಟ ಜಾಲಗಳು ನಮ್ಮನ್ನು ಪ್ರತಿನಿತ್ಯ ಕಠೋರವಾಗಿ ಆರ್ಭಟಿಸಿ, ಅಣಕಿಸಿ, ನಾಜೂಕಾಗಿ ಅವುಗಳು ತಯಾರಿಸುವ ಮಾಹಿತಿಗೆ ನಮ್ಮ ಸಮ್ಮತಿಯನ್ನು ಪಡೆಯುತ್ತವೆ. ಈ ಸಮ್ಮತಿ ಪ್ರಕ್ರಿಯೆಯ ಹಿಂದಿರುವ ಹಿಂಸೆ 'ಅಹಿಂಸೆ'ಯಾಗಿರುವುದರಿಂದ ಶಿಕ್ಷಿತ ಮನಸ್ಸುಗಳು ಅದರ ಬಗ್ಗೆ ಯೋಚಿಸಲಾರದಷ್ಟು ನಿರ್ಜೀವವಾಗಿವೆ. ಆದ್ದರಿಂದ ಇಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತ, ಯಹೂದಿ, ಸಿಖ್ ಎಂಬಂಥ ಧಾರ್ಮಿಕ ರೂಪಗಳಾಗಲಿ, ಎಡ-ಬಲ ತತ್ವಗಳಾಗಲೀ, ಪ್ರತಿಯೊಂದೂ ಸಹ ತಮ್ಮ ವ್ಯಾಖ್ಯಾನಗಳನ್ನು ಇದೇ ಮಾಧ್ಯಮಗಳ ಮೂಲಕ ಪ್ರಚುರಪಡಿಸುತ್ತಿರುತ್ತವೆ.

ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ 'ಭಯೋತ್ಪದನೆ' ಎನ್ನುವುದು ಕಾನೂನುಬಾಹಿರ ಚಟುವಟಿಕೆಯಾಗಿರುವುದರಿಂದ ಅದನ್ನು ಪೊಲೀಸ್ ಗನ್‌ಗಳ ಮತ್ತು ಭಯೋತ್ಪಾದ'ನೆಂದು ರಕ್ತಸಿಕ್ತ ಶವಗಳ 'ಇಮೇಜ್'ಗಳ ಮೂಲಕ ವೈಭವೀಕರಿಸುವ ಅಗತ್ಯ ಕಾಣುವುದಿಲ್ಲ. ಹಾಗೆಯೇ ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಅನೇಕ ಹಿತಾಸಕ್ತಿಗಳು ತಮ್ಮ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಸೆಣಸಾಟ ನಡೆಸುವುದರಿಂದ ಕೆಲವು ಸ್ಪರ್ಧೆಯಲ್ಲಿ ಮಣ್ಣುಮುಕ್ಕುತ್ತವೆ ಮತ್ತೆ ಕೆಲವು ತಮ್ಮ ಗೆಲುವನ್ನು ಗಟ್ಟಿಪಡಿಸಿಕೊಳ್ಳಲು ಹವಣಿಸುವುದರಿಂದ ಕಾನೂನು ಸಮ್ಮತ ಮತ್ತು ಕಾನೂನುಬಾಹಿರ ತಂತ್ರೋಪಾಯಗಳನ್ನು ಅನುಸರಿಸುತ್ತಲೇ ಇರುತ್ತವೆ. ಹೀಗಿರುವಲ್ಲಿ ಬಹುರೂಪಿ ನಂಬಿಕೆಗಳು ಮತ್ತು ಐಡಿಯಾಲಜಿಗಳು ಸಾರ್ವಜನಿಕವಾಗಿ ಶಕ್ತಿಹೀನತೆಯನ್ನು ಅನುಭವಿಸುವುದರಿಂದ ಆ ಶಕ್ತಿಹೀನತೆಯನ್ನು ನೀಗಿಕೊಳ್ಳುವ ಸಲುವಾಗಿ 'ಶತ್ರು' ಪರಿಭಾಷೆಗೆ ಮೊರೆಹೋಗುತ್ತದೆ. ಈ ಕಲ್ಪಿಸಿಕೊಂಡ 'ಶತ್ರು'ವಿನ ಮೂಲಕ ತನ್ನನ್ನೇ ಸಾರ್ವಜನಿಕವಾಗಿ ಪ್ರತಿಷ್ಠಾಪಿಸಿಕೊಳ್ಳುತ್ತದೆ. ಈ ಪ್ರಕ್ರಿಯೆಯಲ್ಲಿ ಭಯೋತ್ಪಾದನೆ ಎನ್ನುವುದು ಸಂಘಟಿತವಾಗುತ್ತದೆ. ಇದನ್ನು ಚಾರಿತ್ರಿಕವಾಗಿ ಸಂಕಟಿಸುತ್ತಾ ವರ್ತಮಾನದಲ್ಲಿನ ನಿಜವಾದ ಸಮಸ್ಯೆಗಳನ್ನು ಮರೆಮಾಚಲಾಗುತ್ತದೆ.

'ಭಯೋತ್ಪಾದನೆ' ಎನ್ನುವ ಪರಿಕಲ್ಪನೆಯ ಹಿಂದೆ ಪ್ರತಿಯೊಂದು ಸಮುದಾಯವೂ ಸಹ 'ವಿರೋಧ'ಗಳನ್ನು ಸೃಷ್ಟಿಸಿಕೊಳ್ಳುತ್ತಲೇ ಆ ವಿರೋಧಗಳನ್ನು ಮತ್ತೊಬ್ಬರ ಗುಣಲಕ್ಷಣವನ್ನಾಗಿ ಕಟ್ಟುತ್ತಾ ತನ್ನ ಶ್ರೇಷ್ಠತೆಯನ್ನು ಮೆರೆಯುತ್ತದೆ. ಈ ಪ್ರಕ್ರಿಯೆಯನ್ನು ವಿಧಿವತ್ತಾಗಿ ಸ್ಥಾಪಿಸಲಾಗುತ್ತದೆ ಅಥವಾ ಪವಿತ್ರೀಕರಿಸಲಾಗುತ್ತದೆ. ಈ ಸೋಗಲಾಡಿ

> 'ರಾಷ್ಟ್ರೀಯ' ಮತ್ತು 'ಅಂತಾ ರಾಷ್ಟ್ರೀಯ' ಎನ್ನುವ ಪರಿಭಾಷೆಗಳು ಸಾರ್ವಜನಿಕವಾಗಿ ಚಲಾವಣೆಗೆ ಬರುತ್ತವೆ. ಆದರೆ ಮೇಲೆ ಹೇಳಿದ ಮಾಧ್ಯಮ ಗಳು ಕಟ್ಟುವ ರಾಜಕಾರಣ ಮತ್ತು ಅದನ್ನು ಪೋಷಿಸುವ ಉದ್ಯಮಿಗಳ ಹಿತಾಸಕ್ತಿಗಳ ಮೇಲೆಯೇ ಅವು ನಿಂತು ತಮ್ಮ ಆಟವನ್ನು ಆರಂಭಿಸುವುದು. ಇಲ್ಲಿ ಐಡೆಂಟಿಟಿಗಳನ್ನು ಧಾರ್ಮಿಕವಾಗಿ, ಜನಾಂಗೀಯವಾಗಿ, ಲಿಂಗೀಯವಾಗಿ... ತಾರತಮ್ಯಕ್ಕೊಳಪಡಿಸುವುದರಿಂದಾಗಿ ಹಿಂಸೆಯನ್ನು ಹುಟ್ಟುಹಾಕಲಾಗುತ್ತದೆ ಮತ್ತು ಸಮರ್ಥಿಸಿಕೊಳ್ಳಲಾಗುತ್ತದೆ. ಹೀಗಿರುವಾಗ ಯಾವ ರಾಷ್ಟ್ರವೂ ಸಹ ತನ್ನ ದಬ್ಬಾಳಿಕೆಯನ್ನು ಇನ್ನೊಂದರ ಮೇಲೆ ಹೇರಲಾಗದು. ರಾಷ್ಟ್ರವೊಂದು ತಾನು ಮಾತ್ರ ಭಯೋತ್ಪಾದನೆಯ ವಿರುದ್ಧ ಹೋರಾಡುತ್ತಿದ್ದೇನೆಂದು ನಂಬಿಸಲು ಪ್ರಯತ್ನಸಿದಷ್ಟು ಅದು ಸೋಗಲಾಡಿತ ನವಾಗುತ್ತದೆ.

ಡಾ|| ಡೊಮಿನಿಕ್ ಡಿ

ಲೇಖಕರು, ಸಂಸ್ಕೃತಿ ಚಿಂತಕರು



ಭಯೋತ್ಪಾದನೆ ಚರ್ಚೆ

ವ್ಯಕ್ತಿತ್ವದ ತಳಹದಿಯಲ್ಲೇ ಭಯೋತ್ಪಾದನೆ [illegible] ರೂಪತಾಳುವುದು. ಅದರಲ್ಲೂ ಪ್ರಸ್ತುತ ಹಿನ್ನೆಲೆಯಲ್ಲಿ ಚಾರಿತ್ರಿಕವಾಗಿ ಅದುಮಿಟ್ಟ ಸಮುದಾಯಗಳು ಮತ್ತು ವ್ಯಕ್ತಿತ್ವಗಳು ಸಾರ್ವತ್ರಿಕವಾಗಿ ತಮ್ಮ ಐಡೆಂಟಿಟಿಗಳನ್ನು ಮರುಸ್ಥಾಪಿಸಿಕೊಳ್ಳುವಾಗ, ಇಲ್ಲಿಯವರೆಗೆ ಅನುಕೂಲಗಳನ್ನು ಸಹಜೀಕರಿಸಿಕೊಂಡು ಅನುಭವಿಸುತ್ತಿದ್ದವರಿಗೆ ಇಂದು ತೀವ್ರವಾದ ಸವಾಲುಗಳು ಎದುರಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಸಾಮಾಜಿಕ ನ್ಯಾಯವನ್ನು ತಪ್ಪಿಸುವ ಸಲುವಾಗಿ ಹಿಂಸೆಯನ್ನು ಹುಟ್ಟುಹಾಕಿ, ಭಯೋತ್ಪಾದನೆಯ ಸೋಗಿನಲ್ಲಿ ದಿಕ್ಕುತಪ್ಪಿಸಲಾಗುತ್ತದೆ.

ಹೀಗಿರುವಾಗ 'ರಾಷ್ಟ್ರೀಯ' ಮತ್ತು 'ಅಂತಾ ರಾಷ್ಟ್ರೀಯ' ಎನ್ನುವ ಪರಿಭಾಷೆಗಳು ಸಾರ್ವಜನಿಕವಾಗಿ ಚಲಾವಣೆಗೆ ಬರುತ್ತವೆ. ಆದರೆ ಮೇಲೆ ಹೇಳಿದ ಮಾಧ್ಯಮಗಳು ಕಟ್ಟುವ ರಾಜಕಾರಣ ಮತ್ತು ಅದನ್ನು ಪೋಷಿಸುವ ಉದ್ಯಮಿಗಳ ಹಿತಾಸಕ್ತಿಗಳ ಮೇಲೆಯೇ ಅವು ನಿಂತು ತಮ್ಮ ಆಟವನ್ನು ಆರಂಭಿಸುವುದು. ಇಲ್ಲಿ ಐಡೆಂಟಿಟಿಗಳನ್ನು ಧಾರ್ಮಿಕವಾಗಿ, ಜನಾಂಗೀಯವಾಗಿ, ಲಿಂಗೀಯವಾಗಿ... ತಾರತಮ್ಯಕ್ಕೊಳಪಡಿಸುವುದರಿಂದಾಗಿ ಹಿಂಸೆಯನ್ನು ಹುಟ್ಟುಹಾಕಲಾಗುತ್ತದೆ ಮತ್ತು ಸಮರ್ಥಿಸಿಕೊಳ್ಳಲಾಗುತ್ತದೆ. ಹೀಗಿರುವಾಗ ಯಾವ ರಾಷ್ಟ್ರವೂ ಸಹ ತನ್ನ ದಬ್ಬಾಳಿಕೆಯನ್ನು ಇನ್ನೊಂದರ ಮೇಲೆ ಹೇರಲಾಗದು. ರಾಷ್ಟ್ರವೊಂದು ತಾನು ಮಾತ್ರ ಭಯೋತ್ಪಾದನೆಯ ವಿರುದ್ಧ ಹೋರಾಡುತ್ತಿದ್ದೇನೆಂದು ನಂಬಿಸಲು ಪ್ರಯತ್ನಸಿದಷ್ಟು ಅದು ಸೋಗಲಾಡಿತನವಾಗುತ್ತದೆ.

ಆದರೆ ಇಂದು 'ಚಲನೆ' ಜಾಗತಿಕ ಲಕ್ಷಣವಾಗಿರುವುದರಿಂದ ಪ್ರತಿಯೊಂದು ರಾಷ್ಟ್ರವೂ ಸಹ ತನ್ನ ಪ್ರಜೆಗಳು ಮತ್ತು ಇತರರ ಮೇಲೆ ಹೇರಿರುವ ಕಾನೂನಿನ ಚೌಕಟ್ಟು ಅರ್ಥಹೀನವಾಗುತ್ತಿದೆ. ಈ ಸಂದರ್ಭವನ್ನು ಕಾಯುತ್ತಿರುವ ಅನೇಕರು ಅದನ್ನು ದುರುಪಯೋಗಿಸಿಕೊಂಡು 'ಭಯ'ವನ್ನುಂಟುಮಾಡಿ 'ಸೇಡು' ತೀರಿಸಿಕೊಳ್ಳುತ್ತಿರುತ್ತಾರೆ. ಇದಕ್ಕೆ ಮತ್ತೊಂದು ಕಾರಣವೂ ಇದೆ - ರಾಷ್ಟ್ರೀಯವಾದ ಮತ್ತು ಸ್ಥಳೀಯವಾದ ಐಡೆಂಟಿಟಿಗಳು ಸೀಮೋಲ್ಲಂಘನ ಮಾಡಲು ಹಾತೊರೆಯುತ್ತಿರುವಾಗ ವ್ಯಕ್ತಿಗತ ಸಾಧನೆಯೇ ಮಾದರಿಯಾದಾಗಲೂ 'ಭಯೋತ್ಪಾದನೆ' ಅನಿವಾರ್ಯ ಎಂದಾಗುತ್ತದೆ.

೨. ಇದನ್ನು ಚರ್ಚಿಸುವ ಅಗತ್ಯ ಕಾಣುವುದಿಲ್ಲ. ಇದೊಂದು ಓಪನ್ ಸಿಕ್ರೆಟ್. ಮಧ್ಯಯುಗೀನ ಚರ್ಚ್ ಮತ್ತು ವಸಾಹತುಶಾಹಿ ಆಧುನಿಕತೆಯ ನಡುವೆ ಉಂಟಾದ ಬಿಕ್ಕಟ್ಟನ್ನು ಪರಿಹರಿಸಿಕೊಳ್ಳುವ ಸಲುವಾಗ 'ಮುಸ್ಲಿಂ' ಎನ್ನೋ ಸಮುದಾಯವನ್ನು 'ಶತ್ರು'ವಾಗಿಸಿ ಅಥವಾ ಅನ್ಯವಾಗಿಸಿ, ಆ ಮೂಲಕ ಗ್ರಹಿಸುವ ಮತ್ತು 'ಹರಕೆಯ ಕುರಿ'ಯಾಗಿಸುವ ಚಾಣಕ್ಯತನ ಇಲ್ಲದೆ. ಹೀಗಿರುವಾಗ ವಸಾಹತುಶಾಹಿ ಆಧುನಿಕತೆಯನ್ನು ಭಾರತೀಯರು ಅದರಲ್ಲೂ ಮೇಲ್ಜಾತಿ ಗಂಡಸರು ಸ್ವೀಕರಿಸಿದ ರೀತಿ ಮತ್ತು ಈ ಆಧುನಿಕತೆಯ ಮಿತಿಗಳೆಲ್ಲವನ್ನು ಏಕರೂಪಿಯಾಗಿ ಕಟ್ಟಲಾದ 'ಮುಸ್ಲಿಂ' ಸಮುದಾಯದ

'ಹರಕೆಯ ಕುರಿ'ಯಾಗಿಸುವ ಚಾಣಕ್ಯತನ

ಮೇಲೆ ಆರೋಪಿಸಲಾಗಿದೆ. ಹೀಗೆ ಆರೋಪಿಸುವ ಮೂಲಕ ಆಧುನಿಕತೆಯ ಸೌಕರ್ಯಗಳು ವೈಯಕ್ತಿಕ ಒಡೆತನಕ್ಕೊಳಗಾಗುತ್ತಾ ಪ್ರಸ್ತುತ 'ನಗರ' ಜಾಗಗಳನ್ನು ವಶಪಡಿಸಿಕೊಳ್ಳುವ ರೀತಿಯೂ ಇದಾಗಿದೆ ಎಂದರೆ ಅಚ್ಚರಿ ಪಡಬೇಕಾಗಿಲ್ಲ. ಆದ್ದರಿಂದ ಕೋಮುವಾದಿ ಚರಿತ್ರೆ ಇಲ್ಲಿ ಮುಖ್ಯವಾಗಿಬಿಡುತ್ತದೆ. ಆದರೆ ಗಮನಿಸಬೇಕಾಗಿರುವ ಸಂಗತಿಯೆಂದರೆ ಪ್ರಸ್ತುತ ವಿದ್ಯಮಾನಗಳು ಏಕರೂಪಿಯಾಗಿಲ್ಲ. 'ಹಿಂದುತ್ವವಾದಿ' ಎನ್ನುವುದೂ ಸಹ ವಸಾಹತುಶಾಹಿ ಆಧುನಿಕತೆಯ ಭಾಗವಾಗಿಯೇ ಸಂಘಟಿತಗೊಂಡು ಏಕರೂಪಿ ವಿದ್ಯಮಾನವಾಗಿ ಕಂಗೊಳಿಸುತ್ತಿದೆ. ಆದರೆ ಅದು ಏಕರೂಪಿಯಾದ ಒಂದು ಐಡಿಯಾಲಜಿ ಅಲ್ಲ. ಅದರಲ್ಲೂ 'ಭಯೋತ್ಪಾದನೆಯ' ದಟ್ಟ ಛಾಯೆ ಇದೆ.

ಆದ್ದರಿಂದ ಯಾವುದೇ ಒಂದು ಧಾರ್ಮಿಕ ಸಮುದಾಯ ತಾನು ನಂಬಿದ ನಂಬಿಕೆಗೂ ಮತ್ತು ತನ್ನ ಸಮುದಾಯದೊಳಗಡೆಯೇ ನಡೆಯುವ ಹಿಂಸೆ ಮತ್ತು ಅನ್ಯಾಯಕ್ಕೂ ನೇರವಾದ ಅಧಿಕಾರ ಸಂಬಂಧ ಇದೆ. ಅಲ್ಲದೆ ಯಾವುದೇ ಧಾರ್ಮಿಕ ಐಡೆಂಟಿಟಿಯೂ ಸಹ 'ಸ್ವಯಂಭು' ಏನೂ ಅಲ್ಲ. ಅದೂ ಸಹ ಬದಲಾಗುತ್ತಿರುವ ವಿದ್ಯಮಾನಗಳೊಡನೆ ತನ್ನ ಉಳಿವಿಗಾಗಿ ಸೆಣಸಾಟ ನಡೆಸುತ್ತಿರುತ್ತದೆ. ಆದರೆ ಈ ಸೆಣಸಾಟದಲ್ಲಿ 'ಹರಕೆಯ ಕುರಿ' ಯಾರು? ಯಾವಾಗ? ಮತ್ತು ಏಕೆ? ಎನ್ನುವುದನ್ನು ಸೂಕ್ಷ್ಮವಾಗಿ ಗಮನಿಸಿ, ಅದಕ್ಕೆ ನ್ಯಾಯವನ್ನು ಒದಗಿಸಬೇಕಾಗುತ್ತದೆ.

೩. ಮೇಲಿನ ಪ್ರಶ್ನೆಯಲ್ಲಿಯೇ ಈ ಪ್ರಶ್ನೆಗೂ ಉತ್ತರ ಇದೆ. ಆದರೆ ಇಲ್ಲಿ ಅಮೆರಿಕಾ, ಬಂಡವಾಳಶಾಹಿ ಮತ್ತು ಇಸ್ಲಾಂ ಪದಗಳು ಬಂದಿವೆಯಷ್ಟೆ. ಇಲ್ಲಿಯವರೆಗೆ ನಾವೆಲ್ಲಾ ಮಾಧ್ಯಮಗಳು ನೀಡುವ ಪರಿಭಾಷೆ ಇಲ್ಲವೇ ಪ್ರಧಾನವಾಹಿನಿ ನೀಡುವ ಸಾರ್ವತ್ರಿಕ (ಯೂನಿವರ್ಸಲ್) ಐಡಿಯಾಲಜಿಗಳನ್ನು ಒದಿಕೊಂಡಿರುವ/ನಂಬಿರುವ ಪರಿಣಾಮವಾಗಿ ಪ್ರಗತಿ/ಅಭಿವೃದ್ಧಿಯನ್ನು ನಾವು ದೈವೀಕರಿಸಿದ್ದೇವೆ. ಆದರೆ ಅದರೊಳಗಿರುವ ಮಾರ್ವಾಡಿ (ಲಾಭಕೋರತನ ಮತ್ತು ತಾರತಮ್ಯವಾದಿ ತಂತ್ರಗಳೆಂದಷ್ಟೆ ಅರ್ಥ) ಹುನ್ನಾರಗಳು ನೈಸರ್ಗಿಕ ಸಂಪನ್ಮೂಲಗಳನ್ನು ಏಕ ಸ್ವಾಮ್ಯಕ್ಕೊಳಪಡಿಸಿಕೊಂಡು ಅದರ ಮೇಲೆ ಸವಾರಿ ಮಾಡುತ್ತಿದ್ದೇವೆ. ಅಲ್ಲದೆ ಈ ನೈಸರ್ಗಿಕ ಸಂಪನ್ಮೂಲಗಳು ಎಲ್ಲಾ ಕಡೆ ಒಂದೇ ಪ್ರಮಾಣದಲ್ಲಿ ಇಲ್ಲ. ಅದನ್ನು ನಾವು 'ನೈಸರ್ಗಿಕ', 'ಸ್ವಾಭಾವಿಕ' ಎಂದೇ ಪರಿಭಾವಿಸಿಕೊಂಡು ಅದಕ್ಕೆ 'ಕಚ್ಚಾ ಮಾಲು' ಎನ್ನೋ ಅರ್ಥವನ್ನು ಆರೋಪಿಸುತ್ತಿದ್ದೇವೆ. ಹೀಗೆ ಗ್ರಹಿಸಿರುವುದರ ಮೇಲೆ 'ಏಕ ಸ್ವಾಮ್ಯ ಬಂಡವಾಳಶಾಹಿ' ಪದ್ಧತಿಯನ್ನು ನಿಲ್ಲಿಸಿದ್ದೇವೆ. ಆದರೆ ಈಗ ವಿಶ್ವದಲ್ಲಿ ಆಗಿರುವ ಅಸಮತೋಲನಗಳು ಅದರ ದುರಂತಗಳನ್ನು ಯಾವುದೇ ಮತೀಯ ತಾರತಮ್ಯವಿಲ್ಲದೆ 'ಎಲ್ಲರೂ' ಅನುಭವಿಸುವ ದುರಂತದಲ್ಲಿದ್ದೇವೆ.

ಈ ನಡುವೆ 'ಸಾಂಘಿಕ ಬಂಡವಾಳಶಾಹಿ' ವ್ಯವಸ್ಥೆಯ ನಿರೂಪಣೆಗಳೂ ಸಹ ಇಂದು ಸಾರ್ವತ್ರಿಕ ಮನ್ನಣೆಯನ್ನು ಪಡೆಯುತ್ತಿದೆ. ಇಲ್ಲಿ 'ಪರಸ್ಪರಾವಲಂಬನೆ' ಅನಿವಾರ್ಯವಾಗಿದೆ. ಆದ್ದರಿಂದ ಅಮೆರಿಕಾ, ಬಂಡವಾಳಶಾಹಿ ಮತ್ತು ಇಸ್ಲಾಂ ಎಂಬುವುಗಳನ್ನು ಏಕಾರ್ಥ ಸ್ಥಿತಿಗಳು ಎಂದು ಗ್ರಹಿಸಬೇಕಾಗಿಲ್ಲ. ಅದಕ್ಕಾಗಿ ಶಕ್ತಿ ವಿನಿಯೋಗಿಸುವ ಅಗತ್ಯವೂ ಕಾಣಿಸುವುದಿಲ್ಲ.

೪. ಮೇಲಿನ ಉತ್ತರಗಳಲ್ಲೇ ಸಾಕಷ್ಟು ಪರಿಹಾರೋಪಾಯಗಳು ಅಡಗಿವೆ. ಮಾಧ್ಯಮಗಳು ಸ್ಥಳೀಯವಾಗಿ ಸಣ್ಣ ಸಣ್ಣ ಸಕಾರಾತ್ಮಕ ಬದಲಾವಣೆಗಳನ್ನು ಗುರುತಿಸುವ ಸಂವೇದನಾಶೀಲತೆಯನ್ನು ರೂಢಿಸಿಕೊಳ್ಳಬೇಕಾಗಿದೆ. 'ಏಕರೂಪಿಯಾದ ಸಾರ್ವಕಾಲಿಕ ಸತ್ಯವೊಂದಿದೆ' ಎನ್ನೋ ಭ್ರಮೆಯಿಂದ ನಾವೆಲ್ಲಾ ಹೊರಬರಬೇಕಾದ ಹಾಗೂ ಅಂಥ ಸತ್ಯಗಳ ಬಗ್ಗೆ ಸಂದೇಹ ಮತ್ತು ಅಂತರವನ್ನು ಕಾಪಾಡಿಕೊಳ್ಳುವುದು ಸೂಕ್ತವಾದುದು. ಈ ನಡುವೆ 'ಸಾಮಾಜಿಕ ನ್ಯಾಯ' ಎನ್ನೋ ಪರಿಕಲ್ಪನೆ ಎಷ್ಟೇ ಸಾಪೇಕ್ಷವಾದರೂ ಸಹ ಅದರ ಅಗತ್ಯ ನಮಗೆ ಇದೆ. ಕಾರಣ ಇಂದು ಐಡೆಂಟಿಟಿ, ಲಿಂಗೀಯತೆ, ಜಾತಿ, ಬಣ್ಣ, ವರ್ಗ ತಾರತಮ್ಯಗಳು ವಿಚಿತ್ರವಾದ ತಿರುವುಗಳನ್ನು ಪಡೆದುಕೊಂಡು ಸಾಮಾಜಿಕ ಸ್ವಾಸ್ಥ್ಯಕ್ಕೆ ಅಪಾಯಗಳನ್ನೊಡ್ಡುತ್ತಿವೆ. ಇದಕ್ಕಿಂತ ದೊಡ್ಡ 'ಯುದ್ಧಕೋರತನ' ಅಥವಾ 'ಭಯೋತ್ಪಾದನೆ' ಮತ್ತೊಂದಿಲ್ಲ. ವ್ಯಾಪರ ನಡೆಯುವ ಮಾರುಕಟ್ಟೆಯಲ್ಲಿ ಕನಿಷ್ಠ ಮಟ್ಟದ 'ಮೈವಿಧ್ಯತೆಯ ನೀತಿ' ಅಗತ್ಯವಾಗಿ ರೂಢಿಸಿಕೊಳ್ಳಬೇಕಾಗಿದೆ.

ಅಲ್ಲದೆ ಎಲ್ಲಾ ರೀತಿಯ 'ಹಿಂಸೆ' ಕೆಟ್ಟದು ಎನ್ನೋ ಚಾಲಿ ಬಿಟ್ಟು ಪ್ರಜಾತಾಂತ್ರಿಕ ಪ್ರಕ್ರಿಯೆಯಲ್ಲಿ ಅದರ ಪಾತ್ರವನ್ನು ನಾವು ಹೊಸದಾಗಿ ವಿವರಿಸಿಕೊಳ್ಳುವ ಜರೂರು ಇದೆ. ಹಾಗೆಯೇ ಬದಲಾಗುತ್ತಿರುವ ವಿದ್ಯಮಾನಗಳಲ್ಲಿ 'ಪ್ರಭುತ್ವ' ತನ್ನ ಸೈನ್ಯಶಕ್ತಿಯನ್ನು ಮತ್ತು ಕಾನೂನು ವ್ಯವಸ್ಥೆಯನ್ನು ಪ್ರಜಾಪ್ರಭುತ್ವವಾದಿ ನೆಲೆಗಳಲ್ಲಿ ಬದಲಾಯಿಸಿಕೊಳ್ಳಬೇಕಾಗಿದೆ. ಸಾಮಾಜಿಕವಾಗಿರುವ ನಿರಂತರ ಸೆಣಸಾಟ ಮತ್ತು ಸ್ಪರ್ಧೆಯಲ್ಲಿ ಸಮಾನ ಅವಕಾಶಗಳನ್ನು ಸಾರ್ವತ್ರಿಕರಿಸುವ ಅಗತ್ಯವಿದೆ. ಯಾವುದೇ ಅಹಿತಕರ ಘಟನೆ ನಡೆದಾಗ ಅದರ ಸುತ್ತಲೂ ಹಬ್ಬುವ 'ಗುಸು ಗುಸು' ಸುದ್ದಿಗಳನ್ನು ಎಲ್ಲರೂ ವಿರೋಧಿಸಲೇಬೇಕಾಗಿದೆ. ಕಾರಣ ಈ 'ಗುಸು ಗುಸು' ಸುದ್ದಿಯೇ ಮತ್ತಷ್ಟು ಅಚಾತುರ್ಯಗಳಿಗೆ ಕಾರಣವಾಗುತ್ತದೆ. □

ನಾಗರಿಕರೆನಿಸಿದವರೆಲ್ಲರೂ ಭಯೋತ್ಪಾದಕರೇ!

(೨೬ನೇ ಪುಟದಿಂದ)

ಧರ್ಮೀಯರನ್ನು ತಪ್ಪಿತಸ್ಥರೆಂದು ಬ್ರಾಂಡ್ ಮಾಡುವುದು ತೀರಾ ಸುಲಭ. ಅದಕ್ಕೆ ಎಲ್ಲೆಲ್ಲೂ, ಎಲ್ಲದಕ್ಕೂ ಏಜೆಂಟರಿದ್ದಾರೆ.

ಹಿಂದೂ, ಕ್ರೈಸ್ತ, ಇಸ್ಲಾಂ ಮುಂತಾದ ಸಾಂಸ್ಥಿಕ ಧರ್ಮಗಳು ರೂಪಿಸಿದ ತಾರತಮ್ಯದ ಸಂವಿಧಾನಗಳು ಜಗತ್ತಿನಲ್ಲಿ ಶಾಂತಿ ನೆಮ್ಮದಿ ಸಮಾನತೆಯ ಸಮಾಜ ನಿರ್ಮಾಣದಲ್ಲಿ ಸೋತ ಮೇಲೆ ತಾನೇ ಪ್ರಜಾಪ್ರಭುತ್ವವೆಂಬ ಹೊಸ ಧರ್ಮ ಅವುಗಳ ಸ್ಥಾನ ಆಕ್ರಮಿಸಿದ್ದು. ಆದರೂ ಸದರಿ ಧರ್ಮಗಳು 'ಸತ್ತರೂ' ಬಿಡದೆ ಪ್ರಜಾಪ್ರಭುತ್ವದ ವ್ಯವಸ್ಥೆಯ ಮೇಲೂ ವೈರಸ್ ಪ್ರಯೋಗ ಮಾಡಲೆತ್ನಿಸುತ್ತಿರುವುದು ಈಗಿನ ಮುಂದುವರಿದ ಭಯೋತ್ಪಾದನೆಗೆ ಕಾರಣವಾಗಿದೆ.

ಅಫೀಮುರೂಪಿ ಸಾಂಸ್ಥಿಕ ಧರ್ಮಗಳನ್ನು ಉಚ್ಚಾಟಿಸುವುದು ಭಯೋತ್ಪಾದನೆಯ ಉಚ್ಚಾಟನೆಗೂ ಸಹಾಯಕವಾಗಬಹುದು. ತನ್ಮೂಲಕ ಪ್ರಜಾಪ್ರಭುತ್ವವೆಂಬ ರಾಜಕೀಯ ಧರ್ಮವನ್ನು ಬಲಪಡಿಸುವುದು ಅದರಲ್ಲಿ ಉಳಿದಿರುವ ಲೋಪಗಳನ್ನು ಸರಿಪಡಿಸಿಕೊಂಡು ಪ್ರೀತಿ, ಸಮಾನತೆ, ಅಹಿಂಸೆ, ಸರಳತೆ ಮುಂತಾದ ಎಲ್ಲರೂ ಕೂಡಿ ಬಾಳಲು ಬೇಕಾದ ಭಾವನೆಗಳನ್ನು ಸ್ಫುರಿಸಲು ಬೇಕಾದ ವಾತಾವರಣವನ್ನು ಸೃಷ್ಟಿಸುವುದು ಸಾಧ್ಯವಾಗುತ್ತದೆ.

ಜಗತ್ತಿನ ನಾಚಿಕೆಗೆಟ್ಟ ಶ್ರೀಮಂತರೆಂಬ(ಅತಿಸಂಪತ್ತಿನ ಹಿಂದೆ ಅಪರಾಧ ಇದ್ದೇ ಇರುತ್ತದೆ.-ಷೇಕ್ ಸಾದಿ) ಅಪರಾಧಿಗಳನ್ನು ನಿಜವಾದ ಭಯೋತ್ಪಾದಕರೆಂದು ಗುರ್ತಿಸುವುದು ಇಂದಿನ ತುರ್ತು.

ಧ್ವನಿ ಎತ್ತಿ ಹೋರಾಟ ನಡೆಸಬೇಕಾದ, ಹೊಟ್ಟೆ ತುಂಬಿದ ಆದರೆ ವಿವೇಕಶಾಲಿ ಜನಸಮುದಾಯವು, ಈಗಲೇ ಎಚ್ಚರಗೊಂಡು ಭಯೋತ್ಪಾದನೆ ವಿರುದ್ಧ(ಬಡತನ, ಅಸಮಾನತೆ, ನಿರುದ್ಯೋಗದ ವಿರುದ್ಧವೂ) ಜನಾಂದೋಲನಕ್ಕಿಳಿಯಬೇಕಾಗಿದೆ. ಈಗಾಗಲೇ ಆರಂಭವಾಗಿರುವ ಇಂಥ ಹೋರಾಟಗಳನ್ನು ಬಲಗೊಳಿಸಬೇಕಾಗಿದೆ. ಸ್ಥಳೀಯವಾಗಿ ಕೋಮುವಾದ ಸ್ವರೂಪ ಹೊಂದಿ ಬೆಳೆಬೆಳೆಯುತ್ತಾ ಧರ್ಮ ದ್ವೇಷವಾಗಿ ಹಬ್ಬುತ್ತಾತ ನಿಶಬ್ದ ಭಯೋತ್ಪಾದನೆಗೆ ಕಾರಣವಾಗುವುದನ್ನು ಸೂಕ್ಷ್ಮವಾಗಿ ಗಮನಿಸಿ ನಿವಾರಿಸಿಕೊಳ್ಳಬೇಕಾಗಿದೆ. □

'ಸಂವಾದ' ದೊರೆಯುವ ಸ್ಥಳ

☞ನವಕರ್ನಾಟಕ ಪ್ರಕಾಶನ ಪುಸ್ತಕ ಮಳಿಗೆ
✦ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ ಬೆಂಗಳೂರು- ೫೬೦ ೦೦೧, ☎ : ೨೨೨೦೩೫೮೦
✦ಗಾಂಧಿನಗರ, ಬೆಂಗಳೂರು-೫೬೦ ೦೦೯, ☎ : ೨೨೨೫೦೩೮೨, ✦ಸ್ಟೇಷನ್ ರಸ್ತೆ, ಗುಲ್ಬರ್ಗ-೨ ☎ : ೪೨೪೩೦೨
✦ಕೆ.ಎಸ್.ರಾವ್.ರಸ್ತೆ, ಮಂಗಳೂರು-೧, ☎ : ೨೪೪೧೦೧೬, ✦ರಾಮಸ್ವಾಮಿ ವೃತ್ತ ಮೈಸೂರು-೨೪, ☎ : ೨೪೨೪೦೯೪
☞ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್, ೧೧೮/೩ ಮೊದಲ ಮಹಡಿ ೨ನೇ ಮುಖ್ಯ ರಸ್ತೆ, (ನಟರಾಜ್ ಟಾಕೀಸ್ ಪಕ್ಕ) ಶೇಷಾದ್ರಿಪುರಂ ಬೆಂ-೨೦
☞ಕೆ.ಎಸ್.ಆರ್.ಟಿ.ಸಿ. ಬುಕ್ ಸ್ಟಾಲ್, ಫ್ಲಾಟ್ ಫಾಮ್ ನಂ.೧, ಸ್ಟಾಲ್ ನಂ.೭, ಕೆಂಪೇಗೌಡ ಬಸ್ ನಿಲ್ದಾಣ, ಬೆಂಗಳೂರು

ಆರಕ್ಕೆ ಕಾಲಿಟ್ಟ ಸಂವಾದ ಕ್ಕೆ

ಶುಭ ಹಾರೈಕೆಗಳು

ಶ್ರೀ ಶಂಕರ್, ಕೆ.ಆರ್.ಎಸ್

ಆರಕ್ಕೆ ಕಾಲಿಟ್ಟ ಸಂವಾದ ಕ್ಕೆ

ಶುಭ ಹಾರೈಸುವವರು

ಶ್ರೀ ಬಾಲಕೃಷ್ಣ,
ಗುತ್ತಿಗೆದಾರರು, ಮೈಸೂರು

ನನ್ನೊಳಗಿನ ಕಾವ್ಯಕನ್ನಿಕೆ.

○ ಎಸ್. ಮಾಲತಿ, ಸಾಗರ

ಓ ನನ್ನ ಮನದನ್ನೆ
ಶಯನ ಮಂಚಕೆ
ಕರೆಯುತ್ತಿರುವೆಯಲ್ಲ!
ನಿನ್ನೆ ತಾನೇ
ಅದೇ ಶಯನ ಮಂಚದಲ್ಲಿ
ನೀನು ನನ್ನ ಮೇಲೇರಿ
ಸವಾರಿ ಮಾಡುತ್ತಾ
ಮೊಲೆಗಳ ಕಚ್ಚಿ
ಇಬ್ಬನಿಯ ಬಿಂದುಗಳ
ನನ್ನೊಳಗೆ ಪುಟಿಸಿದ್ದು
ನನ್ನ ಸುಖದ ನೋವಿಗೆ
ನೀ ಮೆಚ್ಚಿ ಮುದ್ದಿಟ್ಟದ್ದು
ನನಗೆ ಮರೆತಿಲ್ಲ
ಆದರೆ..........
ತಕ್ಷಣವೇ ನೀ ಮಂಚದಿಂದಳಿದು
ವಿಜಯದ ನಗೆ ನಕ್ಕದ್ದು
ಯಾಕಿನಿಯ ಹೇಳು...
ಅದಕ್ಕೇ...
ಈಗ ನಿಧಿ ನನ್ನ ಕರೆದಾಗ
ನಿನ್ನ ಶಯನಗೃಹಕ್ಕೆ
ನಾನೊಂಟಿ ಬರಲಾರೆ
ಇನ್ನೊಬ್ಬ ಕನ್ನಿಕೆಯೊಡನೆ
ನಿನ್ನಲ್ಲಿ ನಾ ಬರುವೆ
ನೀನೆನ್ನ ನೋಯಿಸಿದಾಗ
ಮುಲಾಮು ಹಚ್ಚುವಳು
ಆ ನನ್ನ ಗೆಳತಿ
ನಿನ್ನ ಕಣ್ಣಿಗೆ ಕಾಣಳು
ನಿನ್ನ ಸ್ಪರ್ಶಕೆ ಸಿಗಳು
ಎರಡು ಹೆಣ್ಣುಗಳೊಡನೆ
ಏಕಕಾಲದಿ ನೀನು
ಸಂಭೋಗ ಸುಖ ಪಡೆವೆ
ಆಕೆ ಯಾರೆಂದು ಹೇಳಲೇ?
ನನ್ನಿನಿಯಾ...
ನನ್ನ ಹೃದಯದ ಬಂಧಿ
ಸದಾ ಕಾಯುವ ನಿಷ್ಠಳು
ಅವಳೇ ಅವಳೇ
ನವನವೋನ್ಮೇಷಶಾಲಿನ
ಕನ್ನಿಕೆ–ಕಾವ್ಯಮಾಲಿನ!

‘ದೇಶಬಿಟ್ಟು ಹೋಗು’ ಎಂದು ಯಾರಾದರೂ ಹೇಳಿದರೆ, ಕೇಳಿದ ವ್ಯಕ್ತಿಯಲ್ಲಿ ಯಾಕಷ್ಟು ಕೋಪ ಬರುತ್ತದೆ? ಸ್ವಸಮರ್ಥನೆಯಲ್ಲಿ ಉತ್ತರವನ್ನು ಕೊಡುವಂತಹ ನೋವು ಮತ್ತು ಅನಿವಾರ್ಯತೆ ಯಾಕಾಗಿ ಬರುತ್ತದೆ? ಬಹುಶಃ ಅದು ಬದುಕುವ ಹಕ್ಕಿನ ಮೂಲಭೂತವಾದ ಯಾವುದೊ ನೆಲೆಯಲ್ಲಿ ಅಲುಗಿಸಬಹುದು. ಹುಟ್ಟಿ ಬದುಕುವ ಮತ್ತು ಸತ್ತ ಮೇಲೆ ಒರಗಲಿರುವ ನೆಲವನ್ನು ಬಿಟ್ಟು ಹೋಗು ಎಂದರೆ ಇಕ್ಕಳದಲ್ಲಿ ಉಗು ರನ್ನು ಕಿತ್ತಂತೆ, ಮೊಣಕೈ ಗಂಟಿಗೆ ಕಲ್ಲು ತೆಗೆದು ಕುಟ್ಟಿದಂತೆ ಆಗಬಹುದು. ಒಬ್ಬರ ಮನ ನೋಯಿಸುವ ಅತ್ಯಂತ ಕ್ರೂರ ವಿಧಾನವೆಂದರೆ ದೇಶಬಿಟ್ಟು ಹೋಗು ಎಂದು ಹೇಳುವುದೇ ಇರಬೇಕು. ಧರ್ಮಸಿಂಗ್ ಶಕ್ತಿರಾಜಕಾರಣದ ರಾಜಕಾರಣಿಯಾಗಿ ಮಾಡಿರುವ ಒಳ್ಳೆಯ ಮತ್ತು ಕೆಟ್ಟ ಕೆಲಸಗಳು, ಅವರ ವ್ಯಕ್ತಿತ್ವ ಇವುಗಳ ಮೇಲೆ ನಮ್ಮ ರಾಜಕೀಯ ವಿಶ್ಲೇಷಣೆ, ವಿಮರ್ಶಾತ್ಮಕ ಮೌಲ್ಯಮಾಪನ ಬಿಟ್ಟು ಕೊಡಬೇಕಿಲ್ಲ

ವಿರೋಧ ಪಕ್ಷದ ನಾಯಕರಾಗಿದ್ದ ಧರ್ಮಸಿಂಗ್‌ರವರಿಗೆ ಬಿಜೆ ಪಿಯ ರಾಜ್ಯಾಧ್ಯಕ್ಷರಾದ ಸದಾನಂದಗೌಡ ಅವರು ‘ದೇಶಬಿಟ್ಟು ಹೋಗಿ’ ಎಂದು ಕರೆಗೊಟ್ಟ ಪ್ರಸಂಗ ಕಳೆದ ತಿಂಗಳು ನಡೆಯಿತು. ಇದಕ್ಕೆ ಹಿನ್ನೆಲೆಯೆಂದರೆ, ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿ ಕಛೇರಿ ಪ್ರವೇಶದ ಹೊತ್ತಲ್ಲಿ ಹೋಮಹವನಗಳನ್ನು ಮಾಡಿದಾಗ, ಅದು ತಪ್ಪೆಂದು ಧರ್ಮಸಿಂಗರು ಟೀಕಿಸಿದ್ದು. ಅಷ್ಟು ಸಾಮಾನ್ಯ ಟೀಕೆಗೆ ಇಷ್ಟು ದೊಡ್ಡ ಬಹಿಷ್ಕಾರವೇ? ದೇಶ ಕಟ್ಟುವ ಕೆಲಸಕ್ಕಾಗಿ ಯುವಕರನ್ನು ‘ಏಳಿ ಎದ್ದೇಳಿ’ ಎಂದು ಕರೆಗೊಡುವುದು ಸಾಮಾನ್ಯ. ಆದರಿದು ತಮ್ಮ ಟೀಕಾಕಾರರನ್ನು ‘ದೇಶಬಿಟ್ಟು ತೊಲಗಿ’ ಎನ್ನುವ ಕರೆ. ಚರಿತ್ರೆಯನ್ನು ನೋಡಿದರೆ ಇಂತಹ ಕರೆಗಳು ಕೇವಲ ಹೇಳಿಕೆಯ ಮಟ್ಟದಲ್ಲಿ ನಿಂತಿಲ್ಲ. ಅಕ್ಷರಶಃ ವ್ಯಕ್ತಿ ಅಥವಾ ಸಮುದಾಯಗಳನ್ನು ದೇಶದಿಂದ ಹೊರಹಾಕುವುದರಲ್ಲಿ ಮುಗಿದಿವೆ; ಕೆಲವೊಮ್ಮೆ ಆತಂಕದಿಂದ ಸ್ವತಃ ಅವರೇ ದೇಶಬಿಟ್ಟು ಹೋಗುವಂತೆ ಕೂಡ ಮಾಡಿವೆ. ಎಲ್ಲ ಸಮಾಜಗಳಲ್ಲಿ ಫ್ಯಾಸಿಸ್ಟರೂ ಧಾರ್ಮಿಕ ಮೂಲಭೂತವಾದಿಗಳೂ ಮತೀಯವಾದಿಗಳೂ ಜನಾಂಗವಾದಿಗಳೂ, ತಮಗೆ ಅಧಿಕಾರ ದೊರೆತಾಗೆಲ್ಲ, ರಾಷ್ಟ್ರವಾದದ ಹೆಸರಲ್ಲಿ ಈ ಹೊರಹಾಕುವ ಕೆಲಸ ಮಾಡುತ್ತ ಬಂದಿದ್ದಾರೆ.

ಧಾರ್ಮಿಕ ಮೂಲಭೂತವಾದಿಗಳನ್ನು ಟೀಕಿಸಿದಕ್ಕಾಗಿ ತಸ್ಲೀಮಾಗೆ ಬಾಂಗ್ಲಾದೇಶ ದೇಶಬಿಟ್ಟು ಹೋಗುವಂತೆ ಮಾಡಲಾಯಿತು. ಈಗ ಭಾರತದ ಮುಸ್ಲಿಂ ಮೂಲಭೂತವಾದಿಗಳು ಆಕೆಯನ್ನು ಈ ದೇಶದಿಂದಲೂ ಹೊರಹಾಕಬೇಕೆಂದು ಒತ್ತಾಯಿಸುತ್ತಿದ್ದಾರೆ. ಕಮ್ಯುನಿಸಂ ಹೆಸರಲ್ಲಿ ಸರ್ವಾಧಿಕಾರಿ ಪ್ರಭುತ್ವಗಳಿದ್ದ ದೇಶಗಳಲ್ಲಿ, ಪ್ರಭುತ್ವ ವಿಮರ್ಶಕರಾದ ಎಷ್ಟೋ ಲೇಖಕರನ್ನು ಹಾಗೂ ಚಿಂತಕರನ್ನು ದೇಶ ತೊರೆದು ಹೋಗುವಂತೆ ಕಿರುಕುಳ ನೀಡಲಾಯಿತು. ನಮ್ಮ ಸಾಂಸ್ಕೃತಿಕ ಸಂಕೇತಗಳನ್ನು ಗೌರವಿಸದ ದಲಿತರು ದೇಶಬಿಟ್ಟು ಹೋಗಬಹುದು ಎಂಬ ಮಾತುಗಳನ್ನು ಮೇಲ್ಜಾತಿಯವರು ಸಾಕಷ್ಟು ಸಲ ಆಡಿದ್ದಾರೆ. ಅಂಬೇಡ್ಕರ್ ಕುರಿತು ಕೂಡ ಇದನ್ನು ಹೇಳಲಾಗಿದೆ. ದೇಶಬಿಟ್ಟು ಹೋಗಬೇಕೆಂಬ ನೋಟಿಸು ಪಡೆದವರಲ್ಲಿ ಕರ್ನಾಟಕ ಸಂಸ್ಕೃತಿ ಸೃಷ್ಟಿಸಿದ ಒಬ್ಬ ದೊಡ್ಡ ವ್ಯಕ್ತಿತ್ವವಾದ ಕಾರಂತ ಅವರೂ ಸೇರಿದ್ದಾರೆ. ವಿಶ್ವಕನ್ನಡ ಸಮ್ಮೇಳನದ ಹೊತ್ತಲ್ಲಿ (೧೯೮೫) ಮಾಡಲಾದ ಒಂದು ಸಂದರ್ಶನದಲ್ಲಿ ಅವರು ಮಾಧ್ವರ ದ್ವೈತ ಸಿದ್ಧಾಂತದೊಳಗಿರುವ ಜೀವವಿರೋಧಿ ಚಿಂತನೆಯನ್ನು ಕುರಿತು ವಿಮರ್ಶೆ ಮಾಡಿದ್ದರು. ಆಗ ಅವರನ್ನು ದೇಶಬಿಟ್ಟು ಹೋಗುವಂತೆ ಬ್ರಾಹ್ಮಣ ಸಂಘಟನೆಗಳು ಕರೆಗೊಟ್ಟಿದ್ದವು.

ಸಮಾಜದ ಮೇಲೆ ಯಜಮಾನಿಕೆ ಹೊಂದಿರುವ ಜನಾಂಗವಾದಿ ಮತ್ತು ಮತೀಯವಾದಿಗಳು ಕೆಲವು ಸಂಗತಿ ಅಥವಾ ವಿಚಾರಗಳನ್ನು ರಾಷ್ಟ್ರಭಕ್ತಿಯ ಸಂಕೇತಗಳೆಂದು ಘೋಷಿಸುತ್ತಾರೆ. ಅವನ್ನು ಒಪ್ಪದವರನ್ನು ಮತ್ತು ಟೀಕಿಸುವವರನ್ನು ರಾಷ್ಟ್ರನಿಷ್ಠೆ ಇಲ್ಲದವರು ಎಂದು ಫತ್ವಾ ಹೊರಡಿಸುತ್ತಾರೆ. ಭಾರತದಲ್ಲಿ ಸಂಘಪರಿವಾರವು ಹಸು, ಹೋಮ, ವಂದೇಮಾತರಂ ಗೀತೆ, ವೇದ, ರಾಮ- ಈ ಕೆಲವು ಬ್ರಾಹ್ಮಣವಾದಕ್ಕೆ ಪ್ರಿಯವಾದ ಸಂಗತಿಗಳನ್ನು ರಾಷ್ಟ್ರದ ಸಂಕೇತಗಳೆಂದು ಪರಿಭಾವಿಸಿದೆ. ಇವುಗಳ ಬಗ್ಗೆ ಭಿನ್ನ ವ್ಯಾಖ್ಯಾನ ಮಾಡುವವರನ್ನು ಅದು ಐಎಸ್‌ಐ ಏಜೆಂಟರೆಂದೂ ಹಿಂದೂ ವಿರೋಧಿಗಳೆಂದೂ ರಾಷ್ಟ್ರದ್ರೋಹಿಗಳೆಂದೂ ಹೆಸರಿಟ್ಟು, ಅವರು ದೇಶವನ್ನು ಬಿಟ್ಟುಹೋಗಬೇಕೆಂದೂ ಕರೆಗೊಡುತ್ತದೆ. ಕಳೆದ ತಿಂಗಳು ಜನಪದ ಮಹಾಕಾವ್ಯಗಳ ಮೇಲೆ ರಚಿತವಾದ ಸಿ.ಎನ್.ರಾಮಚಂದ್ರನ್ ಅವರ ಕೃತಿಯ ಬಿಡುಗಡೆ ಸಮಾರಂಭವಿತ್ತು. ಅದರಲ್ಲಿ, ಜನಪದ ವಿದ್ವಾಂಸರಾದ ಡಾ. ವಿವೇಕರೈಯವರು, ವಾಲ್ಮೀಕಿ ರಾಮಾಯಣವು ಒಂದು ರಾಷ್ಟ್ರೀಯ ಮಹಾಕಾವ್ಯವಲ್ಲ. ಭಾರತದಲ್ಲಿ ಅನೇಕ ಜನಪದ ಮಹಾಕಾವ್ಯಗಳಿವೆ. ಈ ನಾಡಿನ ಬೇರೆ ಬೇರೆ ಸಮುದಾಯಗಳು ಬೇರೆಬೇರೆ ರೂಪದ ರಾಮಾಯಣವನ್ನು ಸೃಷ್ಟಿಸಿಕೊಂಡಿವೆ ಎಂದು ವಿಶ್ಲೇಷಣೆ ಮಾಡಿದರು. ಇದು ಸಂಸ್ಕೃತಿ

‘ದೇಶಬಿಟ್ಟು ಹೋಗು’: ಹಾಗೆಂದರೇನು?

ಮಾತಿನ ಹಂಗು

ರಹಮತ್ ತರೀಕೆರೆ

ಅಧ್ಯಯನಗಳಲ್ಲಿ ಒಪ್ಪಿತವಾಗಿರುವ ಮಾತು. ಜತೆಗೆ ಈ ದೇಶದ ಬಹುಸಂಸ್ಕೃತಿಯನ್ನು ಮನ್ನಿಸುವ ಮಾತು. ಆದರೆ ವ್ಯಾಖ್ಯಾನವನ್ನು ವಿರೋಧಿಸಿ ಬಂದ ಪ್ರತಿಕ್ರಿಯೆಗಳು ತೀಕ್ಷಣವಾಗಿದ್ದವು. ಪ್ರೊ. ರೈ ಅವರಿಗೆ ರಾಷ್ಟ್ರೀಯ ಪ್ರಜ್ಞೆಯಿಲ್ಲ ಎಂಬಂತೆ ಕೆಲವರು ಪ್ರತಿಕ್ರಿಯಿಸಿದರು. ರಾಮಸೇತು ವಿಷಯದಲ್ಲಿ ತಮ್ಮ ಅಭಿಪ್ರಾಯ ಹೇಳಿದ ಕರುಣಾನಿಧಿ ಬಗ್ಗೆ ಕೂಡ ಅವರು 'ಭಾರತೀಯ ಸಂಸ್ಕೃತಿ ವಿರೋಧಿ' ಎಂಬಂತೆ ಟೀಕೆಗಳು ಬಂದವು. ಇಸ್ಲಾಮಿಕ್ ಮೂಲಭೂತವಾದಿಗಳು ಪ್ರಬಲವಾಗಿರುವ ಕಡೆಯಲ್ಲೂ ಹೀಗೇ ಭಿನ್ನಮತ ಸಹಿಸದವರನ್ನು ಧರ್ಮವಿರೋಧಿಗಳು ಎಂದು ಕರೆಯುವ ಮತ್ತು ಅವರ ಮೇಲೆ ಹಲ್ಲೆಮಾಡುವ ಪರಿಸರವಿದೆ.

ಭಾರತ ದೇಶದ ಸನಾತನವಾದಿಗಳು ನಂಬಿದ ನಂಬಿಕೆ ಮತ್ತು ಮಾಡುವ ಆಚರಣೆಗಳನ್ನು ಪ್ರಶ್ನಿಸಿದವರೆಲ್ಲ ದೇಶದ್ರೋಹಿಗಳು ಎಂದು ಘೋಷಿಸುತ್ತ ಹೋದರೆ ತರ್ಕ ಎಲ್ಲಿಗೆ ಮುಟ್ಟಬಹುದು? ಬುದ್ಧ ಅಲ್ಲಮ ಗುರುನಾನಕ ಕಬೀರ ಪೆರಿಯಾರ್ ಕುವೆಂಪು ಮುಂತಾಗಿ. ಈ ದೇಶದ ಜಡ ಸನಾತನವಾದವನ್ನೂ ಪುರೋಹಿತಶಾಹಿಯನ್ನು ವಿಮರ್ಶಿಸುತ್ತ, ಪರ್ಯಾಯವಾದ ವಿಶಾಲ ಜನಪರ ಸಂಸ್ಕೃತಿಯನ್ನು ಶೋಧಿಸಿದ ಎಲ್ಲ ದಾರ್ಶನಿಕರು ಚಿಂತಕರು ಸುಧಾರಕರು ಹಾಗೂ ಕವಿಗಳು ದೇಶದ್ರೋಹಿ ಆಗಿಬಿಡುತ್ತಾರೆ. ಈ ದೇಶದ್ರೋಹಿ ಪಟ್ಟಿಯಲ್ಲಿ ಸ್ವತಃ ಯಡಿಯೂರಪ್ಪನವರ ಸಮುದಾಯದ ಧಾರ್ಮಿಕ ನೇತಾರನಾದ ಬಸವಣ್ಣನು ಮೊದಲಿಗನಾಗುತ್ತಾನೆ. ಬಸವಣ್ಣನು, ಸಂಘಪರಿವಾರ ಬೆಂಬಲಿಸುವ ವರ್ಣಾಶ್ರಮ ಪದ್ಧತಿ, ಜಾತಿವ್ಯವಸ್ಥೆ, ವೇದ, ಹೋಮ, ಯಾಗಗಳ ಕಟುಟೀಕಾಕಾರ ಆಗಿದ್ದವನು; 'ವೇದಪುರಾಣ ಹೋತಿಂಗೆ ಮಾರಿ, ರಾಮಪುರಾಣ ಅಸುರರಿಗೆ ಮಾರಿ' ಎಂದು ನಿರಾಕರಿಸಿದವನು.

ಸ್ವಾರಸ್ಯಕರವೆಂದರೆ, ವಿಧಾನಸಭೆಯಲ್ಲಿ ಹೋಮ ಮಾಡಿಸಿದ ಕಛೇರಿ ಪ್ರವೇಶಿಸಿದ ಯಡಿಯೂರಪ್ಪನವರು, ಅದನ್ನು ಸಮರ್ಥಿಸಿಕೊಂಡ ಸದಾನಂದಗೌಡರು, ಅದನ್ನು ಟೀಕಿಸಿ ದೇಶಬಿಟ್ಟು ಹೋಗುವ ಆದೇಶಕ್ಕೊಳಗಾದ ಧರ್ಮಸಿಂಗರು- ಮೂವರೂ ಶೂದ್ರರು. ಹಿಂದೆ ಸನಾತನವಾದದ ಪರವಾದ ಹೇಳಿಕೆಗಳು ಉಚ್ಚಜಾತಿಯ ನಾಯಕರಿಂದ ಬರುತ್ತಿದ್ದವು. ಕಳೆದ ಕೆಲವು ವರ್ಷಗಳಿಂದ ಅವು ದಲಿತ ಮತ್ತು ಶೂದ್ರನಾಯಕರ ಮೂಲಕ ಹೊರಬರುತ್ತಿವೆ. ಮಾಂಸಾಹಾರ ಮಾಡುವವರ ನಾಲಗೆ ಕತ್ತರಿಸಬೇಕು ಎಂಬ ಮಾತು ಈಶ್ವರಪ್ಪನವರ ಬಾಯಲ್ಲಿ ಬಂದಿತು; ಟಿಪ್ಪು ದೇಶದ್ರೋಹಿ ಮತ್ತು ಕನ್ನಡದ್ರೋಹಿ ಎಂಬ ಹೇಳಿಕೆ ಚಿದಾನಂದಮೂರ್ತಿ ಮತ್ತು ಶಂಕರಮೂರ್ತಿಗಳ ಮೂಲಕ ಬಂದಿತು. ಹಾಗೆಂದು ಈ ಹೇಳಿಕೆ ಮಾಡಿದವರು ಅಮಾಯಕರೆಂದು ಅರ್ಥವಲ್ಲ. ಅವರೂ ಈ ಹೇಳಿಕೆಗಳನ್ನು ತಾತ್ವಿಕವಾಗಿ ನಂಬಿದವರೇ. ಆದರೆ ಅವು ಪ್ರಕಟವಾಗಲು ಅವರಷ್ಟೇ ಕಾರಣರಲ್ಲ. ಯಾರ್‍ಯಾರು ಯಾವ್ಯಾವಾಗ ಏನೇನು ಹೇಳಬೇಕೆಂದು ನಿರ್ಧರಿಸುವ ವ್ಯವಸ್ಥೆ ಬೇರೆಯೇ ಇದೆ. ಅದು ತೆರೆಮರೆಯಲ್ಲಿದೆ.

ಕುತೂಹಲಕರವೆಂದರೆ ದೇಶಬಿಟ್ಟು ಹೋಗಬೇಕು ಎಂಬ ಕರೆಗೆ ಧರ್ಮಸಿಂಗರು ವಿಧಾನಸಭೆಯಲ್ಲಿ ಕೊಟ್ಟ ಉತ್ತರ. ಅದು ಆಕ್ರೋಶದಿಂದ ಕೂಡಿತ್ತು. ಅದು ಯಡಿಯೂರಪ್ಪನವರು ವಿಶ್ವಾಸಮತ ಕೋರುತ್ತಿದ್ದ ದಿನ.

> **ಕುತೂಹಲಕರವೆಂದರೆ ದೇಶಬಿಟ್ಟು ಹೋಗಬೇಕು ಎಂಬ ಕರೆಗೆ ಧರ್ಮಸಿಂಗ್‌ರು ವಿಧಾನಸಭೆಯಲ್ಲಿ ಕೊಟ್ಟ ಉತ್ತರ. ಅದು ಆಕ್ರೋಶದಿಂದ ಕೂಡಿತ್ತು. ಅದು ಯಡಿಯೂರಪ್ಪನವರು ವಿಶ್ವಾಸ ಮತ ಕೋರುತ್ತಿದ್ದ ದಿನ. ಜೆಡಿಎಸ್ ಶಾಸಕರು ಸರ್ಕಾರವನ್ನು ಬೆಂಬಲಿಸುತ್ತಾರೋ ಇಲ್ಲವೊ ಎಂದು ಬಾಯಲ್ಲಿ ಅಕ್ಕಿಕಾಳು ಹಾಕಿಕೊಂಡು ಕೂತಿದ್ದ ಬಿಜೆಪಿಯವರು, ಖರ್ಗೆ ಮತ್ತು ಧರ್ಮಸಿಂಗ್‌ರಿಂದ ಬಂದ ಈ ಆಕ್ರೋಶಕರ ಪ್ರತಿಕ್ರಿಯೆಯಿಂದ ಕಂಗಾಲಾದರು. ದೇಶದಲ್ಲಿ ಇರುವ ತಮ್ಮ ಹಕ್ಕುದಾರಿಕೆ ಸ್ಥಾಪಿಸಲು ಧರ್ಮಸಿಂಗ್ ಎರಡು ನಿದರ್ಶನ ಕೊಟ್ಟರು. ಒಂದು–ಎಂಟು ಸಲ ಸತತವಾಗಿ ಜನಪ್ರತಿನಿಧಿಯಾಗಿ ಜೇವರ್ಗಿಯಿಂದ ಚುನಾಯಿತರಾಗಿರುವುದು. ಎರಡು–ತಮ್ಮ ಸೋದರ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಾಣಬಿಟ್ಟು ಹುತಾತ್ಮನಾಗಿರುವುದು.**

ಜೆಡಿಎಸ್ ಶಾಸಕರು ಸರ್ಕಾರವನ್ನು ಬೆಂಬಲಿಸುತ್ತಾರೋ ಇಲ್ಲವೊ ಎಂದು ಬಾಯಲ್ಲಿ ಅಕ್ಕಿಕಾಳು ಹಾಕಿಕೊಂಡು ಕೂತಿದ್ದ ಬಿಜೆಪಿಯವರು, ಖರ್ಗೆ ಮತ್ತು ಧರ್ಮಸಿಂಗರಿಂದ ಬಂದ ಈ ಆಕ್ರೋಶಕರ ಪ್ರತಿಕ್ರಿಯೆಯಿಂದ ಕಂಗಾಲಾದರು. ದೇಶದಲ್ಲಿ ಇರುವ ತಮ್ಮ ಹಕ್ಕುದಾರಿಕೆ ಸ್ಥಾಪಿಸಲು ಧರ್ಮಸಿಂಗ್ ಎರಡು ನಿದರ್ಶನ ಕೊಟ್ಟರು. ಒಂದು- ಎಂಟು ಸಲ ಸತತವಾಗಿ ಜನಪ್ರತಿನಿಧಿಯಾಗಿ ಜೇವರ್ಗಿಯಿಂದ ಚುನಾಯಿತರಾಗಿರುವುದು. ಎರಡು- ತಮ್ಮ ಸೋದರ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಾಣಬಿಟ್ಟು ಹುತಾತ್ಮನಾಗಿರುವುದು. ಆದರೆ ಈ ನಿದರ್ಶನಗಳು ತಾವು ದೇಶನಿಷ್ಠರು ಎಂದು ಪ್ರಶ್ನಿಸಿದವರಿಗೆ ಕೊಟ್ಟ ಸಮರ್ಥನೆಗಳು. ಕೇಳಿದ ಪ್ರಶ್ನೆಯಲ್ಲೇ ಮೂಲಭೂತವಾದ ದೋಷವಿದ್ದರೆ ಅದಕ್ಕೆ ಸಮರ್ಥನೆ ಧಾಟಿಯಲ್ಲಿ ಉತ್ತರಿಸಬೇಕೋ ಅಥವಾ ಪ್ರಶ್ನೆಯನ್ನೆ ಪ್ರಶ್ನಿಸಬೇಕೋ? ಎರಡನೆಯ ಕೆಲಸವನ್ನು ಕೆಲಮಟ್ಟಿಗೆ ಧರ್ಮಸಿಂಗರು ಮಾಡಿದರು. ಅವರು ಪಾಕಿಸ್ತಾನದಲ್ಲಿ ಹುಟ್ಟಿದ ಅದ್ವಾನಿಯವರು ಮೊದಲು ದೇಶಬಿಟ್ಟು ಹೋಗಬೇಕು ಎಂದರು; ಆರ್ಯರಾಗಿ ಭಾರತಕ್ಕೆ ವಲಸೆಬಂದ ಮೇಲ್ಜಾತಿಗೆ ಸೇರಿದ ಸಂಘಪರಿವಾರದವರು ದೇಶಬಿಟ್ಟು ಹೋಗಬೇಕು ಎಂದೂ ಹೇಳಿದರು. ವಾಸ್ತವದಲ್ಲಿ ಇವೆಲ್ಲ ಆಗಿಹೋಗುವಂತಹ ಮಾತಲ್ಲ ಎಂದು ಎಲ್ಲರಿಗೂ ಗೊತ್ತು. ಆದರೆ ತಮ್ಮ ನೋವನ್ನು ಅವರಿಗೆ ಹೊರಗೆ ಹಾಕಿ ಹಗುರವಾಗಬೇಕಿತ್ತು.

ಪ್ರಶ್ನೆಯೆಂದರೆ 'ದೇಶಬಿಟ್ಟು ಹೋಗು' ಎಂದು ಯಾರಾದರೂ ಹೇಳಿದರೆ, ಕೇಳಿದ ವ್ಯಕ್ತಿಯಲ್ಲಿ ಯಾಕಷ್ಟು ಕೋಪ ಬರು ತ್ತದೆ? ಸ್ವಸವ ರ್ಥನೆಯಲ್ಲಿ ಉತ್ತರವನ್ನು ಕೊಡುವಂತಹ ನೋವು ಮತ್ತು ಅನಿವಾರ್ಯತೆ ಯಾಕಾಗಿ ಬರುತ್ತದೆ? ಬಹುಶಃ ಅದು ಬದುಕುವ ಪಕ್ಕಿನ ಮೂಲಭೂತವಾದ ಯಾವುದೂ ನೆಲೆಯಲ್ಲಿ ಅಲುಗಿಸುಹುದು. ಹುಟ್ಟಿ ಬದುಕುವ ಮತ್ತು ಸತ್ತಮೇಲೆ ಒರಗಲಿರುವ ನೆಲವನ್ನು ಬಿಟ್ಟು ಹೋಗು ಎಂದರೆ ಇಕ್ಕಳದಲ್ಲಿ ಉಗುರನ್ನು ಕಿತ್ತಂತೆ, ಮೊಣಕ್ಕೈ ಗಂಟಿಗೆ ಕಲ್ಲುತೆಗೆದು ಕುಟ್ಟಿದಂತೆ ಆಗಬಹುದು. ಒಬ್ಬರ ಮನನೋಯಿಸುವ ಅತ್ಯಂತ ಕ್ರೂರ ವಿಧಾನ ವೆಂದರೆ ದೇಶಬಿಟ್ಟು ಹೋಗು ಎಂದು ಹೇಳುವುದೇ ಇರಬೇಕು. ಧರ್ಮ ಸಿಂಗ್ ಶಕ್ತಿ ರಾಜಕಾರಣದ ರಾಜಕಾರಣಿಯಾಗಿ ಮಾಡಿರುವ ಒಳ್ಳೆಯ ಮತ್ತು ಕೆಟ್ಟ ಕೆಲಸಗಳು, ಅವರ ವ್ಯಕ್ತಿತ್ವ ಇವುಗಳ ಮೇಲೆ ನಮ್ಮ ರಾಜಕೀಯ ವಿಶ್ಲೇಷಣೆ, ವಿಮರ್ಶಾತ್ಮಕ ಮೌಲ್ಯಮಾಪನ ಬಿಟ್ಟುಕೊಡಬೇಕಿಲ್ಲ.

ಆದರೆ ಚರಿತ್ರೆಯ ಯಾವುದೋ ಘಟ್ಟದಲ್ಲಿ ಯಾವುದೋ ಕಾರಣಕ್ಕೆ ಉತ್ತರ ಭಾರತದಿಂದ ಕರ್ನಾಟಕಕ್ಕೆ ವಲಸೆ ಬಂದ ಅಲ್ಪಸಂಖ್ಯಾತ ರಜಪೂತ ಕುಟುಂಬಕ್ಕೆ ಸೇರಿದ ಅವರಿಗೆ, ದೇಶಬಿಟ್ಟು ಹೋಗು ಎನ್ನುವುದು ಕರ್ನಾಟಕ ಬಿಟ್ಟುಹೋಗಿರಿ ಎಂದು ಕೂಡ ಅನಿಸಿರಬೇಕು. ಇಂತಹ ನೋವನ್ನು ಬೇರೆಬೇರೆ ರೂಪದಲ್ಲಿ ಮುಂಬೈನ ಕನ್ನಡಿಗರು ಶಿವಸೇನೆಯವರಿಂದ ಅನುಭವಿಸಿದ್ದಾರೆ; ಕಾವೇರಿ ಗಲಭೆಯಲ್ಲಿ ಕನ್ನಡದವರಿಂದ ಪೆಟ್ಟುತಿಂದ ತಮಿಳರು ಅನುಭವಿಸಿದ್ದಾರೆ. ನಾಗರಿಕ ಸಮಾಜದ ಅಭಿವೃದ್ಧಿ ಯೋಜನೆಗಳಿಗೆ ತಮ್ಮ ನೆಲೆಗಳನ್ನು ಬಿಟ್ಟುಕೊಡಬೇಕಾದ ಭಾರತದ ಆದಿವಾಸಿಗಳು ಅನುಭವಿಸಿಸುತ್ತಿದ್ದಾರೆ. ಬೇರೆ ತರಹದಲ್ಲಿ ತಸ್ಲೀಮಾ ಅನುಭವಿಸುತ್ತಿದ್ದಾರೆ. ಪಾಕಿಸ್ತಾನ ಮತ್ತು ಬಾಂಗ್ಲಾದ ಹಿಂದುಗಳು, ಭಾರತದ ಮುಸ್ಲಿಮರು, ಕಾಶ್ಮೀರದ ಪಂಡಿತರು, ಗುಜರಾತಿನ ಮುಸ್ಲಿಮರು ಅನುಭವಿಸುತ್ತಿದ್ದಾರೆ. ಒಂದು ಕಾಲಕ್ಕೆ ಜರ್ಮನಿಯ ಯಹೂದಿಗಳು ಅನುಭವಿಸಿದ್ದರು; ಈಗ ಪ್ಯಾಲೆಸ್ಟೇನಿಯರು ಅನುಭವಿಸುತ್ತಿದ್ದಾರೆ. ತಮ್ಮ ತಾಯ್ನೆಲದಿಂದ ಹೊರಹಾಕಲ್ಪಟ್ಟ ಟಿಬೆಟಿಯನರು ಅನುಭವಿಸುತ್ತಿದ್ದಾರೆ. ಇದೊಂದು ನಾಗರಿಕ ಸಮಾಜಗಳು ಸೃಷ್ಟಿಸಿರುವ ಅತ್ಯಂತ ಘೋರ ಹಿಂಸೆಯಾಗಿದೆ.

ದೇಶಬಿಟ್ಟು ಹೋಗು, ಮನೆ ಬಿಟ್ಟುಹೋಗು, ಊರುಬಿಟ್ಟು ಹೋಗು- ಇವೆಲ್ಲವೂ ಬೇರೆಬೇರೆ ಕರೆಗಳೆನಿಸಿದರೂ ಪರಿಣಾಮದಲ್ಲಿ ಒಂದೇ ತರಹದ ಬಹಿಷ್ಕಾರ ದನಿಯುಳ್ಳವು. 'ಮನೆಬಿಟ್ಟು ಹೋಗು' ಎಂಬ ಮಾತನ್ನು ಆವೇಶದ ಗಳಿಗೆಗಳಲ್ಲಾದರೂ ಭಾರತದ ಎಷ್ಟೊಂದು

ಂಡಂದಿರುವ ತಮ್ಮ ಮಡದಿಯರಿಗೆ ಹೇಳಿಲ್ಲ? ಎಷ್ಟೊಂದು ಮಕ್ಕಳು ತಮ್ಮ ತಂದೆತಾಯಂದಿರಿಗೆ ಹೇಳಿರಬಹುದು? ಎಷ್ಟೊಂದು ಅಪ್ಪಂದಿರು ಮಕ್ಕಳಿಗೆ ಹೇಳಿರಬಹುದು? ಹೋಮ ಮಾಡಿದ್ದು ತಪ್ಪು ಎಂದ ಧರ್ಮಸಿಂಗ್‌ರಿಗೆ ಸದಾನಂದಗೌಡರು ಬೇರೆ ಬಗೆಯಲ್ಲಿ ಉತ್ತರ ಕೊಡಬಹುದಿತ್ತು. ಆದರೆ ದೇಶಬಿಟ್ಟು ಹೋಗಬೇಕು ಎಂಬ ಕಠೋರ ಕರೆ ಅವರ ಬಾಯಲ್ಲಿ ಬಂತು. ಅದಕ್ಕೆ ಕಾರಣ ಅವರ ರಾಜಕೀಯ ಸಿದ್ಧಾಂತದ ಹಿನ್ನೆಲೆ. ಸಂಘಪರಿವಾರವು ತನ್ನನ್ನು ತಾನು ದೇಶಭಕ್ತ ಎಂದು ಸ್ವಯಂ ಘೋಷಿಸಿಕೊಂಡಿದೆಯಷ್ಟೆ. ದೇಶದಲ್ಲಿ ಯಾರ್‍ಯಾರಿರಬೇಕು ಅಥವಾ ಯಾರ್‍ಯಾರು ಎಲ್ಲಿರಬೇಕು ಎಂದು ನಿರ್ಧರಿಸುವ ಅಧಿಕಾರವನ್ನು ಅದು ಚಲಾಯಿಸುತ್ತಿರುತ್ತದೆ. ಸಣ್ಣಮಾತಿಗೂ 'ದೇಶಬಿಟ್ಟು ಹೋಗಿ' ಎಂದು ಮುಸ್ಲಿಮರಿಗೂ ಕ್ರೈಸ್ತರಿಗೂ ಹೇಳಿಹೇಳಿ ಅದಕ್ಕೆ ಅಭ್ಯಾಸವಾಗಿ ಹೋಗಿದೆ. "ಮುರ್ದಾ ಯಾ ಜಿಂದಾ, ಖಬರಸ್ಥಾನ್ ಯಾ ಪಾಕಿಸ್ತಾನ್" (ಮುಸ್ಲಿಮರಿಗೆ ಸತ್ತರೆ ಖಬರಸ್ಥಾನ; ಬದುಕಿದ್ದರೆ ಪಾಕಿಸ್ತಾನ) ಮುಂತಾದ ಲಯಬದ್ಧ ಘೋಷಣೆಗಳು ಸಂಘಪರಿವಾರದಲ್ಲಿ ಈಗಲೂ ಚಾಲ್ತಿಯಲ್ಲಿವೆ. ಇಂತಹ ಪರಿಸ'ದಲ್ಲಿ ಬೆಳೆದ ಸದಾನಂದಗೌಡರ ಬಾಯಲ್ಲಿ ಈ ಮಾತು ಸಲೀಸಾಗಿ ಬಂದಿದ್ದು ಸೋಜಿಗವಲ್ಲ.

ಸಂಘಪರಿವಾರದ ದೃಷ್ಟಿಕೋನದಲ್ಲಿ ಸ್ವದೇಶಪ್ರೇಮ ಮತ್ತು ಪರದೇಶದ ಬಗ್ಗೆ ಇರುವ ಆತಂಕಗಳ ಸ್ವರೂಪವೇ ವಿಚಿತ್ರವಾಗಿದೆ. ಅದು ವೈರುಧ್ಯಗಳಿಂದ ಕೂಡಿದೆ. ಇಸ್ಲಾಂ, ಕ್ರೈಸ್ತ ಧರ್ಮಗಳು ವಿದೇಶದವು. ಕಮ್ಯುನಿಸಂ ವಿದೇಶದಿಂದ ಬಂದಿದ್ದು. ಸೋನಿಯಾ ವಿದೇಶದವರು–ಇದು ಅದರ ತರ್ಕ. ಆದರೆ ಸಂಘಪರಿವಾರದ ಚರಿತ್ರೆ ನೋಡಿದರೆ, ಅದರ ಸಿದ್ಧಾಂತ ಮತ್ತು ಆಚರಣೆಗಳು ಬಂದಿದ್ದು ಜರ್ಮನಿ ಮತ್ತು ಫ್ಯಾಸಿಸ್ಟರು ಇಟಲಿಯ ಫ್ಯಾಸಿಸ್ಟರಿಂದ. ಅದು ಈ ದೇಶಕ್ಕೆ ವಿದೇಶಿಗರು ಆಳಲು ಬಂದಾಗಲೆಲ್ಲ ಅವರ ಜತೆ ಕೈಜೋಡಿಸಿದೆ. ಗಾಂಧೀಜಿ 'ಬ್ರಿಟೀಶರೇ ದೇಶಬಿಟ್ಟು ತೊಲಗಿ' ಕರೆಯನ್ನು ಕೊಟ್ಟಾಗ (೧೯೪೨) ಸಂಘಪರಿವಾರವು ಅದನ್ನು ಪಾಲಿಸಲಿಲ್ಲ. ಮಾತ್ರವಲ್ಲ ಜವಾಬ್ದಾರಿ ಸರ್ಕಾರಗಳಲ್ಲಿ ಇರುವ ಹಿಂದೂಮಹಾಸಭಾದ ಯಾವ ಮಂತ್ರಿಯೂ ರಾಜೀನಾಮೆ ಕೊಡಬಾರದು ಎಂದು ಅಪ್ಪಣೆ ಕೊಟ್ಟಿತು. ಸನಾತನವಾದಿ ಹೋರಾಟಗಾರರ ಗುಂಪು ಕಾಳಿಯ ಮೇಲೆ ಹಾಡುವ 'ವಂದೇಮಾತರಂ' ಗೀತೆಯುಳ್ಳ ಬಂಕಿಮಚಂದ್ರರ 'ಆನಂದಮಠ' ಕಾದಂಬರಿಯಲ್ಲಿ ಸಹ ಮುಸ್ಲಿಂದ್ವೇಷ ಮತ್ತು ಬ್ರಿಟಿಷರ ಜತೆ ಸ್ನೇಹದ ನಿಲುವೇ ಇದೆ.

ಈಗಲೂ ಸಂಘಪರಿವಾರವು ಜಗತ್ತಿನ ದೊಡ್ಡಣ್ಣನಾಗಿರುವ ಅಮೆರಿಕ ಪರವಾದ ನೀತಿಗಳನ್ನು ಒಳಗೇ ಬೆಂಬಲಿಸುತ್ತದೆ. ಅದಕ್ಕೆ ವಿದೇಶಗಳಿಂದ ಅದರಲ್ಲೂ ಜಗತ್ತಿನ ದೊಡ್ಡ ಸಾಮ್ರಾಜ್ಯಶಾಹಿ ದೇಶಗಳಾದ ಇಂಗ್ಲೆಂಡು ಮತ್ತು ಅಮೆರಿಕಗಳಿಂದ ಹಣ ಹರಿದುಬರುತ್ತದೆ. ವಿದೇಶದಿಂದ ಬಹುರಾಷ್ಟ್ರೀಯ ಕಂಪನಿಗಳು ಭಾರತಕ್ಕೆ ಬರುವುದು ಅದಕ್ಕೆ ದೊಡ್ಡ ಸಮಸ್ಯೆ ಅನಿಸಿಲ್ಲ. ಹಾಗಿದ್ದಿದ್ದರೆ ಅದು ವಿಷದ ಹಡಗುಗಳನ್ನು ನಮ್ಮ ದೇಶದ ಹಡಗುಕಟ್ಟೆಗಳಲ್ಲಿ ಒಡೆಯುವ ಕೆಲಸಕ್ಕೆ ಎಲ್ಲ ಧರ್ಮದ ಜನರನ್ನು ಕೂಡಿಸಿಕೊಂಡು ಪ್ರತಿರೋಧ ಒಡ್ಡುತ್ತಿತ್ತು; ನಮ್ಮ ಜನರನ್ನು ಕೊಂದ ಭೂಪಾಲದ ಯೂನಿಯನ್ ಕಾರ್ಬೈಡ್ ಕಂಪನಿಗೆ ಸರಿಯಾಗಿ ಬುದ್ಧಿ ಕಲಿಸಲು ಕರೆಗೊಡುತ್ತಿತ್ತು; ನಮ್ಮ ಜನರಿಗೆ ವಿಷಕುಡಿಸುತ್ತಿರುವ ಪೆಪ್ಸಿ-ಕೋಲಾ ಕಂಪನಿಗಳಿಗೆ

ಸಂಘಪರಿವಾರದ ದೃಷ್ಟಿಕೋನದಲ್ಲಿ ಸ್ವದೇಶಪ್ರೇಮ ಮತ್ತು ಪರದೇಶದ ಬಗ್ಗೆ ಇರುವ ಆತಂಕಗಳ ಸ್ವರೂಪವೇ ವಿಚಿತ್ರವಾಗಿದೆ. ಅದು ವೈರುಧ್ಯಗಳಿಂದ ಕೂಡಿದೆ. ಇಸ್ಲಾಂ, ಕ್ರೈಸ್ತ ಧರ್ಮಗಳು ವಿದೇಶದವು. ಕಮ್ಯುನಿಸಂ ವಿದೇಶ ದಿಂದ ಬಂದಿದ್ದು. ಸೋನಿಯಾ ವಿದೇಶದವರು– ಇದು ಅದರ ತರ್ಕ. ಆದರೆ ಸಂಘಪರಿವಾರದ ಚರಿತ್ರೆ ನೋಡಿದರೆ, ಅದರ ಸಿದ್ಧಾಂತ ಮತ್ತು ಆಚರಣೆಗಳು ಬಂದಿದ್ದು ಜರ್ಮನಿ ಮತ್ತು ಫ್ಯಾಸಿಸ್ಟರು ಇಟಲಿಯ ಫ್ಯಾಸಿಸ್ಟರಿಂದ. ಅದು ಈ ದೇಶಕ್ಕೆ ವಿದೇಶಿಗರು ಆಳಲು ಬಂದಾಗಲೆಲ್ಲ ಅವರ ಜತೆ ಕೈಜೋಡಿಸಿದೆ. ಗಾಂಧೀಜಿ 'ಬ್ರಿಟೀಶರೇ ದೇಶ ಬಿಟ್ಟು ತೊಲಗಿ' ಕರೆಯನ್ನು ಕೊಟ್ಟಾಗ (೧೯೪೨) ಸಂಘ ಪರಿವಾರವು ಅದನ್ನು ಪಾಲಿಸಲಿಲ್ಲ. ಮಾತ್ರವಲ್ಲ ಜವಾಬ್ದಾರಿ ಸರ್ಕಾರಗಳಲ್ಲಿ ಇರುವ ಹಿಂದೂ ಮಹಾಸಭಾದ ಯಾವ ಮಂತ್ರಿಯೂ ರಾಜೀನಾಮೆ ಕೊಡಬಾರದು ಎಂದು ಅಪ್ಪಣೆ ಕೊಟ್ಟಿತು. ಸನಾತನವಾದಿ ಹೋರಾಟಗಾರರ ಗುಂಪು ಕಾಳಿಯ ಮೇಲೆ ಹಾಡುವ 'ವಂದೇಮಾತರಂ' ಗೀತೆಯುಳ್ಳ ಬಂಕಿಮಚಂದ್ರರ 'ಆನಂದ ಮಠ' ಕಾದಂಬರಿಯಲ್ಲಿ ಸಹ ಮುಸ್ಲಿಂದ್ವೇಷ ಮತ್ತು ಬ್ರಿಟಿಷರ ಜತೆ ಸ್ನೇಹದ ನಿಲುವೇ ಇದೆ.

ದೇಶಬಿಟ್ಟು ಓಡಿಸಲು ಜನರನು ಸಂಘಟಿಸುತ್ತಿತ್ತು. ಆದರೆ ಇದ್ಯಾವುದೂ ಸಾಧ್ಯವಾಗಿಲ್ಲ. ಬದಲಾಗಿ ವಿದೇಶಿಗರಿಗೆ ಮೈಸೂರಿನಲ್ಲಿ ತರಬೇತಿ ಕೊಡುತ್ತಿರುವ ಇನ್ಫೋಸಿಸ್ ನಾರಾಯಣಮೂರ್ತಿ ಅಂತಹವರಿಗೆ ಅದು ಬೆಂಬಲಿಸುತ್ತದೆ. ನಮ್ಮ ಕಂಪನಿಗೆ ಬೇಕಾದ ಪ್ರತಿಭಾವಂತರ ವಿಷಯದಲ್ಲಿ ದೇಶೀಯರು ವಿದೇಶಿಯರು ಎಂಬ ಭೇದವಿಲ್ಲ ಎಂದು ನಾರಾಯಣಮೂರ್ತಿ ಸ್ಪಷ್ಟವಾಗಿ ಸಾರಿದರು. ಇವತ್ತು ವಿದೇಶಗಳಿಗೆ ತಮ್ಮ ಮಕ್ಕಳನ್ನು ಓದಿಗೆ ಕೆಲಸಕ್ಕೆ ಕಳಿಸುತ್ತಿರುವವರಲ್ಲಿ ಹೆಚ್ಚಿನವರು ಉಚ್ಚಜಾತಿಯವರು ಮತ್ತು ಸಂಘಪರಿವಾರಕ್ಕೆ ಸೇರಿದವರು. ಅವರಿಗೆ ಹಿಂದೆ ಇಂಗ್ಲೆಂಡಿತ್ತು; ಈಗ ಅಮೆರಿಕ.

ನಮ್ಮ ದೇಶದಲ್ಲಿ ರಾಜಕೀಯವಾಗಿ ಸಾಂಸ್ಕೃತಿಕವಾಗಿ ಭಿನ್ನಮತಗಳು ಇರುವುದು ಸಹಜ. ಕಾರಣ, ಈ ದೇಶವು ಬಹುಧಾರ್ಮಿಕವಾದುದು. ಬಹುಸಂಸ್ಕೃತಿಯದ್ದು. ಬಹುಭಾಷಿಕವಾದದ್ದು. ಬಹುಪ್ರದೇಶಗಳದ್ದು. ಇಲ್ಲಿ ಯಾವುದೇ ಒಂದು ವರ್ಗದ ಆಶೋತ್ತರಗಳು ಇಡೀ ದೇಶವನ್ನು ಪ್ರತಿನಿಧಿಸುವುದು ಸಾಧ್ಯವಿಲ್ಲ; ಅವುಗಳ ವಿಷಯದಲ್ಲಿ ಯಾರೊಬ್ಬರು ಮಾಡುವ ಟೀಕೆ ವಿಮರ್ಶೆಗಳು ದೇಶದ್ರೋಹವಾಗುವ ಅಗತ್ಯವಿಲ್ಲ. ವ್ಯಂಗ್ಯವೆಂದರೆ, ದೇಶಬಿಟ್ಟು ಹೋಗುವ ಈ ಪ್ರಸಂಗ ನಡೆದಿರುವ ಈ ಹೊತ್ತಲ್ಲಿ, ವಿದೇಶಕ್ಕೆ ಸಮುದ್ರಲಂಘನ ಮಾಡಿ ಹೋಗಿಬಂದ ಯುವತಿಯೊಬ್ಬರನ್ನು ದೇವರ ಪೂಜೆಯಿಂದ ಬಹಿಷ್ಕರಿಸುವ ಯತ್ನಗಳು ಕರ್ನಾಟಕದಲ್ಲಿ ನಡೆಯುತ್ತಿರುವುದು; ನಿಜವಾಗಿ ನಡೆಯಬೇಕಾದ್ದು ನಮ್ಮ ದೇಶವನ್ನು ಸಂಕಟಕ್ಕೆ ಈಡು ಮಾಡುವ ಆರ್ಥಿಕ ರಾಜಕೀಯ ವ್ಯವಸ್ಥೆ, ಅದರ ಕೈಕಾಲುಗಳಾಗಿರುವ ಬಹುರಾಷ್ಟ್ರೀಯ ಕಂಪನಿಗಳು, ಅವುಗಳ ವಸಾಹತುಗಳಾಗಿರುವ ಎಸ್‌ಇಜೆಡ್‌ಗಳು– ಇವನ್ನು ದೇಶದಿಂದ ಹೊರಹಾಕಬೇಕೇ ಬೇಡವೇ ಎನ್ನುವ ಚರ್ಚೆ. ದುಸ್ಥಿತಿ ಎಂದರೆ, ಭಾರತದ ಜನಶಕ್ತಿಯು ನಿಜವಾದ ಶತ್ರುಗಳ ವಿರುದ್ಧ ಒಗ್ಗೂಡಿಸುವುದರಲ್ಲಿ ನಿರತವಾಗಿಲ್ಲ; ತನ್ನನ್ನು ಧರ್ಮದ ಹೆಸರಲ್ಲಿ ಸೀಳಿಕೊಳ್ಳುವಲ್ಲಿ ನಿರತವಾಗಿದೆ. ಜಾತಿಬಹಿಷ್ಕಾರಗಳು, ಧಾರ್ಮಿಕ ಬಹಿಷ್ಕಾರಗಳು, ಸೈದ್ಧಾಂತಿಕ ಬಹಿಷ್ಕಾರಗಳು, ಬೌದ್ಧಿಕ ಬಹಿಷ್ಕಾರಗಳು ಯಥೇಚ್ಛವಾಗಿ ನಡೆಯುತ್ತಿವೆ. ಇದಕ್ಕೆ ನಮ್ಮ ದೇಶದ ಧಾರ್ಮಿಕ ಪುರೋಹಿತಶಾಹಿಯ ಜತೆ ಸೇರಿಹೋಗಿರುವ ಶಕ್ತಿರಾಜಕಾರಣದ ಕೊಡುಗೆಯಿದೆ.

ಕರ್ನಾಟಕದ ರಾಜಕಾರಣದಲ್ಲಿ ಮಠಗಳು, ಪುರೋಹಿತರು, ಚರಿತ್ರೆಯಲ್ಲಿ ಹಿಂದೆಂದೂ ಇಲ್ಲದಷ್ಟು ಪಾತ್ರವಹಿಸುತ್ತಿದ್ದಾರೆ. ಇದರ ಭಾಗವಾಗಿ ಇವತ್ತು ಪುರೋಹಿತಶಾಹಿಗಳ ಮಾತನ್ನು ರಾಜಕಾರಣಿಗಳೂ, ರಾಜಕಾರಣಿಯ ಮಾತುಗಳನ್ನು ಮಠೀಯ ನಾಯಕರು ಆಡುತ್ತಿರುವುದನ್ನು ನೋಡುತ್ತಿದ್ದೇವೆ. ಈ ಪಾತ್ರದ ಅದಲು ಬದಲುವಿಕೆಯ ಪರಿಣಾಮವೆಂದರೆ, ಭಾವುಕವಾದ ಧಾರ್ಮಿಕತೆಯ ಹೆಸರಿನಲ್ಲಿ ತಾರತಮ್ಯವಾದಿ ಪುರೋಹಿತಶಾಹಿಯು ಗದ್ದುಗೆಯ ಮೇಲೆ ಕುಳಿತುಕೊಳ್ಳುವುದು. ತನ್ನನ್ನು ಪ್ರಶ್ನಿಸಿದವರಿಗೆ ದೇಶಬಿಟ್ಟುಹೋಗು ಎಂದು ಹೇಳುವುದು. ಬಿಜೆಪಿಯ ಏಳುದಿನಗಳ ದರಬಾರಿನಲ್ಲೇ ವಿರೋಧಪಕ್ಷದ ನಾಯಕರಾದ ಧರ್ಮಸಿಂಗರಿಗೆ ಈ ಅನುಭವವಾಗಿದೆ. ಇನ್ನು ಹಿಂದೂರಾಷ್ಟ್ರವೇ ಅಸ್ತಿತ್ವಕ್ಕೆ ಬಂದರೆ ಪರಿಣಾಮವನ್ನು ಊಹಿಸುವುದೂ ಸಾಧ್ಯವಿಲ್ಲ. ಬಹುಶಃ ಭಾರತದ ಮುಕ್ಕಾಲು ಪಾಲು ಜನ ದೇಶಬಿಟ್ಟು ಹೋಗುವ ನೋಟಿಸನ್ನು ಪಡೆಯಬೇಕಾಗುವುದೋ ಏನೋ? □

ನಿತ್ಯ ಹರಿದ್ವರ್ಣದ ನಾಡಿಗೆ

ಸುವರ್ಣ ಕರ್ನಾಟಕ ವರ್ಷಾಚರಣೆಯ ಸೊಬಗು

'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು'

ಎಂದು ಅಭಿಮಾನ ಮತ್ತು ಆಶಯದೊಂದಿಗೆ ಕನ್ನಡ ಕುಲಕೋಟಿ ೫೧ ವರ್ಷಗಳ ಹಿಂದೆ ಏಕೀಕೃತ ಕರ್ನಾಟಕಕ್ಕಾಗಿ ಶ್ರಮಿಸಿತು. ಹಲವು ಭಾಗಗಳಾಗಿ ಹರಿದು ಹಂಚಿ ಹೋಗಿದ್ದ ಕನ್ನಡಿಗರು ಮತ್ತು ಕನ್ನಡ ನೆಲವನ್ನು ಒಂದಾಗಿಸಲು ಅಂದು ಆಲೂರು ವೆಂಕಟರಾಯರಾದಿ ಅನೇಕ ಸಾಹಿತಿಗಳು, ಲೇಖಕರು, ಹೋರಾಟಗಾರರು. ಅಭಿಮಾನಿಗಳೂ ಸೇರಿ ಪಟ್ಟ ಪರಿಶ್ರಮ ಸದಾ ಸ್ಮರಣೀಯ.

ಏಕೀಕೃತ ಕರ್ನಾಟಕ ರಚನೆಯಾದ ೧೯೫೬ ರಿಂದ ಪ್ರತಿ ವರ್ಷ ನವೆಂಬರ್ ೧ ರಂದು ನಾವು ಕರ್ನಾಟಕ ರಾಜ್ಯೋತ್ಸವ ಆಚರಿಸುತ್ತ ಬಂದಿದ್ದೇವೆ. ಆ ಹಿರಿಯರ ಆಶಯಗಳಿಗೆ ನೀರೆರೆದು ಪೋಷಿಸಲ್ಪಟ್ಟ ಕರ್ನಾಟಕ ಮಾತೆ ಇಂದು. ಹೊನ್ನಿನರಮನೆಯಲ್ಲಿ ಸಕಲ ಸಿರಿ ಸೊಬಗಿನೊಂದಿಗೆ ಕಂಗೊಳಿಸುತಿಹಳು.

ಈ ೫೦ ವರ್ಷಗಳ ಸುದೀರ್ಘ ಅವಧಿಯಲ್ಲಿ ಕರ್ನಾಟಕ ಇಂದು ಸರ್ವತೋಮುಖ ಪ್ರಗತಿ ಸಾಧಿಸಿದೆ.

ಜನಪ್ರತಿನಿಧಿಗಳ ಇಚ್ಛಾಶಕ್ತಿ ಅದಕ್ಕೆ ಇಂಬುಕೊಟ್ಟಂತೆ ಸಾಹಿತಿಗಳು, ಕಲಾವಿದರು, ವಿಜ್ಞಾನಿಗಳು, ಆಡಳಿತಗಾರರು, ಸಂಶೋಧಕರು, ಸಮಾಜ ಸೇವಕರು, ಶಿಕ್ಷಣ ತಜ್ಞರು ತಮ್ಮ ಅಮೂಲ್ಯ ಕೊಡುಗೆ ನೀಡಿದ್ದರಿಂದ ಕರ್ನಾಟಕ ಇಂದು ಜಾಗತಿಕ ಮನ್ನಣೆಗಳಿಸಿದೊಂಡಿದೆ.

ಕರ್ನಾಟಕದ ಸುವರ್ಣ ವರ್ಷಾಚರಣೆಯು ಚರಿತ್ರಾರ್ಹ ಘಟ್ಟವಾಗಿದ್ದು ಅದು ಅವಿಸ್ಮರಣೀಯವಾಗಿರುವಂತೆ ಕರ್ನಾಟಕದ ಸುವರ್ಣ ವರ್ಷಾಚರಣೆಯು ಚರಿತ್ರಾರ್ಹ ಘಟ್ಟವಾಗಿದ್ದು ಅದು ಅವಿಸ್ಮರಣೀಯವಾಗಿರುವಂತೆ ಕರ್ನಾಟಕ ಸರ್ಕಾರ ಹಲವು ಕ್ರಾಂತಿಕಾರಕ ಯೋಜನೆಯನ್ನು ರೂಪಿಸಿದೆ. ಯಶಸ್ವಿಯಾಗಿ ಅನುಷ್ಠಾನಗೊಳಿಸಿದೆ.

ಸುವರ್ಣ ಮಹೋತ್ಸವದ ಕುರುಹಾಗಿ ಸಮಗ್ರತೆಯನ್ನು ಬಿಂಬಿಸುವ ಲಾಂಛನವೊಂದನ್ನು ರೂಪಿಸಿ ಈ ಒಂದು ವರ್ಷ ಅವಧಿಯಲ್ಲಿ ಕಲಾವಿದರ ಪ್ರತಿಭೆಗೆ, ಆಸಕ್ತಿಗೆ ಆಸರೆಯಾಗುವ ಕಲಾಗ್ರಾಮ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಪೂರಕವಾಗಿ ಸುವರ್ಣ ಸಮುಚ್ಚಯ, ಜಾನಪದ ಕಲಾವಿದರಿಗೆ ಮರುಜೀವ ತುಂಬುವ ಜಾನಪದ ಜಾತ್ರೆ, ಸುವರ್ಣಜಾಥಾ, ಕನ್ನಡ ಪುಸ್ತಕಗಳ ಪ್ರಕಟಣೆ, ಅನುದಾನ ಪ್ರಕಟಣೆ, ಜಿಲ್ಲಾ ರಂಗಮಂದಿರಗಳಿಗೆ ಪುನರುಜ್ಜೀವ.

ಕಾಯಕಯೋಗಿ, ಶತಾಯುಷಿ, ಸಿದ್ಧಗಂಗಾಮಠದ ಪೂಜ್ಯ ಡಾ॥ ಶಿವಕುಮಾರ ಸ್ವಾಮಿ ಅವರಿಗೆ "ಕರ್ನಾಟಕ ರತ್ನ" ಪ್ರಶಸ್ತಿ ಹಾಡುಹಕ್ಕಿ ಡಾ॥ ಜಿ.ಎಸ್. ಶಿವರುದ್ರಪ್ಪನವರಿಗೆ "ರಾಷ್ಟ್ರಕವಿ ಪುರಸ್ಕಾರ" ಅತ್ಯಂತ ಜನಪ್ರಿಯ ರಾಷ್ಟ್ರಪತಿಗಳೆಂದೇ ಖ್ಯಾತರಾಗಿದ್ದ ಡಾ॥ ಎ.ಪಿ.ಜೆ. ಅಬ್ದುಲ್ ಕಲಾಂ ಅವರಿಗೆ "ಬಸವ ಪುರಸ್ಕಾರ". ಇವು ಸುವರ್ಣ ಕರ್ನಾಟಕ ವರ್ಷಾಚರಣೆಗೆ ಇನ್ನಷ್ಟು ಶೋಭೆಯನ್ನು ತಂದ ಕೆಲವು ಪ್ರಮುಖ ಘಟನಾವಳಿ.

ಬೆಳಗಾವಿಯಲ್ಲಿ ವಿಶೇಷ ಅಧಿವೇಶನ, ಅಲ್ಲಿ ಶಾಶ್ವತವಾಗಿ ಅಧಿವೇಶನಕ್ಕೆ ಅನುಕೂಲವಾಗಲು ಶಾಸಕಾಂಗ ಭವನ ನಿರ್ಮಾಣ, ಹೀಗೆ ಸಾಂಸ್ಕೃತಿಕ, ಸಾಹಿತ್ಯಕ, ಕಲೆ, ಪರಂಪರೆಗೆ, ಪ್ರಗತಿಗೆ ಪೂರಕವಾದ ಯೋಜನೆಗಳ ಅನುಷ್ಠಾನದೊಂದಿಗೆ ಕರ್ನಾಟಕ ಇಡೀ ದೇಶಕ್ಕೆ ಮಾದರಿಯಾಗಿ ಮುನ್ನಡೆಯುತ್ತಿರುವುದು ಕನ್ನಡಿಗರೆಲ್ಲರಿಗೂ ಹೆಮ್ಮೆಯ ಸಂಗತಿ.

ಕರ್ನಾಟಕ ವಾರ್ತೆ
Karnataka Information

ಸಾಮೂಹಿಕತೆಯಲ್ಲಿ ಹಂಚಿಕೊಳ್ಳುವ ಗತಕಾಲದಲ್ಲಿನ ವೈಭವಗಳು ಮತ್ತು ವಿಷಾದಗಳ ನಮ್ಮ ವಾರಸುದಾರಿಕೆಯು ಮೊದಲನೆಯದಾದರೆ, ಮುಂಬರುವ ಕಾಲದಲ್ಲಿ ಸಾಧಿಸಬೇಕೆನ್ನುವ ಇಂತಹುದೇ ಆದರ್ಶವು ಎರಡನೆಯದು. ಸಾಮೂಹಿಕತೆಯಲ್ಲಿ ಅನುಭವಿಸಿದ ನೋವುಗಳೂ ನಲಿವುಗಳು ಹಾಗೂ ನಿರೀಕ್ಷೆಗಳು ನಮ್ಮೆಲ್ಲರಿಗೂ ಇರುತ್ತವೆ; ನಾವು ಸಾಮೂಹಿಕತೆಯಲ್ಲಿ ಪಾಲಿಸುವ ನಮ್ಮ ಸಂಪ್ರದಾಯಗಳಿಗಿಂತಲೂ ನಮ್ಮ ಸಿದ್ಧಾಂತಗಳ ಆಯಕಟ್ಟಿನ ವಿಚಾರಗಳು ವಿಧಿಸುವ ಪರಿಮಿತಿಗಳಿಗಿಂತಲೂ ಹೆಚ್ಚಿನ ಮಹತ್ವ ಇವಕ್ಕಿರುತ್ತದೆ. ಭಾಷೆಯ ಮತ್ತು ಜನಾಂಗದ ವೈವಿಧ್ಯತೆಗಳ ಹೊರತಾಗಿಯೂ ಇವನ್ನು ನಾವು ಅರ್ಥಮಾಡಿಕೊಳ್ಳುವುದು ಸಾಧ್ಯವಿದೆ. ಈಗಷ್ಟೇ 'ನೋವಿನ ಅನುಭವಗಳನ್ನು ಸಾಮೂಹಿಕತೆಯಲ್ಲಿ ಹಂಚಿಕೊಂಡು' ಬದುಕುವುದು ಎಂಬ ಮಾತನ್ನಾಡಿದೆ.

ಮೂಲ: ಡಾ|| ಆನಂದ್ ತೇಲ್‌ತುಂಬ್ಡೆ
ಅನು: ಪ್ರೊ|| ಬಿ. ಗಂಗಾಧರ ಮೂರ್ತಿ

'ಎರಡು ರಾಷ್ಟ್ರ ಸಿದ್ಧಾಂತದಲ್ಲಿ ಅಂಬೇಡ್ಕರ್ ಅವರಿಗೆ ನಂಬಿಕೆ ಇತ್ತು'

ಹಿಂದುಗಳ ಮತ್ತು ಮುಸ್ಲಿಮರು ಮತಧರ್ಮವನ್ನು ಆಧರಿ [illegible] ಎರಡು ಪ್ರತ್ಯೇಕ ರಾಷ್ಟಗಳೆಂಬ ಸಿದ್ಧಾಂತದ ಮೇಲೆ ಎರಡು-ರಾಷ್ಟ್ರ ಸಿದ್ಧಾಂತವು ನಿಂತಿದೆ. ಮತಧರ್ಮವನ್ನು ಆಧರಿಸಿದ ರಾಷ್ಟ್ರೀಯತೆಯ ಈ ಸಿದ್ಧಾಂತವನ್ನು ಅಂಬೇಡ್ಕರ್ ಸಂಪೂರ್ಣವಾಗಿ ತಳ್ಳಿಹಾಕಿದ್ದರು. ರಾಷ್ಟ್ರೀಯತೆ ಎಂಬುದಕ್ಕೆ ಅವರು ಒಂದು ಸಾಮಾಜಿಕ ಭಾವಣಿಕೆ. ಇಂತಹ ಸಾಂಸ್ಥಿಕ ಭಾವಣಿಕೆಯಿರುವ ಸಮುದಾಯಕ್ಕೆ ಸೇರಿದವರು ಬಂಧುತ್ವದ ಸಂವೇದನೆಯನ್ನು ಹೊಂದಿರುತ್ತಾರೆ. ರಾಷ್ಟ್ರೀಯವಾಗಿ ಈ ಸಂವೇದನೆಗೆ ಏಕಕಾಲಕ್ಕೆ ಎರಡು ಅರ್ಥಗಳು ಲಭ್ಯವಾಗುತ್ತವೆ. ಬಂಧುತ್ವದ ಬಗ್ಗೆ ಬಾಂಧವ್ಯದ ಭಾವನೆಯೂ ಬಂಧುತ್ವವಿಲ್ಲದವರ ಬಗ್ಗೆ ವೈಷಮ್ಯದ ಭಾವನೆಯೂ ವ್ಯಕ್ತವಾಗುತ್ತದೆ. 'ಪ್ರಭೇದ ಪ್ರಜ್ಞೆ' ಎನ್ನಲಾಗುವ ಈ ಪ್ರಜ್ಞೆಯು ಆರ್ಥಿಕ ಅಂತಸ್ತುಮೂಲಗಳು ಹಾಗೂ ಸಾಮಾಜಿಕ ಅಸಮಾನತೆಗಳು ಸೃಷ್ಟಿಸುವ ಭಿನ್ನಾಭಿಪ್ರಾಯಗಳನ್ನು ಅಲಕ್ಷಿಸಿ ಒಂದು ಪ್ರಭೇದಕ್ಕೆ ಸೇರಿದವರನ್ನು ಬಾಂಧವ್ಯದಲ್ಲಿ ಅಪ್ಪಿಕೊಳ್ಳುತ್ತದೆ. ತಮ್ಮ ಬಾಂಧವ್ಯದ ವ್ಯಾಪ್ತಿಯಿಂದ ಹೊರಗಿರುವವರನ್ನು ಪ್ರತ್ಯೇಕವೆಂದು ಪರಿಗಣಿಸುತ್ತದೆ. 'ಪ್ರಭೇದ ಪ್ರಜ್ಞೆ'ಯಲ್ಲಿ ವ್ಯಕ್ತವಾಗುವ ಈ ಆಕಾಂಕ್ಷೆಯು ರಾಷ್ಟ್ರೀಯತೆ ಹಾಗೂ ರಾಷ್ಟ್ರೀಯ ಭಾವನೆ ಎಂಬುದರಲ್ಲಿ ಅಡಗಿರುವ ಮೂಲಧಾತುವೇ ಆಗಿದೆ."[೧೦]

ಭಾರತವು ಒಂದು ರಾಷ್ಟ್ರ ಎಂಬ ರಾಷ್ಟ್ರೀಯವಾದೀ ಸಿದ್ಧಾಂತವನ್ನು ಮೇಲ್ಜಾತಿ ಹಿಂದುಗಳು ಪ್ರಬಲವಾಗಿ ಸಮರ್ಥಿಸಿಕೊಳ್ಳತೊಡಗಿದ್ದರು. ಪ್ರತಿಯಾಗಿ ಮುಸ್ಲಿಂ ಲೀಗ್ ಭಾರತದ ಮುಸ್ಲಿಮರಿಗೆ ಪ್ರತ್ಯೇಕ ರಾಷ್ಟ್ರವೆಂಬ ಮತ್ತೊಂದು ರಾಷ್ಟ್ರೀಯವಾದೀ ಸಿದ್ಧಾಂತವನ್ನು ಮುಂದಿಟ್ಟಿತು. ಎರಡು-ರಾಷ್ಟ್ರ ಎಂಬ ಸಿದ್ಧಾಂತವು ಅಸ್ತಿತ್ವಕ್ಕೆ ಬಂದಿದ್ದು ಹೀಗೆ. ಅಂಬೇಡ್ಕರ್ ಪ್ರಕಾರ ರಾಷ್ಟ್ರೀಯತೆಯ ಸಮರ್ಥನೆಗಿಳಿಯಲು ಮೇಲ್ಜಾತಿ ಹಿಂದುಗಳಿಗೆ ಎರಡು ಕಾರಣಗಳಿದ್ದವು. ಒಂದು-ರಾಷ್ಟ್ರೀಯತೆ ಮತ್ತು ರಾಷ್ಟ್ರೀಯವಾದವು ದೇಶನಿವಾಸಿಗಳು ಮಾತ್ರವೇ ಪರಿಭಾವಿಸಬೇಕಾದ ಗುಣವಿಶೇಷವೆಂದು ಅವರು ಬಗೆದರು. ಇಂತಹ ರಾಷ್ಟ್ರೀಯತೆಯು ಭಾರತದಲ್ಲಿ ಸೃಷ್ಟಿಯಾಗದಿರುವ ಬಗ್ಗೆ ಅವರಿಗೆ ಅಸಮಾಧಾನವಿತ್ತು. ಆದ್ದರಿಂದ ಅವರು ಈ ಸಿದ್ಧಾಂತಕ್ಕೆ ಜೋತು ಬಿದ್ದರು. ಎರಡು-೧೯ನೇ ಶತಮಾನದ ಅಂತ್ಯಭಾಗಕ್ಕಾಗಲೇ ರಾಷ್ಟ್ರವಾಗಿ ಒಗ್ಗೂಡಲಿರುವ ಭಾರತದ ಜನತೆಯು ಸ್ವ-ರಾಜ್ಯ ಆಡಳಿತದ ಅರ್ಹತೆಯನ್ನುಗಳಿಸಿದೆ ಎಂಬ ವಿಚಾರವು ತಾತ್ವಿಕವಾಗಿ ಸ್ವೀಕರಿಸಲ್ಪಟ್ಟಿತ್ತು.

ಹೀಗಾಗಿ ಸ್ವ-ರಾಜ್ಯವನ್ನು ಪಡೆಯಲು ಉತ್ಸುಕರಾಗಿದ್ದ ಮೇಲ್ಜಾತಿ ಹಿಂದು ರಾಜಕಾರಣಿಗಳು ರಾಷ್ಟ್ರೀಯತೆಗಾಗಿ ಪಟ್ಟು ಹಿಡಿದರು.[೧೧] ರಾಷ್ಟ್ರ ಎಂಬುದಕ್ಕೆ ಯಾವುದೇ ಗೊಂದಲಕ್ಕೆ ಅವಕಾಶವಿಲ್ಲದಂತಹ ಅರ್ಥ ವಿವರಣೆಯನ್ನು ನೀಡಿದ್ದ ಅಂಬೇಡ್ಕರ್ ಅವರಿಗೆ ಭಾರತವು ಅಂತಹ ರಾಷ್ಟ್ರವಲ್ಲ ಎಂಬ ಸ್ಪಷ್ಟತೆಯು ಇತ್ತು. ಭಾರತವು ಅಂತಹ ರಾಷ್ಟ್ರೀಯತೆಯ ದೇಶವಾಗಬಾರದು ಎಂಬ ನಿಲುವನ್ನು ಇಟ್ಟುಕೊಂಡಿದ್ದ ಹಲವರೊಂದಿಗೆ ಅಂಬೇಡ್ಕರ್ ಸಹಮತ ಹೊಂದಿದ್ದರು.[೧೨] ಅದೂ ಅಲ್ಲದೆ ಆಗ ಭಾರತದ ಗರ್ಭದಲ್ಲಿ ಹಲವಾರು ಅವಿಕಸಿತ ರಾಷ್ಟ್ರೀಯತೆಗಳು ಆಕಾರ ಪಡೆಯ ತೊಡಗಿದ್ದವು.

ಹಿಂದುಗಳು ಮತ್ತು ಮುಸ್ಲಿಮರ ನಡುವೆ ಭಾಷಾ-ಸಾಮ್ಯತೆ, ಜನಾಂಗ-ಸಾಮ್ಯತೆಗಳ ಜೊತೆಗೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನ ವಿಧಾನಗಳಲ್ಲೂ ಹಲವಾರು ಸಾಮ್ಯತೆಗಳಿರುವುದರಿಂದ ಮುಸ್ಲಿಮರಿಗೆ ಬೇರೊಂದು ರಾಷ್ಟ್ರದ ಅಗತ್ಯವಿಲ್ಲ ಎಂಬುದು ಹಿಂದುಗಳ ವಾದವಾಗಿತ್ತು. ತಮಗೆ ಪ್ರತ್ಯೇಕ ರಾಷ್ಟ್ರ (ಪಾಕಿಸ್ತಾನ) ಬೇಕೆಂಬ ಮುಸ್ಲಿಮರ ಬೇಡಿಕೆಯನ್ನು ವಿರೋಧಿಸುವ ಈ ವಾದವನ್ನು ಅಂಬೇಡ್ಕರ್ ತಿರಸ್ಕರಿಸಿದರು. ಇವಾವೂ ರಾಷ್ಟ್ರ ರಚನೆಗೆ ಅವಶ್ಯಕವೆನಿಸುವ ಸಮರ್ಪಕ ಅಂಶಗಳಲ್ಲ ಎನ್ನುವುದು ಅವರ ಅಭಿಪ್ರಾಯವಾಗಿತ್ತು. ಅವರು ಹೇಳಿದ ಮಾತುಗಳಿವು: "ಈ ಅಂಶಗಳನ್ನು ನಾನು ಅಲ್ಲಗಳೆಯುವುದಿಲ್ಲ. ಮುಸ್ಲಿಮರಲ್ಲಿ ಬಹುಪಾಲು ಜನರು ಹಿಂದುಗಳಂತೆಯೇ ಜನಾಂಗ-ಸಾಮ್ಯತೆಯುಳ್ಳವರು ಎಂಬುದು ವಿವಾದಾತೀತ. ಹಲವಾರು ಮುಸ್ಲಿಮರು ಹಿಂದೂಗಳು ಆಡುವ ಭಾಷೆಗಳನ್ನು ಬಳಸುತ್ತಾರೆ ಎಂಬುದನ್ನು ನಾನು ಅಲ್ಲಗಳೆಯುವುದಿಲ್ಲ. ಧಾರ್ಮಿಕ ಆಚರಣೆಗಳಲ್ಲಿ ಇಬ್ಬರಿಗೂ ಸಮಾನವೆನಿಸುವ ಕೆಲವಾರು ಅಂಶಗಳಿವೆ ಎನ್ನುವುದೂ ಸುಳ್ಳಲ್ಲ. ಈ ಸಮಾನ ಲಕ್ಷಣಗಳ ಎರಡೂ ಕೋಮುಗಳು ಒಂದು ರಾಷ್ಟ್ರವಾಗಿರಬಲ್ಲವು ಎಂಬ ತೀರ್ಮಾನಕ್ಕೆ ಬರಲು ಈ ಅಂಶಗಳು ಪೂರಕವಾಗ ಬಲ್ಲವೇ? ಅಥವಾ ಈ ಅಂಶಗಳು ಭಾವೈಕ್ಯತೆ ಯಿಂದ ಬದುಕುವ ಆಕಾಂಕ್ಷೆಯನ್ನು ಈ ಕೋಮುಗಳ ನಡುವೆ ಬೆಳೆಸಿವೆ ಎಂಬುದಕ್ಕೆ ಪೂರಕವಾಗಬಲ್ಲವೇ? ಎಂಬುದು ಇಲ್ಲಿನ ಪ್ರಶ್ನೆ"[೧೩]

ಮೇಲ್ಜಾತಿ ಹಿಂದೂಗಳು ಪ್ರಸ್ತಾಪಿಸುವ ಮುಸ್ಲಿಂ ಮತ್ತು ಹಿಂದೂಗಳ ನಡುವಿನ ಸಾಮ್ಯತೆಯು 'ಶುದ್ಧಾಂಗ ಯಾಂತ್ರಿಕವಾದ' ವಿಚಾರವೇ ಹೊರತು, ಪರಸ್ಪರ ಸಾಮಾಜಿಕ ರೀತಿವಾಜುಗಳ ಮತ್ತು ಜೀವನ ವಿಧಾನಗಳ ಬಗ್ಗೆ ಸ್ವೀಕರಣಶೀಲತೆಯನ್ನೂ ಮತ್ತು ಹೊಂದಾಣಿಕೆಯನ್ನೂ ಬೆಳೆಸಿಕೊಳ್ಳುವ ಮೂಲಕ ಸಾಮಾಜಿಕ ಸಾಮರಸ್ಯವನ್ನು ಸಾಧಿಸುವ ಪ್ರಜ್ಞಾಪೂರ್ವಕ ಪ್ರಯತ್ನವಲ್ಲ ಎಂದು ಮೇಲ್ಜಾತಿ ಹಿಂದೂಗಳ ವಾದವನ್ನು ಅಂಬೇಡ್ಕರ್ ತಳ್ಳಿಹಾಕುತ್ತಾರೆ.[೧೪] ಮತಾಂತರಗೊಂಡ ಹಿಂದೂ ಸವರ್ಣೀಯ ಮತ್ತು ಅವರ್ಣೀಯ -ಜಾತಿಗಳು ಪೂರ್ಣ ಪ್ರಮಾಣದಲ್ಲಿ ಇಸ್ಲಾಮೀಕರಣಕ್ಕೆ ಒಳಗಾಗದ ಜೀವನ ವಿಧಾನವನ್ನು ಮುಂದುವರೆಸುತ್ತಿರುವ ಕಾರಣದಿಂದಾಗಿಯೇ ಈ ಸಾಮ್ಯತೆಯ ಅಂಶಗಳು ಕಂಡುಬರುತ್ತವೆ. ಇದಕ್ಕೆ ಭಾಗಶಃ ಅಪೂರ್ಣಾವಸ್ಥೆಯಲ್ಲಿರುವ ಮತಾಂತರವೇ ಕಾರಣವಾಗಿದೆ ಎನ್ನುತ್ತಾರೆ ಅವರು.

"ಕೇವಲ ಜನಾಂಗ, ಭಾಷೆ, ಅಥವಾ ದೇಶದಂತಹ ಸಂಗತಿಗಳಷ್ಟೇ ಜನತೆಗೆ ರಾಷ್ಟ್ರ ವೆನ್ನಬಹುದಾದ ಸ್ವರೂಪವನ್ನು ಕೊಡಲಾರವು ಎಂಬುದು ಇತಿಹಾಸವು ನಮಗೆ ನೀಡಿ ರುವ ಅನುಭವ"[೧೫] ಎನ್ನುವ ಅಂಬೇಡ್ಕರ್ ತಮ್ಮ ವಾದದ ಸಮರ್ಥನೆಗೆ ರೆನಾನ್ ಎಂಬ ಲೇಖಕನನ್ನು ಉಲ್ಲೇಖಿಸುತ್ತಾರೆ. ರಾಷ್ಟ್ರ ಎಂಬುದಾಗಿ ಯಾವುದನ್ನು ಸಂಬೋಧಿಸುತ್ತೇವೆಯೋ ಅದರ ಲಕ್ಷಣಗಳೇನು? ಎಂಬ ಪ್ರಶ್ನೆಗೆ ರೆನಾನ್ ನೀಡುವ ವ್ಯಾಖ್ಯಾನವನ್ನು ನೋಡಿ: "ರಾಷ್ಟ್ರವೆನ್ನುವುದು ಒಂದು ಅಂತಃಪ್ರೇರಣೆ, ಒಂದು ಆಧ್ಯಾತ್ಮಿಕ ತತ್ವ. ಈ ಅಂತಃಪ್ರೇರಣೆ ಮತ್ತು ಆಧ್ಯಾತ್ಮಿಕ ತತ್ವ ಎಂದು ಯಾವುದನ್ನು ಕರೆಯುತ್ತೇವೆಯೋ ಅದರಲ್ಲಿ ನಿಜಕ್ಕೂ ಒಂದೇ ಎನ್ನಬಹುದಾದ ಎರಡು ಸಂಗತಿಗಳು ಅಡಗಿವೆ. ಒಂದು ಗತಕಾಲದಲ್ಲಿದ್ದರೆ ಮತ್ತೊಂದು ವರ್ತಮಾನದಲ್ಲಿರುತ್ತದೆ.

ಸಾಮೂಹಿಕತೆಯಲ್ಲಿ ಹಂಚಿಕೊಳ್ಳುವ ಗತಕಾಲ ದಲ್ಲಿನ ವೈಭವಗಳು ಮತ್ತು ವಿಷಾದಗಳ ನಮ್ಮ ವಾರಸುದಾರಿಕೆಯು ಮೊದಲನೆಯದಾದರೆ, ಮುಂಬರುವ ಕಾಲದಲ್ಲಿ ಸಾಧಿಸಬೇಕೆನ್ನುವ ಇಂತಹುದೇ ಆದರ್ಶವು ಎರಡನೆಯದು. ಸಾಮೂಹಿಕತೆಯಲ್ಲಿ ಅನುಭವಿಸಿದ ನೋವುಗಳೂ ನಲಿವುಗಳು ಹಾಗೂ ನಿರೀಕ್ಷೆಗಳು ನಮ್ಮೆಲ್ಲರಿಗೂ ಇರುತ್ತವೆ; ನಾವು ಸಾಮೂಹಿಕತೆಯಲ್ಲಿ ಪಾಲಿಸುವ ನಮ್ಮ

ಸಂಪ್ರದಾಯಗಳಿಗಿಂತಲೂ ನಮ್ಮ ಸಿದ್ಧಾಂತಗಳ ಆಯಕಟ್ಟಿನ ವಿಚಾರಗಳು ವಿಧಿಸುವ ಪರಿಮಿತಿಗಳಿಗಿಂತಲೂ ಹೆಚ್ಚಿನ ಮಹತ್ವ ಇವಕ್ಕಿರುತ್ತದೆ. ಭಾಷೆಯ ಮತ್ತು ಜನಾಂಗದ ವೈವಿಧ್ಯತೆಗಳ ಹೊರತಾಗಿಯೂ ಇವನ್ನು ನಾವು ಅರ್ಥಮಾಡಿಕೊಳ್ಳುವುದು ಸಾಧ್ಯವಿದೆ. ಈಗಷ್ಟೇ 'ನೋವಿನ ಅನುಭವಗಳನ್ನು ಸಾಮೂಹಿಕತೆಯಲ್ಲಿ ಹಂಚಿಕೊಂಡು' ಬದುಕುವುದು ಎಂಬ ಮಾತನ್ನಾಡಿದೆ. ನಲಿವಿನ ಕ್ಷಣಗಳಿಗಿಂತ ನೋವಿನ ಕ್ಷಣಗಳು ನಮ್ಮನ್ನು ತೀವ್ರವಾಗಿ ಬೆಸೆಯುವ ಸಂಯೋಜಕ ಶಕ್ತಿಯಾಗುತ್ತವೆ. ರಾಷ್ಟ್ರೀಯವೆನಿಸುವ ವಿಜಯೋತ್ಸವದ ಗಳಿಗೆಗಳಿಗಿಂತಲೂ ಸಂತ್ರಸ್ತಗಳಿಗೆಗಳು ಈ ದೃಷ್ಟಿಯಿಂದ ಮಹತ್ವವೆನಿಸುತ್ತವೆ. ಏಕೆಂದರೆ ನಮ್ಮ ಕರ್ತವ್ಯಗಳನ್ನೂ ಸಾಮೂಹಿಕತೆಯ ಪ್ರಯತ್ನಗಳನ್ನೂ ಅವು ಪ್ರೇರೇಪಿಸುತ್ತವೆ."[೧೬]

"ಹಿಂದೂಗಳೂ ಮುಸ್ಲಿಮರೂ ಕೂಡಿಯೇ ಏಕ-ರಾಷ್ಟ್ರವಾಗಿ ಜೀವನ ಸಾಗಿಸಬಲ್ಲೆವು ಎಂಬ ನಿಲುವನ್ನು ಸಮರ್ಥಿಸಿಕೊಳ್ಳುವುದಾದರೆ, ಮುಸ್ಲಿಮರೂ ಹಿಂದೂಗಳೂ ಸಾಮೂಹಿಕತೆಯಲ್ಲಿ ಹಂಚಿಕೊಂಡಿರುವ ಹೆಮ್ಮೆಯ ಅಥವಾ ಶೋಕದ ಘಟನಾವಳಿಗಳು ಚರಿತ್ರೆಯ ಪುಟಗಳಲ್ಲೇನಾದರೂ ಇವೆಯೇ?"[೧೭] ಎನ್ನುವ ಪ್ರಶ್ನೆಗೆ ಸ್ವವರ್ಣೀಯ ಹಿಂದೂಗಳು ಉತ್ತರಿಸಬೇಕಾಗುತ್ತದೆ. ಅಂತಹ ಯಾವ ಉದಾಹರಣೆಯೂ ಇಲ್ಲ ಎನ್ನುತ್ತಾರೆ ಅಂಬೇಡ್ಕರ್. ಇತಿಹಾಸದ ಪುಟಗಳನ್ನು ತಿರುವಿದರೆ ಈ ಎರಡೂ ಕೋಮಿನವರು "ರಣರಂಗದ ಎದುರಾಳಿಗಳಂತೆ ಒಬ್ಬರ ಮೇಲೊಬ್ಬರು ಎರಗಿ ಕಾದಾಡಿದ್ದಾರೆ." "ಹಿಂದೂ ಮತ್ತು ಮುಸ್ಲಿಮರ ಸಾಮಾಜಿಕ ಜೀವನ ವಿಧಾನಗಳಲ್ಲೂ, ಅವರಾಡುವ ಭಾಷೆಗಳಲ್ಲೂ, ದೇಶೀಯತೆಯಲ್ಲಿಯೂ ಜನಾಂಗೀಯತೆಯಲ್ಲೂ ಹಲವಾರು ಸಾಮ್ಯತೆಗಳಿವೆ ಎಂಬುದನ್ನು ಆಧಾರವಾಗಿಟ್ಟುಕೊಂಡು ಸವರ್ಣೀಯ ಹಿಂದೂಗಳು ವಾದಿಸುತ್ತಾರೆ. ಪ್ರಾಸಂಗಿಕವಾದ್ದಕ್ಕೂ ಮೂಲತತ್ವಕ್ಕೂ, ಮೇಲ್ನೋಟದ್ದಕ್ಕೂ ಮೂಲಸತ್ವಕ್ಕೂ ಇರುವ ವ್ಯತ್ಯಾಸವನ್ನು ಗುರುತಿಸುವುದೇ ಅವರಿಗೆ ಸಾಧ್ಯವಾಗಿಲ್ಲ ಎಂಬುದಕ್ಕೆ ಇದೊಂದು ನಿದರ್ಶನ. ಈ ಸಾಮ್ಯತೆಗಳು ಎರಡೂ ಕೋಮಿನವರನ್ನು ಬೆಸೆಯುವುದಕ್ಕಿಂತ ಹೆಚ್ಚಿನದಾಗಿ ಅವರನ್ನು ರಾಜಕೀಯವಾಗಿ ಹಾಗೂ ಮತಧಾರ್ಮಿಕವಾಗಿ ವಿಭಜಿಸಿವೆ?[೧೮] ಎಂಬುದು ಅಂಬೇಡ್ಕರ್ ಅವರ ಅಭಿಪ್ರಾಯವಾಗಿತ್ತು. ಈ ಕೋಮುಗಳ ವೈಷಮ್ಯದ ಇತಿಹಾಸವನ್ನು ಪರಿಶೀಲಿಸಿದ ನಂತರ, "ಇಬ್ಬರೂ ಸಾಮೂಹಿಕತೆಯಲ್ಲಿ ಭಾಗಿಯಾಗಿ ಅನುಭವಿಸಿರಬಹುದಾದ ಯಾವ ಘಟನೆಯೂ ಇತಿಹಾಸದಲ್ಲಿ ಕಾಣಸಿಗುವುದಿಲ್ಲವಾದ್ದರಿಂದ ಹಿಂದೂ ಮತ್ತು ಮುಸ್ಲಿಮರು ಏಕ-ರಾಷ್ಟ್ರವಾಗಿ ಬದುಕಬಲ್ಲರು ಎಂಬ ಸವರ್ಣೀಯ ಹಿಂದೂಗಳ ವಾದವು ನೆಲಕಚ್ಚುತ್ತದೆ. ಈ ವಾದಕ್ಕೆ ಅಂಟಿಕೊಳ್ಳುವುದೆಂದರೆ ಭ್ರಮೆಗೆ ಅಂಟಿಕೊಂಡಂತಾಗುತ್ತದೆ. ಎರಡೂ ಕೋಮುಗಳು ಭಾವೈಕ್ಯತೆಯಿಂದಿರಬೇಕು ಎಂಬ ಆಕಾಂಕ್ಷೆಯು ಸವರ್ಣೀಯ ಹಿಂದೂಗಳ ಹೃದಯಾಂತರಾಳಲ್ಲಿ ಹೇಗೆ ಕಾಣುವುದಿಲ್ಲವೋ ಹಾಗೆಯೇ ಭಾರತದ ಮುಸ್ಲಿಮರಲ್ಲೂ ಕಾಣದಾಗಿದೆ"[೧೯] ಎನ್ನುತ್ತಾರೆ.

ಹಿಂದೂ ಮತ್ತು ಮುಸ್ಲಿಮರನ್ನು ಏಕ-ರಾಷ್ಟ್ರವಾಗಿ ಪರಿಗಣಿಸುವುದು ಅಸಾಧ್ಯವಾದ ಸಂಗತಿಯಾಗಿದೆ ಎಂಬ ವಾದವನ್ನು ಮಂಡಿಸುವ ಜೊತೆಜೊತೆಗೇ ಮತಧರ್ಮವು ರಾಷ್ಟ್ರೀಯತೆಯ ಏಕೈಕ ತಳಹದಿಯಾಗಬೇಕೆಂಬ ವಾದವನ್ನೂ ಅವರು ತಿರಸ್ಕರಿಸುತ್ತಾರೆ. [ಮುಸ್ಲಿಮರೇ (ಶೇ.

೯೮) ಬಹು ಸಂಖ್ಯಾತರಾಗಿರುವ] ಟರ್ಕಿಯಿಂದ ಅರಬ್ ರಾಷ್ಟ್ರಗಳು ಪ್ರತ್ಯೇಕವಾಗುವುದನ್ನು ತಡೆಯುವುದು ಇಸ್ಲಾಂ ಧರ್ಮಕ್ಕೆ ಸಾಧ್ಯವಾಗಲಿಲ್ಲ. ಹಾಗೆಯೇ ಯೂರೋಪಿನ ಕ್ರೈಸ್ತ ಧರ್ಮಾವಲಂಬಿಗಳಾದ ಹಲವು ರಾಷ್ಟ್ರೀಯತೆಗಳು ಪರಸ್ಪರ ಕಾದಾಡುತ್ತಿದ್ದರೂ ಈ ಕದನಗಳನ್ನು ತಡೆಯುವುದು ಕ್ರೈಸ್ತ ಧರ್ಮಕ್ಕೆ ಸಾಧ್ಯವಾಗಲಿಲ್ಲ. ಮತಧರ್ಮದ ರಾಷ್ಟ್ರೀಯತೆಯು ಸಮಸ್ಯೆಗೆ ಪರಿಹಾರವಲ್ಲ ಎಂಬುದು ಇದರಿಂದ ಸಾಬೀತಾಗುತ್ತದೆ. ಆದಕಾರಣ ಮತಧರ್ಮದ ತಳಹದಿಯ ಮೇಲೆ ರಾಷ್ಟ್ರತ್ವವನ್ನು ಪ್ರೇರೇಪಿಸುವ ಎರಡು-ರಾಷ್ಟ್ರ ಸಿದ್ಧಾಂತವನ್ನು ತಾವು ತಿರಸ್ಕರಿಸುವುದಾಗಿ ಹೇಳುತ್ತಾರೆ. ಮುಸ್ಲಿಮರು ಒಂದು ರಾಷ್ಟ್ರವಾಗಲೀ ಬಿಡಲಿ ಅವರನ್ನು ಹೊರತುಪಡಿಸಿದ ಭಾರತವು ಒಂದು ರಾಷ್ಟ್ರ ಎಂಬ ಅರ್ಥವನ್ನು ಎರಡು-ರಾಷ್ಟ್ರ ಎಂಬ ಪದವು ಸೂಚಿಸುತ್ತದೆಯಾಗಿ ಆ ಹೆಸರೇ ಅಪಪ್ರಯೋಗವೆನಿಸುತ್ತದೆ. ದೇಶದಲ್ಲಿನ ರಾಷ್ಟ್ರೀಯತೆಗಳಿಗೆ ತಮ್ಮದೇ ಪ್ರತ್ಯೇಕ ಪ್ರಭುತ್ವದ ಅಗತ್ಯವಿರುತ್ತದೆ ಎಂಬ ತಪ್ಪು ಕಲ್ಪನೆಯ ಮೇಲೆ ಈ ಸಿದ್ಧಾಂತವು ನಿಂತಿದೆ. ಮುಸ್ಲಿಮರ ಬೇಡಿಕೆಯಾದ ಪ್ರತ್ಯೇಕ ರಾಷ್ಟ್ರತ್ವವನ್ನು ಒಂದು ವೇಳೆ ಒಪ್ಪಿಕೊಂಡರೂ ಅವರು ಅದಕ್ಕಾಗಿ ಪ್ರತ್ಯೇಕ ಭೂ-ಪ್ರದೇಶವನ್ನು ಪಡೆಯಲೇಬೇಕೆಂದೇನೂ ಇಲ್ಲ. ಒಂದೇ ದೇಶದಲ್ಲಿ ಒಂದೇ ಪ್ರಭುತ್ವದಡಿ ಹಲವು ರಾಷ್ಟ್ರೀಯತೆಗಳು ಸಹಬಾಳ್ವೆ ನಡೆಸುವುದು ಸಾಧ್ಯ ಎಂಬುದಕ್ಕೆ ಜಗತ್ತಿನಲ್ಲಿ ಹಲವು ಜೀವಂತ ನಿದರ್ಶನಗಳಿವೆ. ಇದನ್ನೇ ಬೇರೆ ಮಾತುಗಳಲ್ಲಿ ಹೇಳುವುದಾದರೆ, ಇಡೀ ವಿಶ್ವದಲ್ಲಿ ಏಕ-ರಾಷ್ಟ್ರೀಯತೆಯ ದೇಶದ ಯಾವ ಉದಾಹರಣೆಯೂ ನಮ್ಮೆದುರಿಗಿಲ್ಲ. ರಾಷ್ಟ್ರೀಯತೆ ಎಂಬುದು ರಾಷ್ಟ್ರೀಯವಾದವಾಗಿ ಬೆಳೆದಾಗ ಮಾತ್ರ ಪ್ರತ್ಯೇಕ ರಾಷ್ಟ್ರವೆಂಬ ಅಸ್ತಿತ್ವದ ಪ್ರಶ್ನೆಯು ಎದುರಾಗುತ್ತದೆ. ಇಲ್ಲದಿದ್ದಲ್ಲಿ ಈ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಹಿಂದೂ ಮತ್ತು ಮುಸ್ಲಿಂ ಮತಾಂಧರು ಎರಡು-ರಾಷ್ಟ್ರ ಸಿದ್ಧಾಂತದ ಪ್ರಚಾರದಲ್ಲಿ ತೊಡಗಿರುವ ಸನ್ನಿವೇಶದಲ್ಲಿ ಅಂಬೇಡ್ಕರ್ ತಮ್ಮ ಗ್ರಂಥದ ಅಂತಿಮ ಭಾಗದಲ್ಲಿ ಹೇಳಿರುವ ಮಾತುಗಳು ಆಶಾಕಿರಣದಂತಿವೆ: "ಮುಸ್ಲಿಮರು ಬಯಸಿದಲ್ಲಿ ರಾಷ್ಟ್ರವಾಗಿ ಪ್ರತ್ಯೇಕಗೊಳ್ಳಲು ಸಾಕಾಗುವಷ್ಟು ಕಾರಣಗಳು ಅವರಿಗಿವೆ ಎಂಬುದು ನಿಜ. ಆದರೆ ಹಿಂದೂ ಮತ್ತು ಮುಸ್ಲಿಮರ ನಡುವೆ ಸಾಮಾನ್ಯವೆನಿಸುವ ಅಂಶಗಳಿಲ್ಲವೇ? ಅವರನ್ನು ಈ ದೇಶದ ಪ್ರಜೆಗಳನ್ನಾಗಿ ರೂಪಿಸುವಂತಹದ್ದು ಏನೂ ಇಲ್ಲವೇ? ಇಬ್ಬರನ್ನೂ ಬೆಸೆಯಬಲ್ಲ ಅಲ್ಲಗಳೆಯಲು ಸಾಧ್ಯವಾಗದಂತಹ ಸಾಮ್ಯತೆಗಳ ಲಕ್ಷಣವಿರುವ ವರ್ತನೆಗಳಿವೆ, ಆಚರಣೆಗಳಿವೆ, ಸಂಪ್ರದಾಯಗಳಿವೆ,

ರಾಷ್ಟ್ರೀಯತೆ ಮತ್ತು ರಾಷ್ಟ್ರೀಯವಾದಗಳು ಮನುಷ್ಯನ ಆಲೋಚನೆಯಲ್ಲಿನ ಎರಡು ಪ್ರತ್ಯೇಕ ಮನಃಸ್ಥಿತಿಗಳೆಂದು ಅಂಬೇಡ್ಕರ್ ಬಗೆಯುತ್ತಾರೆ.[೨೦] ರಾಷ್ಟ್ರೀಯತೆ ಎನ್ನುವುದು "ಸ್ವಜನ-ಪ್ರಜ್ಞೆ, ಬಂಧುತ್ವವೆಂಬ ಬಾಂಧವ್ಯದ ಉದ್ದೀಪನೆ". ರಾಷ್ಟ್ರೀಯತವಾದವೆಂಬರೆ "ಈ ರೀತಿಯ ಬಾಂಧವ್ಯದ ಸಂವೇದನೆಗೊಳಗಾದವರನ್ನೆಲ್ಲಾ ಮೆದ್ದುವ ಪ್ರತ್ಯೇಕ ರಾಷ್ಟ್ರೀಯ ಅಸ್ತಿತ್ವದ ಆಕಾಂಕ್ಷೆ"[೨೧] ರಾಷ್ಟ್ರೀಯತೆಯು ಇಲ್ಲದ ರಾಷ್ಟ್ರೀಯವಾದವೂ ರಾಷ್ಟ್ರವಾದೀ ಭಾವನೆಗಳು ಇಲ್ಲದ ರಾಷ್ಟ್ರೀಯತೆಯು ಇರುವುದು ಸಾಧ್ಯ. ಇದರಲ್ಲಿ ಸೋಜಿಗವೇನಿಲ್ಲ. ಅಂಬೇಡ್ಕರ್ ಪ್ರಕಾರ, ರಾಷ್ಟ್ರೀಯತೆಯು ರಾಷ್ಟ್ರೀಯವಾದದ ಜ್ವಾಲೆಯಾಗಿ ಪರಿವರ್ತನೆಯಾಗಲು ಇರಬೇಕಾದ ಪೂರ್ವಭಾವಿ ಷರತ್ತುಗಳು ಎರಡು: "ಒಂದು, ಏಕ-ರಾಷ್ಟ್ರವಾಗಿ ಬದುಕು ಪ್ರಬಲ ಇಚ್ಛಾಶಕ್ತಿಯು ಪ್ರಕಟಗೊಳ್ಳಬೇಕು. ಈ ಚಾಲಕಶಕ್ತಿಯ ಅಭಿವ್ಯಕ್ತಿಯೇ ರಾಷ್ಟ್ರೀಯವಾದ ಎನ್ನಿಸಿಕೊಳ್ಳುತ್ತದೆ. ಎರಡು, ರಾಷ್ಟ್ರೀಯವಾದವು ತನ್ನ ವಶಕ್ಕೆ ತೆಗೆದುಕೊಳ್ಳಬಹುದಾದ ಭೂ-ಪ್ರದೇಶವು ಲಭ್ಯವಿದ್ದು ಅದನ್ನು ತನ್ನ ರಾಷ್ಟ್ರೀಯತೆಯ ಸಾಂಸ್ಕೃತಿಕ ನೆಲೆಯನ್ನಾಗಿಯೂ ಪ್ರಭುತ್ವವನ್ನಾಗಿಯೂ ಪರಿವರ್ತಿಸುವುದು ಸಾಧ್ಯವಾಗಬೇಕು."[೨೨] ಇಂತಹ ರಾಷ್ಟ್ರೀಯತೆಯನ್ನು ಮುಸ್ಲಿಮರು ಅಭಿವ್ಯಕ್ತಿಸುತ್ತಾರೆ ಎಂಬ ವಾದವನ್ನು ತಿರಸ್ಕರಿಸುತ್ತಾ, ಅವರಲ್ಲಿ ಮೊಳಕೆಯೊಡೆಯಲಾರಂಭಿಸಿದ್ದ "ಪ್ರತ್ಯೇಕ ರಾಷ್ಟ್ರವಾಗಿ ಬದುಕುವ ಇಚ್ಛಾಶಕ್ತಿ"ಯು ಆಗಿನ ಕಾಲಘಟ್ಟದ ಮುಸ್ಲಿಮರಲ್ಲಿ ಕಂಡುಬರುವ ಬೆಳವಣಿಗೆಯಾಗಿದೆ ಎಂಬುದಾಗಿ ಅವರು ಹೇಳುತ್ತಾರೆ.

ರಾಷ್ಟ್ರೀಯವಾದವು ಇತಿಹಾಸದಲ್ಲಿ ಪ್ರಮುಖ ಶಕ್ತಿಯಂತೆ ವರ್ತಿಸಿರುವುದನ್ನು ನಿರೂಪಿಸಲು ಅಂಬೇಡ್ಕರ್ ಟರ್ಕಿ ಮಹಾಚಕ್ರಾಧಿಪತ್ಯದ ಐತಿಹಾಸಿಕ ವಿಘಟನೆ ಮತ್ತು ಜಕೋಸ್ಲೋವಾಕಿಯಾದ ವಿನಾಶಗಳನ್ನು ಉದಾಹರಣೆಯಾಗಿ ತೆಗೆದುಕೊಳ್ಳುತ್ತಾರೆ. ಈ ದೇಶಗಳ ಜನತೆಯಲ್ಲಿ ಪ್ರವರ್ಧಮಾನಕ್ಕೆ ಬಂದ ರಾಷ್ಟ್ರೀಯವಾದವೇ ಇಂತಹ ವಿನಾಶಕ್ಕೆ ಬಹು ಮುಖ್ಯವಾದ ಕಾರಣಗಳಲ್ಲೊಂದಾಗಿದೆ ಎನ್ನುತ್ತಾರೆ. "ಟರ್ಕಿಯ ಜನ ಸಮುದಾಯಗಳಲ್ಲಿ ರಾಷ್ಟ್ರೀಯತೆಯ ಭಾವೋನ್ಮಾದವು ಪರಕಾಷ್ಠೆಗೆ ಮುಟ್ಟಿದ್ದೇ ಆ ದೇಶದ ವಿನಾಶಕ್ಕೆ ಮೂಲಕಾರಣವಾಯಿತು. ಟರ್ಕಿಷ್ ಪ್ರಭುತ್ವದ ವಿರುದ್ಧ ಸಂಘಟಿತವಾದ ಗ್ರೀಕರ, ಸರ್ಬಿಯನ್ನರ, ಬಲ್ಗೇರಿಯನ್ನರ ಹಾಗೂ ಬಾಲ್ಕನ್ನರ ದಂಗೆಗಳನ್ನು

ಕ್ರೈಸ್ತ ಮತ್ತು ಇಸ್ಲಾಂಧರ್ಮಗಳ ನಡುವಿನ ಸಂಘರ್ಷ ವೆಂದು ವರ್ಣಿಸಲಾಗುತ್ತದೆ. ಈ ಘಟನೆಗಳನ್ನು ನೋಡುವ ಸ್ಥಾನಗಳಲ್ಲಿ ಅದೂ ಒಂದು ಎಂಬುದನ್ನು ಒಪ್ಪಿದರೂ ಅದು ಮೇಲ್ನೋಟದ ದೃಷ್ಟಿಕೋನ ಎನ್ನಲೇ ಬೇಕಾಗುತ್ತದೆ. ಏಕೆಂದರೆ ವಾಸ್ತವದಲ್ಲಿ ಈ ದಂಗೆಗಳು ಆಯಾ ರಾಷ್ಟ್ರೀಯತೆಗಳು ಪ್ರೇರೇಪಿಸಿದ ಪ್ರತ್ಯೇಕ ರಾಷ್ಟ್ರೀಯತೆಯ ಅಭಿವ್ಯಕ್ತಿಗಳೇ ಆಗಿವೆ."[೨೩] "ಗ್ರೀಕರ, ಸರ್ಬಿಯನ್ನರ, ಬಲ್ಗೇರಿಯನ್ನರ ಹಾಗೂ ಬಾಲ್ಕನ್ನರ ರಾಷ್ಟ್ರೀಯತೆಗಳು ಮೇಲ್ನೋಟಕ್ಕೆ ಕ್ರೈಸ್ತ ಮತ್ತು ಇಸ್ಲಾಂಧರ್ಮಗಳ ಸಂಘರ್ಷವೆಂದು ಭಾಸವಾದರೂ ಅರಬ್ಬರ ರಾಷ್ಟ್ರಿಯವಾದವಾಗಿ ವ್ಯಕ್ತವಾದ ಅರಬ್ಬರ ಸ್ವತಂತ್ರ ಅಸ್ತಿತ್ವದ ಇಚ್ಛಾಶಕ್ತಿಯೇ ಕಳೆದ ಯುದ್ಧದಲ್ಲಿ ಟರ್ಕಿಯ ವಿಘಟನೆಗೆ ಪ್ರಮುಖ ಕಾರಣವಾಯಿತು."[೨೪] ಹಾಗೆಯೇ, ಜಕೋಸ್ಲೋವಾಕಿಯ ದೇಶವು ಜರ್ಮನ್ ಆಕ್ರಮಣದಿಂದಾಗಿ ನಾಶವಾಯಿತು ಎಂಬುದು ಸ್ವಲ್ಪಮಟ್ಟಿಗೆ ನಿಜವಿರಬಹುದಾದರೂ, ಈ ಮೇಲ್ಪದರದ ಅಭಿಪ್ರಾಯಕ್ಕೆ ವಿರುದ್ಧವಾಗಿ, ಸ್ಲೋವಾಕರು ಸಂಘಟಿಸಿದ ಪ್ರಭುತ್ವ ವಿರೋಧಿ ರಾಷ್ಟ್ರವಾದವೇ ದೇಶದ ಐಕ್ಯತೆಗೆ ಮಾರಕವಾದ ಪ್ರಮುಖ ಕಾರಣವಾಯಿತು."[೨೫] ಎನ್ನುತ್ತಾರೆ.

ಮುಸ್ಲಿಮರ "ರಾಷ್ಟ್ರವಾಗಿ ಬದುಕುವ ಇಚ್ಛಾಶಕ್ತಿ"ಯನ್ನು ಅಂಬೇಡ್ಕರ್ ಅವರು ಅಘಾತಕ್ಕೊಳಗಾದ ಮುಸ್ಲಿಮರ ಮನೋಸ್ಥಿತಿ ಎಂದು ಬಗೆದಿದ್ದರು. ಅಪಮಾನದಿಂದ ವಿಮೋಚನೆ (ಅಧ್ಯಾಯ-ಮೂರು)ಯಲ್ಲಿ ಸವರ್ಣೀಯ ಹಿಂದೂ ಬಹುಸಂಖ್ಯಾತರು ಮುಸ್ಲಿಮರನ್ನು 'ಎರಡನೇ-ದರ್ಜೆ' ಪ್ರಜೆಗಳನ್ನಾಗಿ ನಡೆಸಿಕೊಳ್ಳುತ್ತಿರುವುದೇ ಅವರು ಪಾಕಿಸ್ತಾನದ ಬೇಡಿಕೆಯನ್ನು ಮಂಡಿಸಲು ಇರುವ ಕಾರಣಗಳಲ್ಲಿ ಒಂದಾಗಿದೆ ಎನ್ನುತ್ತಾರೆ. ತಮ್ಮೊಂದಿಗೆ ಸಹಮತವಿರದ ಯಾರೊಂದಿಗೂ ಆಡಳಿತಾಧಿಕಾರವನ್ನು ಹಂಚಿಕೊಳ್ಳಲು ಕಾಂಗ್ರೆಸ್ ಸಿದ್ಧವಿರಲಿಲ್ಲ ಎಂಬುದನ್ನು ಕಾಂಗ್ರೆಸ್ ಆಡಳಿತವು ಸಾಬೀತು ಮಾಡಿಯೂ ತೋರಿಸಿತು. ಸಂವಿಧಾನ-ದತ್ತ ಸಂರಕ್ಷಣೆಯು ಅವರನ್ನು ಮೇಲ್ಜಾತಿ ಹಿಂದೂಗಳ ದೌರ್ಜನ್ಯದಿಂದ ರಕ್ಷಿಸಲಾರದೆಂಬುದು ಭ್ರಮ ನಿರಸನಕ್ಕೆ ಕಾರಣವಾಯಿತು. "ಕಾಂಗ್ರೆಸ್ ತಮ್ಮ ಹಿತಾಸಕ್ತಿಯನ್ನು ರಕ್ಷಿಸುತ್ತದೆ ಎಂಬ ಭರವಸೆ ಅವರದಾಗಿತ್ತು ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ಗಳು ಕೈಜೋಡಿಸಿ ಸಂವಿಧಾನ ರಚನೆಯ ಕೆಲಸದಲ್ಲಿ ತೊಡಬಹುದೆಂಬ ನಿರೀಕ್ಷೆಯೂ ಅವರಿಗಿತ್ತು. ಆದರೆ ಹಿಂದೂ ಪ್ರಾಂತ್ಯಗಳಲ್ಲಿ ಎರಡು ವರ್ಷ ಮೂರು ತಿಂಗಳು ಕಾಲ ಕಾಂಗ್ರೆಸ್ ಸರ್ಕಾರಗಳು ನಡೆಸಿದ ಆಡಳಿತವು ಅವರನ್ನು ಸಂಪೂರ್ಣ ಭ್ರಮನಿರಸನಗೊಳಿಸಿದ್ದವು. ಈ ವಾಸ್ತವ ಸಂಗತಿಗಳು ಅವರನ್ನು ಕಾಂಗ್ರೆಸ್‌ನ ಕಟ್ಟಾ ವಿರೋಧಿಗಳನ್ನಾಗಿ ಮಾಡಿದ್ದವು. ವಿಮೋಚನಾ ದಿನವನ್ನಾಗಿ ಆಚರಿಸುವ (೨೨ ಡಿಸೆಂಬರ್ ೧೯೩೯) ಮೂಲಕ ತಮಗಿದ್ದ ಅಸಮಾಧಾನವನ್ನು ವ್ಯಕ್ತಪಡಿಸಿದರು. ಇದಕ್ಕಿಂತಲೂ ನಿಕೃಷ್ಟವಾದ ಸಂಗತಿಯೆಂದರೆ, ಅವರ ಅಸಮಾಧಾನವು ಕೇವಲ ಕಾಂಗ್ರೆಸ್ ಪಕ್ಷಕ್ಕೆ ಮಾತ್ರ ಸೀಮಿತಗೊಳ್ಳಲಿಲ್ಲ. ದುಂಡು ಮೇಜಿನ ಅಧಿವೇಶನದಲ್ಲಿ ಸ್ವರಾಜ್ಯ ಬೇಡಿಕೆಗೆ ಕಾಂಗ್ರೆಸ್‌ನೊಂದಿಗೆ ಕೈಜೋಡಿಸಿದ ಇದೇ ಮುಸ್ಲಿಂ ನಾಯಕರು ಈಗ ಸ್ವರಾಜ್ಯವನ್ನೇ ಕಟುವಾಗಿ ವಿರೋಧಿಸತೊಡಗಿದ್ದಾರೆ."[೨೬]

ಮುಸ್ಲಿಮರು ತಮ್ಮ ಕುಂದುಕೊರತೆಗಳ ಬಗ್ಗೆ ಮಾತನಾಡತೊಡಗಿದರೆ ಅವರ ಹಿತಾಸಕ್ತಿಗಳ ಏಳಿಗೆಗಾಗಿ ಸಾಧ್ಯವಿರುವುದನ್ನೆಲ್ಲಾ ಮಾಡಿರುವುದಾಗಿ ಹೇಳುವ ಕಾಂಗ್ರೆಸ್‌ನ ನಿಲುವನ್ನು ಅಸಂಬದ್ಧವಾದ್ದೆಂದು ಅಂಬೇಡ್ಕರ್ ತಳ್ಳಿಹಾಕುತ್ತಾರೆ. ಅವರು ಕೇಳಿದಂತಹ ಪ್ರಶ್ನೆಗಳು ಆಗ ಎಷ್ಟು ಪ್ರಸ್ತುತವೆನಿಸಿದ್ದವೋ ಇವತ್ತಿನ ಅಭಿವೃದ್ಧಿ ದೃಷ್ಟಿಕೋನಕ್ಕೂ ಅಷ್ಟೇ ಪ್ರಸ್ತುತವೆನಿಸುತ್ತವೆ. ಅವರ ಪ್ರಶ್ನೆ ಇದು: "ಸ್ವರಾಜ್ಯವೆಂದರೆ ಸವರ್ಣೀಯ ಹಿಂದೂಗಳು ಆಳುವ ಜನಾಂಗವೆಂದೂ ಮುಸ್ಲಿಂ ಮತ್ತಿತ್ತರ ಅಲ್ಪಸಂಖ್ಯಾತರು ಗುಲಾಮ ಜನಗಳೆಂದೂ ಅರ್ಥವೇ? ಅಸಮಾನತೆಯ ಈ ಸಂಬಂಧವನ್ನು ತಿರಸ್ಕರಿಸುವ ಅಲ್ಪಸಂಖ್ಯಾತರು ಆಳುವ ಸಮುದಾಯವು ಆಳಿಸಿಕೊಳ್ಳುವ ಸಮುದಾಯದ ಜೊತೆ ಹೇಗೆ ವರ್ತಿಸುತ್ತದೆ ಎಂದು ಕೇಳುವ ಪ್ರಶ್ನೆಯನ್ನು ಅಪ್ರಸ್ತುತವೆನ್ನಲು ಸಾಧ್ಯವೇ?[೨೭] ಆಳುವ ವರ್ಗದ ವಿರುದ್ಧ ಅಲ್ಪಸಂಖ್ಯಾತರಿಗಿದ್ದ ಅಸಮಾಧಾನವನ್ನು ವಸಾಹತು ಕಾಲದ ಉದಾಹರಣೆ ಒಂದರ ಮೂಲಕ ಅಂಬೇಡ್ಕರ್ ಸಮರ್ಥಿಸಿಕೊಳ್ಳುತ್ತಾರೆ:

"ಆಳುವ ವರ್ಗವು ಗುಲಾಮ ಜನತೆಗೆ ಸಾಕಷ್ಟು ಅನುಕೂಲತೆಗಳನ್ನು ಕಲ್ಪಿಸಿಕೊಟ್ಟಿದೆ ಎನ್ನಲಾಗುತ್ತದೆ. ಗುಲಾಮತನವನ್ನು ಕಿತ್ತೊಗೆಯಲು ಸನ್ನದ್ಧವಾಗಿರುವ ಅಲ್ಪಸಂಖ್ಯಾತ ಸಮುದಾಯದವರ ಪ್ರಶ್ನೆಗೆ ಇದು ಸುಸಂಬದ್ಧ ಉತ್ತರವಲ್ಲ. ಬ್ರಿಟಿಷ್ ಸರ್ಕಾರವು ಭಾರತದ ಪ್ರಜೆಗಳಿಗೆ ಸಾಕಷ್ಟು ಅನುಕೂಲತೆಗಳನ್ನು ಒದಗಿಸಿಕೊಟ್ಟಿದೆ: ಉತ್ತಮ ರಸ್ತೆಗಳನ್ನು ಮತ್ತು ವೈಜ್ಞಾನಿಕ ಆಧಾರದ ಮೇಲೆ ಕಾಲುವೆಗಳನ್ನು ನಿರ್ಮಿಸಿದೆ. ರೈಲ್ವೆ ಸಾರಿಗೆಯ ವ್ಯವಸ್ಥೆಯನ್ನು ಪ್ರಾರಂಭಿಸಿದೆ. ಅಂಚೆ ಮೂಲಕ ಕನಿಷ್ಠ ದರದಲ್ಲಿ ಪತ್ರ ರವಾನಿಸುವ ಮತ್ತು ಮಿಂಚಿನ ವೇಗದಲ್ಲಿ ಸುದ್ದಿಯನ್ನು ರವಾನಿಸುವ ವಿನೂತನ ಸಂಪರ್ಕ ವ್ಯವಸ್ಥೆಯನ್ನು ಕಲ್ಪಿಸಿದೆ. ನಾಣ್ಯ ಚಲಾವಣೆಯಲ್ಲಿ ಸುಧಾರಣೆಯನ್ನು ತಂದಿದೆ. ಅಳತೆ ಮತ್ತು ತೂಕದ ವ್ಯವಸ್ಥೆಯನ್ನು ನಿಯಮಬದ್ಧಗೊಳಿಸಿ ನಿಯಂತ್ರಣ ಸಾಧಿಸಿದೆ. ಭೂಗೋಳ, ಖಗೋಳ ಮತ್ತು ವೈದ್ಯ ವಿಜ್ಞಾನಗಳಲ್ಲಿ ನಮಗಿದ್ದ ಕಲ್ಪನೆಗಳನ್ನು ತಿದ್ದಿ ಸರಿಪಡಿಸಿದೆ.

"ಆಳುವ ವರ್ಗವು ಗುಲಾಮ ಜನತೆಗೆ ಸಾಕಷ್ಟು ಅನುಕೂಲತೆಗಳನ್ನು ಕಲ್ಪಿಸಿಕೊಟ್ಟಿದೆ ಎನ್ನಲಾಗುತ್ತದೆ. ಗುಲಾಮತನವನ್ನು ಕಿತ್ತೊಗೆಯಲು ಸನ್ನದ್ಧವಾಗಿರುವ ಅಲ್ಪಸಂಖ್ಯಾತ ಸಮುದಾಯದವರ ಪ್ರಶ್ನೆಗೆ ಇದು ಸುಸಂಬದ್ಧ ಉತ್ತರವಲ್ಲ. ಬ್ರಿಟಿಷ್ ಸರ್ಕಾರವು ಭಾರತದ ಪ್ರಜೆಗಳಿಗೆ ಸಾಕಷ್ಟು ಅನುಕೂಲತೆಗಳನ್ನು ಒದಗಿಸಿಕೊಟ್ಟಿದೆ: ಉತ್ತಮ ರಸ್ತೆಗಳನ್ನು ಮತ್ತು ವೈಜ್ಞಾನಿಕ ಆಧಾರದ ಮೇಲೆ ಕಾಲುವೆಗಳನ್ನು ನಿರ್ಮಿಸಿದೆ. ರೈಲ್ವೆ ಸಾರಿಗೆಯ ವ್ಯವಸ್ಥೆಯನ್ನು ಪ್ರಾರಂಭಿಸಿದೆ. ಅಂಚೆ ಮೂಲಕ ಕನಿಷ್ಠ ದರದಲ್ಲಿ ಪತ್ರ ರವಾನಿಸುವ ಮತ್ತು ಮಿಂಚಿನ ವೇಗದಲ್ಲಿ ಸುದ್ದಿಯನ್ನು ರವಾನಿಸುವ ವಿನೂತನ ಸಂಪರ್ಕ ವ್ಯವಸ್ಥೆಯನ್ನು ಕಲ್ಪಿಸಿದೆ. ನಾಣ್ಯ ಚಲಾವಣೆಯಲ್ಲಿ ಸುಧಾರಣೆಯನ್ನು ತಂದಿದೆ. ಅಳತೆ ಮತ್ತು ತೂಕದ ವ್ಯವಸ್ಥೆಯನ್ನು ನಿಯಮಬದ್ಧಗೊಳಿಸಿ ನಿಯಂತ್ರಣ ಸಾಧಿಸಿದೆ. ಭೂಗೋಳ, ಖಗೋಳ ಮತ್ತು ವೈದ್ಯವಿಜ್ಞಾನಗಳಲ್ಲಿ ನಮಗಿದ್ದ ಕಲ್ಪನೆಗಳನ್ನು ತಿದ್ದಿ ಸರಿಪಡಿಸಿದೆ. ನಮ್ಮ ಅಂತಃಕಲಹಗಳನ್ನು ನಿಲುಗಡೆಗೆ ತಂದಿದೆ. ನಮ್ಮ ಭೌತಿಕ ಸ್ಥಿತಿಗಳ ಅಭಿವೃದ್ಧಿಗೆ ಕಾರಣವಾಗಿದೆ. ಇವೆಲ್ಲಕ್ಕೂ ಭಾರತೀಯರು ಕೃತಜ್ಞರೇ. ಈ ಕೃತಜ್ಞತಾಭಾವನೆಯ ಕಾರಣ ಸ್ವಾತಂತ್ರ್ಯ ಚಳವಳಿಯನ್ನು ಬಿಟ್ಟುಕೊಡಬೇಕೆಂದು ಅರ್ಥವೇ? ಅಥವಾ ಬ್ರಿಟಿಷ್ ಸರ್ಕಾರವು ಸಮಾಜ ಸುಧಾರಣೆಯ ಹಲವು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿತೆಂಬ ಕಾರಣಕ್ಕಾಗಿ ತಮ್ಮನ್ನು ಗುಲಾಮರಂತೆ ನಡೆಸಿಕೊಳ್ಳುವವರ ವಿರುದ್ಧ ಹೋರಾಟವನ್ನು ಕೈಬಿಡಲಾಗಿದೆಯೇ? ಇವಾವುದನ್ನೂ ಮಾಡಲಿಲ್ಲ. ಬ್ರಿಟಿಷರು ಕೈಕೊಂಡ ಯಾವುದೇ ಕಾರ್ಯಕ್ರಮಗಳಿಂದ ಭಾರತೀಯರು ಸಂತೃಪ್ತಗೊಳ್ಳಲಿಲ್ಲ. ಸ್ವಯಂ-ಆಡಳಿತದ ತಮ್ಮ ಹಕ್ಕುಗಳಿಗಾಗಿ ಹೋರಾಟವನ್ನು ಮುಂದುವರೆಸಿದರು"[೨೮]

ಮುಸ್ಲಿಮ್ ಸಮುದಾಯದ ಬೇಗುದಿಯ ಬಗ್ಗೆ ಅಂಬೇಡ್ಕರ್ ಸಹಾನುಭೂತಿಯನ್ನು ಹೊಂದಿದ್ದರು. ಅವರ್ಣೀಯ ಹಿಂದೂಗಳೇ ತುಂಬಿರುವ ಕಾಂಗ್ರೆಸ್ ಈ ಬೇಗುದಿಯನ್ನು ತೀವ್ರಗೊಳಿಸುವ ಮೂಲಕ ಪ್ರತ್ಯೇಕ ರಾಷ್ಟ್ರದ ಬೇಡಿಕೆಗೆ ಅವರನ್ನು ಪ್ರಚೋದಿಸುತ್ತಿದೆ ಎಂಬುದು ಅಂಬೇಡ್ಕರ್ ಅವರ ಅಭಿಪ್ರಾಯವಾಗಿತ್ತು. "ಆಳಲ್ಪಡುವವರನ್ನು ರಾಜಕೀಯ ಅಧಿಕಾರದಿಂದ ಹೊರಗಿಡುವುದೇ ಆಳುವ ಮತ್ತು ಆಳಲ್ಪಡುವ ಸಮುದಾಯಗಳ ನಡುವೆ ಇರುವ ಅತ್ಯಂತ ಪ್ರಮುಖವಾದ ವ್ಯತ್ಯಾಸ. ಕಾಂಗ್ರೆಸ್ ತನ್ನ ಅಧಿಕಾರಾವಧಿಯಲ್ಲಿ ಈ ನೀತಿಯನ್ನು ಅಲ್ಪಸಂಖ್ಯಾತರ ಮೇಲೆ ಅವರ ಇಚ್ಛೆಗೆ ವಿರುದ್ಧವಾಗಿ ಹೇರುತ್ತಲೇ ಬಂದಿವೆ. ಸವರ್ಣೀಯ ಹಿಂದೂಗಳಿಂದಾಗಿ ಮುಸ್ಲಿಮರು ಸಾಕಷ್ಟು ಸಂಕಷ್ಟಕ್ಕೊಳಗಾಗಿದ್ದಾರೆ. ಅವರನ್ನು ಈಗ ಗುಲಾಮ ಸ್ಥಾನಕ್ಕೆ ಇಳಿಸುತ್ತಿರುವುದು ಬೆನ್ನು ಮುರಿಯುತ್ತಿರುವ ಹೊರೆಯ ಮೇಲೆ ಮತ್ತೊಂದು ಕಟ್ಟಿಗೆಯನ್ನಿಟ್ಟಂತಾಗಿದೆ. ಭಾರತಕ್ಕೆ ಬ್ರಿಟಿಷರು ಆಗಮಿಸಿದಂದೇ ಅವರ ಅವನತಿ ಮತ್ತು ಕೊನೆಯ ಪ್ರಾರಂಭವಾಯಿತು. ಬ್ರಿಟಿಷರು ಜಾರಿಗೆ ತಂದ ಆಡಳಿತಾತ್ಮಕ, ಕಾನೂನಾತ್ಮಕ ಹಾಗೂ ನಿರ್ವಹಣಾತ್ಮಕ ಬದಲಾವಣೆಗಳೆಲ್ಲವೂ ಮುಸ್ಲಿಂ ಸಮುದಾಯದ ಮೇಲೆ ಒಂದಾದ ಮೇಲೊಂದರಂತೆ ವಿಪತ್ತುಗಳ ಸರಣಿಯನ್ನೇ ಸೃಷ್ಟಿಸಿದವು."[೨೯]

೧೯೩೯ ಡಿಸೆಂಬರ್‌ನಲ್ಲಿ ಹಿಂದು ಮಹಾಸಭಾದ ಅಧ್ಯಕ್ಷೀಯ ಭಾಷಣ ಮಾಡುತ್ತಾ ಸಾವರ್ಕರ್ ಎರಡು-ರಾಷ್ಟ್ರ ಎಂಬ ಸಿದ್ಧಾಂತಕ್ಕೆ ಬುನಾದಿ ಹಾಕಿದರು. ಸಾವರ್ಕರ್ ಅವರನ್ನು ಅನುಸರಿಸಿದ ಜಿನ್ನಾ ಔಪಚಾರಿಕವಾಗಿಯೇ ಈ ಸಿದ್ಧಾಂತವನ್ನು ಅಳವಡಿಸಿಕೊಂಡರು. ಇವೆರಡೂ ಒಂದೇ ನಾಣ್ಯದ ಎರಡು ಮುಖಗಳು. "ಸಾರ್ವಕರ್ ಮತ್ತು ಜಿನ್ನಾ ಈ ವಿಷಯದಲ್ಲಿ ಒಮ್ಮತಕ್ಕೆ ಬರುವುದು ಸಾಧ್ಯವಿದ್ದಿಲ್ಲ. ಇಲ್ಲಿನ ವಿಲಕ್ಷಣತೆ ಎಂದರೆ ಇಬ್ಬರಿಗೂ ಈ ಬಗ್ಗೆ ಸಂಪೂರ್ಣವಾದ ಸಹಮತವು ಮೂಡಿತು. ಭಾರತವು-ಒಂದು ಹಿಂದು ರಾಷ್ಟ್ರ ಮತ್ತೊಂದು ಮುಸ್ಲಿಂ ರಾಷ್ಟ್ರ ಎಂಬ ಎರಡು ರಾಷ್ಟ್ರಗಳ

ದೇಶ ಎಂಬುದನ್ನು ಇಬ್ಬರೂ ಒಪ್ಪಿದ್ದವರೇ. ಅವರ ಭಿನ್ನಾಭಿಪ್ರಾಯವಿದ್ದುದು ಈ ಎರಡು ರಾಷ್ಟ್ರಗಳು ಯಾವ ಷರತ್ತುಗಳ ಆಧಾರದ ಮೇಲೆ ವಾಸಿಸಬಲ್ಲವು ಎಂಬುದರ ಬಗ್ಗೆ ಮಾತ್ರ."[೨೦] ಪಾಕಿಸ್ತಾನವು ಮುಸ್ಲಿಮರ ರಾಷ್ಟ್ರವಾಗಿಯೂ ಭಾರತವು ಹಿಂದೂಗಳ ರಾಷ್ಟ್ರವಾಗಿಯೂ ಎರಡು ಪ್ರತ್ಯೇಕ ರಾಷ್ಟ್ರಗಳು ಅಸ್ತಿತ್ವಕ್ಕೆ ಬರಬೇಕೆಂಬುದು ಜಿನ್ನಾರ ವಾದವಾಗಿತ್ತು. ಇದಕ್ಕೆ "ತದ್ವಿರುದ್ಧವಾಗಿ, ಅವಿಭಜಿತ ಭಾರತವು ಎರಡು ರಾಷ್ಟ್ರೀಯತೆಗಳ ವಾಸಸ್ಥಾನವಾಗಿರಬೇಕೆಂದೂ ಏಕೈಕ ಸಂವಿಧಾನಕ್ಕೆ ಈ ಎರಡೂ ರಾಷ್ಟ್ರಗಳೂ ಬದ್ಧವಾಗಿರಬೇಕೆಂದೂ ಸಾವರ್ಕರ್ ವಾದಿಸುತ್ತಿದ್ದರು. ಸಂವಿಧಾನವು ಹಿಂದೂ ರಾಷ್ಟ್ರೀಯತೆಗೆ ಸಲ್ಲಬೇಕಾದ ಅಗ್ರಮಾನ್ಯ ಸ್ಥಾನವನ್ನು ಕಲ್ಪಿಸುವುದರ ಜೊತೆಗೆ ಮುಸ್ಲಿಂ ರಾಷ್ಟ್ರೀಯತೆಗೆ ಅಧೀನ ಸ್ಥಾನವನ್ನು ನೀಡಬೇಕೆಂಬುದು ಅವರ ನಿಲುವಾಗಿತ್ತು."[೨೧] ದೇಶವು ವಿಭಜನೆಯಾಗಿ ಆರು ದಶಕಗಳು ಕಳೆದರೂ ಸಾವರ್ಕರ್ ಪ್ರತಿನಿಧಿಸಿದ ಅದೇ ಹಿಂದೂತ್ವದ ಸಿದ್ಧಾಂತವು ಬೆನ್ನುಬಿಡದಂತೆ ನಮ್ಮನ್ನು ಕಾಡುತ್ತಲೇ ಇದೆ.

ಕಾಂಗ್ರೆಸ್ ಅಲ್ಪಸಂಖ್ಯಾತರ ಬಗ್ಗೆ ತಳೆದಿದ್ದ ಧೋರಣೆಯು ಅನಿಶ್ಚಿತತೆ ಮತ್ತು ಅಸ್ಪಷ್ಟತೆಗಳಿಂದ ಕೂಡಿದ್ದಾಗಿತ್ತು. ಸಾವರ್ಕರ್ ಅವರು ಪ್ರತಿಪಾದಿಸುತ್ತಿದ್ದ ಪರ್ಯಾಯ ಹಿಂದುತ್ವ ಸಿದ್ಧಾಂತದಲ್ಲಿ ಖಚಿತತೆ, ಸ್ಪಷ್ಟತೆ ಹಾಗೂ ದಿಟ್ಟ ನಿಲುವುಗಳಿದ್ದವು. ಸಾವರ್ಕರ್ ಅವರನ್ನು ಅಂಬೇಡ್ಕರ್ ಮೆಚ್ಚಿಕೊಂಡಿದ್ದು ಈ ಕಾರಣಕ್ಕಾಗಿ. ಸಾವರ್ಕರ್ ಅವರ ಹಿಂದುತ್ವವು "ಇಷ್ಟರವರೆಗೆ ಅಷ್ಟೇ. ಮುಂದಕ್ಕೆ ಕಾಲಿಡಬೇಡಿ" ಎಂಬುದಾಗಿ ನೇರನುಡಿಯಲ್ಲಿ ಮುಸ್ಲಿಮರಿಗೆ ಎಚ್ಚರಿಕೆಯನ್ನು ನೀಡಿತ್ತು. ಹಿಂದೂ ರಾಷ್ಟ್ರದಲ್ಲಿ ಮುಂದೆ ತಮಗೆ ಕಾದಿರುವ ದುಃಸ್ಥಿತಿಯ ಅರಿವು ಮುಸ್ಲಿಮರಿಗೂ ಇತ್ತು. ಸಾವರ್ಕರ್ ಅವರನ್ನು ನೇರನುಡಿಗಳಿಗಾಗಿ ಅಂಬೇಡ್ಕರ್ ಮೆಚ್ಚಿಕೊಂಡಿದ್ದರೂ, ಮುಸ್ಲಿಮರಿಗೆ ಪ್ರತ್ಯೇಕ ರಾಷ್ಟ್ರತ್ವ, ಸಾಂಸ್ಕೃತಿಕ ಸ್ವಾಯತ್ತತೆ, ಪ್ರತ್ಯೇಕ ರಾಷ್ಟ್ರಧ್ವಜಕ್ಕೆ ತಮ್ಮ ವಿರೋಧವನ್ನು ವ್ಯಕ್ತಪಡಿಸದಿದ್ದರೂ ಅವರಿಗೆ ಪ್ರತ್ಯೇಕ ರಾಷ್ಟ್ರೀಯತೆಯ ಭೂಪ್ರದೇಶವನ್ನು ನಿರಾಕರಿಸುವ ಅವರ ನಿಲುವು 'ವಿಲಕ್ಷಣದ್ದೆನಿಸದಿದ್ದರೂ ವಿತಂಡವಾದವಾಗಿದೆ' ಎನ್ನುತ್ತಿದ್ದರು. "ಹಿಂದು ರಾಷ್ಟ್ರೀಯತೆಗೆ ತನ್ನ ಭೂಪ್ರದೇಶವನ್ನು ಹೊಂದುವ ಹಕ್ಕಿದೆ ಎನ್ನುವುದಾದರೆ ಮುಸ್ಲಿಮ್ ರಾಷ್ಟ್ರೀಯತೆಗೆ ಪ್ರತ್ಯೇಕ ಭೂಪ್ರದೇಶವನ್ನು ನಿರಾಕರಿಸುವುದು ಹೇಗೆ ಸಾಧ್ಯ?"[೨೨] ಎಂದು ಪ್ರಶ್ನಿಸಿದರು. "ಸಾವರ್ಕರ್ ಪ್ರತಿಪಾದಿಸಿದ ಹಿಂದು ರಾಷ್ಟ್ರದ ನೀಲನಕಾಶೆಯು ಭಾರತದ ಸುರಕ್ಷತೆ ಮತ್ತು ಸುಭದ್ರತೆಗೆ ಅತ್ಯಂತ ಅಪಾಯಕಾರಿಯಾದ ಸನ್ನಿವೇಶವನ್ನು ನಿರ್ಮಾಣ ಮಾಡುತ್ತದೆ"[೨೩] ಎಂಬುದಾಗಿ ಸ್ಪಷ್ಟ ಮಾತುಗಳಲ್ಲಿ ಹೇಳಿದರು. "ಅಲ್ಪಸಂಖ್ಯಾತರ ರಾಷ್ಟ್ರೀಯತೆಯನ್ನು ದಮನ ಮಾಡುವ ಬಹುಸಂಖ್ಯಾತರ ರಾಷ್ಟ್ರೀಯತೆಯ ಸಿದ್ಧಾಂತದ ಹಿಂದಿರುವ ಜಾಣತನವನ್ನು ಅರ್ಥಮಾಡಿಕೊಳ್ಳಬೇಕು. ಏಕ-ರಾಷ್ಟ್ರೀಯತೆಯನ್ನು ಅಸ್ತಿತ್ವಕ್ಕೆ ತರುವುದೇ ಅಂತಿಮ ಗುರಿಯಾಗಿರುವ ಈ ಕುಟಿಲತೆಯನ್ನು ಪ್ರಶಂಸಿಸಲೇಬೇಕು! ಎರಡು ರಾಷ್ಟ್ರೀಯತೆಗಳ ಅಸ್ತಿತ್ವಕ್ಕೆ ಸಮ್ಮತಿ ನೀಡುತ್ತಾ ಅವೆರಡರ ನಡುವೆ ಭಿನ್ನಾಭಿಪ್ರಾಯದ ಸಂಬಂಧವಿರಬಾರದು ಎನ್ನುವ ಸಿದ್ಧಾಂತವು ಯಾರ ಪರವಾಗಿರುತ್ತದೆ ಎಂಬುದನ್ನು ಪರಿಶೀಲಿಸಬೇಕು. ಎರಡು ರಾಷ್ಟ್ರೀಯತೆಗಳು ಪರಸ್ಪರ ಗೌರವಾದರಗಳಿಂದ, ಸಖ್ಯ ಮತ್ತು ಸಾಮರಸ್ಯದಿಂದ, ಸಮಾನತೆಯ ಭೂಮಿಕೆಯಲ್ಲಿ ಜೀವನ ನಡೆಸಲಿವೆ ಎನ್ನುವುದಾದರೆ ಈ ಸಿದ್ಧಾಂತಕ್ಕೆ ಸಮರ್ಥನೆ ನೀಡಬಹುದು. ಆದರೆ ಸಾವರ್ಕರ್ ಅವರ ಹಿಂದೂ ರಾಷ್ಟ್ರದಲ್ಲಿ ಮುಸ್ಲಿಂ ರಾಷ್ಟ್ರೀಯತೆಗೆ ಅಧಿಕಾರದಲ್ಲಿ ಸಮಪಾಲಿರುವುದಿಲ್ಲ. ಹಿಂದು ರಾಷ್ಟ್ರೀಯತೆಯು ಪ್ರಧಾನ ರಾಷ್ಟ್ರವಾಗಿರಬೇಕು ಮತ್ತು ಮುಸ್ಲಿಂ ರಾಷ್ಟ್ರೀಯತೆಯು ಅಧೀನ ರಾಷ್ಟ್ರವಾಗಿ ದಾಸ್ಯದಲ್ಲಿರಬೇಕು. ಎರಡು ರಾಷ್ಟ್ರೀಯತೆಗಳ ನಡುವೆ ವಿಷಬೀಜ ಬಿತ್ತುತ್ತಿರುವ ಸಾವರ್ಕರ್ ಅವರ, ಒಂದೇ ದೇಶದ ಒಂದೇ ಸಂವಿಧಾನದಡಿ ಎರಡು ರಾಷ್ಟ್ರೀಯತೆಗಳು ಬದುಕಬೇಕೆಂಬ ಸಿದ್ಧಾಂತವನ್ನು ವಿವರಿಸುವುದು ಕಷ್ಟವಾಗುತ್ತದೆ."[೨೪]



ಮುಸ್ಲಿಮ್ ಸಮುದಾಯದ ಬೇಗುದಿಯ ಬಗ್ಗೆ ಅಂಬೇಡ್ಕರ್ ಸಹಾನುಭೂತಿಯನ್ನು ಹೊಂದಿದ್ದರು. ಸವರ್ಣೀಯ ಹಿಂದೂಗಳೇ ತುಂಬಿರುವ ಕಾಂಗ್ರೆಸ್ ಈ ಬೇಗುದಿಯನ್ನು ತೀವ್ರಗೊಳಿಸುವ ಮೂಲಕ ಪ್ರತ್ಯೇಕ ರಾಷ್ಟ್ರದ ಬೇಡಿಕೆಗೆ ಅವರನ್ನು ಪ್ರಚೋದಿಸುತ್ತಿದೆ ಎಂಬುದು ಅಂಬೇಡ್ಕರ್ ಅವರ ಅಭಿಪ್ರಾಯವಾಗಿತ್ತು. "ಆಳಲ್ಪಡುವವರನ್ನು ರಾಜಕೀಯ ಅಧಿಕಾರದಿಂದ ಹೊರಗಿಡುವುದೇ ಆಳುವ ಮತ್ತು ಆಳಲ್ಪಡುವ ಸಮುದಾಯಗಳ ನಡುವೆ ಇರುವ ಅತ್ಯಂತ ಪ್ರಮುಖವಾದ ವ್ಯತ್ಯಾಸ. ಕಾಂಗ್ರೆಸ್ ತನ್ನ ಅಧಿಕಾರಾವಧಿಯಲ್ಲಿ ಈ ನೀತಿಯನ್ನು ಅಲ್ಪಸಂಖ್ಯಾತರ ಮೇಲೆ ಅವರ ಇಚ್ಛೆಗೆ ವಿರುದ್ಧವಾಗಿ ಹೇರುತ್ತಲೇ ಬಂದಿವೆ. ಸವರ್ಣೀಯ ಹಿಂದೂಗಳಿಂದಾಗಿ ಮುಸ್ಲಿಮರು ಸಾಕಷ್ಟು ಸಂಕಷ್ಟಕ್ಕೊಳಗಾಗಿದ್ದಾರೆ.

ಹಿಂದಿನ ಆಸ್ಟ್ರಿಯಾ ಮತ್ತು ಟರ್ಕಿ ದೇಶಗಳಲ್ಲಿ ಒಂದೇ ಸಂವಿಧಾನದಡಿ ಎರಡು ರಾಷ್ಟ್ರೀಯತೆಗಳು ಒಟ್ಟೊಟ್ಟಿಗೆ ಅಸ್ತಿತ್ವದಲ್ಲಿದ್ದ-ಪ್ರಬಲ ರಾಷ್ಟ್ರೀಯತೆಯ ಅಲ್ಪಸಂಖ್ಯಾತ ರಾಷ್ಟ್ರೀಯತೆಯ ಮೇಲೆ ದಬ್ಬಾಳಿಕೆ ನಡೆಸಿದ-ಹಳೆ ಮಾದರಿಯನ್ನು ಸಾವರ್ಕರ್ ನಕಲು ಮಾಡುತ್ತಿದ್ದಾರೆಯೇ ಹೊರತು ಅದರಲ್ಲಿ ಸ್ವಂತಿಕೆ ಏನೂ ಇಲ್ಲ ಎನ್ನುತ್ತಾರೆ ಅಂಬೇಡ್ಕರ್. ಆ ಹಳೆಯ ಮಾದರಿಯು ಎಲ್ಲ ಕಡೆಯೂ ವಿಫಲಗೊಂಡಿರುವ ಮಾದರಿಯೆನಿಸಿಕೊಂಡಿದೆ. ಈ ಬಗ್ಗೆ ಇಲ್ಲಿನ ಹಿಂದುತ್ವವಾದಿಗಳಿಗೆ ಅಂಬೇಡ್ಕರ್ ಅವರ ಮಾತುಗಳಲ್ಲಿಯೇ ಉತ್ತರ ನೀಡುವುದು ಒಳಿತು:

"ಹಿಂದಿನ ಆಸ್ಟ್ರಿಯಾ ಮತ್ತು ಟರ್ಕಿ ದೇಶಗಳಲ್ಲಿನ ಬೆಳವಣಿಗೆಗಳನ್ನು ಸಾವರ್ಕರ್ ಮಾದರಿಯಾಗಿ ಸ್ವೀಕರಿಸಿರುವುದು ವಿಲಕ್ಷಣವಾಗಿದೆ. ಈ ಎರಡೂ ದೇಶಗಳು ಕಂಡ ವಿನಾಶವನ್ನು ಸಾವರ್ಕರ್ ಗಮನಿಸಿದಂತಿಲ್ಲ. ಯಾವ ಶಕ್ತಿಗಳು ಆ ದೇಶಗಳನ್ನು ಛಿದ್ರಗೊಳಿಸಲು ಮೂಲಕಾರಣವಾದವು ಎಂಬ ಅರಿವೂ ಅವರಿಗಿದ್ದಂತಿಲ್ಲ. ಗತಕಾಲದ ಬಗ್ಗೆ ಸಾವರ್ಕರ್ ಅವರಿಗೆ ವಿಶೇಷವಾದ ಒಲವು. ಅದರ ಬದಲು ಅವರು ವರ್ತಮಾನದ ವಿದ್ಯಮಾನಗಳತ್ತ ಗಮನ ಹರಿಸದಿದ್ದರೆ, ಅವರು ಪ್ರತಿಪಾದಿಸುತ್ತಿರುವ ಬಹುಸಂಖ್ಯಾತರ ಪ್ರಭುತ್ವವು ಏಕ-ಸಂವಿಧಾನದಡಿ ಅಲ್ಪಸಂಖ್ಯಾತರನ್ನು ಅಡಿಯಾಳಾಗಿಡುವ 'ಹಿಂದೂಸಾಮ್ರಾಜ್ಯ'ದ ನೀಲನಕಾಶೆಯಂತಹದ್ದೇ ಆ ದೇಶಗಳ ವಿನಾಶಕ್ಕೆ ಮೂಲಕಾರಣವಾಯಿತೆಂಬುದು ತಿಳಿಯುತ್ತಿತ್ತು"[೨೫] "ಸಾವರ್ಕರ್ ಅವರು ಪ್ರತಿಪಾದಿಸುವ ಸ್ವ-ರಾಜ್ಯ ವ್ಯವಸ್ಥೆಯು ಹಿಂದುಗಳು ಮುಸ್ಲಿಮರ ಮೇಲೆ ದರ್ಪದ ಅಧಿಕಾರ ಚಲಾಯಿಸುವಂತಹ ಸಾಮ್ರಾಜ್ಯವನ್ನು ನಿರ್ಮಾಣ ಮಾಡುತ್ತದೆ. ಸಾಮ್ರಾಜ್ಯಶಾಹಿ ಜನಾಂಗವೆಂಬ ಅವರ ಪೊಳ್ಳು ಹೆಮ್ಮೆಯನ್ನು ಅದು ಸಂತುಷ್ಟಗೊಳಿಸುವಂತಹದ್ದಾಗಿದೆ ಎಂಬುದಕ್ಕಿಂತ ಬೇರಾವ ವಿವರಣೆಯೂ ಬೇಕಿಲ್ಲ. ಆದರೆ ಇಂತಹ ಆಘಾತಕಾರಿ ಪರ್ಯಾಯ ವ್ಯವಸ್ಥೆಗೆ ಮುಸ್ಲಿಮರು ಶರಣಾಗಲು ಸಿದ್ಧರಿಲ್ಲದ ಕಾರಣ ಅದು ಹಿಂದುಗಳಿಗೆ (ಭಾರತಕ್ಕೆ) ಸುಭದ್ರತೆಯನ್ನಾಗಲೀ ಶಾಂತಿಯುತವಾದ ಮುಂದಿನ ದಿನಗಳನ್ನಾಗಲೀ ನೀಡಲು ಸಾಧ್ಯವಿಲ್ಲ."[೨೬] ಹಿಂದುತ್ವ ವ್ಯವಸ್ಥೆಯನ್ನು ಇಷ್ಟರ ಮಟ್ಟಿಗೆ ಕಳಂಕಿತಗೊಳಿಸಬಲ್ಲ ಪ್ರತಿಕ್ರಿಯೆಯು ಮತ್ತೊಂದಿರಲು ಸಾಧ್ಯವೇ? ಆದರೂ ಹಿಂದುತ್ವಪರಿವಾರವು ಅಂಬೇಡ್ಕರ್ ತಮ್ಮನ್ನು ಬೆಂಬಲಿಸಿದ್ದರು ಎಂದು ಹೇಳುತ್ತಿರುವುದು ಹಾಸ್ಯಾಸ್ಪದ ವಿಚಾರವಾಗಿದೆ.

ಭಾವೋನ್ಮಾತಕ್ಕೆ ಒಳಗಾಗಿರುವ ಹಿಂದು ಮತ್ತು ಮುಸ್ಲಿಂ ಮತಾಂಧರು ಎರಡು-ರಾಷ್ಟ್ರ ಸಿದ್ಧಾಂತದ ಪ್ರಚಾರದಲ್ಲಿ ತೊಡಗಿರುವ ಸನ್ನಿವೇಶದಲ್ಲಿ ಅಂಬೇಡ್ಕರ್ ತಮ್ಮ ಗ್ರಂಥದ ಅಂತಿಮ ಭಾಗದಲ್ಲಿ ಹೇಳಿರುವ ಮಾತುಗಳು ಆಶಾಕಿರಣದಂತಿವೆ: "ಮುಸ್ಲಿಮರು ಬಯಸಿದಲ್ಲಿ ರಾಷ್ಟ್ರವಾಗಿ ಪ್ರತ್ಯೇಕಗೊಳ್ಳಲು ಸಾಕಾಗುವಷ್ಟು ಕಾರಣಗಳು ಅವರಿಗಿವೆ ಎಂಬುದು ನಿಜ. ಆದರೆ ಹಿಂದು ಮತ್ತು ಮುಸ್ಲಿಮರ ನಡುವೆ ಸಾಮಾನ್ಯವೆನಿಸುವ ಅಂಶಗಳಿಲ್ಲವೇ? ಅವರನ್ನು ಈ ದೇಶದ ಪ್ರಜೆಗಳನ್ನಾಗಿ ರೂಪಿಸುವಂತಹದ್ದು ಏನೂ ಇಲ್ಲವೇ? ಇಬ್ಬರನ್ನೂ ಬೆಸೆಯಬಲ್ಲ ಅಲ್ಲಗಳೆಯಲು

(೪೮ನೇ ಪುಟಕ್ಕೆ)

ಜಾನಪದ ಅಂತರಂಗ ತಾಣ: ಆಧುನಿಕತೆ ಬಹಿರಂಗ ಬಿನ್ನಾಣ

ಡಾ|| ಸಿ.ಬಿ. ಹೊನ್ನಯ್ಯ

ಜಾನಪದ ಬದುಕು ಮೊದಲ ಮಾನವನ ನೆಲದೊಡಲ ಅನುಭವದ ಅಭಿವ್ಯಕ್ತಿಯಾಗಿದ್ದು, ಸ್ಥಳೀಯ ಸಂಪನ್ಮೂಲ ಆಧಾರಿತ ಅಭಿವೃದ್ಧಿ ಮಾದರಿಯ ಪ್ರತೀಕವಾಗಿದೆ. ಈ ಮಾದರಿ ತನ್ನದೇ ಆದ ಬದುಕಿನ ವಿಧಾನ, ಜೀವನ ಪ್ರೀತಿ, ಬಾಳಿನ ಭವಿಷ್ಯವನ್ನು ಬರೆಯುತ್ತದೆ. ಆದ್ದರಿಂದ "ಜಾನಪದ ಒಂದು ಗತಕಾಲದ ವಿಷಯವಲ್ಲ. ಅದೊಂದು ಜೀವಂತ ಒರತೆ. ನಿತ್ಯ ಒಂದಲ್ಲ ಒಂಗು ರೀತಿಯಲ್ಲಿ ನಗರ ಜೀವನದಲ್ಲಿಯೂ ಅದು ಕಾಣಸಿಕೊಳ್ಳುತ್ತದೆ. ಅದಕ್ಕೆ ಅನಕ್ಷರಸ್ಥ, ಅಕ್ಷರಸ್ಥ ಎಂಬ ಭೇದ ವೇನೂ ಇಲ್ಲ. ಅದು ಎಲ್ಲಾ ಕಾಲಗಳಿಗೂ ಮಾದರಿಯಾಗುವಂತ ಅಂತಃಸತ್ವವನ್ನು ಕಾಪಾಡಿಕೊಂಡು, ತನ್ನ ನಿರಂತರತೆಯನ್ನು ಉಳಿಸಿಕೊಂಡು ನಡೆದಾಡುತ್ತಿವೆ.

ಜಾನಪದ ಹಳತು, ಆಧುನಿಕತೆ ಹೊಸತು ಎಂಬ ನಂಬಿಕೆ [illegible]. ಇವೆರಡು ನಂಬಿಕೆಗಳು ಮೇಲ್ನೋಟಕ್ಕೆ ತಾರ್ಕಿಕವಾಗಿ ಸರಿಯೆನಿಸಿದರೂ, ಒಳನೋಟಕ್ಕೆ ತಾತ್ವಿಕವಾಗಿ ವಿಭಿನ್ನತೆ-ವಿಶಿಷ್ಟತೆಗಳ ಮುನ್ನೋಟದ ರೂಪಕಗಳಾಗಿವೆ. ಜಾನಪದ ಬದುಕಿನ ಸೃಷ್ಟಿ ಮೂಲ ಮೌಖಿಕತೆಯು ನೆಲ ಮೂಲದ್ದು, ಇದು ಪರಿಸರದ ವಿಸ್ಮಯ-ಅನುಭವದ ಜ್ಞಾನ ಮೂಲದ ಪ್ರತೀಕವಾದ ಅಂತರಂಗದ್ದು. ಈ ತಾಣದಲ್ಲಿ ಸಂಜೀವನೆಗಳಿಂದ ಅಮೃತವಾಗಿದೆ.

ಅಲ್ಲದೆ ಇಲ್ಲಿ ಸೃಷ್ಟಿಯಾಗಿರುವ ಇನ್ನಿತರ ಹಬ್ಬ-ಹರಿದಿನಗಳು, ಸಂಪ್ರದಾಯಗಳು, ನಂಬಿಕೆ, ಆಚರಣೆಗಳು, ಕಲೆ, ಸಾಹಿತ್ಯ, ಗಾದೆ, ಒಗಟು, ಒಡಪುಗಳು, ಕುಂಬಾರಿಕೆ, ಚಮ್ಮಾರಿಕೆ, ಕಮ್ಮಾರಿಕೆ, ಕೈಮಗ್ಗ, ಬಡಿಗಾರಿಕೆ, ಬುಟ್ಟಿ ಎಣೆಗೆ, ಕಸೂತಿಗಳು, ಭೇಟೆ, ಆಹಾರ ಉತ್ಪಾದನೆ, ಅಡಿಗೆ, ಗಿಡಮೂಲಿಕೆಗಳು, ಬೇಸಾಯದ ನೇಗಿಲು, ಎತ್ತಿನ ಗಾಡಿಗಳು, ಪಂಚಾಯ್ತಿ ಕಟ್ಟೆಗಳು, ಊಳಿಗಮಾನ್ಯ ಸಂಸ್ಕೃತಿ ಮುಂತಾದವುಗಳನ್ನು ಒಳಗೊಂಡಿರುವ ವಿಶಿಷ್ಟ ಮಾದರಿಯದ್ದು. ಜೀವನ ವಿಧಾನ ಅಂದಿನ ಕಾಲಕ್ಕೆ ವಿನೂತನವಾದದ್ದು. ಇಲ್ಲಿಯ ಜ್ಞಾನ ಅನಕ್ಷರಸ್ಥ ಮೂಲದ್ದಾದರೂ ಅದು ಪರಿಸರದ ಪಾಠ ಶಾಲೆಯ ಜೀವನ ಶಿಕ್ಷಣದ ಅನುಭವಗಳಿಂದ ಸೃಷ್ಟಿಗೊಂಡದ್ದು. ಇಲ್ಲಿಯ "ಜೀವನ ಶಿಕ್ಷಣ" ಆಧುನಿಕ ಮೂಲದ ಅಕ್ಷರದ ಶಿಕ್ಷಣದ ಜ್ಞಾನದ ವಿಶಿಷ್ಟವಾದರೂ ಅಷ್ಟೇ ಪರಿಣಾಮಕಾರಿಯಾದದ್ದು ಆಗಿದೆ. ಜಾನಪದ ಗಾದೆ ಮಾತಿನಂತೆ "ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆ ಲೇಸು" ಅನ್ನುವಂಥದ್ದು. ಆಧುನಿಕತೆಯ ಕೋಟಿಯ ವಿದ್ಯೆ ಪುಸ್ತಕಗಳಿಂದ ಲಭ್ಯವಾದದು. ಇದನ್ನು ಯಾರು ಬೇಕಾದರೂ ಕಲಿಯಬಹುದು. ಆದರೆ ಜಾನಪದ ಮೇಟಿ ವಿದ್ಯೆ ಜೀವನದ ಅನುಭವಗಳಿಂದ ಲಭ್ಯವಾದದು. ಇದನ್ನು ಎಲ್ಲರೂ ಕಲಿಯಲಾಗುವುದಿಲ್ಲ.

ಅಲ್ಲದೆ ಮಾರುಕಟ್ಟೆಯಲ್ಲಿ ಲಭ್ಯವಾಗುವುದಲ್ಲ. ಇದು "ಬದುಕಿನ ಆಂತರಿಕ ಶಿಕ್ಷಣ"ವಾದ್ದರಿಂದ ಜೀವನವನ್ನು ಅನುಭವದಲ್ಲಿ ಕಟ್ಟುವುದರಿಂದ ತನಗೆ ತಾನೇ ಬರುವಂತಹದ್ದು. ಹಾಗಾಗಿ ಮೇಟಿ ವಿದ್ಯೆ, ಕೋಟಿ ವಿದ್ಯೆಗಿಂತ ತೀವ್ರತರವಾದದು. ಇಂತಹ ಜಾನಪದದಿಂದ ಹುಟ್ಟಿದ ಸಾಮಾಜಿಕ, ಸಾಂಸ್ಕೃತಿಕ ರೀತಿ-ನೀತಿಗಳು ಸಾಮರಸ್ಯದ ಹೊಂದಾಣಿಕೆಗಳು ನಂಬಿಕೆಯ ಬದುಕಿನ ಭರವಸೆ ತುಂಬಿ, ತನ್ನ ಶಕ್ತಿ ಸಾಮರ್ಥ್ಯ ಸೃಷ್ಟಿಸುವ ಪ್ರತಿಭೆಯ ಅಂತರಂಗ ತಾಣವಾಗಿತ್ತು. ಹಾಗೆಯೇ ಇಲ್ಲಿಯ ಆರ್ಥಿಕತೆ ಕೊಳು-ಕೊಡುಗೆಯ ವಸ್ತು ವಿನಿಮಯ ಪದ್ಧತಿಗಳ ಮುಕ್ತ ಸೌಹಾರ್ದಯುತ ನಡಿಗೆಯಾಗಿತ್ತು. ಇಲ್ಲಿಯ ಆರ್ಥಿಕ ಮೂಲದ ಗುಡಿ ಕೈಗಾರಿಕೆಗಳು ತಂತ್ರಜ್ಞಾನದ ಮಾದರಿಗಳಾಗಿದ್ದವು. ಅವುಗಳು ಜನಗಳ ಉತ್ತಮ ನಡಿಗೆಯ ಹಾಗೆಯೇ ಶೋಷಣೆಯ ತಾಣಗಳು ಆಗಿದ್ದವು. ಉತ್ತಮ ನಡಿಗೆಯ ಪಥ ಸಂಚಲನೆಗಳೂ ಆಗಿದ್ದವು. ಇವುಗಳ ಕ್ರಿಯೆ-ತಂತ್ರಗಾರಿಕೆಯ ಪ್ರಕ್ರಿಯೆಗಳೆಲ್ಲ ಅಂದಿನ ಕಾಲದ ಜ್ಞಾನ-ವಿಜ್ಞಾನ ಪ್ರಗತಿದಾಯಕ ಅಭಿವೃದ್ಧಿ ರಂಗವೇ ಆಗಿ, ಅಂದಿನ ಆಧುನಿಕತೆಯ ಪ್ರತೀಕವೇ ಆಗಿತ್ತು. ಆದರೆ ಇವತ್ತಿನ ೨೦ನೇ ಶತಮಾನದ ಆಧುನಿಕತೆಯಂತೆ ಅವುಗಳು ಅಲ್ಲದಿದ್ದರೂ ಇಲ್ಲಿಯ ಆಧುನಿಕತೆ ತನ್ನದೇ ಆದ ಸೀಮಿತ ಮಿತಿಗೊಳಗೆ ವೈಚಾರಿಕ, ವೈಜ್ಞಾನಿಕ ಪ್ರಗತಿಪರತೆಯ ಧ್ಯೋತಕವೇ ಆಗಿತ್ತು ಎಂಬುದನ್ನು ಅಲ್ಲಗಳೆಯುವುದಿಲ್ಲ.

ಈ ಹಿನ್ನೆಲೆಯಲ್ಲಿ ನಾವು ಗಮನಿಸಬೇಕಾದ ಮುಖ್ಯ ವಿಚಾರವೆಂದರೆ, ಆಧುನಿಕತೆ ಅನ್ನುವುದು ಇವತ್ತಿಗೆ ಸೂತ್ರವೇ ಸೀಮಿತವಾಗಿತ್ತು ಎಂದು ಅಂದುಕೊಳ್ಳಬೇಕಾಗಿಲ್ಲ. ಅಂದಿನ ಕಾಲದಲ್ಲಿ ಆಧುನಿಕತೆಯೆಂಬುದೊಂದು ಇತ್ತು ಎನ್ನುವುದು ಮನದಟ್ಟಾಗುತ್ತದೆ. ಆದಿ ಮಾನವ ಈ ಭೂಮಿಯ ಮೇಲೆ ಯಾವಾಗ ಜನ್ಮ ತಾಳಿದನೋ ಅಂದಿನಿಂದಲೇ ಆತನ ವಿಕಾಸದ ಜೊತೆ ಜೊತೆಯಲ್ಲಿಯೇ ಈ ಆಧುನಿಕತೆ. ಪ್ರಗತಿಪರತೆ, ಅಭಿವೃದ್ಧಿಶೀಲತೆ, ಜ್ಞಾನ-ವಿಜ್ಞಾನ, ತಂತ್ರಜ್ಞಾನಗಳು ನಡೆದುಕೊಂಡು ಬಂದಿವೆ. ಆದರೆ ಈ ರೀತಿಯ ಇಂದಿನ ಆಧುನಿಕ ಪರಿಕಲ್ಪನೆಯ ಮಾದರಿಯಲ್ಲಿ ಅಂದಿನ ಕಾಲದಲ್ಲಿ ಈ ಪರಿಕಲ್ಪನೆಗಳು ಇಲ್ಲದಿರಬಹುದು. ಆದರೆ ಅವುಗಳ ವಸ್ತು, ವಿಷಯಗಳನ್ನು ಇಂದು ನಾವು ಪರಿಶೀಲಿಸಿದರೆ ಇಂದಿನ ಆಧುನಿಕತೆಯ ಪರಿಕಲ್ಪನೆಯಂತೆ ಕಂಡುಬರುತ್ತದೆ. ಆದ್ದರಿಂದ ಜಾನಪದವೆಂದರೆ, ಹಳೆಯದು, ಅವಶೇಷವಾದದ್ದು, ಅದರಲ್ಲಿ ಹೊಸತನ, ನವೀನತೆ, ಅಭಿವೃದ್ಧಿಗಳು ಇರಲಿಲ್ಲ ಅದೊಂದು ಅನಾಗರಿಕ, ಅನಕ್ಷರಸ್ಥ, ಕೆಳಸ್ಥರದ್ದು ಎಂಬಿತ್ಯಾದಿಯಾಗಿ ತಾತ್ಸಾರ ಮಾಡುವಂತಹದ್ದಲ್ಲ. ಜಾನಪದದ ಮೆದುಳು, ಮನಸ್ಸು, ಶರೀರದಲ್ಲಿ ಮೌಢ್ಯತೆ, ಕಂದಾಚಾರ, ರೂಢಿ, ಸಂಪ್ರದಾಯ ಶೋಷಣೆ ಜಾತಿಯ ವಿಷಣ್ಣತೆಗಳೂ ಇವೆ. ಇವುಗಳು ಎಲ್ಲಾ ಕಾಲದಲ್ಲೂ ಇದ್ದೇ ಇರುತ್ತವೆ. ಅಂದ ಮಾತ್ರಕ್ಕೆ ಅಭಿವೃದ್ಧಿ ಪ್ರಗತಿದಾಯಕ ವಿಚಾರಗಳೇ ಇಲ್ಲವೆಂದು ಅರ್ಥವಲ್ಲ. ಜಾನಪದ ಬದುಕು ಮೊದಲ ಮಾನವನ ನೆಲದೊಡಲ ಅನುಭವದ ಅಭಿವ್ಯಕ್ತಿಯಾಗಿದ್ದು. ಸ್ಥಳೀಯ ಸಂಪನ್ಮೂಲ ಆಧಾರಿತ ಅಭಿವೃದ್ಧಿ ಮಾದರಿಯ ಪ್ರತೀಕವಾಗಿದೆ. ಈ ಮಾದರಿ ತನ್ನದೇ ಆದ ಬದುಕಿನ

ವಿಧಾನ, ಜೀವನ ಪ್ರೀತಿ, ಬಾಳಿನ ಭವಿಷ್ಯವನ್ನು ಬರೆಯುತ್ತದೆ. ಆದ್ದರಿಂದ "ಜಾನಪದ ಒಂದು ಗತಕಾಲದ ವಿಷಯವಲ್ಲ. ಅದೊಂದು ಜೀವಂತ ಹೊರತೆ. ನಿತ್ಯ ಒಂದಲ್ಲ ಒಂದು ರೀತಿಯಲ್ಲಿ ನಗರ ಜೀವನದಲ್ಲಿಯೂ ಅದು ಕಾಣಸಿಕೊಳ್ಳುತ್ತದೆ. ಅದಕ್ಕೆ ಅನಕ್ಷರಸ್ಥ, ಅಕ್ಷರಸ್ಥ ಎಂಬ ಭೇದವೇನೂ ಇಲ್ಲ. ಅದು ಎಲ್ಲಾ ಕಾಲಗಳಿಗೂ ಮಾದರಿಯಾಗುವಂತ ಅಂತರ್ಸತ್ವವನ್ನು ಕಾಪಾಡಿಕೊಂಡು, ತನ್ನ ನಿರಂತರತೆಯನ್ನು ಉಳಿಸಿಕೊಂಡು ನಡೆದಾಡುತ್ತಿವೆ.

ಆಧುನಿಕತೆಯ ಬದುಕಿನ ಸೃಷ್ಟಿಯ ಜ್ಞಾನ ಮೂಲ ಅಕ್ಷರ ಮೂಲದ್ದು. ಇದು ನಿರಂತರ ಅಧ್ಯಯನ, ಸಂಶೋಧನೆಗಳ ಆವಿಷ್ಕಾರ ಪ್ರತೀಕವಾದ ಬಹಿರಂಗದ್ದು. ಈ ಭಿನ್ನಾಣದಲ್ಲಿ ಸೃಷ್ಟಿಯಾಗಿರುವ ಸಂವಿಧಾನ, ಆಡಳಿತ-ಕಾನೂನು. ಪ್ರಜಾಪ್ರಭುತ್ವ, ಕೈಗಾರಿಕೆ-ನಾಕರಿಕರಣ, ನವನಾಗರಿಕತೆ, ವಿಜ್ಞಾನ-ತಂತ್ರಜ್ಞಾನ, ಬಲಮಾರ್ಗ, ಬಾಹ್ಯಾಕಾಶ ಮಾರ್ಗ, ಬಸ್ಸು, ಕಾರು, ವಿಮಾನ, ರೈಲ್ವೆ ಅಂಚೆ, ದೂರವಾಣಿ, ಸಾರಿಗೆ-ಸಂಪರ್ಕ ಸಾಧನಗಳು, ಇಂಗ್ಲಿಷ್ ಶಿಕ್ಷಣ, ಮತ-ಧರ್ಮ ಪ್ರಚಾರ ಮುಂತಾದವುಗಳನ್ನು ಒಳಗೊಂಡಿರುವ ಇದರ ವಿಶಿಷ್ಟ ಮಾದರಿಯದ್ದು. ಹಾಗಾಗಿ ಇಲ್ಲಿಯ ಬದುಕಿನ ವಿಧಾನ ಮತ್ತೊಂದು ರೀತಿಯ ವಿನೂತನದ್ದು. ಇಲ್ಲಿ ಹುಟ್ಟಿದ ಸಾಮಾಜಿಕ, ಸಾಂಸ್ಕೃತಿಕತೆ, ಶೈಕ್ಷಣಿಕತೆಗಳು ಸಹಜವಾಗಿ ವೈಚಾರಿಕ, ವೈಜ್ಞಾನಿಕ, ಪ್ರಗತಿಪರತೆ, ಸಮಾನತೆಗಳಿಗೆ ಜೀವದಾತುಗಳಾದವು. ಇವುಗಳು "ಆಧುನಿಕತೆ ಮೊದಲ ಹಂತದಲ್ಲಿ ಎಲ್ಲಾ ಜನವರ್ಗಗಳ ಬಿಡುಗಡೆಯ ಆಶಯವಾಗಿ ಬಂದಿದೆ. ಮೇಲು ವರ್ಗದವರಿಗೆ ಹೊಸ ಸೌಲಭ್ಯ. ಕೆಳವರ್ಗದವರಿಗೆ ಸಾಂಸ್ಕೃತಿಕವಾದ ಚಲನೆ ಸಾಧ್ಯವಾಗಿದೆ. ಆಧುನಿಕತೆಯ ಎಲ್ಲವನ್ನೂ ಎಲ್ಲರೂ ತಮ್ಮಗೆ ಒಳಪಡಿಸದೆ ಬಳಸಿಕೊಂಡಿದ್ದಾರೆ.

ಆಧುನಿಕತೆಯ ಬದುಕಿನ ಸೃಷ್ಟಿಯ ಜ್ಞಾನ ಮೂಲ ಅಕ್ಷರ ಮೂಲದ್ದು. ಇದು ನಿರಂತರ ಅಧ್ಯಯನ, ಸಂಶೋಧನೆಗಳ ಆವಿಷ್ಕಾರ ಪ್ರತೀಕವಾದ ಬಹಿರಂಗದ್ದು. ಈ ಭಿನ್ನಾಣದಲ್ಲಿ ಸೃಷ್ಟಿಯಾಗಿರುವ ಸಂವಿಧಾನ, ಆಡಳಿತ-ಕಾನೂನು. ಪ್ರಜಾಪ್ರಭುತ್ವ, ಕೈಗಾರಿಕೆ-ನಾಕರಿಕರಣ, ನವನಾಗರಿಕತೆ, ವಿಜ್ಞಾನ-ತಂತ್ರಜ್ಞಾನ, ಬಲ ಮಾರ್ಗ, ಬಾಹ್ಯಾಕಾಶ ಮಾರ್ಗ, ಬಸ್ಸು, ಕಾರು, ವಿಮಾನ, ರೈಲ್ವೆ ಅಂಚೆ, ದೂರವಾಣಿ, ಸಾರಿಗೆ-ಸಂಪರ್ಕ ಸಾಧನಗಳು, ಇಂಗ್ಲಿಷ್ ಶಿಕ್ಷಣ, ಮತ-ಧರ್ಮ ಪ್ರಚಾರ ಮುಂತಾದವುಗಳನ್ನು ಒಳಗೊಂಡಿ ರುವ ಇದರ ವಿಶಿಷ್ಟ ಮಾದರಿಯದ್ದು.

ತಮ್ಮನ್ನು ಸಾಂಸ್ಕೃತಿಕವಾಗಿ ಇದುವರೆಗೂ ಗುರುತಿಸಿಕೊಳ್ಳಲಾಗದಿದ್ದವರಿಗೆ ಇದು ಅವರವರ ಗುರುತನ್ನು ಪರಿಚಯಿಸಿದೆ.೨" "ಅದರಲ್ಲೂ ಭಾರತದಲ್ಲಿ ವರ್ಣ, ವರ್ಗ, ಲಿಂಗಭೇದ ಶೋಷಣೆಗೆ ಒಳಗಾದ ಸಮುದಾಯಗಳ ೦, ಜನವರ್ಗಗಳು ಸಹಜವಾಗಿ ಪಾಶ್ಚಿಮಾತ್ಯ ಕೈಗಾರಿಕಾ ಸಂಸ್ಕೃತಿಗೆ ಭವ್ಯಸ್ವಾಗತ ನೀಡಿತು. ತಮ್ಮನ್ನು ಆಲಂಗಿಸಿಕೊಂಡು ಬರುತ್ತಿರುವ ಸಂಸ್ಕೃತಿಯಲ್ಲಿ ಜಾತಿ ವೈಷಮ್ಯದಂಥ ತಾರತಮ್ಯ ಇಲ್ಲದಿರುವುದನ್ನು ಕಂಡರು, ಅವರಿಗೆ ಇದೊಂದು ಹೊಸ ಆಶ್ಚರ್ಯ ಮತ್ತು ದೊಡ್ಡ ಅವಕಾಶವಾಗಿ ಕಂಡಿತು. ೩" ಈ ಮೂಲಕ ಸಮಾಜದಲ್ಲಿ ಒದಗಿದ್ದ ಅಸಮಾನತೆ, ಅಸ್ವಾತಂತ್ರ್ಯ, ಅಮಾನವೀಯತೆ, ಶೋಷಣೆ ಹಿಂದೂಧರ್ಮ-ಪುರಾಣಗಳ ಕಂದಾಚಾರ, ಮೂಢನಂಬಿಕೆ, ಸಂಪ್ರದಾಯ, ಆಚರಣೆ, ಮುಂತಾದಾವುಗಳ ಮೇಲೆ ಸವಾರಿ ಮಾಡುವ ಅಸ್ತ್ರಗಳೂ ಆಗಿ, ಅರಿವು ಜಾಗೃತ ಪ್ರಜ್ಞೆಗೆ ತೆರೆದುಕೊಳ್ಳುವಂತೆ ಈಡುಮಾಡಿದವು. ಅಲ್ಲದೆ ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವ, ಸಾಮಾಜಿಕ ನ್ಯಾಯಪರತೆಗಳನ್ನು ತಮ್ಮ ಹಕ್ಕೊತ್ತಾಯವಾಗಿ ಮಂಡಿಸಿ, ಅವುಗಳು ಸಿಗದೆ ಹೋದಾಗಲೆಲ್ಲ ಹೋರಾಟ, ಪ್ರತಿಭಟನೆ, ಹಾಗೂ ಸಂಘರ್ಷದ ತತ್ವಜ್ಞಾನಕ್ಕೆ ದಾರಿದೀಪವಾದವು. ಇದರಿಂದಾಗಿ ಶತಮಾನಗಳಿಂದ ನಾಲಿಗೆ ಇದ್ದು ಇಲ್ಲದಂತೆ. ಬಾಯಿ ಇದ್ದು ಇಲ್ಲದಂತೆ ಮೌನಕ್ಕೆ ಶರಣಾಗಿದ್ದ ಜನವರ್ಗಗಳು ಹೀಗೆ ವಿಭಿನ್ನವಾಗಿ ಮಾತನಾಡುವ ಮೂಲಕ ವ್ಯವಸ್ಥೆಯ ಪ್ರತಿಶೋಧಕ್ಕೆ ಚರಿತ್ರೆಯಾದವು.

ಆಧುನಿಕತೆಯ ಆರ್ಥಿಕ ಮೂಲದ ಕೈಗಾರಿಕೀರಣ ವಿಜ್ಞಾನ-ತಂತ್ರಜ್ಞಾನ, ರೈಲ್ವೆ, ಅಂಚೆ, ದೂರವಾಣಿ, ಸಾರಿಗೆ ಸಂಪರ್ಕಸಾಧನೆಗಳು ಸಂಪ್ರದಾಯ ದೇಶದ ಬದುಕಿಗೆ ಭಾಷೆ ಬರೆದವು. ಹಳ್ಳಿಯ ಬದುಕಿನ ಪರಿವರ್ತನೆ ಮಾಡಿ ದೇಶ-ವಿದೇಶಗಳಿಗೆ ವಿಸ್ತರಿಸಿ, ಸ್ಥಳೀಯ ವಸ್ತು-ವಿಷಯಗಳಿಗೆ ಬೇಡಿಕೆಯನ್ನು ಹೆಚ್ಚಿಸಿತು. ಆಧುನೀಕರಣ, ನಾಗರಿಕರಣಗಳು ಜನಗಳಿಗೆ ಅತ್ಯಂತ ಆಕರ್ಷಣೀಯವಾಗಿ ಮುಕ್ತವಾದ ಪ್ರತಿಭೆ, ಸಾಮರ್ಥ್ಯಕ್ಕೆ ಅವಕಾಶ ಮಾಡಿಕೊಟ್ಟು ಅಭಿವೃದ್ಧಿಗೆ, ಸಮಾಜ ಬದಲಾವಣೆಗೆ ಕಾರಣವಾದವು. ಇಲ್ಲಿಯ ವಸ್ತು ಉತ್ಪಾದನೆಗಳಿಗೆ ಜಾಗತಿಕ ಮಾರುಕಟ್ಟೆಯನ್ನು ಒದಗಿಸಿದವು. "ವಿಶ್ವವೇ ಒಂದು ಹಳ್ಳಿ" ಎಂದು ಇವತ್ತಿನ ಜಾಗತೀಕರಣಕ್ಕೆ ವಿಸ್ತರಿಸಿಕೊಂಡು ದೇಶ-ವಿದೇಶಗಳನ್ನು ಹತ್ತಿರ ಮಾಡಿದವು. ಅಲ್ಲದೆ ಈ ಆಧುನಿಕತೆಯ ಯಂತ್ರ ಸಂಸ್ಕೃತಿಗಳು ಅಷ್ಟಕ್ಕೆ ಸೀಮಿತವಾಗದೆ ಜನಗಳನ್ನು ಸಾಮೂಹಿಕ ದುಡಿಮೆಯ ಉತ್ಪಾದನೆಗೆ ತೊಡಗಿಸಿ ವಿವಿಧ ಜಾತಿ-ಜನಗಳನ್ನು ಸಾಮಾಜಿಕವಾಗಿ ಹತ್ತಿರ ತಂದವು.

ಭೇದ-ಭಾವನೆಗಳನ್ನು ಅಳಿಸಿದವು. ಅಷ್ಟೇ ಅಲ್ಲದೆ ಸ್ಥಳೀಯ ದೇಶಿಯ ಬದುಕಿನ ವಸ್ತು ಸಂಸ್ಕೃತಿಗಳ ಮೇಲೆ ಕೆಲವು ದುಷ್ಪರಿಣಾಮಗಳನ್ನು ಉಂಟುಮಾಡಿದವು. ಈ ರೀತಿಯ ಆಧುನಿಕತೆಯು ಮಾನವರ ಬದುಕಿನ ಎರಡನೆಯ ಅನುಭವದ ಅಭಿವ್ಯಕ್ತಿಯಾಗಿದ್ದು. ಸಂಮಿಶ್ರಣ ಆಧಾರಿತ ಅಭಿವೃದ್ಧಿ ಮಾದರಿಯ ಪ್ರತೀಕವಾಗಿದೆ. ಈ ಮಾದರಿಯು ತನ್ನದೇ ಆದ ಬದುಕಿನ ಜೀವನ ವಿಧಾನವನ್ನು ಕಟ್ಟಿಕೊಡುತ್ತಾ ಪ್ರಗತಿಯ ನಿರಂತರತೆಯಾಗಿದೆ. ಹೀಗೆ ಜಾನಪದ-ಆಧುನಿಕತೆಯ ಎರಡೂ ಚಿಂತನೆಗಳು ಹೇಗೆ ಮಾನವನ ಬದುಕಿನ ವಿಶಿಷ್ಟ ಅನುಭವದ ಅನಾವರಣಗಳಾಗಿವೆಯೋ, ಹಾಗೆ ಇವುಗಳು ಒಂದಕ್ಕೊಂದು ಒಳಸಂಬಂಧಗಳನ್ನು ನಿರ್ಮಿಸಿಕೊಂಡಿವೆ.

ಅಡಿಟಿಪ್ಪಣಿಗಳು

೧. ಡಾ॥ ಜೀಶಂಪ, ಜಾನಪದ ಪುಟ-೨೫
೨. ಡಾ॥ ಶ್ರೀಕಂಠಕೂಡಿಗೆ (ಸಂ) ಜಾನಪದದ ವಿವಿಧ ಮುಖಗಳು ಪುಟ-೫೧
೩. ಡಾ॥ ಜೀಶಂಪ, ಜಾನಪದ, ಪುಟ-೧೩-೧೪. ☐



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೧
ದೂರವಾಣಿ : ೩೨೮ ೭೯೪೩/೯೪೪೮೦೪೮೩೦೬

ಸ್ವತಂತ್ರ ಭಾರತದಲ್ಲಿ ದೇಶದ ರಾಜಕೀಯಕ್ಕೆ ವಿಶಿಷ್ಟ ಅಂತಃಸ್ವತ್ವವನ್ನು ಧಾರೆಯೆರೆದ ನೇತಾರರಲ್ಲಿ ಮಾಜಿ ಪ್ರಧಾನಿ ದಿವಂಗತ ಚಂದ್ರಶೇಖರ್ ಅಗ್ರಗಣ್ಯ. ತಮ್ಮ ವಿವೇಕ ಮತ್ತು ವಿಚಾರಧಾರೆಯಿಂದ ಭಾರತದ ರಾಜಕೀಯ ದಿಕ್ಕನ್ನು ರೂಪಿಸಿದವರು. ರೈತ ಕುಟುಂಬದಿಂದ ಬಂದ ಚಂದ್ರಶೇಖರ್ ಅವರ ರಕ್ತದಲ್ಲಿ ಗ್ರಾಮಚೈತನ್ಯ ಬೆರೆತಿದೆ. ಅಪರೂಪದ ಚಿಂತಕ, ಹೋರಾಟಗಾರ, ಮಾನವಪ್ರೇಮಿ ಚಂದ್ರಶೇಖರ್ ೮೧ ವರ್ಷದ ತುಂಬು ಜೀವನ ನಡೆಸಿ ಇತ್ತೀಚೆಗೆ ನಮ್ಮನ್ನಗಲಿದ್ದಾರೆ. ಅವರ ಸ್ಮರಣೆಗಾಗಿ ಅವರ ಆತ್ಮಕತೆ 'ಹೆಜ್ಜೆಗುರುತು' ಕೃತಿಯಿಂದ 'ಮುಕ್ಕಾಲು ಶತಮಾನ ಮುಗಿಸಿದೆ' ಲೇಖನವನ್ನು ಆಯ್ದು 'ಸಂವಾದ' ಓದುಗರಿಗಾಗಿ ಇಲ್ಲಿ ಪ್ರಕಟಿಸುತ್ತಿದ್ದೇವೆ.

ಚಂದ್ರಶೇಖರ್

ಮುಕ್ಕಾಲು ಶತಮಾನ ಮುಗಿಸಿದೆ

ಈ ದಿನಗಳಲ್ಲಿ ರಾಜಕಾರಣದ ದಿಕ್ಕು ದೆಸೆಗಳು ಬದಲಾಗಿವೆ: ರಾಜಕಾರಣದ ಧ್ಯೇಯೋದ್ಧೇಶಗಳು ಪಲ್ಲಟಗೊಂಡಿವೆ. ಜನತೆಯ ಭಾವನೆಗಳನ್ನು ಬಡಿದೆಬ್ಬಿಸಿ, ವೋಟುಗಳನ್ನು ಬಾಚಿಕೊಳ್ಳುವ ಪ್ರವೃತ್ತಿ ದಟ್ಟವಾಗುತ್ತಿದೆ. ಕೆಲವೊಮ್ಮೆ ಧಾರ್ಮಿಕ ಭಾವನೆಗಳನ್ನು ಕೆರಳಿಸಿ, ಕೆಲವೊಮ್ಮೆ ಜಾತೀಯತೆಯ ಕಲಹವನ್ನು ಹಬ್ಬಿಸಲಾಗುತ್ತಿದೆ. ಪ್ರತ್ಯೇಕತೆ, ದೋಷಾರೋಪಣೆ, ಘರ್ಷಣೆ ಮತ್ತು ಬಿಕ್ಕಟ್ಟಿನ ವಾತಾವರಣ ಗಾಢವಾಗುತ್ತಿದೆ.

ರಾಜಕಾರಣದಲ್ಲಿ ಈ ಬೆಳವಣಿಗೆಯು ಧಿಡೀರನೇ ಆಗಿಲ್ಲ. ಮೊದಲಿನಿಂದಲೂ ಈ ಪ್ರವೃತ್ತಿಯನ್ನು ಹದ್ದುಬಸ್ತಿನಲ್ಲಿಡುವ ಮನೋಭಾವ ಆಗ ಬಲಶಾಲಿಯಾಗಿತ್ತಾದ್ದರಿಂದ, ದೇಶಘಾತುಕ ಪ್ರವೃತ್ತಿಯ ಪಸಾರಕ್ಕೆ ತಡೆ ಬಿತ್ತು. ಒಮ್ಮೊಮ್ಮೆ ಅದಕ್ಕೆ ಪ್ರಬಲ ಪ್ರತಿರೋಧ ಇಲ್ಲವಾದಾಗ ಅದು ತಾನೇ ತಾನಾಗಿ ಪ್ರತಿ ಕ್ಷೇತ್ರದಲ್ಲಿ, ಪ್ರತಿ ಹಂತದಲ್ಲಿ ಆವರಿಸಿತು. ಸ್ವಾರ್ಥ ಸಾಧನೆ ನಿರ್ಲಜ್ಜವಾಗಿ ನಡೆಯಲಾರಂಭಿಸಿತು. ಅಧಿಕಾರ ದಾಹ, ಕುತಂತ್ರ ಇತ್ಯಾದಿಗಳು ಪದವಿಗಳಾಗಿ, ಅರ್ಹತೆಗಳಾಗಿ ಪರಿಗಣಿತವಾದವು. ಇದರೊಂದಿಗೆ ಇನ್ನೊಂದು ದುಷ್ಟ ಗುಣ ರಾಜಕಾರಣವನ್ನೂ ವ್ಯಾಪಕವಾಗಿ ಆವರಿಸಿತು; ಅದು ಭ್ರಷ್ಟಾಚಾರ. ೧೯೮೦ರ ಬಳಿಕ ಈ ದುಷ್ಟ ಗುಣವು ರಕ್ತಬೀಜಾಸುರನಂತೆ ನೂರ್ಮಡಿಗೊಳ್ಳುತ್ತಾ ಬಂತು. ರಾಜಕಾರಣದಲ್ಲಿ ಹಣ ಮೊದಲೇ ಪ್ರಧಾನ ಅವಶ್ಯಕತೆಯಾಯಿತು. ಹೆಚ್ಚು ಹಣ ಖರ್ಚು ಮಾಡುವವರ ಕಡೆ ಜನರ ಗಮನ ಹರಿಯಿತು. ಹಣವಿಲ್ಲದವರು ರಾಜಕಾರಣದ ಕಡೆ ನೋಡುವುದೂ ದುಸ್ತರವಾಯಿತು.

ಇಂಥ ಪರಿಸ್ಥಿತಿಯಲ್ಲಿ ನನ್ನಂಥವರಿಗೆ ಹೆಚ್ಚಿನ ಅವಕಾಶವಾಗಲಿ, ಪ್ರಾಮುಖ್ಯತೆಯಾಗಲಿ ಇರಲಿಲ್ಲ. ಆದರೆ ನಾನು ರಾಜಕಾರಣವನ್ನು ನನ್ನ ಕರ್ಮಭೂಮಿಯಾಗಿ ಸ್ವೀಕರಿಸಿದ ಕಾರಣಕ್ಕೆ ನನ್ನ ಕೈಲಾದ ಮಟ್ಟಿಗೆ ಪ್ರತಿರೋಧದ ಪಾತ್ರವನ್ನು ನಿರ್ವಹಿಸುತ್ತಾ ಬಂದೆ. ದೇಶದ ಮುಂದಿನ ಮಹತ್ವದ ಸವಾಲುಗಳ ಕಡೆಗೆ ಜನತೆಯ ಗಮನವನ್ನು ಸೆಳೆಯಲು ಪ್ರಯತ್ನಿಸಿದೆ. ನಾನು ಸಕ್ರಿಯನಾಗಲಿಲ್ಲ ಎಂದು ಕೆಲವರು ಆಕ್ಷೇಪಿಸುವುದುಂಟು. ಇಂಥವರ ನಿರೀಕ್ಷೆಯ ಮಟ್ಟಕ್ಕೆ ನಾನು ಕ್ರಿಯಾಶೀಲನಾಗಿಲ್ಲದಿರಬಹುದು: ಆದರೆ ನನ್ನ ಮಿತಿಯಲ್ಲಿ ನಾನು ಸಕ್ರಿಯವಾಗಿ ದೇಶದ ಆಗುಹೋಗುಗಳಲ್ಲಿ ಭಾಗಿಯಾಗುತ್ತಾ ಬಂದಿರುವೆ.



ಸಮಾಜವಾದಿ ಜನತಾ ಪಾರ್ಟಿ

ಹೊಸ ಪಕ್ಷವೊಂದರ ಅವಶ್ಯಕತೆ ಇರುವವರು ಈ ಸಮಾಜವಾದಿ ಜನತಾ ಪಾರ್ಟಿಯನ್ನು ಕಟ್ಟಿದರು. ದೇವಿಲಾಲರು ಇದರ ಮುಖ್ಯ ಸೂತ್ರಧಾರರಾಗಿದ್ದರು. ಜನತಾ ಪಾರ್ಟಿ ಮತ್ತು ಜನತಾ ದಳ ಪಕ್ಷಗಳ ತತ್ವ- ಸಿದ್ಧಾಂತಗಳ ಮಿಶ್ರಣವನ್ನೇ ಸಮಾಜವಾದಿ ಜನತಾ ಪಾರ್ಟಿ ಸ್ವೀಕರಿಸಿತು. ಈ ಪಾರ್ಟಿ ಸ್ವೀಕರಿಸಿತು. ಈ ಪಾರ್ಟಿ ಸ್ಥಾಪನಾ ಅವಧಿಯಲ್ಲಿ ಮುಲಾಯಂ ಸಿಂಗ್ ಯಾದವ್ ಕೂಡ ಇದ್ದರು. ಆದರೆ ನಂತರ ಅವರು "ಸಮಾಜವಾದಿ ಪಾರ್ಟಿ" ರಚಿಸಿಕೊಂಡು ಹೊರಬಿದ್ದರು.

೧೯೯೩ರಲ್ಲಿ ಮುಲಾಯಂ ಸಿಂಗ್ ಯಾದವ್ ಬಿಎಸ್‌ಪಿ ಜತೆ ಮಾಡಿಕೊಂಡ ಹೊಂದಾಣಿಕೆ ಬಗ್ಗೆ ನನ್ನ ವಿರೋಧವಿತ್ತು. ಅದು ಶುದ್ಧ ಲಾಭಕೋರ ನೀತಿಯನ್ನು ಆಧರಿಸಿತ್ತು. ಈ ಹಿನ್ನೆಲೆಯಲ್ಲಿ ನಾನು ಒಬ್ಬಂಟಿಯಾದೆ. ಅತ್ತ ಹರಿಯಾಣ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಓಂ ಪ್ರಕಾಶ್ ಚೌಟಾಲಾ ಪ್ರತ್ಯೇಕ ಪಾರ್ಟಿ ಕಟ್ಟಿಕೊಂಡರು.

ಒಂದು ರಾಜಕೀಯ ಪಕ್ಷಕ್ಕೆ ಸಿದ್ಧಾಂತ, ನೀತಿ, ಕಾರ್ಯತಂತ್ರ ಮುಂತಾದವು ಅಗತ್ಯವೆಂದು ಇಂದು ಬಹುಜನ ಒಪ್ಪುವುದಿಲ್ಲ. ಹಾಗಾಗಿ ರಾಜಕೀಯ ಎಂಬುದು ಜನಜಂಗುಳಿಯ ತಲೆಹರಟೆಯಾಗಿದೆ. ಪ್ರಜಾಪ್ರಭುತ್ವ ಎಂದರೆ ಏನಾದರೂ ಮಾಡಿ ಜನಜಂಗುಳಿ ಸೇರಿಸಿ ವೋಟುಗಳನ್ನು ಬಾಚಿಕೊಂಡು ಅಧಿಕಾರಕ್ಕೆ ಬರುವುದು ಎಂದಾಗಿದೆ. ತತ್ವ ಸಿದ್ಧಾಂತ-ಪ್ರಾಮಾಣಿಕತೆಗಳ ಬಲದಿಂದ ಸಮಾಜದಲ್ಲಿ ಬದಲಾವಣೆಯನ್ನು ತರಲು ಪ್ರಯತ್ನಿಸುವ ಉದ್ದೇಶದಿಂದ ರಾಜಕಾರಣಕ್ಕೆ ಬಂದಿರುವ ನನ್ನಂಥವರಿಗೆ ಇಂಥ ವಾತಾವರಣದಲ್ಲಿ ಉಸಿರು ಕಟ್ಟಿದಂತಾಗುತ್ತದೆ; ಕೆಲವೊಮ್ಮೆ ಉದಾಸೀನ ಭಾವನೆ ಮೂಡುತ್ತದೆ; ಸಂದರ್ಭವೊಂದಕ್ಕಾಗಿ ಕಾಯಲು ನಾನು ಯಾವತ್ತೂ ಹಿಂಜರಿದಿಲ್ಲ. ರಾಜಕೀಯ ಜೀವನದಲ್ಲಿ ನಾನೆಂದೂ ಅವಸರಪಟ್ಟಿಲ್ಲ; ಅವಕಾಶ ನನ್ನನ್ನು ಹುಡುಕುತ್ತಾ ಬಂದು ಕಾಯುತ್ತಾ ನಿಲ್ಲಬೇಕೇ ಹೊರತು, ಅವಕಾಶಕ್ಕಾಗಿ ನಾನೆಂದೂ ಕಾಯುತ್ತಾ ನಿಂತಿಲ್ಲ.

ಜೀವನದಲ್ಲಿ ಪ್ರಗತಿ ಸಾಧಿಸಲು ಹಲವಾರು ಜನ ಹಂಬಲಿಸುತ್ತಿದ್ದಾರೆ. ನಾನೂ ಪ್ರಗತಿ ಸಾಧಿಸುವ ಧ್ಯೇಯ ಹೊಂದಿದ್ದೇನೆ. ಪ್ರಗತಿ ಎಂದರೆ ಭೌತಿಕ ಪ್ರಪಂಚದಲ್ಲಿ ಉನ್ನತ ಹುದ್ದೆಗೆ ಹೋಗುವುದು, ಆಸ್ತಿ ಮಾಡುವುದು, ಪ್ರಭಾವಿ ಸ್ಥಾನ ಪಡೆಯುವುದು ಎಂದರ್ಥ. ಈ ಪ್ರಗತಿಯನ್ನು ಸಾಧಿಸಲು ಸ್ವಾಭಿಮಾನ ಶೂನ್ಯವಲ್ಲದ, ವಂಚನೆ-ಅಸತ್ಯಕ್ಕೆ ಅವಕಾಶವಿಲ್ಲದ ಮಾರ್ಗವನ್ನು ನಾನು ಅನುಸರಿಸುತ್ತಾ ಬಂದಿದ್ದೇನೆ.

ನಾನು ಇರುವಂತೆಯೇ ಎಲ್ಲರೂ ಇರಬೇಕೆಂಬ ಹಟವೇನೂ ನನಗಿಲ್ಲ; ಕೆಲವರು ಅವಕಾಶಗಳನ್ನು ಹುಡುಕಿಕೊಂಡು ಹೋದರು; ಅಧಿಕಾರ ಬಯಸಿದರು; ಅಗತ್ಯ ಹೊಂದಾಣಿಕೆ ಮಾಡಿಕೊಂಡರು. ಆದರೆ ನಾನು ಇಟ್ಟುಕೊಂಡಿರುವ ತತ್ವಾದರ್ಶಗಳನ್ನು ಬಿಟ್ಟು ಮುಂದಡಿಯಿಡಲು ನಾನೆಂದೂ ಒಪ್ಪಿಲ್ಲ.

ಉದಾರೀಕರಣದ ಸವಾಲು

ದೇಶದ ಭವಿಷ್ಯಕ್ಕೆ ಗಂಡಾಂತರ ಇದೆಯೆಂಬ

ನಿಲುವು ತಾಳಿದಾಗ ನನ್ನ ಮಾತಿನ ವಿರೋಧದ ಪ್ರತಿಭಟನೆಯ ಪರಿಣಾಮ ಎಷ್ಟರಮಟ್ಟಿಗೆ ಆದೀತು ಎಂಬುದನ್ನು ಲೆಕ್ಕಿಸದೆ ನಾನು ಮಾತಾಡಿದ್ದೇನೆ, ವಿರೋಧ ವ್ಯಕ್ತಪಡಿಸಿದ್ದೇನೆ ಮತ್ತು ಪ್ರತಿಭಟಿಸಿದ್ದೇನೆ.

ವಿ.ಪಿ.ಸಿಂಗ್ ಸರ್ಕಾರವಿದ್ದಾಗ, ಉದಾರೀಕರಣ ಕುರಿತಂತೆ ಅಧಿಕೃತ ದಾಖಲೆಗಳು ಪ್ರಧಾನಿ ಕಚೇರಿಯಲ್ಲಿ ಅನುಮೋದನೆಗೆಂದು ಬಂದವು. ಅವುಗಳಿಗೆ ಗತಿ ಬಂದು ಮುಂದೆ ಮುಂದೆ ನಡೆದವು. ನಾನು ಪ್ರಧಾನಿಯಾದ ಕಾಲದಲ್ಲಿ ಈ ದಾಖಲೆಗಳನ್ನು ಸಂಪೂರ್ಣವಾಗಿ ತಡೆಹಿಡಿಯಲಾಗಿತ್ತು. ಆಗ ವಿಶ್ವಬ್ಯಾಂಕಿನ ಉಪಾಧ್ಯಕ್ಷರು ಭಾರತಕ್ಕೆ ಭೇಟಿ ನೀಡಿದ್ದರು. ಅವರು ಈ ದಾಖಲೆಗಳಿಗೆ ಭಾರತ ಸರ್ಕಾರ ಅನುಮತಿ ನೀಡಬೇಕಾದ ಅವಶ್ಯಕತೆ ಇರುವುದನ್ನು ಪ್ರಸ್ತಾಪಿಸಿದರು. ನನ್ನ ನಿಲುವನ್ನು ಸ್ಥೂಲವಾಗಿ ವ್ಯಕ್ತಪಡಿಸಿದಾಗ ಅವರು ಈ ಬಗ್ಗೆ ಮುಂದೇನೂ ಮಾತಾಡಲಿಲ್ಲ.

'ನಾನು ಅಧಿಕಾರದಲ್ಲಿರುವವರೆಗೆ ಆ ದಾಖಲೆಗಳಿಗೆ ಭಾರತ ಸರ್ಕಾರದ ಅನುಮೋದನೆ ಸಿಗುವುದಿಲ್ಲ' ಎಂದು ನಾನು ಹೇಳಿದ್ದು, ಇದಕ್ಕೆ ಅವರು 'ಅಂತರರಾಷ್ಟ್ರೀಯ ಹಣಕಾಸು ನಿಧಿ ಮತ್ತು ವಿಶ್ವಬ್ಯಾಂಕ್‌ಗಳು ಆರ್ಥಿಕ ನೆರವನ್ನು ನಿಲ್ಲಿಸಿದರೆ ಪರಿಣಾಮ ಏನಾದೀತೆಂದು ಆಲೋಚಿಸಿರಿ' ಎಂದಿದ್ದು, ಆಗ ನಾನು 'ಈ ಸಂಸ್ಥೆಗಳ ಬಣ್ಣ ಬಯಲು ಮಾಡಲು ನಾನು ಆಕಾಶವಾಣಿ, ದೂರದರ್ಶನ ಮತ್ತು ಅಂತರರಾಷ್ಟ್ರೀಯ ಸಮೂಹ ಮಾಧ್ಯಮಗಳನ್ನು ಮತ್ತು ವೇದಿಕೆಗಳನ್ನು ಬಳಸಿಕೊಳ್ಳುತ್ತೇನೆ; ಪೆಟ್ರೋಲಿಯಂ ಪದಾರ್ಥಗಳನ್ನು ಹಾಗೂ ಜೀವರಕ್ಷಕ ಔಷಧಗಳ ಹೊರತಾಗಿ ಇತರ ಎಲ್ಲಾ ವಸ್ತುಗಳ ಆಮದನ್ನು ನಿರ್ಬಂಧಿಸುತ್ತೇನೆ' ಎಂದು ಎಚ್ಚರಿಕೆ ನೀಡಿದ್ದ ನೆನಪನ್ನು ಹಲವರೊಂದಿಗೆ ಹಂಚಿಕೊಂಡಿದ್ದೇನೆ.

ಅವರಿಗೆ ನನ್ನ ಮನಸ್ಸಿನಲ್ಲಿದ್ದುದನ್ನು ತಿಳಿದುಕೊಳ್ಳಬೇಕೆಂಬ ಕುತೂಹಲವಿರಬೇಕು; ಅವರು "ನೀವು ನಿಜಕ್ಕೂ ಈ ಕ್ರಮಕ್ಕೆ ಮುಂದಾಗಬಲ್ಲಿರಾ?" ಎಂದಿದ್ದರು. ನಾನು ಗಟ್ಟಿಯಾಗಿ 'ಈ ಬಗ್ಗೆ ಸಂದೇಹವಿದ್ದರೆ, ನಿಮಗೆ ಭಾರತೀಯ ಮನಸ್ಸಿನ ದೃಢತೆಯನ್ನು ಗ್ರಹಿಸುವ ಸಾಮರ್ಥ್ಯ ಇಲ್ಲ ಎಂಬುದನ್ನು ನೀವೇ ಒಪ್ಪಿಕೊಳ್ಳಬೇಕಾಗುತ್ತದೆ. ಅಲ್ಲದೆ, ವಿಶ್ವದ ಗ್ರಾಹಕರಲ್ಲಿ ಭಾರತೀಯರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ಎಂಬುದನ್ನು ನಿರ್ಲಕ್ಷಿಸುವಷ್ಟು ವಿದೇಶಿ ಹಣಕಾಸು ಸಂಸ್ಥೆಗಳು ಹೊಣೆಗೇಡಿಗಳಾಗಿದ್ದಾರೆ ಎಂಬುದಾಗಿ ಭಾರತೀಯ ಮನಸ್ಸು ಭಾವಿಸಿಲ್ಲ' ಎಂದು ತಿರುಗೇಟು ಕೊಟ್ಟೆ.

ನನ್ನ ನಂತರ ನರಸಿಂಹರಾವ್ ಪ್ರಧಾನಿಯಾದರು. ಅವರು ಜಾರಿಗೊಳಿಸಿದ ಉದಾರೀಕರಣ ನೀತಿಯ ಮೂಲಾಧಾರವು, ವಿ.ಪಿ. ಸಿಂಗ್ ಸರ್ಕಾರದಲ್ಲಿ ಕೈಗಾರಿಕಾ ಮಂತ್ರಿಯಾಗಿ ಅಜಿತ್ ಸಿಂಗ್ ರೂಪಿಸಿದ ಕೈಗಾರಿಕಾ ನೀತಿಯಾಗಿತ್ತು. ಉದಾರೀಕರಣ ನೀತಿಯು ದೇಶವನ್ನು ಹರಾಜು ಹಾಕುವ ಗುರಿ ಹೊಂದಿದೆ. ಅದು ಭವಿಷ್ಯದಲ್ಲಿ ಮಾಡಲಿರುವ ಭಯಾನಕ ಪರಿಣಾಮದ ಕಡೆಗೆ, ಜನತೆಯ ಗಮನ ಹೋಗಬಾರದೆಂದು, ಸರ್ಕಾರಗಳು ಹಲವಾರು ನಾಟಕಗಳನ್ನು ಆಡುತ್ತಾ ಬಂದಿವೆ.

ಪ್ರಜ್ಞಾವಂತರು ಎತ್ತುವ ಪ್ರಶ್ನೆಗಳನ್ನು ನಿರ್ಲಕ್ಷಿಸುವುದನ್ನೇ ರೂಢಿಯಾಗಿಸಿಕೊಂಡಿರುವ ಸರ್ಕಾರಗಳು 'ನಮ್ಮಲ್ಲಿ ಅಪಾರ ವಿದೇಶಿ ರಿಜರ್ವ್ ಇದೆ' ಎಂದು ಬೊಗಳೆ ಬಿಡುತ್ತವೆ. ಈ ರಿಜರ್ವ್ ಹೇಗೆ ಸಂಗ್ರಹವಾಯಿತು? ದೇಶದ ಜನತೆಯಿಂದಲೇ ಅಲ್ಲವೆ? ಮೆಕ್ಸಿಕೋದಂಥ ದೇಶಗಳಿಗೆ ಬಂದ ಗತಿಯನ್ನು ನೋಡಿಯಾದರೂ ನಾವು ಪಾಠ ಕಲಿಯಬೇಡವೆ? ಏಷ್ಯನ್ ಟೈಗರ್‌ಗಳೆಂದು ಮೆರೆದ ದೇಶಗಳೂ ಅಧೋಗತಿಗೆ ಇಳಿದದ್ದನ್ನು ನಾವು ನೋಡಿಲ್ಲವೆ? ಮಹಾತ್ಮಾ ಗಾಂಧೀಜಿ ನೀಡಿದ 'ಸ್ವಾವಲಂಬನೆಯಿಂದಲೇ ಸ್ವದೇಶದ ರಕ್ಷಣೆ' ಎಂಬುದು ಕೇವಲ ಘೋಷಣೆಯಾಗಿರಲಿಲ್ಲ; ಅದು ಜೀವನದ ಅಪೂರ್ವ ಆರ್ಥಿಕ ಸಿದ್ಧಾಂತವಾಗಿತ್ತು. ಇದನ್ನು ಸಾಮಯಿಕಗೊಳಿಸುವುದು ನಮ್ಮ ಜವಾಬ್ದಾರಿಯಲ್ಲವೆ? ಮುಂತಾದ ಪ್ರಶ್ನೆಗಳನ್ನು ಆಳುವ ಸರ್ಕಾರಗಳು ನಿರಂತರವಾಗಿ ನಿರ್ಲಕ್ಷಿಸುತ್ತಾ ಬಂದಿವೆ.

ಪ್ರಜ್ಞಾವಂತರು ಎತ್ತುವ ಪ್ರಶ್ನೆಗಳನ್ನು ನಿರ್ಲಕ್ಷಿಸುವುದನ್ನೇ ರೂಢಿಯಾಗಿಸಿಕೊಂಡಿರುವ ಸರ್ಕಾರಗಳು 'ನಮ್ಮಲ್ಲಿ ಅಪಾರ ವಿದೇಶಿ ರಿಜರ್ವ್ ಇದೆ' ಎಂದು ಬೊಗಳೆ ಬಿಡುತ್ತವೆ. ಈ ರಿಜರ್ವ್ ಹೇಗೆ ಸಂಗ್ರಹವಾಯಿತು? ದೇಶದ ಜನತೆಯಿಂದಲೇ ಅಲ್ಲವೆ? ಮೆಕ್ಸಿಕೋದಂಥ ದೇಶಗಳಿಗೆ ಬಂದ ಗತಿಯನ್ನು ನೋಡಿಯಾದರೂ ನಾವು ಪಾಠ ಕಲಿಯಬೇಡವೆ? ಏಷ್ಯನ್ ಟೈಗರ್‌ಗಳೆಂದು ಮೆರೆದ ದೇಶಗಳೂ ಅಧೋಗತಿಗೆ ಇಳಿದದ್ದನ್ನು ನಾವು ನೋಡಿಲ್ಲವೆ? ಮಹಾತ್ಮಾ ಗಾಂಧೀಜಿ ನೀಡಿದ 'ಸ್ವಾವಲಂಬನೆಯಿಂದಲೇ ಸ್ವದೇಶದ ರಕ್ಷಣೆ' ಎಂಬುದು ಕೇವಲ ಘೋಷಣೆಯಾಗಿರಲಿಲ್ಲ; ಅದು ಜೀವನದ ಅಪೂರ್ವ ಆರ್ಥಿಕ ಸಿದ್ಧಾಂತವಾಗಿತ್ತು. ಇದನ್ನು ಸಾಮಯಿಕಗೊಳಿಸುವುದು ನಮ್ಮ ಜವಾಬ್ದಾರಿಯಲ್ಲವೆ? ಮುಂತಾದ ಪ್ರಶ್ನೆಗಳನ್ನು ಆಳುವ ಸರ್ಕಾರಗಳು ನಿರಂತರವಾಗಿ ನಿರ್ಲಕ್ಷಿಸುತ್ತಾ ಬಂದಿವೆ. ಹೊಸ ಆರ್ಥಿಕ ನೀತಿಯನ್ನು ಸಂಘ ಪರಿವಾರವೂ ವಿರೋಧಿಸಿದಾಗ, ನಾನು ಅದರೊಂದಿಗೆ ಸೇರಲು ಹಿಂಜರಿಯಲಿಲ್ಲ. ದೆಹಲಿಯ ಸಪ್ರು ಹೌಸ್‌ನಲ್ಲಿ ನಡೆದ ಸಭೆಯೂ ಸೇರಿದಂತೆ, ಮುಂಬಯಿ, ಅಹಮದಾಬಾದ್, ಪಾಟ್ನಾ ಮುಂತಾದೆಡೆ ಸಾರ್ವಜನಿಕ ಸಭೆಗಳಲ್ಲಿ ನನ್ನ ವಿರೋಧವನ್ನು ವ್ಯಕ್ತಪಡಿಸಿದ್ದೇನೆ. ಸ್ವದೇಶಿ ಜಾಗರಣ ಮಂಚದ ವೇದಿಕೆಗಳಿಂದಲೂ ಜಾಗತೀಕರಣವನ್ನು ಖಂಡಿಸಿದ್ದೇನೆ.

ಹೊಸ ಆರ್ಥಿಕ ನೀತಿಯನ್ನು ಸಂಘ ಪರಿವಾರವೂ ವಿರೋಧಿಸಿದಾಗ, ನಾನು ಅದರೊಂದಿಗೆ ಸೇರಲು ಹಿಂಜರಿಯಲಿಲ್ಲ. ದೆಹಲಿಯ ಸಪ್ರು ಹೌಸ್‌ನಲ್ಲಿ ನಡೆದ ಸಭೆಯೂ ಸೇರಿದಂತೆ, ಮುಂಬಯಿ, ಅಹಮದಾಬಾದ್, ಪಾಟ್ನಾ ಮುಂತಾದೆಡೆ ಸಾರ್ವಜನಿಕ ಸಭೆಗಳಲ್ಲಿ ನನ್ನ ವಿರೋಧವನ್ನು ವ್ಯಕ್ತಪಡಿಸಿದ್ದೇನೆ. ಸ್ವದೇಶಿ ಜಾಗರಣ ಮಂಚದ ವೇದಿಕೆಗಳಿಂದಲೂ ಜಾಗತೀಕರಣವನ್ನು ಖಂಡಿಸಿದ್ದೇನೆ.

ಡಂಕೆಲ್ ಡ್ರಾಫ್ಟ್ ವಿರುದ್ಧ ನಾನು ದೇಶಾದ್ಯಂತ ಪ್ರವಾಸ ಕೈಗೊಂಡು, ಅದರಿಂದ ಆಗುವ ಅಪಾಯವನ್ನು ಜನಸಭೆಗಳಲ್ಲಿ ಮನಗಾಣಿಸಿಕೊಟ್ಟೆ. ಆ ಕಾಲದಲ್ಲಿ ಪ್ರತಿಯೊಬ್ಬರ ಮನಸ್ಸಿನಲ್ಲಿ ಹೊಸ ಆರ್ಥಿಕ ನೀತಿಯ ಬಗ್ಗೆ ಸುಂದರ ಕನಸನ್ನು ಮೂಡಿಸಲಾಗಿತ್ತು. ಈ ನೀತಿಯಿಂದ ತಾವು ಶ್ರೀಮಂತರಾಗಬಹುದೆಂದು ಬಹಳ ಜನ ಭಾವಿಸಿದ್ದರು. 'ಸಮಾಜವಾದಿಗಳು ಹಳೆ ವಿಚಾರವನ್ನೇ ಪಟ್ಟು ಹಿಡಿದಿದ್ದಾರೆ' ಎಂಬ ಮಾತೂ ಕೇಳಿ ಬಂದಿತ್ತು. 'ದೇಶದ ಪರಿಸ್ಥಿತಿ ಬದಲಾಗಿಲ್ಲವಾದ್ದರಿಂದ ನಮ್ಮ ವಿಚಾರಗಳೂ ಬದಲಾಗಿಲ್ಲ; ಬಡತನ-ಹಸಿವು-ಅಸಮಾನತೆ-ನಿರುದ್ಯೋಗಗಳು ಉಳಿದಿರುವವರೆಗೆ ಸಮಾಜವಾದಿ ವಿಚಾರವೂ ಹಾಗೆ ಉಳಿದಿರುತ್ತದೆ' ಎಂದು ನಾನು ಉತ್ತರಿಸುತ್ತಿದ್ದೆ.

ಉದಾರೀಕರಣ ನೀತಿಯ ಬಗ್ಗೆ ನಾವು ಯಾವ ಭಯವನ್ನು ಹೊಂದಿದ್ದೆವೊ, ಅದು ಇಂದು ಸ್ಥಾಯಿಯಾಗಿ ಸ್ಥಾಪನೆಯಾಗಿದೆ. ೨೦೦೦ ವರ್ಷದ ಮೇ ೨೮ರಂದು ಭುವನೇಶ್ವರಿಯ ಭಾರತ ಯಾತ್ರಾ ಕೇಂದ್ರದಲ್ಲಿ ನಡೆಸಲಾದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಈ ಕುರಿತ ಗಂಭೀರ ಚಿಂತನೆ ನಡೆಸಲಾಗಿತ್ತು. ಮಹಾತ್ಮಾ ಗಾಂಧೀಜಿ ಆಗಸ್ಟ್ ಕ್ರಾಂತಿ ಸಂದರ್ಭದಲ್ಲಿ ಹೇಳಿದ್ದ ಮಾತನ್ನು ನಾನಲ್ಲಿ ನೆನಪಿಸಿದೆ. ಸ್ವರಾಜ್ಯ ಕಲ್ಪನೆಯನ್ನು ಗಾಳಿಗೆ ತೂರಿ, ಇಂಥ ಆರ್ಥಿಕ ನೀತಿಯ ಮೂಲಕ ದೇಶಕ್ಕೆ ಮತ್ತೆ ಸಂಕೋಲೆ ತೊಡಿಸಲು ಮುಂದಾದುದನ್ನು, ನಮ್ಮ ಸಾರ್ವಭೌಮತೆಗೆ ಸಂಚಕಾರ ಬಂದಿರುವುದನ್ನು ಎತ್ತಿ ಹೇಳಿದ್ದೆ; ನವ ಸಾಮ್ರಾಜ್ಯವಾದವನ್ನು ಹಿಮ್ಮೆಟ್ಟಿಸಲು ಹೋರಾಡುವ ಅಗತ್ಯವನ್ನು ಒತ್ತಿ ಹೇಳಿದ್ದೆ.

ಪ್ರಾರಂಭದಲ್ಲಿ 'ಕಷ್ಟಗಳೇನಿದ್ದರೂ ಕೆಲವೇ ವರ್ಷ; ಅನಂತರ ದೇಶ ಸುಭಿಕ್ಷವಾಗಿರುತ್ತದೆ, ಎಂದು ಹೇಳಲಾಯಿತು. ಅನಂತರ, 'ಹೊಸ ಆರ್ಥಿಕ ನೀತಿಗೆ ಮಾನವೀಯ ಮುಖ ಒದಗಿಸಲಾಗುವುದು ಎಂದು ಭರವಸೆ ನೀಡಲಾಯಿತು. ಇನ್ನೂ ಕೆಲವು ವರ್ಷಗಳ ಬಳಿಕ ಭಾರತ ಆರ್ಥಿಕವಾಗಿ ಮಹಾನ್ ಶಕ್ತಿಯಾಗಲಿದೆ' ಎಂದೂ ಬಣ್ಣ ಕಟ್ಟಲಾಯಿತು.

ಇದೆಲ್ಲಾ ಅಧಿಕಾರಸ್ಥರ ಹುನ್ನಾರ ಎಂಬುದು ಸಾಮಾನ್ಯ ಜನತೆಗೆ ಸ್ಪಷ್ಟವಾಗಿ ಹೋಗಿದೆ. ವಿದೇಶಿ ಬಂಡವಾಳ ನಿರೀಕ್ಷಿಸಿದಷ್ಟು ಬರಲಿಲ್ಲ. ಕಾಯ್ದೆಗಳು ಬದಲಾದವು; ಬಡತನ ಹೆಚ್ಚಿತು. ಹಸಿವೆಯ ಸಾವುಗಳು ಸಂಭವಿಸಿದವು. ರೈತರು-ನೇಕಾರರು ಆತ್ಮಹತ್ಯೆ ದಾರಿ ಹಿಡಿದರು. ಸಣ್ಣ ಕೈಗಾರಿಕೆಗಳು ಕುಸಿದವು. ಸರ್ಕಾರಿ ಅಂಕಿ-ಅಂಶಗಳೇ ತಿಳಿಸುವಂತೆ ಬಡತನ, ನಿರುದ್ಯೋಗಗಳು ಇಮ್ಮಡಿಸಿವೆ. ಬಡವರು ಮತ್ತು ಶ್ರೀಮಂತರ ನಡುವಣ ಅಂತರ ಅಪಾರವಾಗಿದೆ. ಪ್ರಾದೇಶಿಕ ಅಸಮಾನತೆ ವ್ಯಾಪಕವಾಗಿ ಬೆಳೆದಿದೆ. ಖಾಸಗೀಕರಣವು ಅಳಿದುಳಿದ ಅವಕಾಶಗಳನ್ನು ಕ್ಷೀಣಿಸಿದೆ. ಶಿಕ್ಷಣ, ಆರೋಗ್ಯ, ವಿದ್ಯುತ್, ಕುಡಿಯುವ ನೀರೂ ಸೇರಿ

ಗಂತೆ ಎಲ್ಲಾ ಮೂಲಭೂತ ಅವಶ್ಯಕತೆಗಳನ್ನು ಪೂರೈಸಲು ಖಾಸಗಿಯವರ ಕಡೆ ನೋಡಲಾಗುತ್ತಿದೆ. ಇವುಗಳನ್ನು ಮಾರಾಟ ಮಾಡುವ ವ್ಯವಸ್ಥಿತ ಸಂಚೂ ನಡೆದಿದೆ. ಗೃಹ ಕೈಗಾರಿಕೆಗಳು ಸಂಪೂರ್ಣವಾಗಿ ನೆಲ ಕಚ್ಚಿವೆ. ಸರ್ಕಾರಿ ಆಸ್ತಿ-ಪಾಸ್ತಿಯನ್ನು ಮೂರು ಕಾಸಿಗೆ ಮಾರಾಟ ಮಾಡುವ ಹುನ್ನಾರ ನಡೆದಿದೆ.

ಭಾರತೀಯ ಕೃಷಿ ವ್ಯವಸ್ಥೆಯನ್ನು ಧೂಳೀಪಟ ಮಾಡಲಾಗಿದೆ. ಭಾರತದ ಆಧಾರಸ್ತಂಭವಾಗಿರುವ ರೈತಾಪಿ ಸಮುದಾಯ ತತ್ತರಿಸುವಂತಾಗಿದೆ. ಕೃಷಿ ಉತ್ಪನ್ನಗಳಿಗೂ ಆಮದು ಅನುಮತಿ ಒದಗಿಸಿ, ರೈತವರ್ಗದ ಬೆನ್ನಮೂಳೆಯನ್ನು ಮುರಿಯಲಾಗಿದೆ. ಭೂಸುಧಾರಣೆ ಮೂಲೆಗುಂಪಾಗಿ, ಕಂಪನಿಗಳು ಈಗ ಜಮೀನ್ದಾರರ ಸ್ಥಾನವನ್ನು ಆಕ್ರಮಿಸಿವೆ. ಸಬ್ಸಿಡಿ ಮತ್ತು ಯಂತ್ರಗಳ ಬಲದಿಂದ ಕೊಬ್ಬಿರುವ ಯುರೋಪ್-ಅಮೆರಿಕಾದ ಕೈವಾಡದಿಂದ ನಮ್ಮ ಕೃಷಿ ವ್ಯವಸ್ಥೆ ಸರ್ವನಾಶವಾಗುತ್ತಿದೆ. ನಗರಗಳ ಸುಂದರೀಕರಣಕ್ಕೆ ಆದ್ಯತೆ ಸಿಕ್ಕು, ಭಾರತದ ಆತ್ಮವಾಗಿರುವ ಗ್ರಾಮಗಳು ಸೊರಗೊಳ್ಳುತ್ತಿವೆ. ಬೆರಳೆಣಿಕೆಯಷ್ಟು ಪ್ರಮಾಣದಲ್ಲಿ ಪಟ್ಟಣಿಗರು ಮೋಜಿನ ಜೀವನ ನಡೆಸುವುದು ಸಾಧ್ಯವಾಗಿದೆ. ಆದರೆ ದಲಿತರು, ಕೃಷಿಕೂಲಿಕಾರರು, ನಗರವಾಸಿ ಬಡವರು, ಕುಶಲಕರ್ಮಿಗಳು, ಆದಿವಾಸಿಗಳು, ಕಾರ್ಮಿಕರು, ಮಹಿಳೆಯರು ಮುಂತಾಗಿ ಸಮಸ್ತ ಶ್ರಮಜೀವಿಗಳು ಶೋಷಿಸಲ್ಪಡುತ್ತಿದ್ದಾರೆ. ವಿದೇಶಿ ಹಣಕಾಸು ಮತ್ತು ವ್ಯಾಪಾರ ಸಂಘಟನೆಗಳ ನಿರ್ದೇಶನದಂತೆ ರೂಪಿಸಿ, ಜಾರಿಗೊಳಿಸಲಾಗುತ್ತಿರುವ ಹೊಸ ಆರ್ಥಿಕ ನೀತಿಯು, ನಮ್ಮ ಪ್ರಜಾಪ್ರಭುತ್ವವನ್ನು ಹಾಗೂ ಸಾರ್ವಭೌಮತೆಯನ್ನ ಅಪ್ರಸ್ತುತಗೊಳಿಸುತ್ತದೆ. ರಾಜಕಾರಣಿಗಳೂ, ಅಧಿಕಾರಿಗಳು ಮತ್ತು ಬುದ್ಧಿಜೀವಿಗಳ ಒಂದು ಪ್ರಭಾವಿ ವರ್ಗವು ದೇಶದ ಶ್ರೀಮಂತ ವರ್ಗದ ಜತೆ ಷಾಮೀಲಾಗಿ, ಈ ಹೊಸ ಆರ್ಥಿಕ ನೀತಿಗೆ ಪರ್ಯಾಯವೇ ಇಲ್ಲವೇನೊ ಎಂಬ ವಾತಾವರಣವನ್ನು ಮೂಡಿಸುವ ಮೋಸದಾಟ ಪ್ರಾರಂಭಿಸಿವೆ.

ಆಗಸ್ಟ್ ಕ್ರಾಂತಿ ಕರೆಗೆ ಮತ್ತು ಭಾರತದ ಆತ್ಮಾಭಿಮಾನಕ್ಕೆ ಸ್ಪಂದಿಸುವ ಸಮಸ್ತ ಭಾರತೀಯರು ಇಂಥ ರಾಷ್ಟ್ರ ವಿರೋಧಿ ಆರ್ಥಿಕ ನೀತಿಯನ್ನು ಸಾರಾಸಗಟಾಗಿ ತಿರಸ್ಕರಿಸಬೇಕು; ಈ ದಿಸೆಯಲ್ಲಿ ಜನ ಜಾಗೃತಿ ಮೂಡಿಸಿ, ಸಂಘರ್ಷ ನಡೆಸಬೇಕು; ಭಾರತದ ಭವಿಷ್ಯವನ್ನು ರೂಪಿಸಲು ಪರ್ಯಾಯ ಮಾರ್ಗ ಇದೆ ಎಂಬುದನ್ನು ಮನಗಾಣಿಸಿ ಕೊಡಬೇಕು. ಭಾರತೀಯ ಅರ್ಥ ವ್ಯವಸ್ಥೆಯನ್ನು ನಮ್ಮಲ್ಲಿರುವ ಪ್ರಾಕೃತಿಕ, ಔದ್ಯೋಗಿಕ ಹಾಗೂ ಮಾನವ ಸಂಪನ್ಮೂಲವನ್ನು ಆಧರಿಸಿ, ರೂಪಿಸುವ ಇಚ್ಛಾಶಕ್ತಿಯನ್ನು ನಾವು ತೋರಬೇಕು; ಭಾರತೀಯ ಸಮಾಜ ವ್ಯವಸ್ಥೆಯಲ್ಲಿನ ಕಟ್ಟಕಡೆಯ ಸ್ಥಾನದಲ್ಲಿರುವ ವ್ಯಕ್ತಿ-ಸಮುದಾಯಗಳನ್ನು ಸಶಕ್ತೀಕರಿಸುವ ನೀತಿಯನ್ನು ಸಿದ್ಧಪಡಿಸುವ ಅಪೂರ್ವ ಆತ್ಮಶಕ್ತಿಯನ್ನು ನಾವು ಈಗ ಮರೆಯಬೇಕು.

ಸಾರ್ವಭೌಮತೆ ಮತ್ತು ಸಂವಿಧಾನದ ಆಶಯವನ್ನು ಧಿಕ್ಕರಿಸಿದರೆ ದೇಶಕ್ಕೆ ಉಳಿಗಾಲವಿಲ್ಲ. ಭಾರತೀಯ ಆತ್ಮಕ್ಕೆ ಯಾವ ರೋಗವೂ ಬಡಿದಿಲ್ಲ. ಸಾಮಾಜಿಕ ನ್ಯಾಯವನ್ನು ಮೆಟ್ಟಿ ನಿಲ್ಲುವ ಧಾರ್ಷ್ಟ್ಯವನ್ನು ತೋರಲು ಮುಂದಾಗಿರುವ ಹೃದಯಹೀನ ಮಾರುಕಟ್ಟೆ ನೀತಿಯನ್ನು ಮಟ್ಟ ಹಾಕುವ ಛಲವನ್ನು ಭಾರತೀಯ ಆತ್ಮ ಖಂಡಿತ ತೋರಬಲ್ಲದು; ಈ ಕುರಿತು ನನಗೆ ಬಲವಾದ ನಂಬಿಕೆಯಿದೆ. ಈ ಹೊಸ ಆರ್ಥಿಕ ನೀತಿಯು ಶ್ರೀಮಂತರನ್ನು ಇನ್ನೂ ಶ್ರೀಮಂತರನ್ನಾಗಿಸುವ ಹಾಗೂ ಬಡವರನ್ನು ಇನ್ನೂ ಬಡವರನ್ನಾಗಿಸುವ ಧ್ಯೇಯ ಹೊಂದಿದೆ ಎಂಬುದನ್ನು ಒಂದೊಮ್ಮೆ ಭಾರತದ ಜನಸಾಮಾನ್ಯರಿಗೆ ಮನವರಿಕೆ ಮಾಡಿಕೊಟ್ಟರೆ, ಮುಂದಿನ ಸಂಘರ್ಷದ ರೂಪುರೇಷಗಳನ್ನು ತಾವೇ ಸಿದ್ಧಪಡಿಸಿಕೊಳ್ಳುವಷ್ಟು ಅವರು ಸಶಕ್ತರಾಗಿದ್ದಾರೆ. ಇದರಲ್ಲೂ ನನಗೆ ಲವಲೇಶ ಅನುಮಾನ ಇಲ್ಲ. ಹಾದು ಬಂದಿರುವ ಗುಲಾಮ ಬದುಕಿನ ನೆನಪು ಮರುಕಳಿಸುವಂತೆ ಮಾಡುವ ಕೆಲಸವಾದರೆ ಸಾಕು; ಭಾರತೀಯ ಆತ್ಮ ಜಾಗೃತಗೊಂಡು ಬಿಡುತ್ತದೆ.

ಭಾರತದ ಸಾರ್ವಭೌಮತೆಯನ್ನು ಅಪಾಯಕ್ಕೆ ದೂಡುವ ಸಾಧ್ಯತೆ ಇರುವ ಯಾವುದೇ ನಿರ್ಧಾರಗಳನ್ನು ಕೈಗೊಳ್ಳಲು ಸರ್ಕಾರಕ್ಕೆ ಅವಕಾಶ ನೀಡಲಾಗದು. ಇದು ಸಂಸತ್ತುಗಳಲ್ಲಿ ವ್ಯಾಪಕ ಚರ್ಚೆಗೆ ಗುರಿಯಾಗಬೇಕು. ಜನತೆಯನ್ನೂ ಈ ಚರ್ಚೆಯಲ್ಲಿ ಒಳಪಡಿಸಿಕೊಳ್ಳಬೇಕು. ಹೊಸ ಆರ್ಥಿಕ ನೀತಿಯ ಧ್ಯೇಯೋದ್ದೇಶಗಳೇನಿದ್ದವು ಹಾಗೂ ಈವರೆಗೆ ಜಾರಿಗೊಳಿಸಲಾಗಿರುವ ನೀತಿಯ ಪರಿಣಾಮ ಏನಾಗಿದೆ ಎಂಬುದು ಪ್ರಾಮಾಣಿಕ ಅಧ್ಯಯನಕ್ಕೆ ಒಳಪಟ್ಟು, ಇದರ ವರದಿಯ ಬಗ್ಗೆ ಜನಸಾಮಾನ್ಯರ ನಡುವೆ ಸುದೀರ್ಘವಾಗಿ ಚರ್ಚೆಯಾದ ಬಳಿಕವೇ, ಈ ನೀತಿಯ ಎಲ್ಲಾ ನಿರ್ದೇಶನಗಳನ್ನು ಸ್ಥಗಿತಗೊಳಿಸಬೇಕು.

ಸಾರ್ವಭೌಮತೆ ಮತ್ತು ಸಂವಿಧಾನದ ಆಶಯವನ್ನು ಧಿಕ್ಕರಿಸಿದರೆ ದೇಶಕ್ಕೆ ಉಳಿಗಾಲವಿಲ್ಲ. ಭಾರತೀಯ ಆತ್ಮಕ್ಕೆ ಯಾವ ರೋಗವೂ ಬಡಿದಿಲ್ಲ. ಸಾಮಾಜಿಕ ನ್ಯಾಯವನ್ನು ಮೆಟ್ಟಿ ನಿಲ್ಲುವ ಧಾರ್ಷ್ಟ್ಯವನ್ನು ತೋರಲು ಮುಂದಾಗಿರುವ ಹೃದಯಹೀನ ಮಾರುಕಟ್ಟೆ ನೀತಿಯನ್ನು ಮಟ್ಟ ಹಾಕುವ ಛಲವನ್ನು ಭಾರತೀಯ ಆತ್ಮ ಖಂಡಿತ ತೋರಬಲ್ಲದು; ಈ ಕುರಿತು ನನಗೆ ಬಲವಾದ ನಂಬಿಕೆಯಿದೆ. ಈ ಹೊಸ ಆರ್ಥಿಕ ನೀತಿಯು ಶ್ರೀಮಂತರನ್ನು ಇನ್ನೂ ಶ್ರೀಮಂತರನ್ನಾಗಿಸುವ ಹಾಗೂ ಬಡವರನ್ನು ಇನ್ನೂ ಬಡವರನ್ನಾಗಿಸುವ ಧ್ಯೇಯ ಹೊಂದಿದೆ ಎಂಬುದನ್ನು ಒಂದೊಮ್ಮೆ ಭಾರತದ ಜನಸಾಮಾನ್ಯರಿಗೆ ಮನವರಿಕೆ ಮಾಡಿಕೊಟ್ಟರೆ, ಮುಂದಿನ ಸಂಘರ್ಷದ ರೂಪುರೇಷಗಳನ್ನು ತಾವೇ ಸಿದ್ಧಪಡಿಸಿಕೊಳ್ಳುವಷ್ಟು ಅವರು ಸಶಕ್ತರಾಗಿದ್ದಾರೆ. ಇದರಲ್ಲೂ ನನಗೆ ಲವಲೇಶ ಅನುಮಾನ ಇಲ್ಲ. ಹಾದು ಬಂದಿರುವ ಗುಲಾಮ ಬದುಕಿನ ನೆನಪು ಮರುಕಳಿಸುವಂತೆ ಮಾಡುವ ಕೆಲಸವಾದರೆ ಸಾಕು; ಭಾರತೀಯ ಆತ್ಮ ಜಾಗೃತಗೊಂಡು ಬಿಡುತ್ತದೆ.

ಮುಕ್ತ ಆಮದು ನೀತಿಗೆ ತಡೆ ಬೀಳಬೇಕು; ಪಡಿತರ ವ್ಯವಸ್ಥೆ ಪ್ರಯೋಜನಕರವಾಗಿ ಪರಿವರ್ತನೆಯಾಗಬೇಕು; ವಿದೇಶಿ ಬಂಡವಾಳದ ಹೂಡಿಕೆಗೆ ಕಡಿವಾಣ ಹಾಕಬೇಕು. ಶ್ರೀಸಾಮಾನ್ಯರ ಬೆವರು-ರಕ್ತಗಳ ಮೇಲೆ ನಿರ್ಮಾಣವಾಗಿರುವ ಸಾರ್ವಜನಿಕ ಉದ್ಯಮಗಳನ್ನು ಸಂರಕ್ಷಿಸಿ, ಅವುಗಳ ಆಸ್ತಿಪಾಸ್ತಿ ಪರಭಾರೆ ನಿಲ್ಲಬೇಕು.

ನಮ್ಮ ಸ್ವರಾಜ್ಯವನ್ನು ಹೊಸಕಿ ಹಾಕುವ ಅಸ್ತ್ರವನ್ನಾಗಿ ಮಾರುಕಟ್ಟೆ ಆರ್ಥಿಕತೆಯನ್ನು ರೂಪಿಸಲಾಗಿದೆ. ದೇಶದ ಪ್ರತಿಯೊಬ್ಬರಿಗೆ ಉದ್ಯೋಗ, ಗೌರವ, ಸಮಾನತೆ ಹಾಗೂ ರಾಜ್ಯಾಧಿಕಾರದಲ್ಲಿ ಪಾಲನ್ನು ಒದಗಿಸುವುದು ಸ್ವರಾಜ್ಯದಲ್ಲಿ ಸಂಕಲ್ಪ ಅಡಗಿತ್ತು. ಸತ್ಯ, ಪ್ರೇಮ ಮತ್ತು ಕರುಣೆಯ ಅಡಿಪಾಯದ ಮೇಲೆ ಸಮಾಜ ವ್ಯವಸ್ಥೆಯನ್ನು ನಿರ್ಮಾಣ ಮಾಡುವ ಕನಸನ್ನೂ ಸ್ವರಾಜ್ಯ ಸಂಕಲ್ಪ ಒಳಗೊಂಡಿತ್ತು.

ಸ್ವತಂತ್ರ, ಸುಭದ್ರ ಹಾಗೂ ಸರ್ವಾಂಗ ಸುಂದರ ಭಾರತ ನಿರ್ಮಾಣಕ್ಕೆ ಮೂಲಶಕ್ತಿ ಒದಗಬೇಕಾಗಿರುವುದು ಮಾರುಕಟ್ಟೆ, ವಿದೇಶಿ ಬಂಡವಾಳ ಹಾಗೂ ತಂತ್ರಜ್ಞಾನಗಳಿಂದಲ್ಲ; ಇಂಥ ಭಾರತವನ್ನು ರೂಪಿಸಬೇಕೆಂಬ ಇಚ್ಛಾಶಕ್ತಿಯಿಂದ. ೫೫ ವರ್ಷಗಳ ಹಿಂದೆ ಭಾರತ ಈ ದಿಸೆಯಲ್ಲಿ ತೋರಿದ್ದ ಧ್ಯೇಯನಿಷ್ಠೆಯನ್ನು ಈಗಲೂ ತೋರುವ ತುರ್ತು ಇದೆ.

ಜಾಗತೀಕರಣ ಪ್ರಕ್ರಿಯೆಯು ವಿಶ್ವಾದ್ಯಂತ ವ್ಯಾಪಿಸಿದೆ. ಬಂಡವಾಳವಾದವನ್ನು ಹೊಸ ಸಂದರ್ಭದಲ್ಲಿ ನಿಲ್ಲಿಸಿ, ಶೋಷಣಾ ಪ್ರಧಾನವಾದ ಸಮಾಜ ವ್ಯವಸ್ಥೆಯನ್ನು ಪುನರ್‌ಸ್ಥಾಪಿಸುವ ಸಂಚು ಜಾಗತೀಕರಣ ಪ್ರತಿಪಾದಕ ಶಕ್ತಿಗಳಿಂದ ನಡೆದಿದೆ. ಸ್ವತಂತ್ರ ಭಾರತದಲ್ಲಿ ನಾವು ಮಿಶ್ರ ಆರ್ಥಿಕ ವ್ಯವಸ್ಥೆಯನ್ನು ರಚಿಸಿ, ಪೋಷಿಸಿಕೊಂಡು ಬಂದಿದ್ದೇವೆ. ಬಂಡವಾಳವಾದ ಮತ್ತು ಕಮ್ಯುನಿಸಂಗಳು ಪರಸ್ಪರರಿಗೆ ಪ್ರತಿಕ್ರಿಯೆ ರೂಪದಲ್ಲಿ ಮೈದಾಳಿವೆ. ಭಾರತದ ಹಿತಕ್ಕೆ ಈ ಎರಡೂ ಅಪ್ರಸ್ತುತವಷ್ಟೇ ಅಲ್ಲ, ಘಾತುಕವೂ ಆಗಿವೆ. ಮಹಾತ್ಮ ಗಾಂಧಿ ಮೊದಲಾಗಿ ಅನೇಕರು ಇದನ್ನು ಗುರುತಿಸಿ, ಮಧ್ಯಮ ಮಾರ್ಗವನ್ನು ಅನುಸರಿಸಲು ಸೂಚಿಸಿದ್ದಾರೆ. ಅವರ ಈ ಸೂಚನೆ ಭಾರತಕ್ಕೆ ಮಾತ್ರವಲ್ಲದೆ, ಇಡೀ ವಿಶ್ವಕ್ಕೆ ಮಹತ್ವದ್ದಾಗಿದೆ.

ದೇಶದ ಶೋಷಿತ ಜನತೆಗೆ ದೇಶದ ಭವಿಷ್ಯವನ್ನು ರೂಪಿಸುವ ಅವಕಾಶವನ್ನು ಒದಗಿಸುವುದು ಅತ್ಯಗತ್ಯ. ಇದರಿಂದ ದೇಶದ ಭವಿಷ್ಯವೂ ಉತ್ತಮವಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ. ಶ್ರೀಮಂತಿಕೆಯ ಪ್ರದರ್ಶನಕ್ಕೆ ಕಡಿವಾಣ ಹಾಕಬೇಕಾಗುತ್ತದೆ. ಶ್ರೀಮಂತರು ಮತ್ತು ಬಡವರ ನಡುವಣ ಅಸಮಾನತೆಯು ಸಮಾಜದಲ್ಲಿ ಕಟುತ್ವ ಮತ್ತು ವೈಮನಸ್ಯವನ್ನು ಕ್ರಮೇಣ ಉಂಟು ಮಾಡುತ್ತದೆ. ಶ್ರಮಜೀವನಕ್ಕೆ ಗೌರವ-ಪುರಸ್ಕಾರಗಳು ದೊರೆತಾಗ, ಮಾನವತೆ ಅರಳಿ ನಿಲ್ಲುತ್ತದೆ. ಇಂದು ರಾಜಕಾರಣವು ತನ್ನ ಪ್ರಾಸಂಗಿಕತೆಯನ್ನು ಕಳೆದುಕೊಂಡಿದೆ; ಅದೇ ಎಲ್ಲಾ ಕೊಳೆಯನ್ನೂ ತೊಳೆದು ನಿರ್ಮಲ ಸಮಾಜ ವ್ಯವಸ್ಥೆಯನ್ನು ರೂಪಿಸುತ್ತದ್ದೆಂಬುದು ಅರ್ಧಸತ್ಯ;

ಜನಸಾಮಾನ್ಯರು ರಾಜಕಾರಣದ ಹೊರತಾಗಿಯೂ ಕ್ರಿಯಾಶೀಲರಾಗಿ, ತಮ್ಮ ತಮ್ಮ ಕ್ಷೇತ್ರಗಳಲ್ಲಿ ಸಾಧನೆಗೈಯ್ಯುವ ಮೂಲಕವೂ, ದೇಶದ ಪುನರ್ ನಿರ್ಮಾಣ ಕಾರ್ಯದಲ್ಲಿ ನಿರತರಾಗುವುದು ಅವಶ್ಯವಾಗಿದೆ. ಸ್ವತಂತ್ರ ಭಾರತದಲ್ಲಿ ಆಡಳಿತದ ನೇತೃತ್ವವು ಉಳ್ಳವರ ಕೈಯಲ್ಲೇ ಉಳಿದದ್ದೂ ಬಡತನ ನಿರ್ಮೂಲನೆಯಾಗದಿರಲು

ಪ್ರಮುಖ ಕಾರಣವಾಗಿದೆ.

ನನ್ನ ಸಂಸದೀಯ ಬದುಕು

ಸಂಸತ್ತು ಕೂಡ ಕಳೆದ ದಶಕಗಳಲ್ಲಿ ತನ್ನ ಅರ್ಥ ಪೂರ್ಣತೆಯನ್ನು ಕಳೆದುಕೊಳ್ಳುತ್ತಾ ಬಂದಿದೆ. ಅಲ್ಲಿ ಈಗ ಚರ್ಚೆ ನಡೆಯದೆ, ಗದ್ದಲ ನಡೆಯುತ್ತಿದೆ; ಅಲ್ಲಿನ ವಾದ-ವಿವಾದದಿಂದ ಜ್ಞಾನ ಹುಟ್ಟುತ್ತಿಲ್ಲ; ವೈಮನಸ್ಯ-ಈರ್ಷ್ಯೆಗಳು ಮೊಳಕೆಯೊಡೆಯುತ್ತಿವೆ. ಸಂಸತ್ತಿನಲ್ಲಿ ದನಿಬಲ ಇರುವ ವರೇ ಮೇಲುಗೈ ಸಾಧಿಸುತ್ತಿದ್ದರೆ, ಸಮಾಜದಲ್ಲಿ ಧನಬಲ-ತೋಳ್ಬಲ ಇರುವವರು ಪ್ರಾಮುಖ್ಯ ಪಡೆಯುತ್ತಿದ್ದಾರೆ. ದೇಶದ ಬಲಾಢ್ಯ ಕೈಗಾರಿಕಾ ಕುಟುಂಬಗಳು ಸಂಸತ್ತಿನ ಕಾರ್ಯ ಕಲಾಪಗಳಲ್ಲಿ ಹಸ್ತಕ್ಷೇಪವನ್ನು ಹಿಂದೆಯೂ ಮಾಡುತ್ತಿದ್ದವು, ಆದರೆ ಈಗ ಅವು ನಿರ್ಲಜ್ಜವಾಗಿ, ರಾಜಾರೋಷವಾಗಿ ಮಾಡುತ್ತಿವೆ. ಈ ಬಗ್ಗೆ ಯಾರಿಗೂ ನಾಚಿಕೆಯಿಲ್ಲ. ಇದು ಸಹಜ ಎಂಬಂತೆ ಸ್ವೀಕೃತವಾಗಿದೆ.

ಪಕ್ಷ ರಾಜಕೀಯವನ್ನು ಬಿಟ್ಟುಬಿಡಲು ನನಗೆ ಕೆಲವಾರು ಜನ ಸಲಹೆ ನೀಡಿದ್ದಾರೆ. ಇದು ನನಗೆ ಮೊದಲಿನಿಂದಲೂ ಸಮ್ಮತವಿಲ್ಲ ಜೆ.ಪಿ ಈ ಬಗ್ಗೆ ಹೇಳಿದಾಗಲೂ, ಪಕ್ಷರಹಿತ ರಾಜಕೀಯ ಎಂಬುದನ್ನು ನಾನು ಒಪ್ಪಲಿಲ್ಲ. ಏಕೆಂದರೆ, ಇದು ಸರ್ವಾಧಿಕಾರಕ್ಕೆ ಎಡೆ ಕೊಡುತ್ತದೆ ಎಂದೇ ನಾನು ಭಾವಿಸಿದ್ದೇನೆ. ನಾನು ಯಾವುದೇ ಬಲಿಷ್ಠ ಪಾರ್ಟಿ ಸೇರಿಲ್ಲ, ನನ್ನ ಪಾರ್ಟಿಯೂ ಬಲಿಷ್ಠವಾಗಿಲ್ಲ ಎಂದಾಕ್ಷಣ, ಎಲ್ಲರೂ ತಮ್ಮ ತಮ್ಮ ಪಾರ್ಟಿಗಳನ್ನು ಬಿಟ್ಟು ಬಿಡಬೇಕೆಂಬುದಾಗಲಿ, ನನ್ನ ವಿಚಾರವನ್ನು ನಾನು ಬಿಡಬೇಕೆಂಬೇದಾಗಲಿ ದುರಾಗ್ರಹವಾಗುತ್ತದೆ. ಹಾಗಾಗಿ, ನಾನು ನನ್ನ ಶಕ್ತಿ ಇರುವಷ್ಟು ರಾಜಕೀಯ, ಸಾಮಾಜಿಕ ಕೆಲಸ ಮಾಡುತ್ತಾ ಬಂದಿದ್ದೇನೆ. ನನ್ನ ಶಕ್ತಿ ಕಡಿಮೆ ಇರಬಹುದು; ಪರಿಸ್ಥಿತಿಯನ್ನು ಬದಲಾಯಿಸುವುದು ನನಗೆ ಅಸಾಧ್ಯವಿರಬಹುದು; ಆದರೆ, ನನ್ನ ಗುರಿ ನನಗೆ ಸ್ಪಷ್ಟವಿದೆ; ಪರಿಸ್ಥಿತಿಯನ್ನು ಹೇಗೆ ಮತ್ತು ಏಕೆ ಬದಲಾಯಿಸಬೇಕು ಎಂಬುದು ನಿಖರವಾಗಿ ತಿಳಿದಿದೆ; ನನಗೆ ಇಷ್ಟು ಸಾಕು.

ನನ್ನ ಜೀವನದ ಉದ್ದಕ್ಕೂ ನನ್ನ ಚಿಂತನೆಗೆ ತಕ್ಕಂತೆ ನಡೆದುಕೊಂಡಿದ್ದೇನೆ. ಪುಸ್ತಕ-ವಿಶ್ವವಿದ್ಯಾಲಯಗಳಿಂದ ಕಲಿತಿರುವುದಕ್ಕಿಂತ ಹೆಚ್ಚಿನದನ್ನು ಜನರಿಂದ, ಚಳವಳಿಯಿಂದ, ಜೀವನಾನುಭವದಿಂದ ನಾನು ಕಲಿತಿದ್ದೇನೆ ಆಚಾರ್ಯ ನರೇಂದ್ರ ದೇವರಿಂದ ಪ್ರೇರಣೆಯನ್ನು ಪಡೆದ ನಾನು ಸಂಕಲ್ಪ ಬಲದಿಂದ, ಪ್ರಾಮಾಣಿಕತೆಯಿಂದ ನಾನು ನನ್ನ ಕರ್ತವ್ಯವನ್ನು ನಿರ್ವಹಿಸಿದ್ದೇನೆ.

ಒಬ್ಬ ವ್ಯಕ್ತಿ ಇಡೀ ದೇಶದ ವ್ಯವಸ್ಥೆಯನ್ನು ಸರಿಪಡಿಸಬಲ್ಲ ಎಂದು ನಾನು ನಂಬಿಲ್ಲ, ದೇಶವನ್ನು ಸುಧಾರಿಸುವ ಕಾಂಟ್ರಾಕ್ಟನ್ನೂ ನಾನು ತೆಗೆದುಕೊಂಡಿಲ್ಲ. ನನ್ನ ಚಿಂತನೆಯ, ಶಕ್ತಿಯ ಇತಿಮಿತಿಯ ಚೌಕಟ್ಟಿನಲ್ಲಿ ನಾನು ನಿರಂತರವಾಗಿ ಕರ್ತವ್ಯ ನಿರ್ವಹಿಸುತ್ತಾ ಬಂದಿದ್ದೇನೆ. ದೇಶದ ಇತಿಹಾಸದಲ್ಲಿ ಯಾರೊಬ್ಬರೂ ಅಪರಿಹಾರ್ಯರಲ್ಲ, ಅನಿವಾರ್ಯರಲ್ಲ. ಪಾರ್ಟಿಯಲ್ಲಿ ಮತ್ತು ಸರ್ಕಾರದಲ್ಲಿ ಇದ್ದಾಗ ಆ ಹೊತ್ತಿನಲ್ಲಿ ನನ್ನ ಆತ್ಮಸಾಕ್ಷಿಗೆ ಅನುಗುಣವಾಗಿಯೆ ನಿರ್ಣಯಗಳನ್ನು ಕೈಗೊಂಡಿರುವ ಸಮಾಧಾನ ನನಗಿದೆ. ಆಗ ನಾನು ಕೆಲವು ನಿರ್ಣಯಗಳನ್ನು ತಪ್ಪಾಗಿ ಕೈಗೊಂಡೆ ಎಂದು ಅನಂತರ ನನಗೆ ಅನಿಸಿದ್ದೂ ಉಂಟು. ಇಂಥ ಪ್ರಸಂಗಗಳು ಅನಿವಾರ್ಯ ಎಂದು ನಾನು ಭಾವಿಸಿ, ನಿರುಮ್ಮಳವಾಗಿದ್ದೇನೆ. ತಪ್ಪು ಮಾಡದೇ ಸಾರ್ವಜನಿಕ ಜೀವನ ನಡೆಸಿದವರು ಯಾರೂ ಇಲ್ಲ ಎಂದು ನನಗೆ ನಾನೇ ಸಮಾಧಾನ ಹೇಳಿಕೊಂಡಿದ್ದೇನೆ. ☐

"ನನ್ನ ಕಲಿಂಚ ಹೂ"



ಆ ಕಪ್ಪು ಕಲ್ಲಲಿ
ಯಾವ ಕಣ್ಣು ಅಡಗಿದಿಯೋ?
ಮಾಯ ಮೋಹದ ಶಕ್ತಿ
ಯಾವುದೋ ನೋವಿನ ಕಥೆಗೆ
ಸುರಿಸುರಿದು ಕಣ್ಣೀರು
ಪಾಪ, ಪುಣ್ಯಗಳಿಗೆ ದೂರ ನಿಂತು.

ಭುವನದ ನೋವುಗಳನ್ನೆಲ್ಲಾ
ತನ್ನೊಡಲಾಳದೊಳಗೆ ಬಚ್ಚಿಟ್ಟುಕೊಂಡು
ಸಹಿಸುತ್ತಿದೆ ಎಲ್ಲವನ್ನು
ಹೊರೆ ಹೊತ್ತ ಭೂತಾಯಿಯಂತೆ

ಹಕ್ಕಿ ಪಿಕ್ಕೆಗಳ ಬೆರಣಿ ಹಚ್ಚಿದೆ ಮುಖಕ್ಕೆ
ದಿನ ದಿನವು ಇದೇ ಪಾಡು
ಗುಡಿ, ಗೋಪುರ, ಮಂದಿರದೊಳಗಿದ್ದಿದ್ದರೆ
ನಿತ್ಯವು ನಿಲ್ಲದ ಅಭಿಷೇಕ ನಡೆಯುತಿತ್ತು.

ಬಿದ್ದಿದೆ ಕಾಲ ಕಸವಾಗಿ
ಕಕ್ಕಸು ಗುಂಡಿಯಲ್ಲೋ, ನಾರುವ ಚರಂಡಿಗಳಲ್ಲೊ
ಡಾಂಬರು ರಸ್ತೆ ಪಿಕ್ಕೆಗಳಲ್ಲಿಯೋ
ಮತ್ತೇಲ್ಲೊ,,,,,,,,

ಶಿಲ್ಪಿಯ ಕೈಗೆ ಮೈಸಿಕ್ಕು
ಸಾವಿರ ಸಾವಿರ ಛಡಿ ಏಟುಗಳನ್ನು ಸಹಿಸಿಕೊಂಡಾಗ
ಮೆತ್ತನೆಯ ರೂಪಕೊಟ್ಟಾಗ
ಅಬ್ಬಾ! ಬಂತಲ್ಲ ನಾಚಿಕೆ ಯಾಕೆ?

ಬಹಿರಂಗ ಕಠಿಣವೆನಿಸಿತು
ಅಂತರಂಗ ಬೆಣ್ಣೆ ಅನಿಸಿತು
ಜೀವವಿದ್ದ ಮನುಷ್ಯನಿಗಿನ್ನ
ನಯವಾದ ಆ ಕಪ್ಪು ಕಲ್ಲೆ ಚೆನ್ನ.

❍ ಗಂಗಪ್ಪ ತಳವಾರ

ಬಿಳಿಯರು ಕಪ್ಪು ಮಕ್ಕಳನ್ನು ದತ್ತು ಸ್ವೀಕರಿಸುತ್ತಿರುವುದು ಬಿಳಿ ಸಮಾಜದ ಭಾವನೆಗಳಲ್ಲಿನ ಬದಲಾವಣೆಗೆ ಒಂದು ಸಣ್ಣ ಸೂಚನೆಯಷ್ಟೆ. ಅದು ಎಂಥ ಬದಲಾವಣೆ ಆಗಬೇಕೆಂಬುದರ ಬಗ್ಗೆಯೂ ಸಹ ಸೂಚಿಸುತ್ತದೆ. ಭಾರತಕ್ಕೆ ಮರಳುವುದಾದರೆ ಬಾಲಿವುಡ್‌ನ ತಾರೆಯರಲ್ಲೂ ಯಾರಾದರೂ ದಲಿತ ಮಗುವೊಂದನ್ನು ದತ್ತು ಸ್ವೀಕರಿಸಬಹುದೇ? ನಮಗೆಲ್ಲಾ ಉತ್ತರ ಏನೆಂದು ತಿಳಿದಿದೆ. ಈ ಬಾಲಿವುಡ್‌ನ ಸಿನೆಮಾಗಳಲ್ಲಿ ಪಿಕ್ ಪಾಕೆಟ್‌ನಂಥ ಒಂದು ಸಣ್ಣ ಪಾತ್ರವನ್ನಾದರೂ ದಲಿತರಿಗೆ ನೀಡುವುದಿಲ್ಲವಾದರೆ ದಲಿತ ಮಕ್ಕಳನ್ನು ದತ್ತು ಸ್ವೀಕರಿಸುವ ಪ್ರಶ್ನೆಯಾದರು ಎಲ್ಲಿದೆ? ದಿನಪತ್ರಿಕೆಗಳ ಅನೇಕ ಸಂಪಾದಕರು ದಲಿತ ಲೇಖಕರಿಗೆ ಅಂಕಣ ಬರೆಯಲು ಬಿಡುವುದಿಲ್ಲವಾದರೆ, ದಲಿತ ಮಕ್ಕಳನ್ನು ದತ್ತು ಸ್ವೀಕರಿಸುವುದರ ಬಗ್ಗೆ ನಿರೀಕ್ಷಿಸಬಹುದೇ?

ಅನು : ಡೊಮಿನಿಕ್. ಡಿ

ಲಂಡನ್‌ನಲ್ಲಿ ನಡೆದ ದುಂಡು ಮೇಜಿನ ಪರಿಷತ್ ಸಮ್ಮೇಳನದಲ್ಲಿ ಅಸ್ಪೃಶ್ಯರನ್ನು ಯಾರು ಪ್ರತಿನಿಧಿಸಬೇಕು ಎನ್ನುವ ಪ್ರಶ್ನೆ ಎದುರಾದಾಗ ಡಾ. ಅಂಬೇಡ್ಕರ್ ಮತ್ತು ಗಾಂಧೀಜಿಯವರ ನಡುವೆ ದೊಡ್ಡ ಯುದ್ಧವೇ ನಡೆಯಿತು. ಭಾರತದಲ್ಲಿ ದಲಿತರ ಸಂಕಟಗಳನ್ನು ಮತ್ತು ಅವರಲ್ಲಿರುವ ಪ್ರತಿಭೆಯನ್ನು ಯಾರು ಪ್ರತಿನಿಧಿಸಬೇಕು ಎನ್ನುವುದರ ಬಗ್ಗೆ ದೊಡ್ಡ ವಾಗ್ವಾದವೇ ನಡೆಯುತ್ತಿದೆ.

ಅನೇಕ ಮಂದಿ ದಲಿತೇತರ ಬುದ್ಧಿಜೀವಿಗಳು, ರಾಜಕಾರಣಿಗಳು ಮತ್ತು ಕಾರ್ಯಕರ್ತರು ದಲಿತರನ್ನು ಪ್ರತಿನಿಧಿಸುತ್ತೇವೆ ಎನ್ನುವುದರ ಬಗ್ಗೆ ಇನ್ನೂ ಸಂದೇಹ ಹಾಗೆಯೇ ಉಳಿದಿದೆ.

ದಲಿತರ ಬಗ್ಗೆ ದಲಿತೇತರರು ಮಾತನಾಡುವುದು ಶ್ಲಾಘನೀಯವಾದರೂ ಸಹ, ಅದು ಬಹು ಸಂಕೀರ್ಣವಾಗಿ ಸಮಸ್ಯೆಯನ್ನು ಮತ್ತಷ್ಟು ಬಿಗಡಾಯಿಸುತ್ತದೆ. ಉದಾಹರಣೆಗೆ ದಲಿತರು ತಮ್ಮ ಪರಂಪರೆಗೆ ಬದ್ಧರಾಗಿರಬೇಕೆಂದು ದಲಿತೇತರರು ವಾದಿಸುವಾಗ ಅಂಥ ಪರಂಪರೆ ಏನೆಂದು ದಲಿತರಿಗೆ ಮಾತ್ರ ತಿಳಿದಿದೆಯಲ್ಲದೆ ದಲಿತೇತರರಿಗೆ ಅಲ್ಲ.

ಪರಂಪರೆಯೆಂದರೆ ಯಾವುದೇ ಪ್ರತಿಫಲವಿಲ್ಲದೆ ಸಮಾಜಕ್ಕೆ ದುಡಿಯುವುದು ಅಷ್ಟೆ. ದಲಿತರು ಒಂದು ಸತ್ತ ದನದ ಚರ್ಮ ಸುಲಿಯುವಾಗ ಮತ್ತು ಶೌಚಾಲಯ ತೊಳೆಯುವಾಗ ಅವರಿಗಾಗುವ ಭಾವನೆಗಳನ್ನು ದಲಿತೇತರರು ತಿಳಿಯಲಾಗುವುದಿಲ್ಲ.

ದಲಿತನಾಗಿರುವುದು ಎಂದರೆ ಏನು ಎಂಬುದರ ಬಗ್ಗೆ ಸ್ವಲ್ಪ ಅನುಭವ ಪಡೆಯಲು ದಲಿತೇತರರು ತಮ್ಮ ವೇಶ ಬದಲಾಯಿಸಿಕೊಂಡು ದಲಿತರಂತೆ ಬದುಕನ್ನು ನಡೆಸಲು ಪ್ರಯತ್ನಿಸುತ್ತಾರೆಯೇ?

ಜನಾಂಗೀಯವಾಗಿ ವಿಭಾಗವಾಗಿರುವ ಅಮೆರಿಕಾ ಸಮಾಜದಲ್ಲಿಯೂ ಸಹ ಇಂಥದ್ದೇ ಸಂದಿಗ್ಧತೆ ಎದುರಾಗಿ ಅನೇಕ ಬಿಳಿಯರು ಕಪ್ಪುಜನರ ಪರವಾಗಿ ನಿಂತಾಗ ಅಂಥ ಸಮಸ್ಯೆ ಎದುರಾಗಿ, ಅವರು ನಿಜವಾಗಿಯೂ ಕಪ್ಪುಜನರನ್ನು ಪ್ರತಿನಿಧಿಸಬಲ್ಲರೇ ಎಂಬ ಪ್ರಶ್ನೆ ಹಾಗೆಯೇ ಉಳಿಯಿತು. ಹೀಗಿರುವಲ್ಲಿ ಕಾದಂಬರಿಗಾರ ಮತ್ತು ಪತ್ರಕರ್ತನಾದ ಜಾನ್ ಹಾವರ್ಡ್ ಗ್ರಿ[illegible] ಪ್ರಕರಣ ಮಾತ್ರ ನಮ್ಮ ಗಮನ ಸೆಳೆಯುತ್ತದೆ.

೧೯೨೦ ಜೂನ್ ೧೬ರಂದು ಡಲ್ಲಾಸ್‌ನಲ್ಲಿ ಜನಿಸಿದ ಗ್ರಿಫಿನ್ ಫ್ರಾನ್ಸ್‌ಗೆ ಫ್ರೆಂಚ್ ಸಾಹಿತ್ಯಾಭ್ಯಾಸ ಮಾಡಲು ಹೋಗುತ್ತಾನೆ. ೧೯ನೇ ವಯಸ್ಸಿನಲ್ಲೇ ಆತ ಫ್ರೆಂಚ್ ಪ್ರತಿರೋಧ ಸೈನ್ಯ ಸೇರಿಕೊಳ್ಳುತ್ತಾನೆ. ತದನಂತರದಲ್ಲಿ ಅಮೆರಿಕಾದ ಸೈನ್ಯದಲ್ಲಿ ಸೇರುತ್ತಾನೆ. ಯಾವುದೋ ಕಾಯಿಲೆಯಿಂದಾಗಿ ಆತ ತನ್ನ ಕಣ್ಣುಗಳನ್ನು ಕಳೆದುಕೊಳ್ಳುತ್ತಾನೆ. ೧೯೪೭ -೧೯೫೭ರ ಕುರುಡುತನದ ದಶಕದ ಅವಧಿಯಲ್ಲಿ ಆತ 'ಡೆವಿಲ್ ರೈಡ್ಸ್ ಔಟ್‌ಸೈಡ್' ಮತ್ತು 'ನ್ಯೂನಿ' ಎಂಬೆರಡು ಕಾದಂಬರಿಗಳನ್ನು ಬರೆಯುತ್ತಾನೆ. ಇದೇ ವೇಳೆ ಆತ ಅಮೆರಿಕಾದ ಸಾಹಿತ್ಯ ವಲಯದಲ್ಲಿ ಪ್ರಸಿದ್ಧಿಗೆ ಬರುತ್ತಾನೆ. ಅಮೆರಿಕಾದ ಸಮಾಜದಲ್ಲಿ ಮಾನವೀಯತೆಯನ್ನು ಎತ್ತಿಹಿಡಿದು ಜನಾಂಗೀಯ ಸಾಮರಸ್ಯಕ್ಕಾಗಿ ದುಡಿಯುತ್ತಾ ಕಪ್ಪುಜನರ ಪರವಾಗಿ ಮಾತನಾಡತೊಡಗುತ್ತಾನೆ.

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಆದರೆ ತಾನು ನಿಜವಾಗಿಯೂ ಕಪ್ಪುಜನರನ್ನು ಪ್ರತಿನಿಧಿಸುತ್ತಿದ್ದೇನೆಯೇ? ಕಪ್ಪುಜನರಾಗಿರುವುದೇನೆಂದು ಆತನಿಗೆ ತಿಳಿದಿತ್ತೇ? ಬಿಳಿಯರ ಹಿಡಿತದಲ್ಲಿದ್ದ ಮಾಧ್ಯಮಗಳು ನಿಜವಾಗಿಯೂ ಕಪ್ಪುಜನರ ನೋವನ್ನು ಸರಿಯಾಗಿ ಚಿತ್ರಿಸಿದ್ದವೇ? ದಿನನಿತ್ಯ ಕಪ್ಪುಜನರು ಅನುಭವಿಸುವ ಅವಮಾನವನ್ನು ಸೆರೆಹಿಡಿಯಲು ಮಾಡಬೇಕಾಗಿರುವುದು ಏನು? ಎಂಬಂಥ ಸಂಗತಿಗಳು ಆತನನ್ನು ಮತ್ತೆ ಮತ್ತೆ ಚಿಂತೆಗದೂಡಿದ್ದವು.

ಈ ಎಲ್ಲಾ ಪ್ರಶ್ನೆಗಳನ್ನು ಸೂಕ್ತವಾಗಿ ಎದುರಿಸಲು ಆತ ತಾನೇ ಕಪ್ಪು ವ್ಯಕ್ತಿಯಾಗಲು ನಿರ್ಧರಿಸಿದ. ಆತ ಏನು ಮಾಡಿದನೆಂದು ಊಹಿಸಿಕೊಳ್ಳಲು ಅಸಾಧ್ಯವಾಗುತ್ತದೆ. ಆತ ವೈದ್ಯಕೀಯ ನೆರವು ಪಡೆದು ಓಕ್ಸರಾಲೆನ್ ಎಂಬ ಮಾತ್ರೆಗಳನ್ನು ತೆಗೆದುಕೊಳ್ಳಲು ಶುರು ಮಾಡಿದ. ಇದರೊಡನೆ ದಿನಕ್ಕೆ ೧೫ ತಾಸು ಆತ ಅಲ್ಟ್ರಾವಾಯಲೆಟ್ ದೀಪದ ಕೆಳಗೆ ಕುಂತು ತನ್ನ ಚರ್ಮವನ್ನು ಕಪ್ಪಾಗಿಸಿಕೊಳ್ಳತೊಡಗಿದ. ಹೇಗೂ ಆತ ಕಪ್ಪಾಗಿ ಪರಿವರ್ತನೆಯಾದ. ಆದರೆ ಕೆಲವು ಬಿಳಿ ಕಲೆಗಳು ಹಾಗೆಯೇ ಉಳಿದುಕೊಂಡವು. ಆ ಜಾಗಗಳಿಗೆ ಈತ ಡಯ್ ಹಚ್ಚಿಕೊಂಡ. ತನ್ನ ಕೂದಲು ಜನಾಂಗೀಯತೆಯನ್ನು ಸಾರುತ್ತಿದ್ದರಿಂದ, ಅದನ್ನೂ ಸಹ ಆತ ಸಂಪೂರ್ಣ ಬೋಳಿಸಿಕೊಂಡು ಟೊಪ್ಪಿಹಾಕಲಾರಂಭಿಸಿದ. ಈಗ ಆತ ಪೂರ್ಣ ಪ್ರಮಾಣದ ಕಪ್ಪು ವ್ಯಕ್ತಿಯಾದ.

ಈ ಹೊಸ ಅವತಾರದಲ್ಲಿ ಆತ ಜನಾಂಗೀಯವಾಗಿ ಪ್ರತ್ಯೇಕಗೊಂಡ ರಾಜ್ಯಗಳಾದ ಲೂಸಿಯಾನ, ಮಿಸ್ಸಿಸಿಪ್ಪಿ, ಆಲ್ಬಾನ ಮತ್ತು ಗ್ರೆಗೋರಿಯಾ ರಾಜ್ಯಗಳೆಲ್ಲಾ ಸುತ್ತಾಡತೊಡಗಿದ. ತನ್ನ ಅನುಭವಗಳನ್ನೆಲ್ಲಾ ಆತ ಸೆಪಿಯಾ ಎನ್ನೋ ಮಾಸಿಕದಲ್ಲಿ ಬರೆಯತೊಡಗಿದ. ಆ ಮ್ಯಾಗಜಿನ್ ಆತನ ಈ ಯೋಜನೆಗೆ ಸಹಕರಿಸಿತು.

ತನ್ನ ವರದಿ ಪ್ರಕಟಿಸುತ್ತಿದ್ದಂತೆ ಬಿಳಿಯ ಜನಾಂಗವಾದಿಗಳು ಕೋಪಿಷ್ಠರಾಗಿ ಆತನ ಪ್ರತಿರೂಪಗಳನ್ನು ಎಲ್ಲೆಡೆ ಸುಡತೊಡಗಿದರಲ್ಲದೆ ಹೆದರಿಸತೊಡಗಿದರು. ಆದರೆ ಇದ್ಯಾವುದಕ್ಕೂ ಮಣಿಯದ ಗ್ರಿಫಿನ್ ತನ್ನ ಬದುಕನ್ನು ಬದಲಾಯಿಸಿಕೊಳ್ಳಲಿಲ್ಲ. ೧೯೬೧ರಲ್ಲಿ ಆತನ ಎಲ್ಲಾ ಲೇಖನಗಳನ್ನು 'ನನ್ನಂತೆ ಕಪ್ಪು' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಲ್ಲದೆ ೧೯೬೪ರಲ್ಲಿ ಅದನ್ನೇ ಚಲನಚಿತ್ರವಾಗಿಸಲಾಯಿತು.

ಗ್ರಿಫಿನ್‌ಗೆ ಅನೇಕ ಪಾರಿತೋಷಕಗಳನ್ನು ನೀಡಲಾಗುತ್ತದೆ. ಆತನ ಪುಸ್ತಕ ಅನೇಕ ಬಿಳಿಯ ಅಮೆರಿಕರನ್ನು ಸಂವೇದನಾಶೀಲರನ್ನಾಗಿ ಮಾಡಿತು. ಆತ ೧೯೮೦ರಲ್ಲಿ ೬೦ನೇ ವಯಸಿನಲ್ಲಿ ತೀರಿಕೊಂಡ. ಇದಕ್ಕೆ ಮುಖ್ಯ ಕಾರಣ ಆತ ೧೯೫೯ರಲ್ಲಿ ಅಧಿಕವಾಗಿ ಸೇವಿಸಿದ ಔಷಧಿಯೇ ಆಗಿತ್ತು ಎಂದು ಅನೇಕರು ಭಾವಿಸಿದ್ದಾರೆ. ಅಮೆರಿಕಾದಲ್ಲಿ ಕಪ್ಪುಜನರ ಸಂಕಟಗಳನ್ನು ಅರಿಯಲು ಒಬ್ಬ ಬಿಳಿಯ ಶ್ರೇಷ್ಠ ತ್ಯಾಗವನ್ನು ಮಾಡಿದ್ದ.

ಹಲೋ, ೨೫೦ ಮಿಲಿಯನ್ ದಲಿತೇತರ ಗಾಂಧಿಯ ಮಕ್ಕಳಿದ್ದಾರೆ. ಇವರಲ್ಲಿ ಯಾರೊಬ್ಬರಾದರೂ ಗ್ರಿಫಿನ್‌ನಂತೆ ಮಾಡಬಹುದೇ? ಹಾಗೆ ಮಾಡುವುದೇ ಆದಲ್ಲಿ ಅದು ಸುಲಭ ಕೆಲಸವೇ ಸರಿ. ಅದಕ್ಕಾಗಿ ಒಕ್ಸಲರಾನ್ ಮಾತ್ರೆ ಸೇವಿಸಬೇಕಿಲ್ಲ. ಅಲ್ಲದೆ ಅಲ್ಟ್ರಾವಾಯಿಲೆಟ್ ಕಿರಣಗಳಡಿ ಕೂರಬೇಕಿಲ್ಲ. ಅದಕ್ಕಾಗಿ ತನ್ನ ಹೆಸರಿನ ಸರ್‌ನೇಮ್ ಬದಲಾಯಿಸಿಕೊಳ್ಳಬೇಕಷ್ಟೆ.

ಸೆಪ್ಟೆಂಬರ್ ೨೮ ರಂದು ನಾನು ಫಿಲಿಡೆಲ್ಫಿಯಾ ವಿಮಾನ ನಿಲ್ದಾಣದಲ್ಲಿ ಇಳಿದಾಕ್ಷಣ

ಬಿಳಿ ಬಣ್ಣದಲ್ಲಿ ಕಪ್ಪು

ಕಲಿತ ಪಾಠ

ಪೆನ್ಸಿಲ್‌ವೇನಿಯಾ ವಿಶ್ವವಿದ್ಯಾಲಯ್ಧದ ಬೋಧಕ ವರ್ಗದ ನನ್ನ ಸ್ನೇಹಿತ ಡಾ. ಶ್ಯಾಮ್ ನಾರಾಯಣ್ ರಾವತ್ ನನ್ನನ್ನು ತನ್ನ ಮನೆಗೆ ಕರೆದುಕೊಂಡು ಹೋದ.ನಾನು ಸಿಗರೇಟ್ ಸೇದಲು ಒಂದು ಕ್ಷಣ ಹೊರಗೆ ಬಂದೆ. ಅದೇ ವೇಳೆ ಡಾ. ರಾವತ್ ನನ್ನ ಲಗ್ಗೇಜನ್ನು ನನ್ನ ಕೋಣೆಗೆ ಸಾಗಿಸಿದ. ಹೊರಗೆ ಇಬ್ಬರು ಕಪ್ಪು ಮಕ್ಕಳು ಒಂದು ಮನೆಯನ್ನು ಪ್ರವೇಶಿಸುವುದನ್ನು ನಾನು ಗಮನಿಸಿದೆ. 'ಮಿಶ್ರ ಜನಾಂಗೀಯ ನೆರೆ'ಯರಿರಬಹುದೆಂದು ನಾನು ಭಾವಿಸಿ ಮನೆಯೊಳಗೆ ಹೋದೆ.

ಒಂದು ತಾಸಿನ ನಂತರ ನಾನು ಮತ್ತೊಮ್ಮೆ ಡಾ. ರಾವತ್ ಮತ್ತು ಆತನ ಹೆಂಡತಿ ಡಾ.ಲೀಸಾರವರೊಡನೆ ಹೊರ ಹೋದೆ. ಆಗ ಈ ಹಿಂದೆ ಗಮನಿಸಿದ ಕಪ್ಪು ಮಕ್ಕಳು ಪ್ರವೇಶಿಸಿದ ಮನೆಯಿಂದ ಒಬ್ಬ ಬಿಳಿಯ ವ್ಯಕ್ತಿ ಹೊರಬಂದ. ನನ್ನ ಸ್ನೇಹಿತರತ್ತ ವಿವರಣೆಗಾಗಿ ನೋಡಿದೆ.

"ಅವರು ಆತನ ಮಕ್ಕಳು. ಆತ ಅವರನ್ನು ದತ್ತು ಸ್ವೀಕರಿಸಿದ್ದಾನೆ" ಎಂದು ಡಾ. ರಾವತ್ ಹೇಳಿದ. ನಾವು ಇನ್ನೂ ಆ ವಿಷಯದ ಬಗ್ಗೆ ಚರ್ಚಿಸುತ್ತಿರುವಾಗಲೇ ಆ ಬಿಳಿಯ ವ್ಯಕ್ತಿ ಅದೇ ಮನೆಯಿಂದ ಆ ಕಪ್ಪು ಮಕ್ಕಳೊಂಗೆ ಹೊರ ಬಂದು ಒಂದು ಕಾರಿನತ್ತ ಸಾಗುವುದನ್ನು ಗಮನಿಸಿದೆ. ಅದು ಮತ್ತಷ್ಟು ನನ್ನನ್ನು ಯೋಚಿಸುವಂತೆ ಮಾಡಿತು.

ನಾನು ಮತ್ತಷ್ಟು ಆ ವಿಷಯದ ಬಗ್ಗೆ ಸಂಶೋಧನೆ ಮಾಡಿದಾಗ ತಿಳಿದುದ್ದೆಂದರೆ ಅಮೆರಿಕಾದಲ್ಲಿ ಕಪ್ಪು-ಬಿಳಿಯರ ನಡುವೆ ಹೊಸದೊಂದು ಬಾಂಧವ್ಯ ಆರಂಭವಾಗಿದೆ. ದತ್ತು ಸ್ವೀಕಾರ ಬಲು ದೊಡ್ಡದಾಗಿ ಬೆಳೆದಿದೆ. ಸಾವಿರಾರು ಮಂದಿ ದಂಪತಿಗಳು ಮಕ್ಕಳನ್ನು ದತ್ತು ಸ್ವೀಕಾರ ಮಾಡಿ ತಮ್ಮ ಸ್ವಂತ ಮಕ್ಕಳಂತೆ ಬೆಳೆಸುತ್ತಿದ್ದಾರೆ. ಇದೇ ಸಂಗತಿಯನ್ನು ಭಾರತದಲ್ಲಿಯೂ ಕಾಣಬಹುದಾಗಿದೆ.

೨೦೦೫ರಲ್ಲಿ ಸುಮಾರು ೫,೧೩,೦೦೦ ಮಂದಿ ಮಕ್ಕಳು ಪೋಷಕ ಮನೆಗಳಲ್ಲಿ ದತ್ತು ಸ್ವೀಕಾರಕ್ಕಾಗಿ ಕಾಯ ತ್ತಿದ್ದರು. ಅವರಲ್ಲಿ ಶೇ.೪೧ರಷ್ಟು ಬಿಳಿಯರಾಗಿದ್ದು, ಶೇ.೨೬ರಷ್ಟು ಕಪ್ಪು ಮಕ್ಕಳಾಗಿದ್ದರು.

೧೯೮೮ರ ಒಂದು ವರದಿಯಂತೆ ಶೇ.೧೪ರಷ್ಟು ಮಂದಿ ಕಪ್ಪು ಮಕ್ಕಳನ್ನು ಬಿಳಿಯರು ದತ್ತು ಸ್ವೀಕಾರ ಮಾಡಿದ್ದರು. ಈ ಸಂಖ್ಯೆ ೨೦೦೪ರ ವೇಳೆಗೆ ಶೇ. ೨೬ಕ್ಕೇರಿತ್ತು. ಹಾಲಿವುಡ್ ತಾರೆ ಆಂಜೆಲಿನಾ ಜೋಲಿ ಇಥಿಯೋಪಿಯಾದಿಂದ ಕಪ್ಪು ಮಗುವನ್ನು ದತ್ತು ಸ್ವೀಕರಿಸಿ ಸುದ್ದಿಯಾದಳು. ಹಾಗೆಯೇ ಅಮೆರಿಕಾದ ಪಾಪ್ ಸಂಗೀತ ತಾರೆ ಮಡೋನಾ ಸಹ ಕಪ್ಪು ಮಗುವನ್ನು ದತ್ತು ಪಡೆದಿದ್ದಳು.

ಬಿಳಿಯರು ದತ್ತು ಸ್ವೀಕರಿಸುವಾಗ ಬಿಳಿಯ ಮಕ್ಕಳನ್ನೇ ದತ್ತು ಸ್ವೀಕರಿಸಲು ಇಚ್ಚಿಸುತ್ತಾರಾದರೂ ಅಮೆರಿಕಾದಲ್ಲಿ ಬಿಳಿಯರು ಕಪ್ಪು ಮಕ್ಕಳನ್ನು ಹೆಚ್ಚಾಗಿ ದತ್ತು ಸ್ವೀಕರಿಸುವುದನ್ನೂ ಕಾಣಬಹುದಾಗಿದೆ. ಹೀಗಿದ್ದರು ಹಲವು ಸಾವಿರ ಕಪ್ಪು ಮಕ್ಕಳನ್ನು ದತ್ತು ಸ್ವೀಕರಿಸಿದಾಕ್ಷಣ ಕಪ್ಪು ಜನರ ಸಮಸ್ಯೆಗಳು ಬಗೆಹರಿದವೆಂದು ಭಾವಿಸಬೇಕಿಲ್ಲ. ಅಮೆರಿಕಾದಲ್ಲಿ ಕಪ್ಪು ಜನ ಯಾವುದೇ ಎತ್ನಿಕ್ ಸಮುದಾಯಕ್ಕಿಂತಲೂ ಬಡವರಾಗಿದ್ದಾರೆ. ಹೀಗಿರುವಲ್ಲಿ ಕಪ್ಪುಜನರು ಎದುರಿಸುವ ಸಮಸ್ಯೆಗಳಿಗೆ ಬಿಳಿಯರು ಜವಾಬ್ದಾರರಾಗಿದ್ದಾರೆ.

ಗುಲಾಮಗಿರಿ ಮತ್ತು ಗುಲಾಮರ ಮಾರಾಟ ಈಗ ಚರಿತ್ರೆ, ಭೂತದ ಕೊಡುಗೆಯಾಗಿರುವ ಎಲ್ಲಾ ನೀತಿಗಳು

ಗುಲಾಮಗಿರಿ ಮತ್ತು ಗುಲಾಮರ ಮಾರಾಟ ಈಗ ಚರಿತ್ರೆ, ಭೂತದ ಕೊಡುಗೆಯಾಗಿರುವ ಎಲ್ಲಾ ನೀತಿಗಳು ಬದಲಾಗಬೇಕಾಗಿದೆ. ಎಷ್ಟೆ ನಿಧಾನಗತಿಯಲ್ಲಾದರೂ ಬದಲಾವಣೆ ಕಾಣಿಸಿಕೊಳ್ಳುತ್ತಿದೆ. ಬಿಳಿಯರು ಅಂಥ ಬದಲಾವಣೆಯನ್ನು ಇಂದು ತೀವ್ರವಾಗಿ ಬಯಸುತ್ತಿದ್ದಾರೆ. ಬಿಳಿಯರು ಕಪ್ಪು ಮಕ್ಕಳನ್ನು ದತ್ತು ಸ್ವೀಕರಿಸುತ್ತಿರುವುದು ಬಿಳಿ ಸಮಾಜದ ಭಾವನೆಗಳಲ್ಲಿನ ಬದಲಾವಣೆಗೆ ಒಂದು ಸಣ್ಣ ಸೂಚನೆಯಷ್ಟೆ. ಭಾರತಕ್ಕೆ ಮರಳುವುದಾದರೆ ಬಾಲಿವುಡ್‌ನ ತಾರೆಯರಲ್ಲೂ ಯಾರಾದರೂ ದಲಿತ ಮಗುವೊಂದನ್ನು ದತ್ತು ಸ್ವೀಕರಿಸಬಹುದೇ? ನಮಗೆಲ್ಲಾ ಉತ್ತರ ಏನೆಂದು ತಿಳಿದಿದೆ. ಈ ಬಾಲಿವುಡ್‌ನ ಸಿನೆಮಾಗಳಲ್ಲಿ ಪಿಕ್‌ಪಾಕೆಟ್‌ನಂಥ ಒಂದು ಸಣ್ಣ ಪಾತ್ರವನ್ನಾದರೂ ದಲಿತರಿಗೆ ನೀಡುವುದಿಲ್ಲವಾದರೆ ದಲಿತ ಮಕ್ಕಳನ್ನು ದತ್ತು ಸ್ವೀಕರಿಸುವ ಪ್ರಶ್ನೆಯಾದರು ಎಲ್ಲಿದೆ? ದಿನಪತ್ರಿಕೆಗಳ ಅನೇಕ ಸಂಪಾದಕರು ದಲಿತ ಲೇಖಕರಿಗೆ ಅಂಕಣಬರೆಯಲು ಬಿಡುವುದಿಲ್ಲವಾದರೆ, ದಲಿತ ಮಕ್ಕಳನ್ನು ದತ್ತು ಸ್ವೀಕರಿಸುವುದರ ಬಗ್ಗೆ ನಿರೀಕ್ಷಿಸಬಹುದೇ? ಆದ್ದರಿಂದಲೇ ಜಾತೀಯತೆ ಎನ್ನುವುದು ಜನಾಂಗೀಯ ತಾರತಮ್ಯಕ್ಕಿಂತಲೂ ಕ್ರೂರವಾದುದು.

ಬದಲಾಗಬೇಕಾಗಿದೆ. ಎಷ್ಟೆ ನಿಧಾನಗತಿಯಲ್ಲಾದರೂ ಬದಲಾವಣೆ ಕಾಣಿಸಿಕೊಳ್ಳುತ್ತಿದೆ. ಬಿಳಿಯರು ಅಂಥ ಬದಲಾವಣೆಯನ್ನು ಇಂದು ತೀವ್ರವಾಗಿ ಬಯಸುತ್ತಿದ್ದಾರೆ.

ಬಿಳಿಯರು ಕಪ್ಪು ಮಕ್ಕಳನ್ನು ದತ್ತು ಸ್ವೀಕರಿಸುತ್ತಿರುವುದು ಬಿಳಿ ಸಮಾಜದ ಭಾವನೆಗಳಲ್ಲಿನ ಬದಲಾವಣೆಗೆ ಒಂದು ಸಣ್ಣ ಸೂಚನೆಯಷ್ಟೆ. ಅದು ಎಂಥ ಬದಲಾವಣೆ ಆಗಬೇಕೆಂಬುದರ ಬಗ್ಗೆಯೂ ಸಹ ಸೂಚಿಸುತ್ತದೆ.

ಭಾರತಕ್ಕೆ ಮರಳುವುದಾದರೆ ಬಾಲಿವುಡ್‌ನ ತಾರೆಯರಲ್ಲೂ ಯಾರಾದರೂ ದಲಿತ ಮಗುವೊಂದನ್ನು ದತ್ತು ಸ್ವೀಕರಿಸಬಹುದೇ? ನಮಗೆಲ್ಲಾ ಉತ್ತರ ಏನೆಂದು ತಿಳಿದಿದೆ. ಈ ಬಾಲಿವುಡ್‌ನ ಸಿನೆಮಾಗಳಲ್ಲಿ ಪಿಕ್‌ಪಾಕೆಟ್‌ನಂಥ ಒಂದು ಸಣ್ಣ ಪಾತ್ರವನ್ನಾದರೂ ದಲಿತರಿಗೆ ನೀಡುವುದಿಲ್ಲವಾದರೆ ದಲಿತ ಮಕ್ಕಳನ್ನು ದತ್ತು ಸ್ವೀಕರಿಸುವ ಪ್ರಶ್ನೆಯಾದರು ಎಲ್ಲಿದೆ?

ದಿನಪತ್ರಿಕೆಗಳ ಅನೇಕ ಸಂಪಾದಕರು ದಲಿತ ಲೇಖಕರಿಗೆ ಅಂಕಣಬರೆಯಲು ಬಿಡುವುದಿಲ್ಲವಾದರೆ, ದಲಿತ ಮಕ್ಕಳನ್ನು ದತ್ತು ಸ್ವೀಕರಿಸುವುದರ ಬಗ್ಗೆ ನಿರೀಕ್ಷಿಸಬಹುದೇ? ಸುದ್ದಿ ಜಾಲಗಳ ಸಿಇಒಗಳು ದಲಿತರನ್ನು ನಿರೂಪಕರನ್ನಾಗಿ ನೇಮಕ ಮಾಡುವುದಿಲ್ಲವಾದರೆ ದಲಿತ ಮಕ್ಕಳನ್ನು ದತ್ತು ಸ್ವೀಕರಿಸುವ ಬಗ್ಗೆ ಯೋಚಿಸಲು ಸಾಧ್ಯವೇ? ಭಾರತದಲ್ಲಿ ಕಾರ್ಪೋರೇಟ್ ಬೋರ್ಡ್‌ಗಳಲ್ಲಿ ದಲಿತರಿಗೆ ಅವಕಾಶವಿಲ್ಲವಾದರೆ ದಲಿತ ಮಕ್ಕಳನ್ನು ದತ್ತು ಸ್ವೀಕರಿಸುವ ಬಗ್ಗೆ ಯೋಚಿಸಬಹುದೇ?

ಆದ್ದರಿಂದಲೇ ಜಾತೀಯತೆ ಎನ್ನುವುದು ಜನಾಂಗೀಯ ತಾರತಮ್ಯಕ್ಕಿಂತಲೂ ಅಧಿಕವಾದುದು. ಅಮೆರಿಕಾದವರಿಂದ ಈ ಜಾತಿವಾದಿ ಹಿಂದೂಗಳು ಪಾಠಕಲಿಯಲು ಕಾಲ ಒದಗಿಬಂದಿದೆಯಲ್ಲವೇ!

ಕೆಲವು ದಿನಗಳಾದರೂ ಒಂದು ಕಪ್ಪು ಕುಟುಂಬದಲ್ಲಿ ಉಳಿಯಬೇಕೆಂದು ನಾನು ಆಶಿಸಿದ್ದೆ. ನಾನು ಯಾವುದೇ ವಿಶ್ವವಿದ್ಯಾಲಯಗಳಿಗೆ ಉಪನ್ಯಾಸಕ್ಕಾಗಿ ಹೋದಾಗಲೆಲ್ಲಾ ಹೋಟೆಲ್‌ಗಳಲ್ಲೇ ಉಳಿಯುತ್ತಿದ್ದೆ. ಇದೇ ರೀತಿಯಲ್ಲಿ ಪ್ರೊ.ಕೆವಿನ್ ಬ್ರೌನ್ ನನ್ನನ್ನು ಇಂಡಿಯಾನಾದ ವಿಶ್ವ ವಿದ್ಯಾಲಯದಲ್ಲಿ ಉಪನ್ಯಾಸಕ್ಕೆ ಆಹ್ವಾನಿಸಿದಾಗ ನನಗೆ ಖುಷಿಯಾಯಿತು.

ಬೌದ್ಧಿಕ ಗರಡಿಯಲ್ಲಿ ಪಳಗಿರುವ ಪ್ರೊ.ಕೆವಿನ್ ನನಗೆ ಹಲವಾರು ವರ್ಷಗಳಿಂದ ಗೊತ್ತಿದ್ದರು. ಅವರು ಭಾರತಕ್ಕೆ ಬಂದಾಗ ದಿಲ್ಲಿಯಲ್ಲಿ ನಮ್ಮೊಡನೆ ಉಳಿದಿದ್ದರು. ಆದ್ದರಿಂದ ನನಗೆ ಯಾವುದೇ ಮುಜುಗರವಿಲ್ಲದೆ ಮೂರು ದಿನ ಅವರಲ್ಲಿ ಉಳಿದಿಕೊಳ್ಳಲು ನಿರ್ಧರಿಸಿ ಅವರಲ್ಲಿ ಕೇಳಿಕೊಂಡೆ.

ನನ್ನನ್ನು ಬರಮಾಡಿಕೊಳ್ಳಲು ಅವರು ಕಾಯುತ್ತಿದ್ದರು. ಗಿಡಮರಗಳಿಂದ ಸ್ಥಳಕ್ಕೆ ಬರುತ್ತಿದ್ದಂತೆ "ನಾವು ಮನೆ ಮುಟ್ಟಿದೆವು" ಎಂದರು. "ಈ ಅರಣ್ಯದಲ್ಲಿ ಮನೆ ಎಲ್ಲಿದೆ" ಎಂದೆ ನಾನು. ಅವರು ನಕ್ಕು ಅವರು ಗೇಟ್ ತೆರೆದರು. ಅಲ್ಲೊಂದು ಫಲಕದ ಮೇಲೆ "ಖಾಸಗಿ ಆಸ್ತಿ, ಅಕ್ರಮ ಪ್ರವೇಶ ನಿಷೇಧಿಸಿದೆ" ಎಂದಿತ್ತು. ಕೆಲವೇ ಕ್ಷಣಗ

ಳ್ಳಿ ಒಂದು ದೊಡ್ಡ ಬಂಗಲೆಯಲ್ಲಿ [illegible]. [illegible] ಅವರನ್ನು [illegible]

[illegible]ಗಳಲ್ಲಿ ನಿರ್ಮಿತವಾದ ಆ ಬಂಗಲೆ [illegible] ಎಕರೆ ಜಾಗ ಹೊಂದಿತ್ತು. ಅವರಲ್ಲಿ ೧೦೦ದಷ್ಟು ವಿವಿಧ ಮರಗಳಿದ್ದವು. ಆ ಮನೆಯೊಳಗೆ ಮ್ಯುಸಿಯಂ ತೆರನ ವ್ಯವಸ್ಥೆ ಇತ್ತು. ನಾನು ಅನೇಕ ಫೈವ್ ಸ್ಟಾರ್ ಹೋಟೆಲ್‌ಗಳಲ್ಲಿ ಉಳಿದುಕೊಂಡಿದೆ. ಆದರೆ ಈ ಮನೆಯಲ್ಲಿ ನಾನು ಉಳಿದುಕೊಂಡ ಕೋಣೆ ಎಷ್ಟು ಸುಂದರವಾಗಿತ್ತೆಂದರೆ ಊಹಿಸಲು ಅಸಾಧ್ಯವಾಗಿತ್ತು. ಅದೂ ಸಹ ಒಬ್ಬ ಕಪ್ಪು ವ್ಯಕ್ತಿಯ ಮನೆ ಇಷ್ಟೊಂದು ಸುಂದವಾಗಿತ್ತು! ನಾನು ಅಲ್ಲಿ ವಿರಮಿಸುತ್ತಿದ್ದಂತೆ, ಪ್ರೊಫೆಸರ್ ನನ್ನನ್ನು ಮನೆಯೊಳಗೆಲ್ಲಾ ಕರೆದೊಯ್ದು ಪರಿಚಯಿಸಿದರು. ಮಹಡಿ ಮತ್ತು ನೆಲಮನೆಗಳೆರಡು ಬಹು ಸುಂದರವಾದ ನೆಲಹಾಸಿಗೆಯನ್ನು ಹೊಂದಿದ್ದವು. ಅಲ್ಲಿನ ಪ್ರತಿಯೊಂದು ಕೋಣೆಯೂ ಸಹ ಅದ್ಭುತವಾದ ಕಲೆಗಾರಿಕೆಯನ್ನು ತೋರಿತು.

ಶೂನ್ಯಕ್ಕೆ ವಾತಾವರಣ ಇಳಿದಿದ್ದರೂ ಸಹ ಮಾರನೇ ದಿನ ಸಿಗರೇಟ್ ಸೇದಲು ನಾನು ಹೊರಗೆ ಕಾಲಿಟ್ಟೆ. ಅಲ್ಲಿ ಕಾಡು ಟರ್ಕಿ, ಜಿಂಕೆ ಮತ್ತು ಇಣಚಿ ಕಂಡು ನಾನು ಅಚ್ಚರಿಗೊಂಡೆ. "ಮೊಲ ಮತ್ತು ನರಿಗಳೂ ಸಹ ಇಲ್ಲಿವೆ" ಎಂದು ಅವರು ತಿಳಿಸಿದರು. "ಈ ಕಾಂಪೌಂಡ್‌ನಲ್ಲಿ ಏನೇನು ಇದ್ದಾವೋ ಅವೆಲ್ಲಾ ನನಗೆ ಸೇರಿದ್ದು. ಈ ಭಾಗ ನಗರದಲ್ಲೇ ಅತ್ಯಂತ ದುಬಾರಿಯಾದುದು" ಎಂದು ಮತ್ತೆ ತಮ್ಮ ಮಾತನ್ನು ಮುಂದುವರೆಸಿ ನನ್ನನ್ನು ಸುತ್ತಲು ಕರೆದೊಯ್ದರು.

ನನಗೆ ಮತ್ತಷ್ಟು ಕುತೂಹಲ ಎನಿಸತೊಡಗಿತು. "ಇಂಥ ಮನೆಗಳಲ್ಲಿ ಎಷ್ಟು ಮಂದಿ ಕಪ್ಪುಜನರು ಜೀವಿಸುತ್ತಿದ್ದಾರೆ?" ಎಂದಾಗ, "ಹೇಳುವುದು ಕಷ್ಟ" ಎಂದರು. ನಾವು ಮನೆಯೊಳಗೆ ಹಿಂತಿರುಗಿದಾಗ ಅವರು ಅಮೆರಿಕಾದ ಜನಗಣತಿ ವೆಬ್‌ಸೈಟ್ ತೆಗೆದು, ನನಗೆ ತಿಳಿಸಿದ್ದೇನೆಂದರೆ, ಅಮೆರಿಕಾದಲ್ಲಿ ೫.೪ ಮಿಲಿಯನ್ ಕಪ್ಪುಜನರ ಕುಟುಂಬಗಳು ವಾರ್ಷಿಕ $೧,೦೦,೦೦೦ ದಿಂದ $೧,೫೦,೦೦೦ ಆದಾಯ ಗಳಿಸುತ್ತಿದ್ದಾರೆ. ಅನೇಕ ಮಂದಿ ಅಂಥ ಮನೆಗಳನ್ನು ಹೊಂದಿರಬಹುದೆಂದರು.

ತಿಂಗಳಿಗೆ $೧೦೦೦ ಅಥವಾ ವಾರ್ಷಿಕವಾಗಿ $೧೨೦೦೦ ಸಂಪಾದಿಸುವ ಒಬ್ಬ ಭಾರತೀಯ ಸಂಶೋಧಕರು ಇದ್ದಾರೆ. ಆತ ಪ್ರತಿ ತಿಂಗಳು ತನ್ನ ಮನೆ ಬಾಡಿಗೆಗೆಂದು $೩೦೦ ಖರ್ಚುಮಾಡುತ್ತಾನೆ. ಊಟಕ್ಕೆಂದು $೩೦೦ ಮತ್ತು ಪ್ರಯಾಣಕ್ಕಾಗಿ $೫೦ ವೆಚ್ಚ ಮಾಡುತ್ತಾನೆ. ಉಳಿದ $೫೦೦ರನ್ನು ಮನೆಗೆ ಕಳುಹಿಸುತ್ತಾನೆ. ಹೀಗಿರುವಲ್ಲಿ ವಾರ್ಷಿಕ ಆದಾಯ $೧೫೦೦೦೦ದಷ್ಟು ಅಮೆರಿಕಾದಲ್ಲಿ ಪಡೆಯುವವರ ಸ್ಥಿತಿ ಹೇಗಿರುತ್ತದೆಂದು ಗೊತ್ತಾಗುತ್ತದೆ.

ಭಾರತದಲ್ಲಿ ಒಟ್ಟಾರೆಯಾಗಿ ಕ್ಲಾಸ್ – ೧ ವರ್ಗದ ಭಾರತೀಯ ಆಡಳಿತ ಸೇವೆಯಲ್ಲಿರುವ ದಲಿತ/ಆದಿವಾಸಿಗಳು ಸುಮಾರು ೧ ಲಕ್ಷವಿರಬಹುದು. ಹಾಗೆಯೇ ಮತ್ತೊಂದು ಲಕ್ಷದಷ್ಟು ಮಂದಿ ಖಾಸಗಿ ವಲಯದಲ್ಲಿರಬಹುದು.

ಅಮೆರಿಕಾದ ಸಾಹಿತ್ಯ ರೂಪಕದಲ್ಲಿ ಶೇಕ್ಸ್‌ಪಿಯರ್‌ನ ಪ್ರಸಿದ್ಧ ನಾಟಕ 'ಒಥೆಲ್ಲೊ' ಬಿಳಿಯರು ಮತ್ತು ಕಪ್ಪು ಜನರ ನಡುವಿನ ತಾರತಮ್ಯವನ್ನು ಕುರಿತದ್ದು. ಆದ್ದರಿಂದ ಆ ನಾಟಕವನ್ನು ೧೯೩೦ರ ಸುಮಾರಿಗೆ ಅಮೆರಿಕಾದಲ್ಲಿ ಪ್ರದರ್ಶಿಸಿದಾಗ ಅದರಲ್ಲಿ ಕಪ್ಪು ವ್ಯಕ್ತಿಯನ್ನು ನಾಯಕ ಪಾತ್ರವಾಗಿ ಬಿಳಿಯ ನಾಯಕಿಯೊಡನೆ ತೋರಿಸಲಾಗಿತ್ತು. ಈ ಕಾರಣಕ್ಕಾಗಿ ಕೂಡಲೇ ಅದನ್ನು ಬಹಿಷ್ಕಾರಕ್ಕೊಳಪಡಿಸಲಾಯಿತು. ಹೀಗಿರುವಲ್ಲಿ ೧೯೪೩ರಲ್ಲಿ ಅದೇ ನಾಟಕ ಮತ್ತೊಮ್ಮೆ ಬ್ರಾಡ್‌ವೇನಲ್ಲಿ ಪ್ರದರ್ಶನಗೊಳ್ಳತೊಡಗಿತು. ಆಗ ಅದು ಅಲ್ಲಿ ಒಂದು ದಾಖಲೆಯನ್ನೇ ಸೃಷ್ಟಿಸಿತು. ಜೂನ್ ೧೨, ೧೯೬೭ರವರೆಗೆ ಅಮೆರಿಕಾವು ಜನಾಂಗೀಯವಾಗಿ ತತ್ತರಿಸಿತ್ತು. ಸುಮಾರು ೧೬ ರಾಜ್ಯಗಳಲ್ಲಿ ಅಂತರ್ ಜನಾಂಗೀಯ ಮದುವೆಗಳು ಕಾನೂನು ಬಾಹಿರವಾಗಿದ್ದವು. ಆದರೆ ಇಂದು ಆ ಚಿತ್ರಣ ಬದಲಾಗಿದೆ. ಯು.ಎಸ್. ಜನಗಣತಿಯ ಕೇಂದ್ರದ ವರದಿಯ ಪ್ರಕಾರ ೨೦೦೫ರಲ್ಲಿ ೪,೨೨,೦೦೦ ಮಂದಿ ದಂಪತಿಗಳು ಅಂತರ ಜನಾಂಗೀಯ ವಿವಾಹವಾಗಿದ್ದರು.

ಅಂದರೆ, ಸಂವಿಧಾನ ರಕ್ಷಣೆ ಇದ್ದಾಗ್ಯೂ ಸಹ ಅಮೆರಿಕಾದಲ್ಲಿರುವ ಕಪ್ಪು ಮಧ್ಯಮವರ್ಗದ ಜನರಲ್ಲಿ ಅರ್ಧದಷ್ಟನ್ನಾದರೂ ಭಾರತ ದಲಿತ ಮತ್ತು ಆದಿವಾಸಿಗಳಲ್ಲಿ ಮಾಡಿಲ್ಲ. ಭಾರತದಲ್ಲಿ ದಲಿತ/ಆದಿವಾಸಿಗಳ ಸಂಖ್ಯೆ ೨೫೦ ಮಿಲಿಯನ್ ಇದ್ದರೆ ಅಮೆರಿಕಾದಲ್ಲಿರುವ ಕಪ್ಪು ಜನರ ಸಂಖ್ಯೆ ಕೇವಲ ೩೭ ಮಿಲಿಯನ್.

ಕಪ್ಪುಜನರ ಬಗ್ಗೆ ಭಾರತದಲ್ಲಿರುವ ಸಿದ್ಧಮಾದರಿಗಳಾದ ಕೊಳಗೇರಿಗಳಲ್ಲಿ ಜೀವಿಸುವವರು, ಒಂದು ಜೇಬಿನಲ್ಲಿ ಗನ್ ಇದ್ದರೆ ಮತ್ತೊಂದರಲ್ಲಿ ಡ್ರಗ್ ಇರುತ್ತದೆ ಎನ್ನೋದನ್ನು ಡಾ. ಬ್ರೌನ್‌ರ ಮಾದರಿ ಭಂಜಿಸುತ್ತದೆ. ಬೆಳೆಯುತ್ತಿರುವ ಈ ಕಪ್ಪು ಮಧ್ಯಮವರ್ಗದ ಜನರು ಗುಲಾಮಗಿರಿಯ ಕ್ರೌರ್ಯದಿಂದ ಬಿಡುಗಡೆ ಹೊಂದುತ್ತಿದ್ದಾರೆ. ಇದೇ ಪಾಠವನ್ನು ಭಾರತ ಕಲಿಯುತ್ತದೆಯೇ?

ಅಮೆರಿಕಾದ ಸಾಹಿತ್ಯ ರೂಪಕದಲ್ಲಿ ಶೇಕ್ಸ್‌ಪಿಯರ್‌ನ ಪ್ರಸಿದ್ಧ ನಾಟಕ 'ಒಥೆಲ್ಲೊ' ಬಿಳಿಯರು ಮತ್ತು ಕಪ್ಪು ಜನರ ನಡುವಿನ ತಾರತಮ್ಯವನ್ನು ಕುರಿತದ್ದು. ಆದ್ದರಿಂದ ಆ ನಾಟಕವನ್ನು ೧೯೩೦ರ ಸುಮಾರಿಗೆ ಅಮೆರಿಕಾದಲ್ಲಿ ಪ್ರದರ್ಶಿಸಿದಾಗ ಅದರಲ್ಲಿ ಕಪ್ಪು ವ್ಯಕ್ತಿಯನ್ನು ನಾಯಕ ಪಾತ್ರವಾಗಿ ಬಿಳಿಯ ನಾಯಕಿಯೊಡನೆ ತೋರಿಸಲಾಗಿತ್ತು. ಈ ಕಾರಣಕ್ಕಾಗಿ ಕೂಡಲೇ ಅದನ್ನು ಬಹಿಷ್ಕಾರಕ್ಕೊಳಪಡಿಸಲಾಯಿತು. ಹೀಗಿರುವಲ್ಲಿ ೧೯೪೩ರಲ್ಲಿ ಅದೇ ನಾಟಕ ಮತ್ತೊಮ್ಮೆ ಬ್ರಾಡ್‌ವೇನಲ್ಲಿ ಪ್ರದರ್ಶನಗೊಳ್ಳತೊಡಗಿತು. ಆಗ ಅದು ಅಲ್ಲಿ ಒಂದು ದಾಖಲೆಯನ್ನೇ ಸೃಷ್ಟಿಸಿತು.

ಜೂನ್ ೧೨, ೧೯೬೭ರವರೆಗೆ ಅಮೆರಿಕಾವು ಜನಾಂಗೀಯವಾಗಿ ತತ್ತರಿಸಿತ್ತು. ಸುಮಾರು ೧೬ ರಾಜ್ಯಗಳಲ್ಲಿ ಅಂತರ್ ಜನಾಂಗೀಯ ಮದುವೆಗಳು ಕಾನೂನು ಬಾಹಿರವಾಗಿದ್ದವು. ಆದರೆ ಇಂದು ಆ ಚಿತ್ರಣ ಬದಲಾಗಿದೆ.

ಯು.ಎಸ್. ಜನಗಣತಿಯ ಕೇಂದ್ರದ ವರದಿಯ ಪ್ರಕಾರ ೨೦೦೫ರಲ್ಲಿ ೪,೨೨,೦೦೦ ಮಂದಿ ದಂಪತಿಗಳು ಅಂತರ ಜನಾಂಗೀಯ ವಿವಾಹವಾಗಿದ್ದರು. ಅವರಲ್ಲಿ ಶೇ.೭೦ರಷ್ಟು ಮಂದಿ ಕಪ್ಪು ಜನಾಂಗದ ಗಂಡಸರಿದ್ದರು. ಇದಕ್ಕೆ ತದ್ವಿರುದ್ಧವಾಗಿ ಏಶಿಯನ್ನರ ಅಂತರ ಜನಾಂಗೀಯ ವಿವಾಹಗಳಲ್ಲಿ ಶೇ. ೭೫ರಷ್ಟು ಮಂದಿ ಬಿಳಿಯ ಗಂಡಸರಿದ್ದರು. ಅಂದರೆ ಅಮೆರಿಕಾದಲ್ಲಿ ಬಿಳಿಯ ಗಂಡಸರು ಏಶಿಯಾ ಹೆಂಗಸರನ್ನು ಬಯಸುತ್ತಾರೆ. ಆದರೆ ಅಮೆರಿಕಾದಲ್ಲಿರುವ ಬಿಳಿಯ ಹೆಂಗಸರು ಕಪ್ಪು ಜನಾಂಗೀಯ ಗಂಡಸರನ್ನು ಬಯಸುತ್ತಾರೆ.

ಈ ಅಂಕಿ ಅಂಶಗಳನ್ನು ಮೇಲಿನ ನಾಟಕದೊಡನಿಟ್ಟು ನೋಡಿದಲ್ಲಿ ಎಷ್ಟು ತೀವ್ರವಾಗಿ ಅಮೆರಿಕಾದಲ್ಲಿ ಜನಾಂಗೀಯ ಸಂಬಂಧಗಳು ಬದಲಾಗುತ್ತಿವೆ ಎನ್ನುವುದು ತಿಳಿಯುತ್ತದೆ. ೧೯೩೦ರ ವೇಳೆಯಲ್ಲಿ ಬಿಳಿಯ ಹೆಂಗಸು ಮತ್ತು ಕಪ್ಪು ಗಂಡಸರ ಸಂಬಂಧ ಅನಪೇಕ್ಷಣೆಯವಾಗಿತ್ತು! ಆದರೆ ಈಗ ಅದೇ ಕಪ್ಪು ಗಂಡಸು ಬಿಳಿಯ ಹೆಂಗಸಿನ ಬಗ್ಗೆ ತೀವ್ರವಾದ ಬಯಕೆಯನ್ನು ವ್ಯಕ್ತಪಡಿಸುತ್ತಿದ್ದಾನೆ.

ಅಮೆರಿಕಾದಲ್ಲೀಗ ಕಪ್ಪು ಮಧ್ಯಮಜನರ ವರ್ಗ ತೀವ್ರಾವಾಗಿ ಬೆಳೆಯುತ್ತಿದೆ. ಯಶಸ್ವಿಯಾದ ಕಪ್ಪು ಗಂಡಸರನ್ನು ಬಿಳಿಯ ಹೆಂಗಸರು ಭೇಟಿಯಾಡುತ್ತಿದ್ದಾರೆ. ನನ್ನ ಉಪನ್ಯಾಸದ ಸಂದರ್ಭದಲ್ಲಿ ನಾನು ಎಲ್ಲಾ ರೀತಿಯ ಬುದ್ಧಿ ಜೀವಿಗಳೊಂದಿಗೆ ಬೆರೆಯುವ ಅವಕಾಶ

ಒಂದು ಕಪ್ಪು ಮನೆ

ಜನಾಂಗಕ್ಕೆ ದ್ರೋಹ

ಬದ್ಧಗಿತ್ತು.

ಅನೇಕ ಮಂದಿ ಕಪ್ಪು ಬುದ್ಧಿಜೀವಿ ಗಂಡಸರು ಮತ್ತು ಮಹಿಳೆಯರು ಯಶಸ್ವಿ ಕಪ್ಪು ಗಂಡಸರನ್ನು ಬಿಳಿಯ ಮಹಿಳೆಯರು ಕದಿಯುತ್ತಿದ್ದಾರೆಂದು ಆತಂಕ ವ್ಯಕ್ತಪಡಿಸುತ್ತಿದ್ದರು. ಇದೇ ರೀತಿಯ ಸಂಗತಿ ಭಾರತದಲ್ಲೂ ಗಮನಿಸಬಹುದು. ಅನೇಕ ಮಂದಿ ಯಶಸ್ವಿ ಗಂಡಸರು ಬ್ರಾಹ್ಮಣ ಹೆಂಗಸರನ್ನೇ ಬಯಸುತ್ತಾರೆ. ಇದರ ಬಗ್ಗೆ ದಲಿತರೂ ಸಹ ಮೇಲಿನಂತೆ ಬ್ರಾಹ್ಮಣ ಮಹಿಳೆಯರು ಯಶಸ್ವಿದಲಿತ ಗಂಡಸರನ್ನು ಅಪಹರಿಸುತ್ತಿದ್ದಾರೆನ್ನಲಾಗುತ್ತಿದೆ.

ಈ ಆತಂಕದ ಬಗ್ಗೆ ಗಂಭೀರ ಚಿಂತನೆ ನಡೆಯಬೇಕಾಗಿದೆ. ಬಿಳಿಯ ಹೆಂಗಸರು ನಿರುದ್ಯೋಗಿ ಕಪ್ಪು ಗಂಡಸರನ್ನೇನೂ ಮದುವೆಯಾಗುವುದಿಲ್ಲ. ಭಾರತದಲ್ಲೂ ಇದೇ ರೀತಿಯ ಸಮಸ್ಯೆ ಇದೆ. ದಲಿತ ಸಮಾಜ ಅನೇಕ ಯಶಸ್ವಿ ದಲಿತ ಗಂಡಸರನ್ನು ಕಳೆದುಕೊಳ್ಳುತ್ತಿದೆ.

ಆದರೆ, ಇದು ಭವಿಷ್ಯದಲ್ಲಿ ಒಡ್ಡುವ ಸಮಸ್ಯೆ ಎಂಥ ಸ್ವರೂಪದ್ದು? ಕಪ್ಪುಜನರಾಗಲಿ/ದಲಿತರಾಗಲಿ ಸಾಧ್ಯವಾದಷ್ಟು ಬೇಗ ಜನಾಂಗೀಯವಾಗಿರುವ ಪ್ರತ್ಯೇಕತೆ ತೊಲಗಬೇಕೆಂದೇ ಆಶಿಸುತ್ತಾರೆ.

ಈ ಪ್ರತ್ಯೇಕತೆಯ ಕ್ರೌರ್ಯದ ಮೊದಲ ಬಲಿಪಶುಗಳೆಂದರೆ ಕಪ್ಪುಜನರು/ದಲಿತರೇ ಆಗಿದ್ದಾರೆ. ಅಮೆರಿಕಾ ಮತ್ತು ಭಾರತದಲ್ಲಿ ಇದರ ವಿರುದ್ಧ ಕಾನೂನು ಸಮರ, ರಾಜ್ಯ ಮತ್ತು ಕೇಂದ್ರಗಳೆರಡರ ಕಾರ್ಯಕ್ರಮಗಳು, ಸಾಮಾಜಿಕ ಚಳುವಳಿಗಳು ನಡೆದರೂ ಸಹ ಇನ್ನೂ ಆ ಕ್ರೌರ್ಯ ಮುಂದುವರೆದಿದೆ. ಆದ್ದರಿಂದ ಶಿಕ್ಷಣ ಮತ್ತು ಆರ್ಥಿಕ ತಂತ್ರಗಳು ಮತ್ತೊಮ್ಮೆ ಸಮಾಜವನ್ನು ವಿಂಗಡಿಸಲು ಅವಕಾಶ ನೀಡಬಾರದಲ್ಲವೇ?

೧೦ ಮಿಲಿಯನ್ ಬಿಳಿ ಹೆಂಗಸರು ಕಪ್ಪುಜನರ ಕುಟುಂಬಗಳಿಗೆ ಹೋದಲ್ಲಿ ಏನಾಗುತ್ತದೆ? ಬಿಳಿಯ ಸಮಾಜ ಹಿಂದಿನ ಗುಲಾಮರು, ಮೆರಿಟ್‌ಇಲ್ಲದವರು, ಸಂಬಂಧಕ್ಕೆ ಅಯೋಗ್ಯರೆಂದು ಭಾವಿಸುತ್ತದೆಯೇ? ೧೦ ಮಿಲಿಯನ್ ಬ್ರಾಹ್ಮಣ ಹೆಂಗಸರು ದಲಿತರ ಕುಟುಂಬಗಳಿಗೆ ಹೋದಲ್ಲಿ ಏನಾಗುತ್ತದೆ? ಬ್ರಾಹ್ಮಣ ಸಮಾಜ ಹಿಂದಿನ ಅಸ್ಪೃಶ್ಯರು, ಮೆರಿಟ್ ಇಲ್ಲದವರು, ಸಂಬಂಧಕ್ಕೆ ಅಯೋಗ್ಯರೆಂದು ಭಾವಿಸುತ್ತದೆಯೇ? ಬಿಳಿಯ ಹೆಂಗಸರೇ ಕಪ್ಪು ಗಂಡಸರನ್ನು ಮದುವೆಯಾಗುತ್ತಿರುವಾಗ ಕಪ್ಪು ಜನರ ಬಗ್ಗೆ ಅಂಥ ನಕಾರಾತ್ಮಕ ಭಾವನೆ ಸರಿಯಾದುದೇ? ಹಾಗೆಯೇ ಜಾತಿ ಹಿಂದೂ ಸಮಾಜ ದಲಿತರ ಬಗ್ಗೆ ನಕಾರಾತ್ಮಕವಾಗಿ ಯೋಚಿಸಬಹುದೇ?

ಭಾರತವೇನಾದರೂ ಇಂಥ ಪ್ರತ್ಯೇಕತೆಯಿಂದ ಹೊರ ಬರಬೇಕಾದರೆ ಅಂತರ ಜಾತಿಯ ವಿವಾಹಗಳು ಇನ್ನಷ್ಟು ಜನಪ್ರಿಯವಾಗಬೇಕು. ಮಿಲಿಯಗಟ್ಟಲೆ ಕಪ್ಪುಜನ ಯಶಸ್ವಿಯಾಗುತ್ತಿದ್ದಾರೆ. ಸಾವಿರಾರು ಮಂದಿ ಬಿಳಿಯರು ತಮ್ಮ ಜನಾಂಗೀಯತೆಯನ್ನು ಮೀರುತ್ತಿದ್ದಾರೆ. ಹಾಗೆಯೇ ಮಿಲಿಯಗಟ್ಟಲೆ ದಲಿತರು ಸಾಧನೆಯ ಹಾದಿಯಲ್ಲಿದ್ದರೆ ಸಾವಿರಾರು ಮಂದಿ ದಲಿತೇತರರು ಮನುಶಾಸನವನ್ನು ಧಿಕ್ಕರಿಸುತ್ತಿದ್ದಾರೆ. □

ಮಹಾದೇವಿ

ಹಣ್ಣ ಮೆಲುವ ಬಾಯಿಗಳಿಗೆ ಸಿಪ್ಪೆಯಾಗಿ
ಬೊಮ್ಮಯ್ಯನ ಕಿನ್ನರಿಗೆ ಬೂದಿಯಾಗಿ
ಹೆಂಗೆಳೆಯರಿಗೆ ಮೂರೂ ಬಿಟ್ಟ ದಿಗಂಬರಿ
ಚೆನ್ನನ ನೆನಕೆಯಲಿ ಕನ್ಯೆಯಾಗಿ
ಸೋಂಕಿನಲಿ ಕೆಂದಾವರೆಯಾಗರಳಿ
ಅಪ್ಪುಗೆಯಲಿ ಜೀವಝರಿ ಹರಿದು
ಬೆಸುಗೆಯಲಿ ಕಪ್ಪುರಗಿರಿಯ
ಬೆಳಗು!

ಡಾ॥ ಲತಾ ಮೈಸೂರು

'ಎರಡು ರಾಷ್ಟ್ರ ಸಿದ್ಧಾಂತದಲ್ಲಿ...

(೩೯ನೇ ಪುಟದಿಂದ)

ಸಾಧ್ಯವಾಗದಂತಹ ಸಾಮ್ಯತೆಗಳಲು ಲಕ್ಷಣವಿ ರುವ ವರ್ತನೆಗಳಿವೆ, ಆಚರಣೆಗಳಿವೆ, ಸಂಪ್ರದಾಯ ಗಳಿವೆ. ಹಾಗೆಯೇ ಇಬ್ಬರಲ್ಲೂ ಸಾಮ್ಯತೆಯಿರದ ಮತ ಧಾರ್ಮಿಕ ಸಂಪ್ರದಾಯಗಳಿವೆ. ಈ ಎರಡು ಸಂಗತಿಗಳಲ್ಲಿ ಯಾವುದಕ್ಕೆ ನಾವು ಪ್ರಾಮುಖ್ಯತೆ ನೀಡುತ್ತೇವೆ ಎಂಬುದೇ ನಮ್ಮ ಮುಂದಿರುವ ಪ್ರಶ್ನೆ. ಸಾಮ್ಯತೆಗಳು ಮುಖ್ಯವೆಂದು ಭಾವಿಸಿದರೆ ಎರಡು ರಾಷ್ಟ್ರೀಯತೆಗಳ ಅಗತ್ಯ ಭಾರತಕ್ಕಿರುವುದಿಲ್ಲ. ಭಿನ್ನತೆಯ ಸಂಗತಿಗಳು ನಮಗೆ ಮುಖ್ಯವಾದರೆ ಎರಡು ರಾಷ್ಟ್ರೀಯತೆಗಳ ಅಸ್ತಿತ್ವವನ್ನು ಅದು ಅನಿವಾರ್ಯಗೊಳಿಸುತ್ತದೆ."[೩೭]

ಸಾವರ್ಕರ್ ಮತ್ತು ಜಿನ್ನಾ ಪ್ರತಿನಿಧಿಸಿದ ಸಿದ್ಧಾಂತಗಳಿಗಿಂತ ಭಿನ್ನವಾದ ಸೈದ್ಧಾಂತಿಕ ನೆಲೆಯಲ್ಲಿ ನಿಲ್ಲುವ ಅಂಬೇಡ್ಕರ್ ಹಿಂದು ಮತ್ತು ಮುಸ್ಲಿಮರು ಎಂಬ ಎರಡು-ರಾಷ್ಟ್ರದ ವಾದವನ್ನು ತಳ್ಳಿಹಾಕುತ್ತಾರೆ ಎಂಬುದು ಮೇಲಿನ ಅಂಶಗಳಿಂದ ಸಾಬೀತಾಗುತ್ತದೆ. ಸಾಂಸ್ಕೃತಿಕವಾದ ಅಥವಾ ಜನಾಂಗೀಯವಾದ ಸಿದ್ಧಾಂತವನ್ನು ಆಧರಿಸಿದ ರಾಷ್ಟ್ರೀಯತೆಗೆ ಅವರ ಸ್ಪಷ್ಟ ವಿರೋಧವಿತ್ತು. ದೇಶದ ಜನತೆ ತಾರತಮ್ಯ ತೊರೆದು, ಆತಂಕರಹಿತರಾಗಿ, ಪರಸ್ಪರ ವಿಶ್ವಾಸ ಹಾಗೂ ಸಹಭಾಗಿತ್ವದಿಂದ ಬದುಕು ಸಾಗಿಸುವಂತಾಗಬೇಕು. ಅಂತಹ 'ಸಾಂಘಿಕ ಭಾವನೆ' ಮತ್ತು 'ಬಾಂಧವ್ಯ ಪ್ರಜ್ಞೆ'ಯನ್ನು ಬೆಳೆಸುವ ರಾಷ್ಟ್ರೀಯತೆಯ ಒತ್ತಾಸೆ ಅವರದಾಗಿತ್ತು. ಜನಾಂಗ, ಜಾತಿ, ಮತ, ಪಂಥ, ಭಾಷೆ ಮತ್ತು ಸಂಸ್ಕೃತಿಯ ವೈವಿಧ್ಯತೆಗಳನ್ನು ಮೀರಿದ ಸಮಗ್ರತೆಯಲ್ಲಿ ಇಂತಹ ಪ್ರಜ್ಞೆಯು ಜನತೆಯ ಬದುಕನ್ನು ಆವರಿಸಿಕೊಳ್ಳಬೇಕು. ಮುಸ್ಲಿಮರಾದಿಯಾಗಿ ದಲಿತರನ್ನೊಳಗೊಂಡಂತೆ ಹಲವಾರು ಅಲ್ಪಸಂಖ್ಯಾತ ಗುಂಪುಗಳು ತಮ್ಮದೇ ರಾಷ್ಟ್ರೀಯತೆಯೂ ಸೇರಿದಂತೆ ಯಾವ ರಾಷ್ಟ್ರೀಯತೆಯೂ ಇದುವರೆಗೆ ಮೂರ್ತರೂಪ ಪಡೆಯುವುದಾಗಿಲ್ಲ. ಬಹುಸಂಖ್ಯಾತ ಸಮುದಾಯದ ಧೋರಣೆಯೇ ಇಂತಹ ರಾಷ್ಟ್ರೀಯತೆಗಳ ಉಗಮಕ್ಕೆ ಕಾರಣವಾಗುವಂತಿದ್ದು ಈ ಬೆಳವಣಿಗೆಗೆ ಬಹುಸಂಖ್ಯಾತ ಸಮುದಾಯವೇ ಹೊಣೆಗಾರನಾಗಬೇಕಾಗುತ್ತದೆ ಎನ್ನುವುದು ಅವರ ಅಭಿಪ್ರಾಯವಾಗಿತ್ತು. ಸಾಮ್ರಾಜ್ಯಶಾಹಿಗಳ ಹಿರಿಯಣ್ಣನ ಧೋರಣೆಯನ್ನು ಬಹುಸಂಖ್ಯಾತ ಸಮು ದಾಯ ಅನುಸರಿಸಿದರೆ ಇಂತಹ ಬೆಳವಣಿಗೆಗೆ ಪ್ರಚೋದಕ ವಾತಾವರಣ ನಿರ್ಮಿಸಿದಂತಾಗುವುದಷ್ಟೇ ಅಲ್ಲದೆ ಹಲವು ರಾಷ್ಟ್ರೀಯತೆಗಳು ಚಿಗುರಲು ಕಾರಣವಾಗುತ್ತದೆ.

ಹಿಂದು ಆಳುವ ವರ್ಗಗಳು ಮುಸ್ಲಿಮರನ್ನು ನಿರ್ದಯವಾಗಿ ನಡೆಸಿಕೊಂಡು 'ಫಾಸಿಗೊಂಡ ಮನಸ್ಥಿತಿ'ಯನ್ನುಂಟು ಮಾಡಿದ ಪರಿಣಾಮವಾಗಿಯೇ 'ಪ್ರತ್ಯೇಕ ರಾಷ್ಟ್ರವಾಗಿ ಬದುಕಬೇಕೆಂಬ ಇಚ್ಛೆ'ಯು ಅವರಲ್ಲಿ ಮೊಳೆಯಲು ಕಾರಣವಾಯಿತು ಎಂಬುದಾಗಿ ಅಂಬೇಡ್ಕರ್ ಆರೋಪಿಸುತ್ತಾರೆ.

(ಸೌಜನ್ಯ: ಡಾ॥ ಆನಂದ್ ತೇಲ್‌ತುಂಬ್ಡೆ ಅವರ 'ಅಂಬೇಡ್ಕರ್ ಮತ್ತು ಮುಸ್ಲಿಮರು' ಕೃತಿ) □

ಬುದ್ಧಾಯಣ

೨೯

ಸಿಗಳನೇ, ನಮಿಸುವುದೇ ಧರ್ಮವಲ್ಲ!

'ಪೂಜ್ಯರೇ ಜೂಜಿನ ಚಟಕ್ಕೆ ಬಲಿಯಾದರೆ ಆಗುವ ಅಪಾಯಗಳೇನು?' 'ಎಲೈ ಮಿತ್ರನೇ ಗೆದ್ದವನು ಸೋತವರ ದ್ವೇಷವನ್ನು ಗಳಿಸುತ್ತಾನೆ. ಸೋತರೆ ತಾನು ಕಳೆದುಕೊಂಡ ಹಣದ ಬಗ್ಗೆ ದುಃಖಿಸುತ್ತಾನೆ. ಆ ಮೂಲಕ ಅವನ ದೈಹಿಕ ಮತ್ತು ಮಾನಸಿಕ ಶಕ್ತಿ ವ್ಯಯವಾಗುತ್ತದೆ. ನ್ಯಾಯ ಸ್ಥಾನಗಳಲ್ಲಿ ಅಂತಹ ಜೂಜುಕೋರನ ಮಾತಿಗೆ ಬೆಲೆ ಇಲ್ಲ. ಸ್ನೇಹಿತರಿಂದಲೂ, ಅಧಿಕಾರಿಗಳಿಂದಲೂ ತಿರಸ್ಕೃತನಾಗುತ್ತಾನೆ. ಹೆಣ್ಣು ಕೊಡುವವರು ಅಥವಾ ತೆಗೆದುಕೊಳ್ಳುವವರು ಅವನ ಬಳಿ ಹೋಗುವುದಿಲ್ಲ. ಕಡೆಗೆ ತನ್ನ ಹೆಂಡತಿಯಿಂದಲೂ ತಿರಸ್ಕೃತನಾಗುತ್ತಾನೆ ಮತ್ತು ಕಳೆದುಕೊಳ್ಳುತ್ತಾನೆ.'

ಸಿ. ಎಚ್. ರಾಜಶೇಖರ್

ಒಮ್ಮೆ ಬುದ್ಧನು ರಾಜಗೃಹದ ವೇಣುವನದಲ್ಲಿ ತಂಗಿದ್ದ ಒಂದು ದಿನ ಬೆಳಿಗ್ಗೆ ಎಂದಿನಂತೆ ತನ್ನ ಚೀವರವ ಧರಿಸಿ ಕೈಯಲ್ಲಿ ಭಿಕ್ಷಾ ಪಾತ್ರೆಯನ್ನು ಹಿಡಿದು ರಾಜಗೃಹದ ಕಡೆ ನೆಡೆದು ಬರುತ್ತಿದ್ದ. ಆಗ ಒಬ್ಬ ಗೃಹಸ್ಥನ ಮಗನಾದ ಸಿಗಳನೆಂಬ ಕಿರಿಯ ವಯಸ್ಸಿನ ಯುವಕ ನದಿಯ ದಡದಲ್ಲಿ ನಿಂತಿದ್ದ. ಅವನು ಆಗ ತಾನೆ. ಸ್ನಾನ ಮಾಡಿದ್ದರಿಂದ ಅವನ ಮೈ ಬಟ್ಟೆ ಮತ್ತು ತಲೆ ಕೂದಲು ಒದ್ದೆಯಾಗಿತ್ತು. ಜೋಡಿಸಿದ ಅವನ ಕೈಗಳನ್ನು ಮೇಲಕ್ಕೆತ್ತಿ ಭೂಮಿ, ಆಕಾಶ, ಪಾತಾಳ, ಮತ್ತು ಪೂರ್ವ, ದಕ್ಷಿಣ, ಪಶ್ಚಿಮ ಹಾಗೂ ಉತ್ತರ ದಿಕ್ಕುಗಳಿಗೆ ನಮಿಸುತ್ತಿದ್ದ.

ಈ ದೃಶ್ಯವನ್ನು ಕಂಡ ಬುದ್ಧನು ಸಿಗಳನನ್ನು ಉದ್ದೇಶಿಸಿ;

'ಎಲೈ ಮಿತ್ರ, ನಿಮ್ಮ ಹೆಸರೇನು?' ಎಂದು ಕೇಳಿದ.

'ಪೂಜ್ಯರೇ, ನನ್ನ ಹೆಸರು ಸಿಗಳನೆಂದು'

'ಎಲೈ ಸಿಗಳನೇ, ನೀನೇಕೆ ಭೂಮಿ ಮತ್ತು ಆಕಾಸದ ದಿಕ್ಕುಗಳನ್ನು ಪೂಜಿಸುತ್ತಿರುವೆ?'

'ಪೂಜ್ಯರೇ, ನನ್ನ ತಂದೆ ಸಾಯುವ ಮುನ್ನ, ಎಲೈ ಮಗನೇ ನೀನು ನಿತ್ಯವು ತಪ್ಪದೇ ಭೂ ವಲಯವನ್ನು ಮತ್ತು ಆಕಾಸ ವಲಯವನ್ನು ಪೂಜಿಸು, ಅದರಿಂದ ನಿನಗೆ ಧರ್ಮ ಪ್ರಾಪ್ತಿ ಆಗುತ್ತದೆ ಎಂದು ಹೇಳಿದ್ದಾರೆ. ಅವರ ಆತ್ಮಕ್ಕೆ ಶಾಂತಿ ಕೊಡುವ ಸಲುವಾಗಿ ಮತ್ತು ಪ್ರಸ್ತುತದ ನನ್ನ ಬದುಕಿನ ಮುಕ್ತಿಗಾಗಿ ಹೀಗೆ ಪೂಜಿಸುತ್ತಿದ್ದೇನೆ'

'ಎಲೈ ಮಿತ್ರನೇ, ಇದು ಹೇಗೆ ಪ್ರಾಪಂಚಿಕ ನಿಜ ಧರ್ಮವಾಗಲು ಸಾಧ್ಯ!!'

'ಪೂಜ್ಯರೇ, ಇದಲ್ಲದೆ ಮನುಷ್ಯ ಧರ್ಮ ಮತ್ತೇನಿರಲು ಸಾಧ್ಯ?'

'ಎಲೈ ಮಿತ್ರನೇ, ಯಾವುದೇ ಧರ್ಮವು ಮಾನವ ಧರ್ಮವಾಗಬೇಕಾದರೆ ಅದು ಮನುಷ್ಯನ ದುರ್ನಡತೆಯನ್ನು ತ್ಯಜಿಸುವಂತೆ ಬೋಧಿಸಬೇಕು. ಅದು ಬಿಟ್ಟು ಬರಿಯೇ ವಂದಿಸುವುದು ಹೇಗೆ ಧರ್ಮವಾದೀತು?'

'ಪೂಜ್ಯರೇ, ಆ ದುರ್ನಡತೆಗಳು ಯಾವುವು?'

'ಎಲೈ ಮಿತ್ರನೇ, ಜೀವಹಾನಿ, ದಾನವಲ್ಲದ ವಸ್ತುಗಳನ್ನು ತೆಗೆದುಕೊಳ್ಳುವುದು. ವೈಭಿಚಾರ ಮತ್ತು ಸುಳ್ಳು ಹೇಳುವುದು'

'ಪೂಜ್ಯರೇ, ಈ ದುಷ್ಕಾರ್ಯಗಳ ಮೂಲ ಕಾರಣವೇನು?'

'ಎಲೈ ಮಿತ್ರನೇ, ಪಕ್ಷಪಾತ, ದ್ವೇಷ, ಮೂರ್ಖತನ ಮತ್ತು ಭಯ'

'ಪೂಜ್ಯರೇ, ಮನುಷ್ಯ ಧರ್ಮವೆಂದರೆ ಏನು? ಅದರ ಸ್ವರೂಪಗಳೇನು?'

'ಎಲೈ ಮಿತ್ರನೇ, ಯಾವುದೇ ಧರ್ಮವು ಮನುಷ್ಯ ಸಂಪತ್ತನ್ನು ಗಳಿಸಲು ಮಾರ್ಗದರ್ಶಕವಾಗಬೇಕು. ಗಳಿಸಿದ ಸಂಪತ್ತನ್ನು ಮಾದಕ ಪಾನಿಯಗಳ ಚಟ. ಆ ವೇಳೆಯಲ್ಲಿ ಬೀದಿ ಮತ್ತು ಜಾತ್ರೆಯಲ್ಲಿ ಅಲೆಯುವುದು, ಜೂಜಾಟ, ದುಷ್ಟರ ಸಂಘ, ಸೋಮಾರಿತನವನ್ನು ಮೈಗೂಡಿಸಿಕೊಳ್ಳುವುದನ್ನು ಖಂಡಿಸಬೇಕು ಮತ್ತು ಅವುಗಳಿಂದ ದೂರವಿರುವಂತೆ ತಿಳಿ ಹೇಳಬೇಕು.'

'ಪೂಜ್ಯರೇ, ಮಾದಕ ಪಾನೀಯ ಚಟದಿಂದ ಆಗುವ ನಷ್ಟವೇನು?'

'ಎಲೈ ಮಿತ್ರನೇ, ಸಂಪತ್ತಿನ ನಷ್ಟ, ಜಗಳ, ಅನಾರೋಗ್ಯ, ಸಚ್ಚರಿತ್ರ್ಯದಿಂದ ವಂಚನೆ ಅಸಭ್ಯ ವರ್ತನೆ ಮತ್ತು ವಿವೇಕ ಶೂನ್ಯತೆ'

'ಪೂಜ್ಯರೇ ಆ ವೇಳೆಯಲ್ಲಿ ಬೀದಿ ಸುತ್ತುವುದರಿಂದ ಆಗುವ ನಷ್ಟವೇನು?'

'ಎಲೈ ಮಿತ್ರನೇ ಅಂತವನಿಗಾಗಲಿ, ಅವನ ಹೆಂಡತಿ ಮಕ್ಕಳಿಗಾಗಲಿ, ಅವನು ಗಳಿಸಿದ ಆಸ್ತಿಪಾಸ್ತಿಗಾಗಲಿ ರಕ್ಷಣೆ ಇರುವುದಿಲ್ಲ. ಸಂಶಯ ಮತ್ತು ಸಲ್ಲದ ಅಪರಾಧಿಗಳಗೆ ಗುರಿಯಾಗುತ್ತನೆ'

'ಪೂಜ್ಯರೇ, ಜಾತ್ರೆಗಳಿಗೆ ಪದೇ ಪದೇ ಹೋಗುವುದರಿಂದ ಆಗುವ ಅಪಾಯಗಳೇನು?'

'ಎಲೈ ಮಿತ್ರನೇ, ಗೃಹಸ್ಥರು ಆಮೀಷಗಳಿಗೆ ಹೀಗೆ ಒಳಗಾಗುತ್ತಾರೆ; ಈಗ ನೃತ್ಯ ಎಲ್ಲಿ ನೆಡೆಯುತ್ತಿದೆ? ಈಗ ಎಲ್ಲಿ ಗಾಯನ ನಡೆಯುತ್ತಿದೆ? ಸಂಗೀತವೆಲ್ಲಿ? ಪಠಣವೆಲ್ಲಿ? ತಾಳಗಳಲ್ಲಿ? ತಮಟೆಗಳಲ್ಲಿ? ಎಂದು ಸದಾ ಚಿಂತಿಸುತ್ತಾ ಅವುಗಳ ಬೆನ್ನು ಹತ್ತಿ ಅವುಗಳಿಂದ ದಾಸನಾಗುತ್ತಾನೆ'

'ಪೂಜ್ಯರೇ ಜೂಜಿನ ಚಟಕ್ಕೆ ಬಲಿಯಾದರೆ ಆಗುವ ಅಪಾಯಗಳೇನು?'

'ಎಲೈ ಮಿತ್ರನೇ ಗೆದ್ದವನು ಸೋತವರ ದ್ವೇಷವನ್ನು ಗಳಿಸು

ತ್ತಾನೆ. ಸೋತರೆ ತಾನು ಕಳೆದುಕೊಂಡ ಹಣದ ಬಗ್ಗೆ ದುಃಖಿಸುತ್ತಾನೆ. ಆ ಮೂಲಕ ಅವನ ದೈಹಿಕ ಮತ್ತು ಮಾನಸಿಕ ಶಕ್ತಿ ವ್ಯಯವಾಗುತ್ತದೆ. ನ್ಯಾಯ ಸ್ಥಾನಗಳಲ್ಲಿ ಅಂತಹ ಜೂಜುಕೋರುವ ಮಾತಿಗೆ ಬೆಲೆ ಇಲ್ಲ. ಸ್ನೇಹಿತ ರಿಂದಲೂ. ಅಧಿಕಾರಿಗಳಿಂದಲೂ ತಿರಸ್ಕೃತನಾಗುತ್ತಾನೆ. ಹೆಣ್ಣು ಕೊಡುವವರು ಅಥವಾ ತೆಗೆದುಕೊಳ್ಳುವವರು ಅವನ ಬಳಿ ಹೋಗುವುದಿಲ್ಲ. ಕಡೆಗೆ ತನ್ನ ಹೆಂಡತಿ ಯಿಂದಲೂ ತಿರಸ್ಕೃತನಾಗುತ್ತಾನೆ. ಮತ್ತು ಕಳೆದು ಕೊಳ್ಳುತ್ತಾನೆ.'

'ಪೂಜ್ಯರೇ, ದುಷ್ಟರ ಸಹವಾಸದಿಂದ ಆಗುವ ಕೇಡುಗಳು ಏನು?'

'ಎಲೈ ಮಿತ್ರನೇ, ಎಂತವನಿಗೆ ಎಲ್ಲ ಜೂಜುಕೋ ರರು. ವ್ಯಭಿಚಾರಿಗಳು. ಕುಡುಕರು. ಕಪಟಿಗಳು. ವಂಚ ಕರು ಮತ್ತು ಕ್ರೂರಿಗಳು ಅವನ ಸ್ನೇಹಿತರಾಗಿರುತ್ತಾರೆ. ಸಂಗಡಿಗರಾಗಿರುತ್ತಾರೆ. ಅಂದರೆ ಅದರ ಪರಿಣಾಮ ಊಹಾತೀತ'

'ಪೂಜ್ಯರೇ, ಸೋಮಾರಿತನದಿಂದ ಆಗುವ ಕೇಡು ಗಳೇನು?'

'ಎಲೈ ಮಿತ್ರನೇ ಈಗ ಚಳಿ ಇದೆ. ಈಗ ಸೆಕೆ ಇದೆ. ಇಷ್ಟು ಮುಂಚೆಯೇ ಏಕೆ? ಇದು ಬಹಳ ತಡವಾಯಿತು! ಈಗ ನಾನು ಹಸಿದಿದ್ದೇನೆ ಮತ್ತು ಈಗ ನನಗೆ ಹೊಟ್ಟೆ ತುಂಬಿದೆ. ಎಂದು ಸಮಯಕ್ಕೆ ಸರಿಯಾಗಿ ನಿರ್ವಹಿಸಬೇ ಕಾದ ಯಾವ ಕರ್ತವ್ಯವನ್ನು ನಿರ್ವಹಿಸುವುದಿಲ್ಲ. ಹೀಗೆ ಅವನ ಕರ್ತವ್ಯ ಲೋಪದಿಂದ ಅವನು ಮಾಡಬೇಕಾದ ಎಲ್ಲ ಕೆಲಸವೂ ಹಾಗೆ ಉಳಿದು ಬಿಡುತ್ತದೆ. ಈ ಕಾರಣ ಗಳಿಗಾಗಿ ಆತನಿಗೆ ಹೊಸ ಸಂಪತ್ತು ಕೈ ಸೇರುವುದಿಲ್ಲ. ಪ್ರತಿಫಲವಾಗಿ ಇರುವ ಸಂಪತ್ತೆಲ್ಲ ದಿನದಿಂದ ದಿನಕ್ಕೆ ಕ್ಷೀಣಿಸುತ್ತಾ ಕಡೆಗೆ ಅವನು ಮತ್ತು ಅವನನ್ನು ನಂಬಿದ ವರು ಬೀದಿಗೆ ಬೀಳುತ್ತಾರೆ.'

'ಎಲೈ ಪೂಜ್ಯರೇ, ಹಾಗಾದರೆ ನಮ್ಮ ನಿಜವಾದ ಸ್ನೇಹಿತರು ಯಾರು? ಹೇಗೆ ಇರುತ್ತಾರೆ? ಹೇಗೆ ಇರ ಬೇಕು?'

'ಎಲೈ ಮಿತ್ರನೇ, ಸ್ನೇಹಿತರಲ್ಲಿ ನಾಲ್ಕು ವರ್ಗಗಳಿವೆ. ಅವುಗಳೆಂದರೆ; ದೋಚಿಕೊಳ್ಳುವ ಪ್ರವೃತ್ತಿ ಉಳ್ಳವನು, ಏನೂ ಕೆಲಸ ಮಾಡದೆ ಬರಿ ಮಾತನಾಡುವವನು ಹೊಗಳು ಭಟ್ಟ ಮತ್ತು ದುಂದುಗಾರ'

'ಪೂಜ್ಯರೇ, ದೋಚಿಕೊಳ್ಳುವವನ ಕೇಡು ತಿಳಿಸಿ'

'ಎಲೈ ಮಿತ್ರನೇ, ಅವನು ಕೊಡುವುದು ಕಡಿಮೆ, ಕೇಳುವುದು ಹೆಚ್ಚು ಅವನು ತನ್ನ ಕರ್ತವ್ಯವನ್ನು ಕರ್ತವ್ಯ ವೆಂದು ಪಾಲಿಸುವುದಿಲ್ಲ. ಭಯದಿಂದ ಅಷ್ಟೇ ಕರ್ತವ್ಯ ನಿರ್ವಹಿಸುವ ಅವನಿಗೆ ತನ್ನ ಹಿತದಲ್ಲೇ ಪೂರ್ಣ ಆಸಕ್ತಿ'

'ಪೂಜ್ಯರೇ, ಬರೀ ಮಾತಿನ ಗೆಳೆಯನ ಕೇಡನ್ನು ವಿವರಿಸಿ'

'ಎಲೈ ಮಿತ್ರನೇ, ಅವನು ವರ್ತಮಾನ ಕಾಲಕ್ಕೆ ಸಲ್ಲುವುದಿಲ್ಲ. ಭೂತಕಾಲಕ್ಕೆ ಸಂಬಂಧಿಸಿದಂತೆ ಗೆಳೆತನ ಮಾಡುತ್ತಾನೆ. ಟೊಳ್ಳು ಭರವಸೆಗಳಿಂದ ನಿನ್ನ ಒಲುಮೆ ಯನ್ನು ಸಂಪಾದಿಸಲು ಪ್ರಯತ್ನಿಸುತ್ತಾನೆ. ಆದರೆ ಅವನ ಸತ್ವಪರೀಕ್ಷೆಯ ಕಾಲ ಬಂದಾಗ ಅಸಮರ್ಥನಾಗುತ್ತಾನೆ ಅಥವಾ ಕಣ್ಮರೆಯಾಗುತ್ತಾನೆ.'

'ಪೂಜ್ಯರೇ, ಹೊಗಳು ಭಟ್ಟನ ಗೆಳೆತನದ ಪರಿಣಾ ಮವೇನು?'

ಎಲೈ ಮಿತ್ರನೇ, ಅವನು ದುಷ್ಟ ಕಾರ್ಯಗಳನ್ನು ಮಾಡಲು ಒಪ್ಪಿಗೆ ಕೊಡುತ್ತಾನೆ. ಸತ್ಕಾರ್ಯಗಳನ್ನು ಮಾಡಲು ಒಪ್ಪಿಗೆ ಕೊಡಲಾರ. ಸದಾ ನಿನ್ನ ಮುಖಸ್ತುತಿ ಮಾಡುತ್ತಾನೆ. ಆದರೆ ನಿಜಕ್ಕೂ ಬೇರೆಯವರ ಎದುರು ನಿನ್ನನ್ನು ತೆಗಳುತ್ತಾನೆ'

'ಎಲೈ ಮಿತ್ರನೇ ಆ ವೇಳೆಯಲ್ಲಿ ನೀನು ಬೀದಿಗಳಲ್ಲಿ ಸುತ್ತುವಾಗ ಜಾತ್ರೆಯಲ್ಲಿ ಅಲೆಯುವಾಗ ನಿನ್ನ ಜೊತೆಗಿರು ತ್ತಾನೆ. ನೀನು ಆಮಿಷಗಳಿಗೆ ಬಲಿಯಾದಾಗ, ಜೂಜಿನ ಮೋಹಕ್ಕೆ ಒಳಗಾದಾಗ ನಿನ್ನ ಜೊತೆಗಿರುತ್ತಾನೆ. ನಿನ್ನ ಸಂಪತ್ತಿನ ನಾಶಕ್ಕೆ ಪಾಲುದಾರನಾಗುತ್ತಾನೆ.'

'ಪೂಜ್ಯರೇ, ಸೋಮಾರಿತನದಿಂದ ಆಗುವ ಕೇಡುಗಳೇನು?' 'ಎಲೈ ಮಿತ್ರನೇ ಈಗ ಚಳಿ ಇದೆ. ಈಗ ಸೆಕೆ ಇದೆ. ಇಷ್ಟು ಮುಂಚೆಯೇ ಏಕೆ? ಇದು ಬಹಳ ತಡ ವಾಯಿತು! ಈಗ ನಾನು ಹಸಿದಿದ್ದೇನೆ ಮತ್ತು ಈಗ ನನಗೆ ಹೊಟ್ಟೆ ತುಂಬಿದೆ. ಎಂದು ಸಮಯಕ್ಕೆ ಸರಿಯಾಗಿ ನಿರ್ವಹಿ ಸಬೇಕಾದ ಯಾವ ಕರ್ತವ್ಯವನ್ನು ನಿರ್ವ ಹಿಸುವುದಿಲ್ಲ. ಹೀಗೆ ಅವನ ಕರ್ತವ್ಯ ಲೋಪದಿಂದ ಅವನು ಮಾಡಬೇಕಾದ ಎಲ್ಲ ಕೆಲಸವೂ ಹಾಗೆ ಉಳಿದು ಬಿಡು ತ್ತದೆ. ಈ ಕಾರಣ ಗಳಿಗಾಗಿ ಆತನಿಗೆ ಹೊಸ ಸಂಪತ್ತು ಕೈ ಸೇರುವುದಿಲ್ಲ. ಪ್ರತಿ ಫಲವಾಗಿ ಇರುವ ಸಂಪತ್ತೆಲ್ಲ ದಿನದಿಂದ ದಿನಕ್ಕೆ ಕ್ಷೀಣಿಸುತ್ತಾ ಕಡೆಗೆ ಅವನು ಮತ್ತು ಅವನನ್ನು ನಂಬಿದವರು ಬೀದಿಗೆ ಬೀಳುತ್ತಾರೆ.'

'ಗುರುವೇ, ಹೃದಯ ವೈಶಾಲ್ಯವಿರುವ ಸ್ನೇಹಿತ ರೆಂದರೆ ಯಾರು? ಅವರ ಸ್ವರೂಪವೇನು?'

'ಎಲೈ ಮಿತ್ರನೇ ಉತ್ತಮ ಸ್ನೇಹಿತರಲ್ಲಿ ನಾಲ್ಕು ಪಂಗಡಗಳಿವೆ. ಅವುಗಳೆಂದರೆ; ಸಮಯದಲ್ಲಿ ಸಹಾಯ ಮಾಡುವ ಸ್ನೇಹಿತ ಸುಖ ಮತ್ತು ದುಃಖದಲ್ಲಿ ಒಂದೇ ರೀತಿಯಲ್ಲಿ ಇರುವ ಸ್ನೇಹಿತ. ಒಳ್ಳೆಯ ಹಿತೋಪದೇಶ ನೀಡುವ ಸಹಾನುಭೂತಿಯುಳ್ಳ ಸ್ನೇಹಿತ'

'ಗುರುವೇ ಸಮಯದಲ್ಲಿ ಸಹಾಯ ಮಾಡುವ ಗೆಳೆ ಯನ ಲಕ್ಷಣಗಳೇನು?'

'ಎಲೈ ಮಿತ್ರನೇ, ಯಾವ ಸ್ನೇಹಿತ ಸಮಯದಲ್ಲಿ ಸಹಾಯ ಮಾಡುತ್ತಾನೋ ಅವನನ್ನು ಹೃದಯದಲ್ಲಿಯೆ ಘನವಂತನೆಂದು ಪರಿಗಣಿಸು. ನೀನು ಅಜಾಗರೂಕನಾಗಿ ದ್ದಾಗ ನಿನ್ನನ್ನು ನಿನ್ನ ಆಸ್ತಿಯನ್ನು ಕಾಪಾಡುತ್ತಾನೆ. ನೀನು ಭಯಗೊಂಡಾಗ ನಿನಗೆ ಆಶ್ರಯದಾತನಾಗುತ್ತಾನೆ. ನೀನು ಕೆಲಸ ಮಾಡುವಾಗ ಉತ್ತೇಜನ ಕೊಡುತ್ತಾನೆ. ನೆರವು ನೀಡುತ್ತಾನೆ.'

'ಗುರುವೇ ಸುಖ ದುಃಖಗಳಲ್ಲಿ ಒಂದೇ ತರನಿರುವ ಸ್ನೇಹಿತನ ಬಗ್ಗೆ ತಿಳಿಸು'

'ಎಲೈ ಮೀತ್ರನೇ. ಅವನು ನಿನಗೆ ತನ್ನ ಗುಟ್ಟುಗಳ ನ್ನೆಲ್ಲಾ ಹೇಳಿ ಕೊಳ್ಳುತ್ತಾನೆ. ನಿನ್ನ ಗುಟ್ಟುಗಳನ್ನೆಲ್ಲಾ ಗುಟ್ಟಾ ಗಿಟ್ಟುಕೊಂಡಿರುತ್ತಾನೆ. ನಿನ್ನ ಕಷ್ಟಗಳಲ್ಲಿ ನಿನ್ನನ್ನು ಅವನು ಕೈ ಬಿಡುವುದಿಲ್ಲ. ನಿನಗೋಸ್ಕರ ಅವನು ತನ್ನ ಪ್ರಾಣವನ್ನಾ ದರೂ ಕೊಡುತ್ತಾನೆ. ಇವನು ನಿಜಕ್ಕೂ ಹೃದಯವಂತ'

'ಗುರುವೇ, ಒಳ್ಳೆಯ ಹಿತೋಪದೇಶ ನೀಡುವ ಸ್ನೇಹಿತನ ಫಲವೇನು?'

'ಎಲೈ ಮಿತ್ರನೇ, ನೀನು ತಪ್ಪು ಮಾಡುವಾಗ ನಿನ್ನನ್ನು ತಡೆ ಹಿಡಿಯುತ್ತಾನೆ. ಒಳ್ಳೆಯದನ್ನು ಮಾಡಲು ಒತ್ತಾಯಿಸುತ್ತಾನೆ. ನೀನು ಕೇಳರಿಯದ ಹೊಸ ಹೊಸ ವಿಚಾರಗಳನ್ನು ನಿನ್ನ ಏಳಿಗೆಗಾಗಿ ತಿಳಿಸುತ್ತಾನೆ. ನಿನ್ನ ಸಂಕಟ ಮತ್ತು ಸಂಕೋಲೆಗಳಿಂದ ಪಾರು ಮಾಡುವ ಮಾರ್ಗದರ್ಶಕನಾಗುತ್ತಾನೆ. ಇವನೆ ಘನವಂತ'

'ಗುರುವೆ ಸಹಾನುಭೂತಿ ತೋರುವ ಸ್ನೇಹಿತನ ಹಿರಿಮೆ ಏನು?'

'ಎಲೈ ಮಿತ್ರನೇ, ಅವನು ನಿನ್ನ ದುರದೃಷ್ಟವನ್ನು ನೋಡಿ ಸಂತೋಷ ಪಡುವುದಿಲ್ಲ. ಅವನು ನಿನ್ನ ಉನ್ನತಿ ಯನ್ನು ನೋಡಿ ಸಂತೋಷ ಪಡುತ್ತಾನೆ. ನಿನ್ನ ಬಗ್ಗೆ ಕೆಟ್ಟದ್ದು ಮಾತಾನಾಡುವುದಿಲ್ಲ. ಇತರರೆದುರು ನಿನ್ನನ್ನು ಶ್ಲಾಘಿಸುತ್ತಾನೆ. ಅವನೇ ನಿಜಕ್ಕೂ ಶ್ರೀಮಂತ'

'ಎಲೈ ಮಿತ್ರನಾದ ಸಿಗಳನೇ, ಗಮನವಿಟ್ಟು ಕೇಳು; ಆರು ದಿಕ್ಕುಗಳನ್ನು ಪೂಜಿಸುವಂತೆ ಹೇಳುವ ಧರ್ಮ ಮಾನವ ಧರ್ಮವಲ್ಲ. ಬದಲಾಗಿ ತಂದೆ ತಾಯಿ, ಹೆಂಡತಿ ಮಕ್ಕಳು ಗೆಳೆಯರು, ಮನೆಯಾಳುಗಳು, ಕಾರ್ಮಿಕರು ಮತ್ತು ಧರ್ಮ ಗುರುಗಳನ್ನು ಗೌರವಿಸುವ, ರಕ್ಷಿಸುವ, ಅವರುಗಳ ಏಳಿಗೆಗೆ ಶ್ರಮಿಸುವಂತೆ, ಪೂಜಿಸುವಂತೆ ಯಾವ ಧರ್ಮವು ಬೋಧಿಸುತ್ತದೊ. ಅದೇ ನಿಜವಾದ ಮನುಷ್ಯ ಧರ್ಮ!!' ಎಂದ. ಆಗ ಸಿಗಳನಿಗೆ ತನ್ನ ತಪ್ಪಿನ ಸಂಪೂರ್ಣ ಅರಿವಿಗಾಗಿ ಬುದ್ಧನನ್ನು ಉದ್ದೇಶಿಸಿ ಹೀಗೆ ನುಡಿದ;

'ಹೌದು ಗುರುದೇವಾ, ನೀನು ನನ್ನ ಪಾಲಿಗೆ ತಂದೆ ಯಾಗಿ...! ಗುರುವಾಗಿ...!! ಆಪತ್ ಬಾಂಧವನು. ಅನಾಥ ರಕ್ಷಕನೂ ಆಗಿ ನನ್ನ ಪೊರೆದೆ... ನಿನಗೆ ಶರಣು ಗುರುವೆ...!!!' ಎಂದು ತಥಾಗತನ ಪಾದಕ್ಕೆ ನಮಿಸಿದ. □

'SAMVADA' Kannada Monthly, Jan 2008 RNI-KAR KAN/2002/9246 CPMG/KA/BGW-706/2006-08
Office of Posting: RAJAJINAGAR HO, Date of Posting: 27-28 of Every Month

ಕೇಂದ್ರ ಸಾಹಿತ್ಯ ಅಕಾದೆಮಿ,
ದಕ್ಷಿಣ ಪ್ರಾದೇಶಿಕ ಕಚೇರಿ, ಸೆಂಟ್ರಲ್ ಕಾಲೇಜ್ ಆವರಣ,
ಡಾ|| ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560001

ಹೊಸ ಕನ್ನಡ ಪ್ರಕಟಣೆಗಳು

ಕಾದಂಬರಿಗಳು:
* ಆ ದೀರ್ಘ ಮೌನ (ಇಂಗ್ಲೀಷ್ ಮೂಲ: ಶಶಿ ದೇಶಪಾಂಡೆ, ಅನು : ವಿಜಯ ಕಣೇಕಲ್ 120.00
* ಆರು ಅಡಿ ಭೂಮಿ (ಉರ್ದೂ ಮೂಲ: ಅಬ್ದುಸ್ಸಮದ್; ಅನು: ಪಂಚಾಕ್ಷರಿ ಹಿರೇಮಠ 150.00
* ಅರ್ಧನಾರೀಶ್ವರ (ಹಿಂದಿ ಮೂಲ: ವಿಷ್ಣು ಪ್ರಭಾಕರ್; ಅನು: ಎಸ್.ಎಮ್. ರಾಮಚಂದ್ರಸ್ವಾಮಿ) 250.00
* ನೀಲಿಚಂದಿರ (ಹಿಂದಿ ಮೂಲ: ಶಿವಪ್ರಸಾದ ಸಿಂಹ; ಅನು: ಪಿ. ಶಶಿಕಲಾ) 350.00
* ಚಿಟ್ಟಾಲಹು (ಪಂಜಾಬೀ ಮೂಲ: ನಾನಕ್ ಸಿಂಗ್; ಅನು: ಲವ್‌ಲೀನ್ ಜಾಲಿ, ವಿಜಯಲಕ್ಷ್ಮಿ ಅರಸ್) 85.00
* ಗೋಡೆಯಲ್ಲಿ ಒಂದು ಕಿಟಕಿ ಇರುತ್ತಿತ್ತು (ಹಿಂದಿ ಮೂಲ: ವಿನೋದಕುಮಾರ್ ಶುಕ್ಲ; ಅನು: ತೇಜಸ್ವಿ ಕಟ್ಟಿಮನಿ) 100.00

ಕಥಾ ಸಂಕಲನ:
* ಸ್ವರ್ಣಕಮಲಗಳು (ತೆಲುಗು ಮೂಲ: ಇಲ್ಲಿಂದಲ ಸರಸ್ವತೀದೇವಿ; ಅನು-ಪಿ. ವೇಣು-ಗೋಪಾಲ್) 300.00
* ಸಿ.ವಿ. ಶ್ರೀರಾಮನ್ ಕತೆಗಳು (ಮಲಯಾಳಂ; ಅನು-ಅಶೋಕ್ ಕುಮಾರ್) 300.00
* ದೇವರ ಮನೆ ಇತರ ಕತೆಗಳು (ಒರಿಯಾ; ಅನು ಸೀತಾರಾಮಯ್ಯ ಸೊಮನಾಥ್) 125.00
* ತಂದೆಯ ಸ್ನೇಹಿತ (ತಮಿಳು; ಅಶೋಕ ಮಿತ್ರನ್; ಅನು: ಶೇಷನಾರಾಯಣ) 100.00
* ಸಮಕಾಲೀನ ಭಾರತೀಯ ಇಂಗ್ಲಿಷ್ ಸಣ್ಣ ಕಥೆಗಳು (ಸಂ.ಶಿವ್.ಕೆ. ಕುಮಾರ್; ಅನು ಮಹಾಬಲೇಶ್ವರ ಕಾಟ್ರಹಳ್ಳಿ) 150.00
* ಉಲ್ಲಂಘನ (ಒರಿಯಾ; ಪ್ರತಿಭಾ ರಾಯ್; ಅನು ಸ್ನೇಹಲತಾ ರೋಹಿಡೇಕರ್) 160.00
* ಶಾಂಬ (ಬಂಗಾಳಿ: ಸಮರೇಶ ಬಸು; ಅನು: ಜಿ. ಕುಮರಪ್ಪ) 100.00
* ಹಗ್ಗ (ತಕಳಿ ಶಿವಶಂಕರಪಿಳ್ಳೈರವರ ಮಲಯಾಳ ಕೃತಿ- ಮೂರು ಭಾಗಗಳು-ಅನುವಾದ ಕೆ.ಕೆ. ನಾಯರ್ ಮತ್ತು ಅಶೋಕ್‌ಕುಮಾರ್) ಭಾಗ ಒಂದು-325.00; ಭಾಗ ಎರಡು -250; ಭಾಗ ಮೂರು-250

ಕಾವ್ಯ:
* ಕನ್ನಡ ಸಾನೆಟ್ ಸಂಗ್ರಹ (ಸಂ.ಹೆಚ್.ಎಸ್. ವೆಂಕಟೇಶಮೂರ್ತಿ) 85.00
* ಶಬ್ದ ಗರ್ಭಿತ ಆಕಾಶ (ಒರಿಯಾ ಮೂಲ: ಸೀತಾಕಾಂತ್ ಮಹಾಪಾತ್ರ; ಅನು: ಕಮಲಾ ಹೆಮ್ಮಿಗೆ) 90.00
* ಸಂಬಂಧ (ಇಂಗ್ಲಿಷ್: ಜಯಂತ ಮಹಾಪಾತ್ರ; ಅನು: ಲಕ್ಷ್ಮೀನಾರಾಯಣಭಟ್) 50.00
* ತಮಿಳು ಕವಿತೆಗಳು (ಸಂಪಾದಕರು: ಚಂದ್ರಶೇಖರ ಕಂಬಾರ ಮತ್ತು ಓ. ಎಲ್ ನಾಗಭೂಷಣ ಸ್ವಾಮಿ) 40.00
* ಆಧುನಿಕ ಮಹಾಭಾರತ (ಗುಂಟೂರು ಶೇಷೇಂದ್ರಶರ್ಮರ ತೆಲುಗು ಆಧುನಿಕ ಮಹಾಕಾವ್ಯ; ಅನು: ಅರ್ಕಸಾಲಿ ವೃಷಭೇಂದ್ರಾಚಾರ್) 200.00
* ಮಲಯಾಳದ ಜಾನಪದ ಹಾಡುಗಳು (ಸಂ. ಅಯ್ಯಪ್ಪ ಪಣಿಕ್ಕರ್; ಅನು: ಸಿ. ರಾಘವನ್) 125.00

ಇತರ
* ಸೌಗಂಧಿಕಾ ಪರಿಣಯ (ಮುಮ್ಮಡಿ ಕೃಷ್ಣರಾಜ ಒಡೆಯರ್; ಸಂ.ಹೆಚ್.ಎಸ್. ಶ್ರೀಮತಿ) 600.00
* ತತ್ವಮಸಿ (ಮಲಯಾಳಂ ಮೂಲ: ಸುಕುಮಾರ್ ಅಳಿಕ್ಕೋಡ್, ಅನು: ವಿ. ಗೋಪಾಲಕೃಷ್ಣ) 200.00
* ಭಾರತೀಯ ಇಂಗ್ಲೀಷ್ ಸಾಹಿತ್ಯ ಚರಿತ್ರೆ (ಎಂ.ಕೆ. ನಾಯಕ್; ಅನು: ಬಸವರಾಜ ನಾಯ್ಕರ್) 200.00
* ತೆಲುಗು-ಕನ್ನಡ ನಿಘಂಟು (ಸಂ.ಪಾಣ್ಯಂ ರಾಮಶೇಷ ಶಾಸ್ತ್ರಿ) 150.00
* ಟೀಕಾ ಸ್ವಯಂವರ: ಮರಾಠಿ ವಿಮರ್ಶಾ ಕೃತಿ (ಬಾಲಚಂದ್ರ ನೇಮಾಡೆ; ಅನು: ಚಂದ್ರಕಾಂತ ಪೋಕಳೆ) 180.00
* ಪಂಡಿತ ತಾರಾನಾಥರು ಬದುಕು ಮತ್ತು ಬರಹ: ಎಂ. ಧ್ರುವನಾರಾಯಣ 75.00

ಭಾರತೀಯ ಸಾಹಿತ್ಯ ನಿರ್ಮಾಪಕರು (ಒಂದು ಪ್ರತಿ ರೂ. 25.00)
* ವ. ರಾ. (ವ. ರಾಮಸ್ವಾಮಿ) * ನಿರಂಜನ * ಸರ್ವಜ್ಞ * ಮಹಾಕವಿ ಶ್ರೀ ಶ್ರೀ * ರಾಚಕೊಂಡ ವಿಶ್ವನಾಥಶಾಸ್ತ್ರಿ
* ಜಿ.ಪಿ. ರಾಜರತ್ನಂ * ತೀನಂ. ಶ್ರೀಕಂಠಯ್ಯ * ಮಹಾಮಹೋಪಾಧ್ಯಾಯ ಗೋಪೀನಾಥ ಕವಿರಾಜ * ಅ.ನ. ಕೃಷ್ಣರಾವ್(40.00)
* ಬಸವರಾಜ ಕಟ್ಟೀಮನಿ(40.00) * ಆಲೂರು ವೆಂಕಟರಾವ್(40.00)